ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರ ಹೊರುವ ತಾಲೀಮು

ಮೈಸೂರು ಅರಮನೆಯೊಳಗಿನ ಕೋಡಿ ಸೋಮೇಶ್ವರ ದೇವಾಲಯದ ಬಳಿ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿದ ಬಳಿಕ 750 ಕೆಜಿ ಭಾರದ ಚಿನ್ನದ ಅಂಬಾರಿಯನ್ನು ಹೊರಬೇಕಾದ ಕ್ಯಾಪ್ಟನ್ ಅಭಿಮನ್ಯುವಿಗೆ ಭಾರ ಹೊರುವ ತಾಲೀಮನ್ನು ಆರಂಭಿಸಲಾಯಿತು.

ಸೊಂಪಾದ ಪುಟಗಳು

ಕೆಲವೊಮ್ಮೆ ಸೋಲುಗಳು ನಮ್ಮ ಸಾಮರ್ಥ್ಯವನ್ನು ತೋರಿಸುತ್ತವೆ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ನಮ್ಮ ಮೆದುಳನ್ನು ಆಳುವ ಬಿಂಬಗಳು

ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಜೀವನದಲ್ಲಿ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳುವಾಗ ಒಮ್ಮತಕ್ಕೆ ಬರಲು ಸಾಧ್ಯವಾಗದಿದ್ದರೆ ನಾಣ್ಯವನ್ನು ಚಿಮ್ಮಬಹುದು. ನಾಣ್ಯ ಗಾಳಿಯಲ್ಲಿದ್ದಾಗ, ನಿಮ್ಮ ಮನಸ್ಸು ನಾಣ್ಯ ಹೇಗೆ ಬೀಳಲಿ ಎಂದು ಬಯಸುವುದೋ, ಅದೇ ನಿಮ್ಮ ನಿರ್ಧಾರವಾಗಿರುತ್ತದೆ.

ವಕ್ರತುಂಡೋಕ್ತಿ

ಗಂಡನ ಮುಂದೆ ಹೆಂಡತಿಯಾದವಳು ಸಮಸ್ಯೆಗಳನ್ನು ಹೇಳಿಕೊಳ್ಳಬೇಕು. ಗಂಡನೇ ಒಂದು ಸಮಸ್ಯೆ ಎಂದು ಭಾವಿಸಬಾರದು.

175 ವಸ್ತುಗಳ ಜಿಎಸ್‌ಟಿ ದರ ಇಳಿಕೆಗೆ ಮಂಡಳಿ ಸಭೆ ನಿರ್ಧಾರ
ಸ್ಲ್ಯಾಬ್ ಶೇ.5, 18ಕ್ಕೆ ಸೀಮಿತ | ದಸರೆಗೆ ಮುನ್ನ ಭರ್ಜರಿ ಕೊಡುಗೆ

ಜಿಎಸ್‌ಟಿ ಭಾರ ಇಳಿಕೆ

ದೆಹಲಿ: ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರು ಬುಧವಾರ ದೇಶದ ಜನತೆಗೆ ಸಿಹಿ ಸುದ್ದಿ ನೀಡಿದ್ದು, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯು ಸ್ಲ್ಯಾಬ್ ಗಳಲ್ಲಿ ಮಹತ್ವದ ಬದಲಾವಣೆಗೆ ಬುಧವಾರ ಅನುಮೋದನೆ ನೀಡಿದೆ. ಸೆಪ್ಟೆಂಬರ್ 22ರಿಂದ ಸುಮಾರು 175 ವಸ್ತು ಮತ್ತು ಸೇವೆಗಳ ಮೇಲಿನ ಜಿಎಸ್‌ಟಿ ದರ ಇಳಿಕೆಯಾಗಲಿದೆ.

ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ನಡೆದ 56ನೇ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಈ ಮಹತ್ವದ ತೆರಿಗೆ ಬದಲಾವಣೆಗಳಿಗೆ ನಾನಾ ರಾಜ್ಯಗಳ ಹಣಕಾಸು ಸಚಿವರು ಅನುಮೋದನೆ ನೀಡಿದ್ದಾರೆ. ಪ್ರಸ್ತುತ, ನಾಲ್ಕು ಜಿಎಸ್‌ಟಿ ಸ್ಲ್ಯಾಬ್‌ಗಳಿದ್ದು, ಶೇ. 5, ಶೇ, 12, ಶೇ. 18 ಮತ್ತು ಶೇ, 28 ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಇನ್ನು ಮುಂದೆ ಶೇ. 12 ಮತ್ತು ಶೇ. 28ರ ತೆರಿಗೆ ಸ್ಲ್ಯಾಬ್‌ಗಳು ರದ್ದಾಗಲಿದ್ದು ಶೇ. 5 ಮತ್ತು ಶೇ. 18ರ ಎರಡು ಸ್ತರದ ತೆರಿಗೆ ಮಾತ್ರ ಉಳಿದುಕೊಳ್ಳಲಿದೆ.

ದೀಪಾವಳಿ ಹೊತ್ತಿಗೆ ಜನರು ಸಿಹಿ ಸುದ್ದಿ ಪಡೆಯಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಹೇಳಿದ್ದರು. ಈಗ ದಸರೆಯ ಆರಂಭದಲ್ಲೇ ಜಿಎಸ್‌ಟಿ ದರ ಇಳಿಸಲು ನಿರ್ಧರಿಸಲಾಗಿದೆ. ಜವಳಿ, ರಸಗೊಬ್ಬರ, ನವೀಕರಿಸಬಹುದಾದ ಇಂಧನಗಳು, ವಾಹನಗಳು, ಕರಕುಶಲ ವಸ್ತುಗಳು, ಕೃಷಿ, ಆರೋಗ್ಯ, ವಿಮಾ ವಲಯಗಳು ಈ ಬದಲಾವಣೆಯಿಂದ ಲಾಭ ಪಡೆಯಲಿವೆ.

ಕೇಶ ತೈಲ, ಸೋಪು, ಶಾಂಪೂಗಳು, ಹಲ್ಲುಜ್ಜುವ ಬ್ರಷ್‌ಗಳು, ಟೂತ್‌ಪೇಸ್ಟ್, ಸೈಕಲ್‌ಗಳು ಮತ್ತು ಅಡುಗೆ ಸಾಮಾನುಗಳ ಮೇಲಿನ ಜಿಎಸ್‌ಟಿಯನ್ನು ಶೇಕಡಾ 5 ಕ್ಕೆ ಇಳಿಸಲಾಗಿದೆ. ವೈಯಕ್ತಿಕ ಆರೋಗ್ಯ ವಿಮೆ ಮತ್ತು ಜೀವ ವಿಮೆಗೆ ಸಂಪೂರ್ಣ ತೆರಿಗೆ ವಿನಾಯಿತಿ ಘೋಷಿಸಲಾಗಿದೆ. ಜನಸಾಮಾನ್ಯರ ಪಾಲಿಗೆ ದುಬಾರಿಯಾಗಿರುವ ವೈದ್ಯಕೀಯ ವಿಮೆಯನ್ನು ಎಲ್ಲರಿಗೂ ಕೈಗೆಟುಕುವಂತೆ ಮಾಡಲು ಸರಕಾರ ಉದ್ದೇಶಿಸಿದೆ. → 4

3 ದಿನದಲ್ಲಿ ಸ್ಟಾರ್ಟಪ್ ನೋಂದಣಿ ಅವಕಾಶ

ಮಧ್ಯಮ, ಸಣ್ಣ ಮತ್ತು ಅತಿ ಕಿರು ಉದ್ಯಮ (ಎಂಎಸ್‌ಎಂಇ) ಹಾಗೂ ಸ್ಟಾರ್ಟಪ್‌ಗಳ ಮೇಲಿನ ಹೊರೆಯನ್ನು ಇಳಿಸಲು ಕೇಂದ್ರ ಮುಂದಾಗಿದೆ ಎನ್ನಲಾಗಿದೆ. ಇವುಗಳ ಸುದಾರಣೆಗೆ ಹಲವು ಕ್ರಮ ಕೈಗೊಳ್ಳಲಾಗುತ್ತದೆ. ಈ ಪೈಕಿ ಇವುಗಳ ನೋಂದಣಿ ಪ್ರಕ್ರಿಯೆ ಮುಗಿಸಲು ಇರುವ 30 ದಿನಗಳ ಅವಧಿಯನ್ನು ಬರೀ 3 ದಿನಗಳಲ್ಲಿ ಮುಗಿಸಲು ವ್ಯವಸ್ಥೆ ಮಾಡಬಹುದು.

ಯಾವುದು ದುಬಾರಿ?

ತಂಬಾಕು, ಪಾನ್‌ಮಸಾಲಾ, ಐಷಾರಾಮಿ ಕಾರುಗಳು ಶೇ. 40ರ ತೆರಿಗೆ ವ್ಯಾಪ್ತಿಯಲ್ಲಿ ಮುಂದುವರಿಯಲಿವೆ. ಖಾಸಗಿ ವಿಮಾನಗಳನ್ನೂ ಇದೇ ವ್ಯಾಪ್ತಿಯಲ್ಲಿ ಇರಿಸಲಾಗಿದೆ. ಯಾಚ್‌ಗಳು, ಖಾಸಗಿ ಐಷಾರಾಮಿ ಬೋಟ್‌ಗಳನ್ನೂ ಈ ವ್ಯಾಪ್ತಿಗೆ ತರಲಾಗಿದೆ. ವಿಶೇಷ ಎಂದರೆ ಫಾಸ್ಟ್ ಫುಡ್ ಮತ್ತು ಕೂಲ್ ಡ್ರಿಂಕ್ಸ್‌ಗಳನ್ನೂ ಶೇ. 40ರ ತೆರಿಗೆ ವ್ಯಾಪ್ತಿಯಲ್ಲಿ ಇರಿಸಲಾಗಿದೆ. ಇದರಿಂದ ತಂಪು ಪಾನೀಯಗಳ ದರ ಗಣನೀಯವಾಗಿ ಏರಿಕೆಯಾಗಲಿದೆ.

ರಾಜ್ಯಗಳ ನಷ್ಟ ಭರ್ತಿ ಪ್ರಸ್ತಾಪ ಇಲ್ಲ

ಜಿಎಸ್‌ಟಿ ತೆರಿಗೆ ಬದಲಾವಣೆಗಳಿಂದ ಉಂಟಾಗಬಹುದಾದ ಆದಾಯ ನಷ್ಟವನ್ನು ಕೇಂದ್ರ ಸರ್ಕಾರ ಭರಿಸಬೇಕು ಎಂದು ಕರ್ನಾಟಕ, ಹಿಮಾಚಲ ಪ್ರದೇಶ, ಜಾರ್ಖಂಡ್, ಕೇರಳ, ಪಂಜಾಬ್, ತಮಿಳುನಾಡು, ತೆಲಂಗಾಣ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಎಂಟು ರಾಜ್ಯಗಳು ಪರಿಹಾರಕ್ಕಾಗಿ ಬೇಡಿಕೆ ಇಟ್ಟಿವೆ. ಈ ಬಗ್ಗೆ ಮಂಡಳಿ ಯಾವ ತೀರ್ಮಾನ ತೆಗೆದುಕೊಂಡಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಕರ್ನಾಟಕ ಸರ್ಕಾರಕ್ಕೆ 15000 ಕೋಟಿ ರೂ. ಖೋತಾ ಆಗಲಿದೆ ಎಂದು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಯಾವುದು ಅಗ್ಗ ?

- 1000 ರೂ.ವರೆಗಿನ ಮೌಲ್ಯ ಹೊಂದಿದ್ದ ಪಾದರಕ್ಷೆ, ಬಟ್ಟೆಗಳ ಮೇಲಿನ ಶೇ.5 ತೆರಿಗೆ ಇನ್ನು 2500 ರೂ.ವರೆಗಿನ ಉತ್ಪನ್ನಗಳಿಗೆ ವಿಸ್ತರಣೆ
- ಹಾಲಿ ಕುಡಿಸುವ ಬಾಟಲ್, ನೆಲಹಾಸು, ಛತ್ರಿ, ಪಾತ್ರೆ, ಪೀಠೋಪಕರಣ, ಪೆನ್ಸಿಲ್, ಸೆಣಬು/ಹತ್ತಿಯ ಕೈ ಚೀಲಗಳಿಗೆ ಶೇ.5 ತೆರಿಗೆ
- ಹಾಲಿನ ಪುಡಿ, ಒಣ ಹಣ್ಣು, ಶುದ್ಧೀಕರಿಸಿ, ಸಂಸ್ಕರಿಸಿ, ಕತ್ತರಿಸಿ ಸಿದ್ಧವಾದ ತರಕಾರಿಗಳು, ಉಪ್ಪು ಬಳಸಿ ತಯಾರಿಸಿದ ಆಹಾರಗಳಿಗೆ ಶೇ.5 ತೆರಿಗೆ
- ಫ್ರಿಜ್, ಎಸಿ, ಟಿ.ವಿ ವಾಷಿಂಗ್ ಮಷಿನ್‌ಗಳಿಗೆ ಶೇ.18ರ ತೆರಿಗೆ. ಕೃಷಿ ಸಲಕರಣೆಗಳು, ವಿಮೆ, ಶಿಕ್ಷಣ ಸೇವೆಗಳ ಬೆಲೆಯಿಳಿಕೆ.

ಎಷ್ಟು ಇಳಿಕೆ?

- **ಶೇ.28ರಿಂದ ಶೇ.18:** ಸಿಮೆಂಟ್, 1200 ಸಿಸಿಯ ಸಣ್ಣ ಕಾರುಗಳು, 350 ಸಿಸಿ ಬೈಕ್‌ಗಳು, ತ್ರಿಚಕ್ರ ವಾಹನಗಳು, ಆ್ಯಂಬುಲೆನ್ಸ್‌ಗಳು, ಎಸಿ, ವಾಷಿಂಗ್ ಮಷಿನ್.
- **ಶೇ.18ರಿಂದ ಶೇ.5:** ಪೇಸ್ಟ್, ಸೋಪು, ಶಾಂಪೂ, ಬಿಸ್ಕಿಟ್, ಐಸ್ ಕ್ರೀಮ್, ಬಾಟಲ್ ನೀರು.
- **ಶೇ.12ರಿಂದ ಶೇ.5:** ಬೆಣ್ಣೆ, ಒಣ ಹಣ್ಣುಗಳು, ರಸಗೊಬ್ಬರ, ಕ್ರಿಮಿನಾಶಕ, ಟ್ರ್ಯಾಕ್ಟರ್‌ಗಳು.

ಅತ್ಯಾಚಾರ ಪ್ರಕರಣದಲ್ಲಿ ಕೋರ್ಟ್‌ಗೆ ಎಸ್‌ಐಟಿಯಿಂದ ಬಿ ರಿಪೋರ್ಟ್

ಮುನಿರತ್ನಗೆ ಬಿಗ್ ರಿಲೀಫ್

ಬೆಂಗಳೂರು: ಸೂಕ್ತ ಸಾಕ್ಷ್ಯಾಧಾರಗಳ ಕೊರತೆ ಹಿನ್ನೆಲೆಯಲ್ಲಿ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಮೇಲೆ ಕೇಳಿಬಂದಿದ್ದ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡ (ಎಸ್‌ಐಟಿ) ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದೆ.

ಸಂತ್ರಸ್ತೆ ನೀಡಿದ ದೂರಿನಂತೆ ಶಾಸಕರು ಅತ್ಯಾಚಾರ ನಡೆಸಿರುವ ಬಗ್ಗೆ ಯಾವುದೇ ಸೂಕ್ತ ದಾಖಲೆಗಳು ಇಲ್ಲವೇ ಸಾಕ್ಷ್ಯಾಧಾರ ಇಲ್ಲದ ಕಾರಣ ಎಸ್‌ಐಟಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದೆ. ಇದರಿಂದಾಗಿ ಅತ್ಯಾಚಾರ ಪ್ರಕರಣದಲ್ಲಿ ಸಿಲುಕಿಕೊಂಡಿದ್ದ ಮುನಿರತ್ನಗೆ ಕಾನೂನು ಹೋರಾಟದಲ್ಲಿ ಬಹುದೊಡ್ಡ ಗೆಲುವು ಸಿಕ್ಕಂತಾಗಿದೆ. ನ್ಯಾಯಾಲಯ ಬಿ ರಿಪೋರ್ಟ್ ಅಂಗೀಕರಿಸುವುದಷ್ಟೆ ಬಾಕಿ ಇದೆ.

ತಮ್ಮ ಮೇಲಿನ ಆರೋಪ ಸುಳ್ಳೆಂದು ಪ್ರಕರಣದ ರದ್ದು ಕೋರಿ ಮುನಿರತ್ನ ಅರ್ಜಿ ಸಲ್ಲಿಸಿದ್ದರು. ಈಗ ಆರೋಪ ಸಾಬೀತಾಗಿಲ್ಲವೆಂದು ಎಸ್‌ಐಟಿ ಬಿ ರಿಪೋರ್ಟ್ ಸಲ್ಲಿಸಿದೆ ಎಂದು ಹೈಕೋರ್ಟ್‌ಗೆ ಮುನಿರತ್ನ ಪರ ವಕೀಲರು ತಿಳಿಸಿದ್ದಾರೆ. ಸಂತ್ರಸ್ತೆ ಮಾಡಿರುವ ಆರೋಪಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ, ಹೀಗಾಗಿ ಬಿ ರಿಪೋರ್ಟ್ ಸಲ್ಲಿಕೆ ಮಾಡಲಾಗಿದೆ. ಬಿಜೆಪಿ ಕಾರ್ಯಕರ್ತೆಯೊಬ್ಬರು ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲು ಮಾಡಲಾಗಿತ್ತು. ಶಾಸಕ ಮುನಿರತ್ನ, ಬೆಂಬಲಿಗರಾದ ವಸಂತ, ಚನ್ನಕೇಶವ, ಕಮಲ್ ಹಾಗೂ ಓರ್ವ ಅಪರಿಚಿತನ ವಿರುದ್ಧವೂ ನಗರದ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

ಹೈಕೋರ್ಟ್‌ನಲ್ಲಿ ವಿಚಾರಣೆ

ತಮ್ಮ ಮೇಲಿನ ಆರೋಪಗಳು ಸುಳ್ಳು ಎಂದು ವಾದಿಸಿ, ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಮುನಿರತ್ನ ಅವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆಯ ಸಂದರ್ಭದಲ್ಲಿ, ಅವರ ಪರ ವಕೀಲರು ಎಸ್‌ಐಟಿ ಸಲ್ಲಿಸಿರುವ ಬಿ ರಿಪೋರ್ಟ್ ಕುರಿತು ನ್ಯಾಯಾಲಯದ ಗಮನ ಸೆಳೆದರು. ಮುನಿರತ್ನ ಅವರ ಬಂಧನಕ್ಕೆ ನೀಡಲಾಗಿದ್ದ ಮಧ್ಯಂತರ ತಡೆಯನ್ನು ಹೈಕೋರ್ಟ್ ವಿಸ್ತರಿಸಿದೆ.

ಇಂಜೆಕ್ಷನ್ ಕೊಟ್ಟು ಕೃತ್ಯ ಎಸಗಿದ ಆರೋಪ: ಅತ್ಯಾಚಾರಕ್ಕೂ ಮುನ್ನ ನೀಡಿದ ಇಂಜೆಕ್ಷನ್‌ನಿಂದ ಈಗ ನನಗೆ ಇಡಿಆರ್ ಎಂಬ ಕಾಯಿಲೆ ಬಂದಿದೆ. ಇದರಿಂದ ಮನನೊಂದು ನಾನು ಆತಹತ್ಯೆಗೆ ಯತ್ನಿಸಿದ್ದೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದರು. ಬಿಜೆಪಿ ಕಾರ್ಯಕರ್ತೆ ನೀಡಿದ ದೂರಿನ ಮೇರೆಗೆ ಐಪಿಸಿ ಸೆಕ್ಷನ್ 376, 270, 323, 354, 504, 506, 509, 34ರಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಮಹಿಳೆಯು ನೀಡಿದ್ದ ದೂರಿನಲ್ಲಿ ಈ ಹಿಂದೆ ಬಿಜೆಪಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೆ. ನನ್ನ ಗಂಡ ಬಿಟ್ಟು ಹೋದ ಬಳಿಕ 2ನೇ ಮದುವೆ ಆಗಿ ಜೀವನ ನಡೆಸುತ್ತಿದ್ದೆ. ವೇಶ್ಯಾವಾಟಿಕೆ ಆರೋಪ ಹೊರಿಸಿ ನನ್ನನ್ನು ಜೈಲಿಗೆ ಕಳಿಸಿದ್ದರು. ಬಳಿಕ ಜಾಮೀನು ಪಡೆದು ಹೊರಗೆ ಬಂದಿದ್ದೆ. ಕೆಲವರು ನನ್ನ ಪ್ರಕರಣ ಇತ್ಯರ್ಥ ಮಾಡಿಕೊಡುವುದಾಗಿ ಆಮಿಷವೊಡ್ಡಿ ನನ್ನನ್ನು ಕಚೇರಿಗೆ ಕರೆಸಿ ಸಾಮೂಹಿಕ ಅತ್ಯಾಚಾರವೆಸಗಿದರು ಎಂದು ಮಹಿಳೆ ಆರೋಪ ಮಾಡಿದ್ದರು. → 4

ಪೌರತ್ವ ನಿಯಮ ಮತ್ತಷ್ಟು ಸಡಿಲು

ದೆಹಲಿ: ನೆರೆದೇಶಗಳಾದ ಪಾಕಿಸ್ತಾನ, ಅಫ್ಘಾನಿಸ್ತಾನ, ಬಾಂಗ್ಲಾಗಳಿಂದ ಭಾರತಕ್ಕೆ ವಲಸೆ ಬಂದ ಮುಸ್ಲಿಮೇತರರಿಗೆ ಕೇಂದ್ರ ಸರ್ಕಾರ ಸಿಹಿಸುದ್ದಿ ನೀಡಿದೆ. ಆ ದೇಶಗಳ ಹಿಂದೂ, ಜೈನ, ಸಿಖ್, ಬೌದ್ಧ, ಕ್ರೈಸ್ತ, ಪಾರ್ಸಿ ಜನರು ಭಾರತದ ಪೌರತ್ವ ಪಡೆಯಲು ಹಾದಿ ಸುಗಮವಾಗಿದೆ. ಈ ಹಿಂದೆ 2014, ಡಿ.31ಕ್ಕೂ ಮುನ್ನ ಆಗಮಿಸಿದ ಮುಸ್ಲಿಮೇತರರಿಗೆ ಮಾತ್ರ ಭಾರತದ ಪೌರತ್ವ ಪಡೆಯಲು ಅರ್ಹತೆ ಎಂದು ತಿಳಿಸಲಾಗಿತ್ತು. ಇದೀಗ ಗಡುವನ್ನು ವಿಸ್ತರಿಸಿ, 2024, ಡಿ.31ರವರೆಗೆ ಭಾರತಕ್ಕಾಗಮಿಸಿದ ವ್ಯಕ್ತಿಗಳಿಗೆ ಪೌರತ್ವ ಪಡೆಯಲು ಅವಕಾಶ ನೀಡಲಾಗಿದೆ. ಅಷ್ಟು ಮಾತ್ರವಲ್ಲ ಪಾಸ್‌ಪೋರ್ಟ್, ಸೂಕ್ತ ಪ್ರಯಾಣದ ದಾಖಲೆಗಳಿಲ್ಲದ ಮುಸ್ಲಿಮೇತರರಿಗೂ ಭಾರತದ ಪೌರತ್ವ ಸಿಗಲಿದೆ.

ಚಿನ್ನಯ್ಯ 3 ದಿನ ಎಸ್‌ಐಟಿ ವಶಕ್ಕೆ

ಬೆಳ್ತಂಗಡಿ: ಧರ್ಮಸ್ಥಳ ಪ್ರಕರಣದ ದೂರುದಾರ ಮುಸುಕುಧಾರಿ ಚಿನ್ನಯ್ಯನನ್ನು ಬೆಳ್ತಂಗಡಿ ನ್ಯಾಯಾಲಯ ಮತ್ತೆ 3 ದಿನ ಎಸ್ ಐಟಿ ವಶಕ್ಕೆ ನೀಡಿದೆ. ಚಿನ್ನಯ್ಯನನ್ನು ಬೆಳ್ತಂಗಡಿ ನ್ಯಾಯಾಲಯಕ್ಕೆ ಬುಧವಾರ ಮಧ್ಯಾಹ್ನದ ವೇಳೆ ಹಾಜರುಪಡಿಸಲಾಯಿತು. ಈ ವೇಳೆ ಎಸ್‌ಐಟಿ ಕೋರಿಕೆಯಂತೆ 3 ದಿನಗಳ ಕಾಲ ಕಸ್ಟಡಿಗೆ ನೀಡಿ ಕೋರ್ಟ್ ಆದೇಶಿಸಿದೆ. ಸೆಪ್ಟೆಂಬರ್ 6ರಂದು ಚಿನ್ನಯ್ಯನನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ಬೆಳ್ತಂಗಡಿ ನ್ಯಾಯಾಲಯ ಆದೇಶಿಸಿದೆ. ಚಿನ್ನಯ್ಯನ ಕೋರಿಕೆಯಂತೆ ಮಂಗಳೂರು ಕಾನೂನು ಸೇವೆಗಳ ಪ್ರಾಧಿಕಾರದ ವಕೀಲರು ಆತನ ಪರವಾಗಿ ಹಾಜರಾಗಿದ್ದಾರೆ.

ಮೋದಿ ತಾಯಿಗೆ ನಿಂದನೆ: ಇಂದು ಬಿಹಾರ ಬಂದ್

ಪಟನಾ: ಪ್ರಧಾನಿ ನರೇಂದ್ರ, ಮೋದಿ ತಾಯಿ ಹೀರಾಬೆನ್‌ರನ್ನು ಕಾಂಗ್ರೆಸ್ ಮತ್ತು ಆರ್‌ಜೆಡಿಗಳು ನಿಂದಿಸಿವೆ ಎಂಬ ಆರೋಪದ ಹಿನ್ನೆಲೆಯಲ್ಲಿ ಗುರುವಾರ ಬಿಹಾರ್ ಬಂದ್‌ಗೆ ಎನ್‌ಡಿಎ ಕರೆ ನೀಡಿದೆ. ಬೆಳಗ್ಗೆ 7ರಿಂದ ಮಧ್ಯಾಹ್ನ 12ರವರೆಗೆ 5 ಗಂಟೆಗಳ ಬಂದ್ ನಡೆಯಲಿದೆ. ಬಂದ್ ವೇಳೆ ಅಗತ್ಯ ಸೇವೆಗಳಾದ ಆಸ್ಪತ್ರೆ, ರೈಲ್ವೆ ಕಾರ್ಯಾಚರಣೆಗಳಿಗೆ ತಡೆಯಿರುವುದಿಲ್ಲ ಎಂದು ತಿಳಿಸಲಾಗಿದೆ. ಕಳೆದ ವಾರ ಬಿಹಾರದ ದರ್ಭಾಂಗದಲ್ಲಿ ನಡೆದ ಮತದಾರರ ಅಧಿಕಾರ ಯಾತ್ರೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮೋದಿ ತಾಯಿಯನ್ನು ನಿಂದಿಸಿದ್ದರು ಎಂಬ ಕಾರಣದಿಂದ ಈ ಬಂದ್ ನಡೆಯಲಿದೆ.

ಡಿ ಗ್ಯಾಂಗ್ ಸ್ಥಳಾಂತರ ಸೆಪ್ಟಂಬರ್ 9ಕ್ಕೆ ತೀರ್ಪು

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಂದ ಶಿಫ್ಟ್ ಮಾಡುವಂತೆ ಸಲ್ಲಿಸಿದ್ದ ಅರ್ಜಿ ಹಾಗೂ ದರ್ಶನ್‌ಗೆ ಬೆಡ್‌ಶೀಟ್, ತಲೆ ದಿಂಬು ಸೇರಿದಂತೆ ಅಗತ್ಯ ವಸ್ತುಗಳನ್ನು ನೀಡುವಂತೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ಸಿಸಿಹೆಚ್ 64ರ ನ್ಯಾಯಾಲಯದಲ್ಲಿ ನಡೆದಿದ್ದು, ಸೆ.9ಕ್ಕೆ ಕೋರ್ಟ್ ತೀರ್ಪು ಪ್ರಕಟವಾಗಲಿದೆ. ದರ್ಶನ್ ಪರ ವಕೀಲ ಸುನೀಲ್ ವಾದ ಮಂಡಿಸಿದ್ದು, ಪ್ರಿಸನ್ಸ್ ಆ್ಯಕ್ಟ್, ವೀಡಿಯೋ ಕಾನ್ಫರೆನ್ಸ್ ಆ್ಯಕ್ಟ್, ಮಾನವ ಹಕ್ಕುಗಳ ಕಾಯಿದೆಗಳ ಆಧಾರದ ಮೇಲೆ ವಾದ ಮಂಡಿಸಿದ್ದು, ಇದೇ ತಿಂಗಳ 9ರಂದು ಎರಡೂ ಅರ್ಜಿಗಳ ಆದೇಶ ಕಾಯ್ದಿರಿಸಲಾಗಿದೆ.

ಧಾರ್ಮಿಕ ಸೌಧಕ್ಕೆ ಇಂದು ಅನುಮೋದನೆ?

ಬೆಂಗಳೂರು: ಸ್ವಂತ ಕಟ್ಟಡವಿಲ್ಲದೆ ಸ್ವಾತಂತ್ರ್ಯ ಬಂದಾಗಿನಿಂದಲೂ ಬಾಡಿಗೆ ಕಟ್ಟಡದಲ್ಲಿಯೇ ಆಡಳಿತ ನಡೆಸುತ್ತಿರುವ ಮುಜರಾಯಿ ಇಲಾಖೆಗೆ ಕೊನೆಗೂ ಸ್ವಂತ ಕಟ್ಟಡದ ಭಾಗ್ಯ ಬಂದಿದೆ. ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಧಾರ್ಮಿಕ ಸೌಧ ನಿರ್ಮಾಣಕ್ಕೆ ಅನುಮೋದನೆ ನೀಡುವುದು ಖಚಿತ ಎನ್ನಲಾಗಿದೆ.

ಧಾರ್ಮಿಕ ದತ್ತಿ ಇಲಾಖೆ ಕಚೇರಿ ಮಿಂಟೋ ಆಸ್ಪತ್ರೆ ಎದುರಿನ ಕಟ್ಟಡದಲ್ಲಿದೆ. ಆದರೀಗ ಕೆ.ಆರ್ ವೃತ್ತದಲ್ಲಿರುವ ರಾಮಾಂಜನೇಯ ದೇವಾಲಯಕ್ಕೆ ಸೇರಿರುವ 9892 ಚ.ಅಡಿ ಜಾಗದಲ್ಲಿ ಐದು ಅಂತಸ್ತಿನ 'ಧಾರ್ಮಿಕ ಸೌಧ' ನಿರ್ಮಿಸಲು ಕಂದಾಯ ಇಲಾಖೆ ಪ್ರಸ್ತಾವನೆ ಸಲ್ಲಿಸಿದೆ. ಆರಂಭದಲ್ಲಿ 10 ಕೋಟಿ ರು. ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಯೋಜಿಸಲಾಗಿತ್ತು. ಆದರೀಗ ಅದು 40 ಕೋಟಿ ರು. ಅಂದಾಜು ಮೊತ್ತವನ್ನು ಪರಿಷ್ಕರಿಸಲಾಗಿದೆ. → 4

ಕರ್ನಾಟಕ ರತ್ನದ ಬಗ್ಗೆ ತೀರ್ಮಾನ

ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕು ಎನ್ನುವ ಬಗ್ಗೆ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದಾರೆ ಎಂದು ವಿಷ್ಣುವರ್ಧನ್ ಅಳಿಯ, ನಟ ಅನಿರುದ್ಧ್ ತಿಳಿಸಿದ್ದಾರೆ.

ಅಭಿಮಾನ್ ಸ್ಟುಡಿಯೋದಲ್ಲಿ 10 ಗುಂಟೆ ಜಮೀನು ಕೇಳಿದ ಭಾರತಿ

ವಿಷ್ಣು ಸ್ಮಾರಕ: ಸಿಎಂಗೆ ಮನವಿ

ಬೆಂಗಳೂರು: ಕೆಂಗೇರಿಯ ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕಾಗಿ 10 ಗುಂಟೆ ಜಮೀನು ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಷ್ಣುವರ್ಧನ್ ಪತ್ನಿ ಭಾರತಿ ವಿಷ್ಣುವರ್ಧನ್ ಹಾಗೂ ಅಳಿಯ ಅನಿರುದ್ಧ್ ಮನವಿ ಮಾಡಿದ್ದಾರೆ.

ಭಾರಿ ವಿವಾದಕ್ಕೆ ಕಾರಣವಾಗಿದ್ದ ವಿಷ್ಣುವರ್ಧನ್ ಸಮಾಧಿ ಧ್ವಂಸದ ಬಳಿಕ ಮೊದಲ ಬಾರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಭಾರತಿ ಅವರು, ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ 10 ಗುಂಟೆ ಜಾಗವನ್ನು ಮೀಸಲಿಡಬೇಕು. ವಿಷ್ಣು ಹುಟ್ಟುಹಬ್ಬದ ಒಳಗೆ ಸರಕಾರ ಭೂಮಿಗೆ ಅನುಮತಿ ನೀಡಬೇಕು ಎಂದು ಮನವಿ ಮಾಡಿದರು.

ಭೇಟಿಯ ಬಳಿಕ ಮಾತನಾಡಿದ ಭಾರತಿ ವಿಷ್ಣುವರ್ಧನ್, ಅಭಿಮಾನಿಗಳಿಗಾಗಿ ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣಕ್ಕೆ ಜಾಗ ಕೇಳಿದ್ದೇವೆ. ಅದಕ್ಕೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಇನ್ನು ನಟ ವಿಷ್ಣುವರ್ಧನ್ ಕರ್ನಾಟಕ ರತ್ನ ಪ್ರಶಸ್ತಿ ಕೊಡಿ ಎಂದು ನಾನು ಕೇಳಲ್ಲ. ಆದರೆ ಅಭಿಮಾನಿಗಳು ಕೇಳುತ್ತಿದ್ದಾರೆ. ಅವರಿಗಾಗಿ ಕರ್ನಾಟಕ ರತ್ನ ಕೊಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಭಾರತಿ ಅವರು, ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ 10 ಗುಂಟೆ ಜಾಗವನ್ನು ಮೀಸಲಿಡಬೇಕು ಎಂದು ಮನವಿ ಸಲ್ಲಿಸಿದರು.

ನಟ ಅನಿರುದ್ಧ್ ಮಾತನಾಡಿ, ಅಭಿಮಾನ್ ಸ್ಟುಡಿಯೋದಲ್ಲಿ ಹತ್ತು ಗುಂಟೆ ಜಾಗಕ್ಕೆ ಮನವಿ ಮಾಡಿದ್ದೇವೆ. ಆ ಜಾಗದಲ್ಲಿ ಮಂಟಪ ನಿರ್ಮಿಸಲು ಅನುಮತಿ ಕೊಡಿ ಎಂದು ಕೋರಿದ್ದೇವೆ. ಈ ಹಿಂದೆ ನಾವೇ ಮಂಟಪ ನಿರ್ಮಾಣ ಮಾಡಿದ್ದೆವು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಅವರಿಗೂ ದೂರವಾಣಿ ಮಾಡಿ ಮಾತನಾಡಿದ್ದಾರೆ. ನಟ ವಿಷ್ಣುವರ್ಧನ್ ಅವರ ಜನ್ಮದಿನವಾದ ಸೆ.18ರೊಳಗೆ ಮಂಟಪ ನಿರ್ಮಾಣಕ್ಕೆ ಅನುಮತಿ ಸಿಗಬಹುದು ಎಂಬ ನಿರೀಕ್ಷೆ ಇದೆ ಎಂದರು.

> ಭಾರತಿ ವಿಷ್ಣುವರ್ಧನ್ ಮತ್ತು ಅನಿರುದ್ಧ್ ಅವರು ನನ್ನನ್ನು ಭೇಟಿಯಾಗಿ ವಿಷ್ಣು ಸ್ಮಾರಕ ನಿರ್ಮಾಣಕ್ಕೆ 10 ಗುಂಟೆ ಜಾಗ ಒದಗಿಸಬೇಕು ಹಾಗೂ ವಿಷ್ಣುವರ್ಧನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕೆಂದು ಮನವಿ ಮಾಡಿದರು. ಈ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಗುವುದು.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಎಸ್-400 ಕ್ಷಿಪಣಿ ಹೆಚ್ಚುವರಿ ಪೂರೈಕೆಗೂ ಮಾತುಕತೆ

ರಷ್ಯಾ ಕಚ್ಚಾ ತೈಲ ಇನ್ನಷ್ಟು ಅಗ್ಗ

ಮಾಸ್ಕೊ: ಅಮೆರಿಕದ ಶೇ.50ರ ಪ್ರತಿಸುಂಕದ ನಡುವೆಯೇ ರಷ್ಯಾ ಭಾರತಕ್ಕೆ ಪೂರೈಸುತ್ತಿರುವ ಕಚ್ಚಾ ತೈಲದ ದರವನ್ನು ಮತ್ತಷ್ಟು ಇಳಿಸಲು ಮುಂದಾಗಿದೆ.

ಭಾರತದ ಜತೆಗಿನ ರಕ್ಷಣಾ ಮತ್ತು ಇಂಧನ ಕ್ಷೇತ್ರದ ವ್ಯಾಪಾರ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲು ಮುಂದಾಗಿರುವ ರಷ್ಯಾ, ಇನ್ನಷ್ಟು ಎಸ್-400 ಏರ್ ಡಿಫೆನ್ಸ್ ಸಿಸ್ಟಮ್ (ವಾಯು ದಾಳಿ ವಿನಾಶಕ) ಮಾರಾಟಕ್ಕೆ ಇಚ್ಛಿಸಿದೆ. ಇದೇ ವೇಳೆ, ಕಚ್ಚಾತೈಲವನ್ನು ಇನ್ನಷ್ಟು ರಿಯಾಯಿತಿ ದರದಲ್ಲಿ ಪೂರೈಸುವ ಪ್ರಸ್ತಾಪಕ್ಕೂ ರಷ್ಯಾ ತಾತ್ವಿಕ ಅನುಮೋದನೆ ನೀಡಿದೆ.

ರಷ್ಯಾದಿಂದ ಕಚ್ಚಾತೈಲ ಖರೀದಿ ನಿಲ್ಲಿಸಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಟ್ ಟ್ರಂಪ್ ಒತ್ತಡ ಹೇರುತ್ತಿದ್ದು, ಇದನ್ನು ಧಿಕ್ಕರಿಸಿರುವ ಭಾರತಕ್ಕೆ ರಷ್ಯಾ ಮತ್ತಷ್ಟು ಸಹಾಯಹಸ್ತ ಚಾಚಿದೆ. ಶಾಂಘೈ ಶೃಂಗಸಭೆಯಲ್ಲಿ ಮೋದಿ ಮತ್ತು ಪುಟಿನ್ ಮಾತುಕತೆ ನಡೆಸಿದ ಬೆನ್ನಿಗೇ ಈ ಬೆಳವಣಿಗೆ ನಡೆದಿದ್ದು, ಅಮೆರಿಕದ ಆಕ್ರೋಶವನ್ನು ಮತ್ತಷ್ಟು ಹೆಚ್ಚಿಸಿದೆ.

ಆಪರೇಷನ್ ಸಿಂದೂರ ಕಾರ್ಯಾಚರಣೆಯ ವೇಳೆ ಪಾಕಿಸ್ತಾನದ ವೈಮಾನಿಕ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ಎಸ್-400 (ಸುದರ್ಶನ ಚಕ್ರ) ವಾಯು ರಕ್ಷಣಾ ವ್ಯವಸ್ಥೆ ಸಾಧನಗಳ ಪೂರೈಕೆ ಹೆಚ್ಚಳ ಸಂಬಂಧವೂ ರಷ್ಯಾ ಮತ್ತು ಭಾರತ ಮಾತುಕತೆ ನಡೆಸುತ್ತಿವೆ. ರಷ್ಯಾ ಸೇನಾ ವಿಭಾಗದ ಹಿರಿಯ ಅಧಿಕಾರಿ ಡಿಮಿಟ್ರಿ ಶುಗಾಯೆವ್ ಈ ಮಾಹಿತಿಯನ್ನು ಹಂಚಿಕೊಂಡಿದ್ದಾರೆ.

2018ರಲ್ಲಿ ಎಸ್-400 ಪೂರೈಕೆಗಾಗಿ ಭಾರತ-ರಷ್ಯಾ ಮಧ್ಯೆ 550 ಕೋಟಿ ಡಾಲರ್ ಒಪ್ಪಂದವಾಗಿತ್ತು. ಈ ಒಪ್ಪಂದದಡಿ ಬಾಕಿಯಾಗಿರುವ ಎಸ್-400ನ 2 ಘಟಕಗಳ ಪೂರೈಕೆ 2026 ಮತ್ತು 2027ರ ವೇಳೆ ನಡೆಯಲಿದೆ ಎಂದು ವರದಿಗಳು ತಿಳಿಸಿವೆ.

ಮತ್ತೆ ಶೇ.25 ರಿಯಾಯಿತಿ!

ಯುರಲ್ ಗ್ರೇಡ್ ತೈಲವನ್ನು ಭಾರತಕ್ಕೆ ಬ್ಯಾರೆಲ್‌ಗೆ 3 ಡಾಲರ್‌ಗೆ ಮಾರಲು ರಷ್ಯಾ ಒಪ್ಪಿದೆ. ಈ ಮೊದಲು 4 ಡಾಲರ್ ಲೆಕ್ಕದಲ್ಲಿ ಯುರಲ್ ಗ್ರೇಡ್ ಕಚ್ಚಾತೈಲವನ್ನು ರಷ್ಯಾ ಮಾರುತ್ತಿತ್ತು ಎಂದು ಬ್ಲೂಮ್‌ಬರ್ಗ್ ಮಾಧ್ಯಮ ಸಂಸ್ಥೆ ಬುಧವಾರ ವರದಿ ಮಾಡಿದೆ. ಆ ಲೆಕ್ಕದಲ್ಲಿ ರಷ್ಯಾ ಮತ್ತೆ ಕಚ್ಚಾತೈಲ ದರದಲ್ಲಿ 'ಆಪ್ತಮಿತ್ರ' ಭಾರತಕ್ಕೆ ಶೇ.25ರಷ್ಟು ರಿಯಾಯಿತಿ ದರದಲ್ಲಿ ಮಾರಲು ಸಿದ್ಧವಾಗಿದೆ ಎಂದು ಅರ್ಥೈಸಲಾಗಿದೆ.

ಆಂಗ್ಲಪದ ಬದಲಿಸಲು ಸಿದ್ಧ ಎಂದ ಡಿಕೆಶಿ, ಜಿಬಿಎ ನಾಮಫಲಕ ಅನಾವರಣ

ಸೂಕ್ತ ಪದ ಸಿಕ್ಕರೆ ಹೆಸರು ಗ್ರೇಟರ್ ಬದಲು

ಬೆಂಗಳೂರು: ಇತಿಹಾಸದ ಪುಟ ಸೇರಿರುವ ಬಿಬಿಎಂಪಿ ಬದಲಿಗೆ ಅಸ್ತಿತ್ವಕ್ಕೆ ಬಂದಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ 'ಗ್ರೇಟರ್' ಬದಲಿಗೆ ಕನ್ನಡದ ಪದವಿಡ ಬೇಕಿತ್ತು ಎನ್ನುವ ಪ್ರತಿಪಕ್ಷಗಳ ವಿರೋಧಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 'ಸೂಕ್ತ ಪದ ಸಿಕ್ಕರೆ ಬದಲಾಯಿ ಸೋಣ'ವೆಂದು ತಿಳಿಸಿದ್ದಾರೆ.

ಮಂಗಳವಾರದಿಂದ ಅಸ್ತಿತ್ವಕ್ಕೆ ಬಂದಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕೇಂದ್ರ ಕಚೇರಿಯ ನಾಮಫಲಕ ಅನಾವರಣ ಗೊಳಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಮಾತೃಭಾಷೆಯನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿರುವ ಅವರು, ಗ್ರೇಟರ್ ಪದಕ್ಕೆ ಸೂಕ್ತ ಬದಲಿ ಪದ ಸಿಕ್ಕರೆ ನಿಶ್ಚಿತವಾಗಿ ಬದಲಾಯಿಸೋಣ ಎಂದು ಸ್ಪಷ್ಟಪಡಿಸಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾದ ಕೂಡಲೇ ಬೆಂಗಳೂರಿನ ಸಮಸ್ಯೆಗಳು ದಿನ ಬೆಳಗಾಗುವುದರಲ್ಲಿ ಬಗೆಹರಿಯುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ನಾವು ಬಗೆಹರಿಸುವ ವಿಶ್ವಾಸವಿದೆ. ಕುಡಿಯುವ ನೀರು, ರಸ್ತೆ ಗುಂಡಿ, ಸಂಚಾರ ದಟ್ಟಣೆ ವಿಚಾರದಲ್ಲಿ ಉತ್ತಮವಾಗಿ ಕೆಲಸ ಮಾಡಲಾಗುವುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇನ್ನು ನೂತನವಾಗಿ ನಿರ್ಮಾಣವಾಗ ಬೇಕಿರುವ ನಗರ ಪಾಲಿಕೆ ಕಟ್ಟಡಗಳ ಕಾಮಗಾರಿಗೆ ನ.1ಕ್ಕೆ ಭೂಮಿಪೂಜೆ ನೆರವೇರಿಸಲಾಗುವುದು. ಎಲ್ಲ ಪಾಲಿಕೆಗಳ ಗಡಿ ಭಾಗಗಳಿಗೆ ಗಡಿ ಗೋಪುರಗಳನ್ನು ನಿರ್ಮಿಸಲಾಗುವುದು ಎಂದು ಪ್ರಕಟಿಸಿದರು.

ಪ್ರತಿ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆಗಳ ಸುಧಾರಣೆ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ 500 ಮಂದಿ ಎಂಜಿನಿಯರ್‌ಗಳಿಗೆ ಅನುಮೋದನೆ ನೀಡಲಾಗಿದೆ. ಈ ಹಿಂದೆ 198 ವಾರ್ಡ್‌ಗಳಿದ್ದವು. ಈಗ 500 ವಾರ್ಡ್‌ಗಳ ರಚನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪಾಲಿಕೆಗಳ ಆಡಳಿತಾತ್ಮಕ ವೆಚ್ಚ, ಸಂಬಳ ಹಾಗೂ ನಿವೃತ್ತಿ ವೇತನಕ್ಕೆ ಎಂದು ಬಿಬಿಎಂಪಿಯಿಂದ ಸುಮಾರು 300 ಕೋಟಿ ರು. ಹಣ ಬಿಡುಗಡೆಗೆ ಮಾಡಲಾ ಗುವುದು ಎಂದರು.

ಪ್ರತಿ ಪಾಲಿಕೆಗೆ ಇಬ್ಬರು ಐಎಎಸ್: ಪ್ರತಿ ಪಾಲಿಕೆಗಳಲ್ಲಿ ಇಬ್ಬರು ಐಎಎಸ್ ಅಧಿಕಾರಿಗಳು, ಒಬ್ಬರು ಕೆಎಎಸ್, ಇಬ್ಬರು ಮುಖ್ಯ ಎಂಜಿನಿಯರ್‌ಗಳು ಹಾಗೂ ಅಗತ್ಯ ಕಚೇರಿ ಸಿಬ್ಬಂದಿ ಕೆಲಸ ಮಾಡಲಿದ್ದಾರೆ. ಬೆಂಗಳೂರು ನಗರಕ್ಕೆ ಉತ್ತಮವಾದ ಆಡಳಿತ ಹಾಗೂ ಜನರ ಬಾಗಿಲಿಗೆ ಸರಕಾರವನ್ನು ತೆಗೆದುಕೊಂಡು ಹೋಗಬೇಕು ಎಂದು ನಿರ್ಣಯಗಳನ್ನು ತೆಗೆದುಕೊಂಡು ಪಾಲಿಕೆಗಳು ಕೆಲಸ ಮಾಡಲಿವೆ. → 4

> ನಾಗರಿಕರು, ವಾಸ್ತುಶಿಲ್ಪಿಗಳು ಪಾಲಿಕೆ ಕಚೇರಿಗಳ ವಿನ್ಯಾಸ ಹೇಗಿರಬೇಕು ಎಂದು ಸಲಹೆ ನೀಡಬಹುದು. ಜತೆಗೆ ವಿನ್ಯಾಸಗಳನ್ನು ಸಲಹೆ ನೀಡಬಹುದು. ಇದರಲ್ಲಿ ಅತ್ಯುತ್ತಮ ಮೂರು ಅಥವಾ ಐದು ವಿನ್ಯಾಸಗಳನ್ನು ಆಯ್ಕೆ ಮಾಡಲಾಗುವುದು. ಇದಕ್ಕೆ 5 ಲಕ್ಷ ರು. ಬಹುಮಾನ ನೀಡಲಾಗುವುದು.
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಅಧಿಕಾರ ವಹಿಸಿಕೊಂಡ ಅಧಿಕಾರಿಗಳು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಾಗಿ ಮಹೇಶ್ವರ ರಾವ್ ಅವರು ಅಧಿಕಾರ ಸ್ವೀಕರಿಸಿದರು. ಇದೇ ರೀತಿ ಬೆಂಗಳೂರು ಪೂರ್ವ ಆಯುಕ್ತರಾಗಿ ರಮೇಶ್ ಡಿ.ಎಸ್, ಪಶ್ಚಿಮ ಆಯುಕ್ತರಾಗಿ ಡಾ. ರಾಜೇಂದ್ರ ಕೆ.ವಿ, ಉತ್ತರ ಆಯುಕ್ತರಾಗಿ ಪೊಮ್ಮಲ ಸುನೀಲ್ ಕುಮಾರ್, ದಕ್ಷಿಣ ಆಯುಕ್ತರಾಗಿ ರಮೇಶ್ ಕೆ.ಎನ್ ಹಾಗೂ ಕೇಂದ್ರ ನಗರ ಪಾಲಿಕೆಯ ಆಯುಕ್ತರಾಗಿ ರಾಜೇಂದ್ರ ಚೋಳನ್ ಪಿ ಅಧಿಕಾರ ವಹಿಸಿಕೊಂಡರು.

ಫನ್‌ತರಂಗ

- ರಘುಪತಿ ಶೃಂಗೇರಿ -

ದಕ್ಷಿಣ ಭಾರತದ ಮೊದಲ ಆಪಲ್ ಸ್ಟೋರ್, ಹೆಬ್ಬಾಳದಲ್ಲಿ ಪ್ರಾರಂಭ
ಸುದ್ದಿ



ಸಮಾಚಾರ ಸಣ್ಣದಲ್ಲ

10.60 ಲಕ್ಷ ರು. ಗಾಂಜಾ ವಶ: ಸೆರೆ

ಬೆಂಗಳೂರು: ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ನಾಲ್ವರು ಅಂತಾರಾಜ್ಯ ಆರೋಪಿಗಳನ್ನು ಬಂಧಿಸಿರುವ ನಗರ ಪೊಲೀಸರು ಒಟ್ಟು 10.60 ಲಕ್ಷ ರು. ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ.



ಎರಡು ಪ್ರಕರಣಗಳಲ್ಲಿ ಒರಿಸ್ಸಾ ಹಾಗೂ ಬಿಹಾರ ರಾಜ್ಯದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ವಿವೇಕನಗರ ಠಾಣೆ ಪೊಲೀಸರು 5.60 ಲಕ್ಷ ರು. ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ. ವನ್ನಾರಪೇಟೆ ಕಡೆಗೆ ಹೋಗುವ ರಸ್ತೆಯ ಎಎಸ್‌ಸಿ ಸೆಂಟರ್ ಕಾಂಪೌಂಡ್ ಪಕ್ಕದ ಫುಟ್‌ಪಾತ್‌ನಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದಾನೆಂಬ ಮಾಹಿತಿ ಪೊಲೀಸರಿಗೆ ಲಭಿಸಿದೆ. ಖಚಿತ ಮಾಹಿತಿಯನ್ನಾಧರಿಸಿ ಎನ್‌ಡಿಪಿಎಸ್ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡು ನಂತರ ಸ್ಥಳದ ಮೇಲೆ ಪೊಲೀಸರು ದಾಳಿ ಮಾಡಿ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಆತ ಒರಿಸ್ಸಾ ರಾಜ್ಯದವನು ಎಂಬುವುದು ಗೊತ್ತಾಗಿದೆ. ನಗರದಲ್ಲಿ ತಾನು ವಾಸವಾಗಿದ್ದುಕೊಂಡು ಅಪರಿಚಿತ ವ್ಯಕ್ತಿ ಯೊಬ್ಬನಿಂದ ಗಾಂಜಾವನ್ನು ಕಡಿಮೆ ಬೆಲೆಗೆ ಖರೀದಿಸಿಕೊಂಡು ಬಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದುದ್ದಾಗಿ ವಿಚಾರಣೆ ವೇಳೆ ಹೇಳಿದ್ದಾನೆ.

31.87 ಕೋಟಿ ರು. ಸಂಚಾರ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ಶೇ 50ರಷ್ಟು ರಿಯಾಯಿತಿ ಕೊಟ್ಟಿದ್ದು ಒಟ್ಟು 31.87 ಕೋಟಿ ರು. ದಂಡ ಸಂಗ್ರಹಣೆಯಾಗಿದೆ. ಸೆ.2ರ ಅಂತ್ಯಕ್ಕೆ ಒಟ್ಟು 11,32,991 ಪ್ರಕರಣಗಳು ಇತ್ಯರ್ಥವಾಗಿದ್ದು, 31,87,06,850 ರು. ದಂಡ ಸಂಗ್ರಹಣೆಯಾಗಿದೆ. ದಂಡ ಪಾವತಿಗೆ ನೀಡಲಾಗಿರುವ ರಿಯಾಯಿತಿಯು ಆಗಸ್ಟ್ 23ರಿಂದ ಆರಂಭವಾಗಿದ್ದು, ಸೆಪ್ಟೆಂಬರ್ 12ರವರೆಗೆ ಇರಲಿದೆ. ಆದರೆ, ಈ ರಿಯಾಯತಿಯು 2023ರ ಫೆ.11ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರವೇ ಅನ್ವಯವಾಗಲಿದೆ. ಒಂದು ವೇಳೆ ತಪ್ಪಾಗಿ ದಂಡ ವಿಧಿಸಲಾಗಿದ್ದರೆ, ಮರುಪರಿಶೀಲನೆಯ ದೂರನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಮೊದಲ ವಾರದಲ್ಲಿ 24 ಕೋಟಿ ರು.ದಂಡ ಪಾವತಿ: ರಿಯಾಯಿತಿ ಘೋಷಿಸಿದ ಮೊದಲ ವಾರದಲ್ಲಿ ಬರೋಬ್ಬರಿ 24 ಕೋಟಿ ರು. ದಂಡ ಸಂಗ್ರಹವಾಗಿತ್ತು. ಆ.30 ರ ಅಂತ್ಯಕ್ಕೆ ಒಟ್ಟು 8,52,201 ಪ್ರಕರಣಗಳು ಇತ್ಯರ್ಥವಾಗಿತ್ತು. ಒಟ್ಟು 24,00,06,850 ರು. ದಂಡ ಸಂಗ್ರಹಣೆಯಾಗಿತ್ತು. ಅದಕ್ಕೂ ಮೊದಲು 2ದೇ ದಿನದಲ್ಲಿ 2,56,102 ಪ್ರಕರಣಗಳು ಇತ್ಯ ರ್ಥವಾಗಿ 7,19,51,500 ರು. ದಂಡ ಸಂಗ್ರಹವಾಗಿತ್ತು.

ಜಾಗ ಬಿಡಲಿಲ್ಲವೆಂದು ಬೈಕ್-ಕಾರಿನಲ್ಲಿದ್ದವರ ನಡುವೆ ನೂಕಾಟ-ತಳ್ಳಾಟ | ನೆಲಕ್ಕೆ ಬಿದ್ದು ವೃದ್ಧ ಮೃತ್ಯು

ನಾಲ್ಕು ಪ್ರತ್ಯೇಕ ಅಪಘಾತ: ನಾಲ್ವರ ಸಾವು

ಬೆಂಗಳೂರು: ನಗರದಲ್ಲಿ ಬುಧವಾರ ಒಂದೇ ದಿನ ನಾಲ್ಕು ಪ್ರತ್ಯೇಕ ಅಪಘಾತ ಮತ್ತು ರೋಡ್ ರೇಜ್ ಪ್ರಕರಣಗಳಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ.

ಮೂರು ವಾಹನಗಳ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಪೇಂಟರ್ ಮೃತಪಟ್ಟಿರುವ ಘಟನೆ ಬುಧವಾರ ಬೆಳಗ್ಗೆ ಜ್ಞಾನಭಾರತಿ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ತಮಿಳುನಾಡು ಮೂಲದ ಮನಿಗೊಂಡನ್ (45) ಮೃತಪಟ್ಟ ಪೇಂಟರ್. ಮೂಡಲಪಾಳ್ಯದಲ್ಲಿ ವಾಸವಿದ್ದ ಇವರು ಬುಧವಾರ ಬೆಳಗ್ಗೆ 10:15 ರ ಸುಮಾರಿನಲ್ಲಿ ಮತ್ತೊಬ್ಬ ಪೇಂಟರ್ ಲಿಂಗಪ್ಪನನ್ನು ತಮ ಬೈಕ್‌ನಲ್ಲಿ ಕರೆದುಕೊಂಡು ಕೆಲಸಕ್ಕೆ ಹೋಗುತ್ತಿದ್ದರು. ದೊಡ್ಡಬಸ್ತಿ ಮುಖ್ಯ ರಸ್ತೆಯ ಸೊನ್ನೇನಹಳ್ಳಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಇಳಿಸಲು ಬಿಎಂಟಿಸಿ ಬಸ್ ನಿಂತಿತ್ತು. ಹಾಗಾಗಿ ಇವರ ಬೈಕ್ ಬಸ್ ಹಿಂದೆ ನಿಂತಿದೆ. ಆ ವೇಳೆ ಅತೀ ವೇಗವಾಗಿ ಬಂದ ಟಾಟಾಏಸ್ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದಾಗ ಆ ಬೈಕ್ ಬಿಎಂಟಿಸಿ ಬಸ್‌ಗೆ ಅಪ್ಪಳಿಸಿದೆ. ಈ ಅಪಘಾತದಿಂದಾಗಿ ಬೈಕ್ ಸವಾರ ಮನಿಗೊಂಡನ್ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ.

ಜಗಳ: ವೃದ್ಧ ಸಾವು: ಕಾರಿಗೆ ಜಾಗ ಬಿಡಲಿಲ್ಲವೆಂಬ ಕೋಪಕ್ಕೆ ಬೈಕ್ ಸವಾರರು ಹಾಗೂ ಕಾರಿನಲ್ಲಿದ್ದವರ ಮಧ್ಯೆ ನಡೆದ ಜಗಳ, ತಳ್ಳಾಟ ನೂಕಾಟದಲ್ಲಿ ವೃದ್ಧರೊಬ್ಬರು ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ಆರ್.ಟಿ.ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ಬೆಳಗಿನ ಜಾವ ನಡೆದಿದೆ. ಕೌಸಲ್ ನಗರದ ನಿವಾಸಿ ಸಯ್ಯದ್ ನಿಸಾರ್ ಅಹಮದ್ (61) ಮೃತಪಟ್ಟ ವೃದ್ಧ. ಅನಾರೋಗ್ಯದ ನಿಮಿತ್ತ ಸಯ್ಯದ್ ನಿಸಾರ್ ಅಹಮದ್ ಅವರನ್ನು ಕುಟುಂಬಸ್ಥರು ಬುಧವಾರ ಬೆಳಗಿನ ಜಾವ 1.30ರ ಸುಮಾರಿನಲ್ಲಿ ದೇವೇಗೌಡ ರಸ್ತೆಯ ವಿ.ಕೇರ್ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ. ಆಸ್ಪತ್ರೆ ಮುಂದೆ ಇಬ್ಬರು ಬೈಕ್ ನಿಲ್ಲಿಸಿಕೊಂಡು ನಿಂತಿದ್ದರು. ಅದೇ ವೇಳೆಗೆ ಇವರ ಕಾರು ಬಂದಿದ್ದು, ಮುಂದೆ ಹೋಗಲು ಜಾಗ ಬಿಡಲಿಲ್ಲವೆಂಬ ಕಾರಣಕ್ಕೆ ಬೈಕ್ ಸವಾರರ ಜೊತೆ ಜಗಳವಾಗಿದೆ. ಕಾರಿನಲ್ಲಿದ್ದವರು ಇಳಿದು ಹೊರ ಬಂದು ಬೈಕ್ ಸವಾರರ ಜತೆ ಜಗಳವಾಡುತ್ತಿದ್ದಾಗ ಸಯ್ಯದ್ ನಿಸಾರ್ ಅಹಮದ್ ಅವರು ಸಹ ಬಂದಿದ್ದಾರೆ. ಆ ಸಂದರ್ಭದಲ್ಲಿ ಎರಡು ಕಡೆಯವರ ಮಧ್ಯೆ ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗಿದಾಗ ಕೈ ಕೈ ಮಿಲಾಯಿಸಿಕೊಂಡು ತಳ್ಳಾಟ ನೂಕಾಟವಾದಾಗ ಸಯ್ಯದ್ ನಿಸಾರ್ ಅಹಮದ್ ಅವರು ಕೆಳಗೆ ಬಿದ್ದು ಮೃತಪಟ್ಟಿದ್ದಾರೆ. ಈ ಬಗ್ಗೆ ಆರ್.ಟಿ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ವೃದ್ಧ ದುರ್ಮರಣ

ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ವೃದ್ಧ ಮೃತಪಟ್ಟಿರುವ ಘಟನೆ ಕೆಎಸ್ ಲೇಔಟ್ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬುಧವಾರ ಬೆಳಗ್ಗೆ ನಡೆದಿದೆ. ಜರಗನಹಳ್ಳಿಯ ನಿವಾಸಿ ಗಂಗಾಧರಯ್ಯ(67) ಮೃತಪಟ್ಟ ಬೈಕ್ ಸವಾರ. ಬುಧವಾರ ಬೆಳಗ್ಗೆ 8.45 ರ ಸುಮಾರಿನಲ್ಲಿ ಗಂಗಾಧರಯ್ಯ ಅವರು ಬೈಕ್‌ನಲ್ಲಿ ಹೋಗುತ್ತಿದ್ದಾಗ ಕನಕಪುರ ರಸ್ತೆಯ ಜರಗನಹಳ್ಳಿ ಮೆಟ್ರೊ ಪಿಲ್ಲರ್ 79 ರ ಸಮೀಪ ಅತೀ ವೇಗವಾಗಿ ಬರುತ್ತಿದ್ದ ಕೆಎಸ್‌ಆರ್ ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡು ಅವರು ಮೃತಪಟ್ಟಿದ್ದಾರೆ.

ಬಿಎಂಟಿಸಿ ಬಸ್‌ಗೆ ಸಿಕ್ಕಿ ಕೂಲಿ ಕಾರ್ಮಿಕ ಬಲಿ

ಬಿಎಂಟಿಸಿ ಬಸ್ ಹತ್ತುತ್ತಿದ್ದಂತೆ ಬಸ್ ಚಲಿಸಿದ ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಚಕ್ರಕ್ಕೆ ಸಿಕ್ಕಿ ಗಂಭೀರ ಗಾಯಗೊಂಡಿದ್ದ ಕೂಲಿ ಕಾರ್ಮಿಕ ಮೃತಪಟ್ಟಿರುವ ಘಟನೆ ಸಿಟಿ ಮಾರ್ಕೆಟ್ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಗೋವಿಂದಪುರದ ನಿವಾಸಿ ನಜೀರ್ ಖಾನ್ (52) ಮೃತಪಟ್ಟ ಕೂಲಿ ಕಾರ್ಮಿಕ. ಸಿಟಿ ಮಾರ್ಕೆಟ್‌ನಲ್ಲಿ ತಳ್ಳುವ ಗಾಡಿ ಇಟ್ಟುಕೊಂಡು ಸರಕು ಹಾಗೂ ಸಾಮಾನು ಸರಂಜಾಮುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುತ್ತಾ ಜೀವನ ನಡೆಸುತ್ತಿದ್ದರು. ಮಂಗಳವಾರ ರಾತ್ರಿ 8 ಗಂಟೆ ಸುಮಾರಿನಲ್ಲಿ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದ ಮೇಲ್ಸೇತುವೆ ಕೆಳಗೆ ನಿಂತಿದ್ದ ಬಿಎಂಟಿಸಿ ಬಸ್ ಹತ್ತಲು ನಜೀರ್ಖಾನ್ ಮುಂದಾಗುತ್ತಿದ್ದಂತೆ ಬಸ್ ಚಲಿಸಿದೆ. ನಿಯಂತ್ರಣ ಕಳೆದುಕೊಂಡು ಕೆಳಗೆ ಬಿದ್ದ ಅವರು ಬಸ್ ಚಕ್ರಕ್ಕೆ ಸಿಲುಕಿ ಮೃತಪಟ್ಟಿದ್ದಾರೆ.

ಅಗ್ನಿ ದುರಂತ: ಸುಟ್ಟು ಕರಕಲಾದ ಕೂಸು

ಶಾರ್ಟ್‌ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ ಹೊತ್ತಿಕೊಂಡು ಮಗು ಸಾವನ್ನಪ್ಪಿರುವಂತಹ ಘಟನೆ ನಗರದ ಸ್ಯಾಂಕಿ ರಸ್ತೆಯ ಸಮ್ಮಿಟ್ ಅಪಾರ್ಟ್‌ಮೆಂಟ್‌ನನಲ್ಲಿ ನಡೆದಿದೆ. ನೇಪಾಳ ಮೂಲದ ಪುಷ್ಕರ್ ಕುಮಾರ್, ಜ್ಯೋತಿಕುಮಾರಿ ದಂಪತಿಯ 18 ತಿಂಗಳ ಪುತ್ರಿ ಅನು ಮೃತ ಮಗು. ಹೈಗ್ರೌಂಡ್ಸ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಪುತ್ರಿ ಅನು ಸೇರಿದಂತೆ ಪುಷ್ಕರ್ ಕುಮಾರ್, ಜ್ಯೋತಿಕುಮಾರಿ ದಂಪತಿ ಕಳೆದ 8 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದರು. ಅಪಾರ್ಟ್‌ಮೆಂಟ್‌ನ 10★10 ಅಳತೆ ರೂಮ್‌ನಲ್ಲಿ ವಾಸವಿದ್ದರು. ಮಗುವನ್ನು ಮನೆಯಲ್ಲೇ ಬಿಟ್ಟು ಪೋಷಕರು ಕೆಲಸಕ್ಕೆ ಹೋಗಿದ್ದರು. ಈ ವೇಳೆ ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು ದುರಂತ ಸಂಭವಿಸಿದೆ.

ಹೈಡ್ರಾಲಿಕ್ ಎಲಿವೇಟರ್‌ಗೆ ಸಿಲುಕಿ ಯುವಕ ಸಾವು

ಹೈಡ್ರಾಲಿಕ್ ಎಲಿವೇಟರ್ಗೆ ಸಿಲುಕಿ ಯುವಕ ಸಾವನ್ನಪ್ಪಿರುವಂತಹ ಘಟನೆ ಚಿಕ್ಕಜಾಲ ಎಂವಿಐಟಿ ಕಾಲೇಜು ರಸ್ತೆಯಲ್ಲಿರುವ ಜಸ್ಟ್ ಬೇಕ್‌ನಲ್ಲಿ ನಡೆದಿದೆ. ಬಿಹಾರ ಮೂಲದ 20 ವರ್ಷದ ಭೂಪೇಂದ್ರ ಚೌಧರಿ ಮೃತ ಯುವಕ. ಭೂಪೇಂದ್ರ ಚೌಧರಿ 3 ತಿಂಗಳ ಹಿಂದೆಯಷ್ಟೇ ಜಸ್ಟ್ ಬೇಕ್‌ಗೆ ಕೆಲಸಕ್ಕೆ ಸೇರಿದ್ದ. ಬಿಸ್ಕತ್ ಸಾಗಿಸುವಾಗ ಎರಡನೇ ಮಹಡಿಯಲ್ಲಿ ತಲೆ ಹೊರಗೆ ಮಾಡಿದ್ದ, ಈ ವೇಳೆ ಹೈಡ್ರಾಲಿಕ್ ಎಲಿವೇಟರ್‌ಗೆ ಸಿಲುಕಿ ಮೃತಪಟ್ಟಿದ್ದಾನೆ. ಘಟನೆ ಸಂಬಂಧ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ.

ಸೆಲ್‌ನಲ್ಲಿ ಕನಿಷ್ಠ ಸೌಲಭ್ಯವೂ ನೀಡುತ್ತಿಲ್ಲ ಎಂದು ದರ್ಶನ್ ಪರ ವಕೀಲರ ವಾದ | ಸೆ.9ಕ್ಕೆ ವಿಚಾರಣೆ

ಪ್ರಜ್ವಲ್ ರೇವಣ್ಣಗೆ ಇಲ್ಲದ ರೂಲ್ಸ್ ದರ್ಶನ್‌ಗೆ ಯಾಕೆ?

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳನ್ನ ಪರಪ್ಪನ ಅಗ್ರಹಾರ ಜೈಲಿಂದ ಶಿಫ್ಟ್ ಮಾಡುವಂತೆ ಸಲ್ಲಿಸಿದ್ದ ಅರ್ಜಿ ಹಾಗೂ ದರ್ಶನ್‌ಗೆ

ಬೆಡ್‌ಶೀಟ್, ತಲೆ ದಿಂಬು ಸೇರಿದಂತೆ ಅಗತ್ಯ ವಸ್ತುಗಳನ್ನ ನೀಡುವಂತೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ಸಿಸಿಎಚ್ 64ರ ನ್ಯಾಯಾಲಯದಲ್ಲಿ ನಡೆದಿದ್ದು, ಸೆ.9ಕ್ಕೆ ಕೋರ್ಟ್ ತೀರ್ಪು ಪ್ರಕಟವಾಗಲಿದೆ.

ನಟ ದರ್ಶನ್ ಸೇರಿದಂತೆ ಐವರು ಆರೋಪಿಗಳನ್ನ ಪರಪ್ಪನ ಅಗ್ರಹಾರ ಜೈಲಿಂದ ಶಿಫ್ಟ್ ಮಾಡುವಂತೆ ಸಲ್ಲಿಸಿದ್ದ ಅರ್ಜಿ ಹಾಗೂ ದರ್ಶನ್‌ಗೆ ಅಗತ್ಯ ವಸ್ತುಗಳನ್ನ ನೀಡುವಂತೆ ಜೈಲಾಧಿಕಾರಿಗೆ ನಿರ್ದೇಶಿಸುವಂತೆ ದರ್ಶನ್ ಪರ ವಕೀಲರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಿಸಿಎಚ್ 64ರಲ್ಲಿ ನಡೆಯಿತು. ದರ್ಶನ್ ಪರ ವಕೀಲ ಸುನೀಲ್ ವಾದ ಮಂಡಿಸಿದ್ದು, ಪ್ರಿಸನ್ಸ್ ಆ್ಯಕ್ಟ್, ವೀಡಿಯೋ ಕಾನ್ಫರೆನ್ಸ್ ಆ್ಯಕ್ಟ್, ಮಾನವ ಹಕ್ಕುಗಳ ಕಾಯಿದೆಗಳ ಆಧಾರದ ಮೇಲೆ ವಾದ ಮಂಡಿಸಿದ್ದು, ಇದೇ ತಿಂಗಳ 9ರಂದು ಎರಡೂ ಅರ್ಜಿಗಳ ಆದೇಶ ಕಾಯ್ದಿರಿಸಲಾಗಿದೆ. ದರ್ಶನ್‌ಗೆ ಏನಾದರೂ ಸಾಲಿಟರಿ ಕನ್ಫೈನ್‌ಮೆಂಟ್ ಶಿಕ್ಷೆ (ಒಂದು ರೂಮಿನಲ್ಲಿ ಒಬ್ಬನೇ ಇರುವ ಏಕಾಂತ ಶಿಕ್ಷೆ) ಆಗಿದ್ಯಾ? ಈ ರೀತಿಯ ತಾರತಮ್ಯಕ್ಕೆ ಈಗಿನ ಕಾರಾಗೃಹ ಡಿಜಿಪಿ ದಯಾನಂದ ಅವರು ಕಾರಣ. ಜೈಲಿನ ಸೆಲ್‌ನಿಂದ ಹೊರಗೆ ಬರಲು ಬಿಟ್ಟಿಲ್ಲ. ಹೀಗಿದ್ದಾಗ ಸೌಲಭ್ಯಕ್ಕೆ ಲಿಖಿತ ಮನವಿ ನೀಡಲು ಹೇಗೆ ಸಾಧ್ಯ? ಜೈಲು ಅಧಿಕಾರಿಗಳು ಕನಿಷ್ಠ ಸೌಲಭ್ಯ ಕೂಡ ದರ್ಶನ್‌ಗೆ ನೀಡುತ್ತಿಲ್ಲ. ಈವರೆಗೂ ದರ್ಶನ್ ತನ್ನ ಕುಟುಂಬಸ್ಥರನ್ನು ಮಾತನಾಡಿಸಿಲ್ಲ. ಮಗ ಹಾಗೂ ಪತ್ನಿಯನ್ನ ಮಾತನಾಡಿಸಿಲ್ಲ. ಒಳಗಡೆ ಆಗುತ್ತಿರುವು ದನ್ನು ನಾವು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗೆ ಹೇಳಲು ಆಗಲ್ಲ. ನಮಗೆ ಆಗುತ್ತಿರುವುದನ್ನು ನಾವು ಇಲ್ಲಿ ಹೇಳುತ್ತಿದ್ದೇವೆ. ಒಳಗಡೆ ದರ್ಶನ್‌ನ ತುಂಬಾ ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದಾರೆ. ಬೇರೆ ಕೈದಿಗಳಿಗೆ ಸೌಲಭ್ಯ ಇದೆ. ಶಿಕ್ಷೆ ವಿಧಿಸಿದವರಿಗೂ ಸೌಲಭ್ಯ

ದರ್ಶನ್‌ಗೆ ಗಲ್ಲು ಶಿಕ್ಷೆ ವಿಧಿಸಿ: ಕೋರ್ಟ್ ಹಾಲ್‌ಗೆ ನುಗ್ಗಿದ ಅಪರಿಚಿತ

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ಸೇರಿದಂತೆ 17 ಆರೋಪಿಗಳಿಗೆ ಮರಣದಂಡನೆ ಶಿಕ್ಷೆ ವಿಧಿಸಬೇಕೆಂದು ಕೋರಿ ಅಪರಿಚಿತ ವ್ಯಕ್ತಿಯೊಬ್ಬರು ಅರ್ಜಿ ಹಿಡಿದು ಕೋರ್ಟ್ ಹಾಲ್‌ಗೆ ನುಗ್ಗಿರುವ ಘಟನೆ ನಡೆದಿದೆ. ಬೆಂಗಳೂರಿನ 64ನೇ ಸೆಷನ್ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದ್ದು, ಸಹ ವಾದ-ಪ್ರತಿವಾದ ನಡೆದಿದ್ದ ವೇಳೆ ಅನಾಮಿಕ ವ್ಯಕ್ತಿಯೋರ್ವ, ಕೈಯಲ್ಲಿ ಅರ್ಜಿಯೊಂದನ್ನು ಹಿಡಿದುಕೊಂಡು ಕೋರ್ಟ್‌ಹಾಲ್‌ನೊಳಗೆ ನುಗ್ಗಿದ್ದು, ದರ್ಶನ್ ಆ್ಯಂಡ್ ಗ್ಯಾಂಗ್‌ಗೆ ಜಾಮೀನು ನೀಡಬಾರದು. ಅವರಿಗೆ ಮರಣ ದಂಡನೆ ನೀಡಬೇಕೆಂದು ನ್ಯಾಯಾಧೀಶರ ಮುಂದೆ ಮನವಿ ಮಾಡಿಕೊಂಡಿದ್ದಾನೆ. ಈ ಅನಿರೀಕ್ಷಿತ ಬೆಳವಣಿಗೆಯಿಂದ ಗೊಂದಲಕ್ಕೊಳಗಾದ ನ್ಯಾಯಾಧೀಶರು, ಯಾರು ನೀನು? ಎಂದು ಪ್ರಶ್ನಿಸಿದರು.

‘ನಾನು ರವಿ ಬೆಳಗೆರೆ ಕಡೆಯವನು’

ಕೋರ್ಟ್‌ಹಾಲ್‌ಗೆ ನುಗ್ಗಿದ ವ್ಯಕ್ತಿಯನ್ನು ನ್ಯಾಯಧೀಶರು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಆ ವ್ಯಕ್ತಿ, ನಾನು ರವಿ ಬೆಳಗೆರೆ ಕಡೆಯವನು ಎಂದು ಹೇಳಿದ್ದಾರೆ. ಬಳಿಕ ನ್ಯಾಯಾಧೀಶರು, ಯಾರ್‍ಯಾರೋ ನೀಡುವ ಅರ್ಜಿ ಪಡೆಯಲು ಸಾಧ್ಯವಿಲ್ಲ ಎಂದು ವ್ಯಕ್ತಿಗೆ ಸೂಚಿಸಿದರು. ಜಡ್ಜ್ ಸೂಚನೆ ಬಳಿಕ ಅನಾಮಿಕ ವ್ಯಕ್ತಿ ಕೋರ್ಟ್‌ಹಾಲ್‌ನಿಂದ ಹೊರಗೆ ಹೋದರು. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕ್ರಿಯೆಗಳನ್ನು ನಿಯಮದ ಪ್ರಕಾರವೇ ನಡೆಸಬೇಕು ಮತ್ತು ಹೊರಗಿನ ವ್ಯಕ್ತಿಗಳ ಮಧ್ಯಪ್ರವೇಶಕ್ಕೆ ಅವಕಾಶವಿಲ್ಲ ಎಂದು ನ್ಯಾಯಾಧೀಶರು ಸ್ಪಷ್ಟಪಡಿಸಿದ್ದಾರೆ.

8 ಲಕ್ಷ ರು. ಮೌಲ್ಯದ ಚಿನ್ನಾಭರಣ ವಶ

ಬೆಂಗಳೂರು: ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸರಣಿ ಮನೆಗಳ್ಳತನ ಮಾಡುತ್ತಿದ್ದ ಆರೋಪಿಯೊಬ್ಬನನ್ನು ಪೊಲೀಸರು ಬಂಧಿಸಿದ್ದು, ಆತನಿಂದ 8 ಲಕ್ಷ ರು. ಮೌಲ್ಯದ 58 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಕೆಂಗೇರಿಯ ಹರ್ಷ ಲೇಔಟ್‌ನ ನಿವಾಸಿಯೊಬ್ಬರು 2024ರ ಡಿಸೆಂಬರ್‌ನಲ್ಲಿ ತಮ್ಮ ಮನೆಯಲ್ಲಿ ಕಳ್ಳತನವಾಗಿರುವ ಬಗ್ಗೆ ದೂರು ನೀಡಿದ್ದರು. ಅವರು ಮನೆಗೆ ಬೀಗ ಹಾಕಿಕೊಂಡು ವಿದ್ಯಾರಣ್ಯಪುರದಲ್ಲಿದ್ದ ತಮ್ಮ ತಾಯಿಯ ಮನೆಗೆ ಹೋಗಿದ್ದು, ವಾಪಸ್ ಬಂದು ನೋಡಿದಾಗ, ಮನೆಯ ಬಾಗಿಲಿನ ಬೀಗ ಮುರಿದು, ಒಳನುಗ್ಗಿದ್ದ ಕಳ್ಳರು 48 ಗ್ರಾಂ ಚಿನ್ನಾಭರಣ ಮತ್ತು 15,000 ರು. ದೋಚಿದ್ದಾರೆ ಎಂದು ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಪ್ರಕರಣದ ತನಿಖೆ ಕೈಗೊಂಡ ಪೊಲೀಸರು, ಖಚಿತ ಮೂಲಗಳಿಂದ ಮಾಹಿತಿ ಪಡೆದು, ದಿನಾಂಕ ಆ.24ರಂದು ಕೆಂಗೇರಿ ರೈಲ್ವೆ ನಿಲ್ದಾಣದ ಬಳಿ ಆರೋಪಿ ವಶಕ್ಕೆ ಪಡೆದಿದ್ದರು. ವಿಚಾರಣೆಯ ಸಮಯದಲ್ಲಿ, ಆರೋಪಿಯು ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 9 ದಿನ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ವಿಚಾರಣೆ ವೇಳೆ, ಕದ್ದ ಚಿನ್ನಾಭರಣಗಳನ್ನು ತಮಿಳುನಾಡಿನ ಸೇಲಂನಲ್ಲಿರುವ ಮೂರು ಆಭರಣ ಮಳಿಗೆಗಳಲ್ಲಿ ಮಾರಾಟ ಮಾಡಿರುವುದಾಗಿ ಆರೋಪಿ ಬಾಯ್ಬಿಟ್ಟಿದ್ದಾನೆ ಪೊಲೀಸರ ತಂಡವು ಸೇಲಂಗೆ ತೆರಳಿ, ಮೂರು ಜ್ಯುವೆಲ್ಲರಿ ಅಂಗಡಿಗಳಿಂದ ಒಟ್ಟು 58 ಗ್ರಾಂ ತೂಕದ, 8 ಲಕ್ಷ ರು. ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದೆ.

ಆರೋಪಿಸಿದ್ದ ಮಹಿಳೆ ಸೇರಿ ಐವರ ಬಂಧನ

ಬೆಂಗಳೂರು: ಕೇರಳ ಮೂಲದ ಅರ್ಚಕನ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ. ತಮ್ಮ ವಿರುದ್ಧದ ಆರೋಪಕ್ಕೆ ಅರ್ಚಕ ಪ್ರತಿದೂರು ದಾಖಲಿಸಿದ್ದು, ಈಗ ದೂರುದಾರೆ ಮಹಿಳೆ ಸೇರಿ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ಕೇರಳ ಮೂಲದ ಅರ್ಚಕ ಉನ್ನಿ ದಾಮೋದರನ್ ವಿರುದ್ಧ ಬೆಂಗಳೂರಿನ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಅರ್ಚಕ ದಾಮೋದರ, ದೇವಸ್ಥಾನ ಮ್ಯಾನೇಜರ್ ಅರುಣ್ ಎಂಬಾತನ ಬಂಧನವಾಗಿತ್ತು. ದೂರುದಾರೆಗೆ ಕೇರಳದ ದೇವಸ್ಥಾನಕ್ಕೆ ಕರೆಸಿ ವಿಶೇಷ ಪೂಜೆ ಮಾಡುವ ನೆಪದಲ್ಲಿ ಲೈಂಗಿಕ ದೌರ್ಜನ್ಯವೆಸಗಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಪ್ರಕರಣದ ವಿರುದ್ಧ ಅರ್ಚಕರ ಕುಟುಂಬದವರು ಗೃಹ ಸಚಿವರನ್ನು ಭೇಟಿ ಮಾಡಿ, ಇದು ಸುಳ್ಳು ದೂರು ಅಂತಾ ಪ್ರತಿದೂರು ದಾಖಲಿಸಿದ್ದರು. ಪ್ರಕರಣ ತನಿಖೆ ನಡೆಸಿದ ಪೊಲೀಸರಿಗೆ ಅದೊಂದು ಸುಳ್ಳು ದೂರು ಎನ್ನುವುದು ಗೊತ್ತಾಗಿತ್ತು. ದೇವಸ್ಥಾನದ ಮುಖ್ಯ ಅರ್ಚಕರಾಗಿರುವ ಉನ್ನಿ ದಾಮೋದರರನ್ನು ಆ ಸ್ಥಾನದಿಂದ ಕೆಳಗಿಳಿಸಲು ಮತ್ತು ಎರಡು ಕೋಟಿ ಹಣಕ್ಕೆ ಬೇಡಿಕೆ ಇಟ್ಟಿರೋದು ಪೊಲೀಸರ ತನಿಖೆಯಲ್ಲಿ ಗೊತ್ತಾಗಿತ್ತು. ಈ ಹಿನ್ನೆಲೆಯಲ್ಲಿ ದೂರುದಾರೆ ಮತ್ತು ಆಕೆಯ ನಾಲ್ವರು ಸಹಚರರು ಸೇರಿ ಐವರನ್ನು ಬಂಧಿಸಲಾಗಿದೆ.

ನಮ್ಮ ಮೆಟ್ರೋ ನೀಲಿ ಕಾಮಗಾರಿಗೆ ಗಡುವು

ಬೆಂಗಳೂರು: ಹಳದಿ ಮಾರ್ಗದ ಮೆಟ್ರೋ ಉದ್ಘಾಟನೆ ಬೆನ್ನಲ್ಲೇ ನೀಲಿ ಮಾರ್ಗ ಆರಂಭಕ್ಕೂ ನಮ್ಮ ಮೆಟ್ರೋ ಮುಂದಾಗಿದೆ. ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆಐಎ ಕಾಮಗಾರಿ ಮುಗಿಸಿ ಕಾರ್ಯಾಚರಣೆಯನ್ನು ಆರಂಭಿಸಲು ಮೆಟ್ರೋ ಅಧಿಕಾರಿಗಳಿಗೆ ಗಡುವು ನೀಡಲಾಗಿದೆ. ಸೆಂಟ್ರಲ್ ಸಿಲ್ಕ್ ಬೋರ್ಡ್ 2-ಎ ಕಾಮಗಾರಿ ಮುಗಿಸಲು 2026 ಸೆಪ್ಟೆಂಬರ್, ಕೆ.ಆರ್ ಪುರದಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ಏರ್‌ಪೋರ್ಟ್ 2-ಬಿ ಕಾಮಗಾರಿ ಮುಗಿಸಿ ಮೆಟ್ರೋ ರೈಲು ಸಂಚಾರಕ್ಕೆ ಅನುವು ಮಾಡಿಕೊಡಲು 2027ರ ಜೂನ್ ಅಥವಾ ಜುಲೈಯಂದು ಗಡುವು ನೀಡಲಾಗಿದೆ. ಈಗಾಗಲೇ ಮೆಟ್ರೋ ನೀಲಿ ಮಾರ್ಗದಲ್ಲಿ ಸಿವಿಲ್ ಕಾಮಗಾರಿ ಮುಗಿಯುವ ಹಂತದಲ್ಲಿದ್ದು ಟ್ರ್ಯಾಕ್ ಕೆಲಸ ಆರಂಭವಾಗಿದೆ.

ಹೇಳಿಕೆ ವಿರುದ್ಧ ತನಿಖೆ ನಡೆಯಲಿ ಎಂದಿರುವ ಹೈಕೋರ್ಟ್

ಶಾಸಕ ಯತ್ನಾಳ್ ವಿರುದ್ಧ ಬಲವಂತದ ಕ್ರಮ ಬೇಡ

ಬೆಂಗಳೂರು: ಮುಸ್ಲಿಂ ಯುವತಿಯರನ್ನು ವಿವಾಹವಾದರೆ ಹಿಂದೂ ಯುವಕರಿಗೆ 5 ಲಕ್ಷ ರು. ನೀಡುವುದಾಗಿ ಹೇಳಿಕೆ ನೀಡಿದ ಆರೋಪದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧದ ಎಫ್‌ಐಆರ್‌ಗೆ ತಡೆ ನೀಡಲು

ನಿರಾಕರಿಸಿರುವ ಹೈಕೋರ್ಟ್, ತನಿಖೆ ಮುಂದುವರೆಸಬಹುದು. ಆದರೆ, ಬಲವಂತದ ಕ್ರಮಕ್ಕೆ ಮುಂದಾಗಬಾರದು ಎಂದು ಹೈಕೋರ್ಟ್ ತಿಳಿಸಿದೆ.

ತಮ್ಮ ಹೇಳಿಕೆಯ ವಿರುದ್ಧ ಮೂರು ಠಾಣೆಗಳಲ್ಲಿ ಪ್ರಕರಣ ದಾಖಲಿಸಿ ರುವುದನ್ನು ಪ್ರಶ್ನಿಸಿ ಬಸನಗೌಡ ಪಾಟೀಲ್ ಯತ್ನಾಳ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ಎಂ. ಐ. ಅರುಣ್ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿ ವಿಚಾರಣೆ ಮುಂದೂಡಿತು. ಅಲ್ಲದೆ, ಆಕ್ಷೇಪಣೆ ಸಲ್ಲಿಸಲು ಕೋರಿ ತನಿಖಾಧಿಕಾರಿಗಳು ಹಾಗೂ ದೂರುದಾರರಿಗೆ ತುರ್ತು ನೋಟಿಸ್ ಜಾರಿ ಮಾಡಿತು. ಜತೆಗೆ, ಅರ್ಜಿದಾರರ ವಿರುದ್ಧದ ಆರೋಪಕ್ಕೆ ಮೂರು ವರ್ಷ ಮಾತ್ರ ಶಿಕ್ಷೆ ವಿಧಿಸಬಹುದಾಗಿದೆ. ಹೀಗಾಗಿ, ಪ್ರಕರಣ ತನಿಖೆ ಮುಂದುವರಿಯಬಹುದು. ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ತೆಗೆದುಕೊಳ್ಳುವಂತಿಲ್ಲ. ತನಿಖೆಗೆ ಅರ್ಜಿದಾರರು ಸಹಕರಿಸಬೇಕು ಎಂದು ತಿಳಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ನನ್ನ ಕಕ್ಷಿದಾರರ ಹೇಳಿಕೆಯನ್ನು ಆಧರಿಸಿ ಕಲಬುರಗಿ, ವಿಜಯಪುರ ಮತ್ತು ಕೊಪ್ಪಳದಲ್ಲಿ ಮೂರು ಎಫ್‌ಐಆರ್‌ಗಳು ದಾಖಲಾಗಿವೆ. ಮೂರೂ ಪ್ರಕರಣಗಳ ವಿಚಾರಣೆ ಕೊಪ್ಪಳ ಠಾಣೆಗೆ ವರ್ಗಾವಣೆಯಾಗಿದೆ. ಒಂದೇ ಆರೋಪ ಸಂಬಂಧ ಮೂರು ಪ್ರಕರಣ ದಾಖಲಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ ಪ್ರಕರಣ ರದ್ದು ಮಾಡಬೇಕು ಎಂದು ಕೋರಿದರು.

ಪ್ರಕರಣದ ಹಿನ್ನೆಲೆ

ಕೊಪ್ಪಳ ನಗರದ ಬಹದ್ದೂರ ಬಂಡಿ ರಸ್ತೆಯಲ್ಲಿ ಗವಿಸಿದ್ದಪ್ಪ ಎನ್ನುವ ಯುವಕ ಅನ್ಯಕೋಮಿನ ಯುವಕರಿಂದ ಆ.3ರಂದು ಕೊಲೆಯಾಗಿದ್ದ. ಕೊಲೆಯಾದ ಯುವಕನ ಕುಟುಂಬದವರಿಗೆ ಸ್ವಾಂತನ ಹೇಳಲು ಆ.10 ರಂದು ಶಾಸಕ ಯತ್ನಾಳ್ ಕೊಪ್ಪಳಕ್ಕೆ ತೆರಳಿದ್ದರು. ಈ ವೇಳೆ ಮಾತನಾಡಿದ್ದ ಅವರು, ‘ಹಿಂದೂ ಯುವಕರು ಮುಸ್ಲಿಂ ಯುವತಿಯರನ್ನು ಮದುವೆಯಾದರೆ 5 ಲಕ್ಷ ರು. ಕೊಡುತ್ತೇನೆ. ಕೊಲೆ ಮಾಡುವ ಮುಸ್ಲಿಂರಿಗೆ ಉತ್ತರ ನೀಡಬೇಕಿದೆ. ಆ ಮೂಲಕ ಹಿಂದೂ ಮತ್ತು ಮುಸ್ಲಿಮರ ನಡುವೆ ದ್ವೇಷ ಹರಡುವಂತಹ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಅಬ್ದುಲ್ ಕಲಾಂ ಮತ್ತಿತರರು ದೂರು ನೀಡಿದ್ದರು.ಈ ದೂರು ಆಧರಿಸಿ ಕಲಬುರಗಿ, ವಿಜಯಪುರ ಮತ್ತು ಕೊಪ್ಪಳ ನಗರ ಠಾಣಾ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಅದರ ರದ್ದತಿ ಕೋರಿ ಇದೀಗ ಯತ್ನಾಳ್ ಹೈಕೋರ್ಟ್ ಅರ್ಜಿ ಸಲ್ಲಿಸಿದ್ದಾರೆ.

ಜೇನುಗೂಡು ಕೋ-ಆಪರೇಟೀವ್ ಸೊಸೈಟಿ ಲಿ.,
ನಂ.45, 02ನೇ ಅಡ್ಡರಸ್ತೆ, ಮಲೆನಾಡು ರೇಷನ್ ಡಿಪೋ ಹತ್ತಿರ, ಎಸ್‌ಜಿ ಇಂಟರ್ ನ್ಯಾಷನಲ್ ಶಾಲೆ ಹಿಂಭಾಗ, ಸರಸ್ವತಿಪುರ, ನಂದಿನಿ ಲೇಔಟ್, ಬೆಂಗಳೂರು-560096,
ದೂ.ಸಂ. 9448139975, 9972466308, 7204548326, 9535379259

ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಪ್ರಕಟಣೆ

ಸನ್ಮಾನ್ಯ ಸದಸ್ಯರೇ, ಈ ಮೇಲ್ಕಂಡ ಸಂಘದ 2024-25ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು **ದಿನಾಂಕ: 13.09.2025 ರಂದು ಶನಿವಾರದಂದು ಬೆಳಿಗ್ಗೆ 10.00 ಗಂಟೆಗೆ, ನಂ.16, ಹೋಟೆಲ್ ಸನ್ನಿದಿ ಗ್ರ್ಯಾಂಡ್, 1ನೇ ಅಡ್ಡರಸ್ತೆ, ಸತ್ಯಶಾಂತಿ ಗಣಪತಿ ದೇವಸ್ಥಾನದ ಹತ್ತಿರ, ಸರಸ್ವತಿಪುರ ಬಸ್‌ಸ್ಟಾಪ್ ಪಕ್ಕ, ನಂದಿನಿ ಲೇಔಟ್, ಬೆಂಗಳೂರು-560096** ಇಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ.ದತ್ತಾತ್ರೇಯ .ವಿ ಹೆಗಡೆ** ರವರ ಅಧ್ಯಕ್ಷತೆಯಲ್ಲಿ ನಡೆಸಲು ಆಡಳಿತ ಮಂಡಳಿಯವರು ನಿಗಧಿಪಡಿಸಿರುತ್ತಾರೆ. ಮಾನ್ಯ ಸದಸ್ಯರು ಸಕಾಲಕ್ಕೆ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ. ಸದಸ್ಯರಿಗೆ ಅಂಚೆ ಮೂಲಕ ಮಹಾಸಭೆಯ ಸೂಚನಾ ಪತ್ರವನ್ನು ಕಳುಹಿಸಲಾಗಿದೆ. ಸೂಚನಾ ಪತ್ರ ತಲುಪದ ಸದಸ್ಯರುಗಳು ಇದೇ ಪ್ರಕಟಣೆಯನ್ನು ಸಭೆಯ ಅಧಿಕೃತ ಆಹ್ವಾನವೆಂದು ಪರಿಗಣಿಸಿ, ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ದಿನಾಂಕ: 03.09.2025
ಸ್ಥಳ : ಬೆಂಗಳೂರು

ಜೇನುಗೂಡು ಕೋ-ಆಪರೇಟೀವ್ ಸೊಸೈಟಿ ಲಿ ಪರವಾಗಿ
ಸಹಿ/- ಶ್ರೀ.ದತ್ತಾತ್ರೇಯ .ವಿ ಹೆಗಡೆ, ಅಧ್ಯಕ್ಷರು

Canarys
Solution is our Mantra

ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್
(ಹಿಂದಿನ ಹೆಸರು ಕ್ಯಾನರೀಸ್ ಆಟೊಮೇಶನ್ಸ್ ಪ್ರೈವೇಟ್ ಲಿಮಿಟೆಡ್)
CIN: L31101KA1991PLC012096
ನೋಂದಾಯಿತ ಕಛೇರಿ : ನಂ. 566 & 567, 2ನೇ ಮಹಡಿ, 30ನೇ ಮುಖ್ಯರಸ್ತೆ, ಅತ್ತಿಮಬ್ಬೆ ರಸ್ತೆ, ಬನಗಿರಿನಗರ, ಬನಶಂಕರಿ 3ನೇ ಘಟ್ಟ, ಬೆಂಗಳೂರು- 560085, ಕರ್ನಾಟಕ, ಭಾರತ
ಸಂಪರ್ಕ ಸಂಖ್ಯೆ: +91 9845862780; ಇಮೇಲ್ ಐಡಿ: fin@ecanarys.com ವೆಬ್‌ಸೈಟ್: www.ecanarys.com

34ನೇ ವಾರ್ಷಿಕ ಮಹಾಸಭೆಯ ಸೂಚನೆ

ಕಂಪನಿಗಳ ಕಾಯ್ದೆ, 2013ರ ("ಕಾಯ್ದೆ") ಅನ್ವಯಿಕ ನಿಯಮಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("ಎಂಸಿಎ") ಹೊರಡಿಸಿರುವ ದಿನಾಂಕ 19ನೇ ಸೆಪ್ಟೆಂಬರ್ 2024ರ ಸಾಮಾನ್ಯ ಸುತ್ತೋಲೆ ಸಂ. 20/2020 ಮತ್ತು 05ನೇ ಮೇ, 2020ರ ಸಾಮಾನ್ಯ ಸುತ್ತೋಲೆ ಸಂ. 02/2022 ಮತ್ತು ಇನ್ನಿತರ ಅನ್ವಯಿಕ ಸುತ್ತೋಲೆಗಳೊಂದಿಗೆ ಹಾಗೂ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ರವರು ಹೊರಡಿಸಿರುವ ದಿನಾಂಕ 03ನೇ ಅಕ್ಟೋಬರ್, 2024ರ ಸೆಬಿ ಸುತ್ತೋಲೆ ಸಂ. ಸೆಬಿ/ಎಚ್‌ಓ/ಸಿಎಫ್‌ಡಿ/ಸಿಎಫ್‌ಡಿ-ಪಿಒಡಿ-2/ಪಿ/ಸಿಐಆರ್/2024/133 ರೊಂದಿಗೆ ಓದಿಕೊಂಡಂತೆ (ಇಲ್ಲಿ ಇನ್ನುಮುಂದೆ ಸಮಗ್ರವಾಗಿ "ಸಂಬಂಧಿತ ಸುತ್ತೋಲೆಗಳು") ಮತ್ತು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಾವಳಿಗಳು, 2015 ರೊಂದಿಗೆ (**"ಸೆಬಿ ಲಿಸ್ಟಿಂಗ್ ರೆಗ್ಯೂಲೇಶನ್ಸ್"**) ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಪ್ರಕಾರ, **ಮೆ. ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್‌ನ ("ಕಂಪನಿ") 34ನೇ ವಾರ್ಷಿಕ ಮಹಾಸಭೆಯನ್ನು ('ಎಜಿಎಂ') ಮಂಗಳವಾರ, 30ನೇ ಸೆಪ್ಟೆಂಬರ್ 2025 ರಂದು ಸಂಜೆ 04:00 ಗಂಟೆಗೆ** (ಐಎಸ್‌ಟಿ) ವಿಡಿಯೊ ಕಾನ್ಫರೆನ್ಸಿಂಗ್ ("ವಿಸಿ") ಅಥವಾ ಇತರೆ ಆಡಿಯೊ ವಿಷುಯಲ್ ವಿಧಾನಗಳ ("ಒಎವಿಎಂ") ಮೂಲಕ (ಇಲ್ಲಿ ಇನ್ನುಮುಂದೆ "ನೋಟಿಸ್" ಎನ್ನಲಾಗುವ) ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಮಹಸಾಭೆಯಲ್ಲಿ, ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಉಪಸ್ಥಿತಿ ಇಲ್ಲದೆಯೆ, ಎಜಿಎಂ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ವ್ಯವಹಾರಗಳನ್ನು ಚರ್ಚಿಸಲಾಗುತ್ತದೆ.

ಸಂಬಂಧಿತ ಡೆಪಾಸಿಟರಿಗಳು ನಿರ್ವಹಿಸುವ ಸದಸ್ಯರ ರಿಜಿಸ್ಟರ್ / ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ 29ನೇ ಆಗಸ್ಟ್ 2025 ರೊಳಗೆ ದಾಖಲಾಗಿರುವ ಹೆಸರುಗಳನ್ನು ಹೊಂದಿರುವ ಸದಸ್ಯರಿಗೆ ಮತ್ತು ಕಂಪನಿ / ಡೆಪಾಸಿಟರಿಗಳಲ್ಲಿ ದಾಖಲಾಗಿರುವ ಸದಸ್ಯರ ಇಮೇಲ್ ವಿಳಾಸಗಳಿಗೆ, ಕಂಪನಿಯ ಎಜಿಎಂ ನೋಟಿಸ್ ಜೊತೆಗೆ ಆರ್ಥಿಕ ವರ್ಷ 2024-2025ನೇ ಸಾಲಿನ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ವಿಧಾನದಲ್ಲಿ ಮಾತ್ರ ರವಾನಿಸಲಾಗುತ್ತದೆ. ಕಂಪನಿ / ಆರ್‌ಟಿಎ / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರವರೊಂದಿಗೆ ಇ-ಮೇಲ್ ವಿಳಾಸವನ್ನು ನೋಂದಣಿ ಮಾಡಿಕೊಳ್ಳದಿರುವ ಷೇರುದಾರರ ನೋಂದಾಯಿತ ವಿಳಾಸಗಳಿಗೆ ಆರ್ಥಿಕ ವರ್ಷ 2024-25ನೇ ಸಾಲಿನ ವಾರ್ಷಿಕ ವರದಿಯ ವೆಬ್‌ಲಿಂಕ್ ಒಳಗೊಂಡಿರುವ ಪತ್ರವನ್ನು ರವಾನಿಸಲಾಗುತ್ತದೆ.

ಕಂಪನಿಯ ಸದಸ್ಯರು, ಎಜಿಎಂ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ಎಲ್ಲಾ ಠರಾವುಗಳಿಗೆ ತಮ್ಮ ಮತ ಚಲಾಯಿಸಲು, ಮೆ. ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದಿನ ಮೆ. ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ("ಆರ್‌ಟಿಎ") ಇವರಿಂದ ಪೂರೈಸಲಾಗುವ ಇ-ವೋಟಿಂಗ್ ಸೌಲಭ್ಯವನ್ನು ("ರಿಮೋಟ್ ಇ-ವೋಟಿಂಗ್") ಕಲ್ಪಿಸುತ್ತದೆ. ಅಲ್ಲದೆ, ಎಜಿಎಂ ಸಭೆಯಲ್ಲಿ ಕೂಡ ಕಂಪನಿಯಿಂದ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮತ ಚಲಾಯಿಸುವ ("ಇ-ವೋಟಿಂಗ್") ಸೌಲಭ್ಯವನ್ನು ಒದಗಿಸಲಾಗುತ್ತದೆ. ರಿಮೋಟ್ ಇ-ವೋಟಿಂಗ್ / ಇ-ವೋಟಿಂಗ್‌ಗೆ ಸಂಬಂಧಿತ ಪ್ರಕ್ರಿಯೆಯ ವಿವರಗಳನ್ನು ಎಜಿಎಂ ನೋಟಿಸ್‌ನಲ್ಲಿ ನೀಡಲಾಗುತ್ತದೆ. ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ಅಥವಾ ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಂಡಿರದ ಸದಸ್ಯರು, ರಿಮೋಟ್ ಇ-ವೋಟಿಂಗ್ ಮುಖಾಂತರ ತಮ್ಮ ಮತ ಚಲಾಯಿಸಲು ಅಗತ್ಯವಾದ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಲು, ಎಜಿಎಂ ನೋಟಿಸ್‌ನಲ್ಲಿ ವಿವರಿಸಲಾಗಿರುವ ಪ್ರಕ್ರಿಯೆಗಳನ್ನು ಅನುಸರಿಸಬೇಕೆಂದು ಕೋರಲಾಗಿದೆ.

ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಂಡಿರದ ಸದಸ್ಯರು, ಶೀಘ್ರವಾಗಿ ಕೆಳಗಿನಂತೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳಬೇಕೆಂದು ಕೋರಲಾಗಿದೆ:

ಎ) **ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವವರು** – ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ (ಡಿಪಿ) ಇವರನ್ನು ಸಂಪರ್ಕಿಸಿ ನೋಂದಣಿ ಮಾಡಿಕೊಳ್ಳಬಹುದು.

ಬಿ) **ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಷೇರುದಾರರು** – (1) ಕಂಪನಿ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ ಆಗಿರುವ ಮೆ. ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದಿನ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ಇವರ ಸಿ 101, 247 ಪಾರ್ಕ್, ಲಾಲ್ ಬಹಾದ್ದೂರ್ ಶಾಸ್ತ್ರಿ ಮಾರ್ಗ, ಸೂರ್ಯನಗರ, ಗಾಂಧಿನಗರ, ವಿಖರೊಲಿ ವೆಸ್ಟ್, ಮುಂಬೈ, ಮಹಾರಾಷ್ಟ್ರ 400083 ವಿಳಾಸಕ್ಕಾಗಲಿ ಅಥವಾ (2) instameet@in.mpms.mufg.com ಇಮೇಲ್ ವಿಳಾಸಕ್ಕೆ ಲಿಖಿತ ರೂಪದಲ್ಲಿ ತಮ್ಮ ಫೋಲಿಯೊ ನಂಬರ್, ಷೇರುದಾರರ ಹೆಸರು ನಮೂದಿಸಿ, ಸರ್ಟಿಫಿಕೇಟ್‌ನ ಸ್ಕ್ಯಾನ್ಡ್ ಪ್ರತಿಯನ್ನು (ಫ್ರಂಟ್ & ಬ್ಯಾಕ್), ಪಾನ್ ಕಾರ್ಡ್ (ಸ್ವಯಂ ದೃಢೀಕರಿಸಿದ ಪಾನ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ) ಪ್ರತಿಯನ್ನು ಮತ್ತು ಆಧಾರ್ ಕಾರ್ಡ್ (ಸ್ವಯಂ ದೃಢೀಕರಿಸಿದ ಆಧಾರ್ ಕಾರ್ಡ್‌ನ ಸ್ಕ್ಯಾನ್ಡ್ ಪ್ರತಿ) ಪ್ರತಿಯನ್ನು ಲಗತ್ತಿಸಿ, ಇಮೇಲ್ ವಿಳಾಸ ನೋಂದಣಿಗೆ ಮನವಿ ಮಾಡಿಕೊಳ್ಳಬೇಕು.

ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಕೂಡ, 34ನೇ ಎಜಿಎಂ ನೋಟಿಸ್ ಮತ್ತು ಆರ್ಥಿಕ ವರ್ಷ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ಪಡೆದುಕೊಳ್ಳುವ ಸೀಮಿತ ಉದ್ದೇಶಕ್ಕಾಗಿ, ತಮ್ಮ ಇಮೇಲ್ ವಿಳಾಸ ನೋಂದಣಿ ಮಾಡಿಕೊಳ್ಳಲು, ಮೇಲ್ಕಂಡ ಇಮೇಲ್ ವಿಳಾಸಕ್ಕೆ ಇಮೇಲ್ ಕಳುಹಿಸಬಹುದು.

34ನೇ ಎಜಿಎಂ ಸಭೆಯ ಸೂಚನೆ ಮತ್ತು ಆರ್ಥಿಕ ವರ್ಷ 2024-25ನೇ ಸಾಲಿನ ವಾರ್ಷಿಕ ವರದಿಯು, ಕಂಪನಿಯ www.ecanarys.com ವೆಬ್‌ಸೈಟ್‌ನಲ್ಲಿ, ಆರ್‌ಟಿಎ'ರವರ www.in.mpms.mufg.com ವೆಬ್‌ಸೈಟ್‌ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್, ಎನ್‌ಎಸ್‌ಇ'ರವರ www.nseindia.com ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿರುತ್ತದೆ.

ಎಂಸಿಎ ಸುತ್ತೋಲೆಗಳ ಪ್ರಕಾರ ಕಂಪನಿಯ ಸದಸ್ಯರಿಗೆ ಮಾಹಿತಿ ನೀಡುವ ಮತ್ತು ಸದಸ್ಯರಿಗೆ ಪ್ರಯೋಜನವಾಗಲಿ ಎಂಬ ಉದ್ದೇಶದಿಂದ ಈ ಜಾಹೀರಾತನ್ನು ಹೊರಡಿಸಲಾಗಿದೆ.

ಕ್ಯಾನರೀಸ್ ಆಟೊಮೇಶನ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಅಂಬಿಕೇಶ್ವರಿ ಎಂ ಎ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ದಿನಾಂಕ: 04.09.2025
ಸ್ಥಳ: ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್ (CIN:U65923DL2006PLC150632) (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **05.05.2025** ರಂದು ಕರೆದು ಸಾಲಗಾರ **ಉಜ್ರಾ ಜಬೀನ್ ಪ್ರಾಪ್ರಿಟ್ರಿಕ್ಸ್ ಸ್ಟಾರ್ ಮೆಡಿಕಲ್ಸ್ ಮತ್ತು ಜನರಲ್ ಏಜೆನ್ಸಿಗಳು ಮತ್ತು ಸೈಯದ್ ಫಜುಲ್ಲಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 1,76,36,734.65 (ಒಂದು ಕೋಟಿ ಎಪ್ಪತ್ತಾರು ಲಕ್ಷದ ಮೂವತ್ತಾರು ಸಾವಿರದ ಏಳುನೂರ ಮೂವತ್ತನಾಲ್ಕು ರೂಪಾಯಿಗಳು ಮತ್ತು ಅರವತ್ತೈದು ಪೈಸೆ ಮಾತ್ರ)** ಸಾಲ ಖಾತೆ ನಂ. **HLLASKN00532545** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.04.2025** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **01.09.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್** (ಈಗಿನ ಹೆಸರು: **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್**)ಬಾಕಿ ಇರುವ ಮೊತ್ತ **ರೂ. 1,76,36,734.65 (ಒಂದು ಕೋಟಿ ಎಪ್ಪತ್ತಾರು ಲಕ್ಷದ ಮೂವತ್ತಾರು ಸಾವಿರದ ಏಳುನೂರ ಮೂವತ್ತನಾಲ್ಕು ರೂಪಾಯಿಗಳು ಮತ್ತು ಅರವತ್ತೈದು ಪೈಸೆ ಮಾತ್ರ) 30.04.2025** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆ ಎಲ್ಲಾ ತುಣುಕು ಮತ್ತು ಪಾರ್ಸೆಲ್ ಆಸ್ತಿಯು ಪಶ್ಚಿಮ ಭಾಗದ ಆಸ್ತಿಯನ್ನು ಹೊಂದಿರುವ ಆಸ್ತಿಯಾಗಿದೆ ನಗರ ಪುರಸಭೆಯ ಹೊಸ ಸಂ 215/228, (ಸೈ. ಸಂ 230 ರ ಭಾಗ), ಕಾಚರ್ಕಾನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು-560043, ಕರ್ನಾಟಕ ಉತ್ತರ ತಾಲ್ಲೂಕು, ಪ್ರಸ್ತುತ ಬಿಬಿಎಂಪಿಯ ಮಿತಿಯಡಿಯಲ್ಲಿ, 214/1/228/1 ಅನ್ನು ಹೊಂದಿರುವ, ಪೂರ್ವದಿಂದ ಪಶ್ಚಿಮಕ್ಕೆ 45 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 45 ಅಡಿ ಅಳತೆ 2025 ರ ಎಲ್ಲಾ ಅಳತೆಗಳಲ್ಲಿ ಚದರ ಅಡಿ ಮತ್ತು ಬದ್ಧವಾಗಿದೆ:

ಪೂರ್ವದಲ್ಲಿ : ಅದೇ ಆಸ್ತಿಯ ಪೂರ್ವಕ್ಕೆ ಅರ್ಧ ಭಾಗ,
ಪಶ್ಚಿಮದಲ್ಲಿ : ಖಾಸಗಿ ಆಸ್ತಿ
ಉತ್ತರದಲ್ಲಿ : ಒಳಚರಂಡಿ
ದಕ್ಷಿಣದಲ್ಲಿ : ರಸ್ತೆ

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಫಿನ್ಸರ್ವ್ ಲಿಮಿಟೆಡ್
(ಈಗಿನ ಹೆಸರು: ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್)

ದಿನಾಂಕ : 01.09.2025
ಸ್ಥಳ : ಬೆಂಗಳೂರು

ವಿರಾಮ ಪ್ರತಿ ಭಾನುವಾರ

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.01.2023** ರಂದು ಕರೆದು ಸಾಲಗಾರ **ಟಿ ನಾಗೇಶ್ವರ ರಾವ್ ಮತ್ತು ಜಯಶಾಲಿನಾ ಪುಟ್ಟಾಚಾರಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 25,43,693.58 (ಇಪ್ಪತ್ತೈದು ಲಕ್ಷದ ನಲವತ್ತಮೂರು ಸಾವಿರದ ಆರುನೂರ ತೊಂಬತ್ತಮೂರು ರೂಪಾಯಿಗಳು ಮತ್ತು ಐವತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAG00257834** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **16.01.2023** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಆಸ್ತಿಯ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **29.08.2025** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ.** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**)ಬಾಕಿ ಇರುವ ಮೊತ್ತ **ರೂ. 25,43,693.58 (ಇಪ್ಪತ್ತೈದು ಲಕ್ಷದ ನಲವತ್ತಮೂರು ಸಾವಿರದ ಆರುನೂರ ತೊಂಬತ್ತಮೂರು ರೂಪಾಯಿಗಳು ಮತ್ತು ಐವತ್ತೆಂಟು ಪೈಸೆ ಮಾತ್ರ) 16.01.2023** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಸೈಟ್ ನಂ. 4, ಆ ಎಲ್ಲಾ ತುಂಡು ಮತ್ತು ಪಾರ್ಸೆಲ್. ಆಸ್ತಿ ಸಂ. 116/2 ವಾದರಪಾಳ್ಯದಲ್ಲಿ ನೆಲೆಗೊಂಡಿದೆ, ಹೊರಮಾವು ಅಗರ ಢಾಕಲೆ, ಕೆ.ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಪ್ರಸ್ತುತ ಬಿಬಿಎಂಪಿ ಮತ್ತು ಬಿಬಿಎಂಪಿ ಯ ನ್ಯಾಯವ್ಯಾಪ್ತಿಗೆ ಒಳಪಡುತ್ತದೆ. 1804/116/2, ಹೊರಮಾವು ಅಗರ, ಬಿಬಿಎಂಪಿ ವಾರ್ಡ್ ನಂ. 25, ಬೆಂಗಳೂರು-560043, ಕರ್ನಾಟಕ, ಪೂರ್ವ ಭಾಗದಲ್ಲಿ ಅಳತೆ 47-0 ಅಡಿ, ಪಶ್ಚಿಮ ಭಾಗದಲ್ಲಿ: 40-4 ಅಡಿ, ಉತ್ತರ ಭಾಗದಲ್ಲಿ: 18-0 ಅಡಿ ಮತ್ತು ದಕ್ಷಿಣ ಭಾಗದಲ್ಲಿ: 43-7 ಅಡಿ, ಒಟ್ಟು ಅಳತೆ 1240 ಚದರ ಅಡಿ, ಮತ್ತು ಇದು ಈ ಕೆಳಗಿನಂತೆ ಸೀಮಿತವಾಗಿದೆ:-

ಪೂರ್ವದಲ್ಲಿ : ರೈಲ್ವೆಯ ಆಸ್ತಿ
ಪಶ್ಚಿಮದಲ್ಲಿ : ರಸ್ತೆ
ಉತ್ತರದಲ್ಲಿ : ಸೈಟ್ ಸಂ 4 ರ ಉಳಿದ ಭಾಗ
ದಕ್ಷಿಣದಲ್ಲಿ : ಸೈಟ್ ಸಂ 3

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 29.08.2025
ಸ್ಥಳ : ಬೆಂಗಳೂರು

ಸಮಾಚಾರ ಸಣ್ಣದಲ್ಲ

ಸೆ.6ಕ್ಕೆ ಅಂತರಂಗ ತಂಡ ನಾಟಕ ಪ್ರದರ್ಶನ

ಬೆಂಗಳೂರು: ಅಂತರಂಗ ತಂಡದಿಂದ ನಗರದ ಕಲಾಗ್ರಾಮದಲ್ಲಿ ಸೆ.6ರ ಸಂಜೆ 7.15 ಗಂಟೆಗೆ ಕೈಲಾಸಂರ ಹೋಂ ರೂಲು ಹಾಗೂ ಕನ್ನಡಕ್ಕೊಬ್ಬನೇ ಕೈಲಾಸಮ ಮತ್ತು ಹಸ್ಬೆಂಡ್ 360 ನಾಟಕಗಳ ಪ್ರದರ್ಶನವನ್ನು ಆಯೋಜಿಸಲಾಗಿದೆ. ಅಂತರಂಗ ತಂಡವು ಎರಡನೇ ಹಾಸ್ಯ ನಾಟಕ ಹಸ್ಬೆಂಡ್ 360 ಯ 28 ಮತ್ತು 29ನೇ ಪ್ರದರ್ಶನವನ್ನು ಸೆ.7ರ ಸಂಜೆ 4.30ಕ್ಕೆ ಮತ್ತು ಸಂಜೆ 7.15ಕ್ಕೆ ಎನ್ ಆರ್ ಕಾಲೋನಿಯ ಡಾ.ಸಿ. ಅಶ್ವತ್ಥ ಕಲಾಭವನದಲ್ಲಿ ಆಯೋಜಿಸಲಾಗಿದೆ. ಈ ನಾಟಕದ ರಚನೆ : ನಾಗವೇಣಿ ರಂಗನ್, ನಿರ್ದೇಶನ : ಅರ್ಚನಾ ಶ್ಯಾಮ್ ಮತ್ತು ವಿಜಯ್ ಜೋಯಿಸ್. ಟಿಕೇಟ್ ದರ ರು. 150. ಆನ್‌ಲೈನ್ ಬುಕಿಂಗ್‌ಗಾಗಿ ಬುಕ್ ಮೈ ಷೋದಲ್ಲಿ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಅಂಕಲ್ : 9880914509,ಬಿ.ವಿ ಮುರಳೀಧರ್ : 99869 11321

ಹೆಬ್ಬಾಳಕ್ಕೆ ಹೂವಿನ ಮಂಡಿ: ವಿರೋಧ

ಬೆಂಗಳೂರು: ನಗರದ ಪ್ರಮುಖ ವ್ಯಾಪಾರ ಕೇಂದ್ರವಾಗಿರುವ ಕೆಆರ್ ಮಾರುಕಟ್ಟೆಯಿಂದ ಹೂವಿನ ಮಂಡಿಯನ್ನು ಸ್ಥಳಾಂತರಿಸಲು ಎಪಿಎಂಸಿ ಮುಂದಾಗಿದೆ. ಹೂ ಕೊಳ್ಳುವವರಿಂದ ಹಿಡಿದು ಹೂ ಮಾರುವವರವರೆಗೂ ಜನರಿಂದ ತುಂಬಿ ಹೋಗಿ ಗಿಜಿಗಿಡುತ್ತಿದ್ದ ಕೆಆರ್ ಮಾರ್ಕೆಟ್‌ನ್ನು ಜಿಕೆವಿಕೆಯ ತೋಟಗಾರಿಕಾ ವಿಜ್ಞಾನ ವಿವಿಯ ಆವರಣದ ಐದು ಎಕರೆ ಜಾಗದಲ್ಲಿ ಅಂತಾರಾಷ್ಟ್ರೀಯ ಪುಷ್ಪ ಹರಾಜು ಮಾರುಕಟ್ಟೆಯನ್ನು ನಿರ್ಮಿಸಲು ಸಿದ್ಧತೆ ನಡೆದಿದೆ. ಎಪಿಎಂಸಿಯ ಈ ಯೋಜನೆಗೆ ಸಾಕಷ್ಟು ದಶಕಗಳಿಂದ ಇಲ್ಲಿ ವ್ಯಾಪಾರ ನಡೆಸುತ್ತಿರುವ ವರ್ತಕರಿಂದ ವಿರೋಧ ವ್ಯಕ್ತವಾಗಿದೆ. ಕೆ.ಆರ್. ಮಾರ್ಕೆಟ್‌ನಲ್ಲಿ ಕುಡಿಯುವ ನೀರು, ಶೌಚಾಲಯದಂತಹ ಮೂಲಸೌಕರ್ಯಗಳಿಲ್ಲ. ಮೊದಲನೇ ಹಂತದ ಮಹಡಿಯುಲ್ಲಿಯೇ ಸಾಕಷ್ಟು ಸ್ಥಳಾವಕಾಶವಿದ್ದರೂ ಕೂಡಾ ಅದನ್ನು ಸರಿಯಾಗಿ ಬಳಿಸಿಕೊಂಡಿಲ್ಲ ಎಂದು ವ್ಯಾಪಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಸೆ.9ರಿಂದ ಜೆಡಿಎಸ್ ರಾಜ್ಯ ಪ್ರವಾಸ

ಬೆಂಗಳೂರು: ನೆರೆಹಾನಿ ಪ್ರದೇಶಗಳ ರೈತರು, ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸುವ ಸಲುವಾಗಿ ಸೆ.9 ರಿಂದ ರಾಜ್ಯ ಪ್ರವಾಸ ಕೈಗೊಳ್ಳುವುದಾಗಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ, ರಾಜ್ಯದಲ್ಲಿ ಮುಂಗಾರು ಮಳೆಯ ಅತಿವೃಷ್ಟಿಯಿಂದ ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ರೈತರ ಬೆಳೆ ನಷ್ಟವಾಗಿದ್ದು, ನೆರೆಹಾನಿಯಿಂದ ಜನಸಾಮಾನ್ಯರು ಸಹ ಮನೆಗಳನ್ನು ಕಳೆದುಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ. ರೈತ ವಿರೋಧಿ ಕಾಂಗ್ರೆಸ್ ಸರಕಾರ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ನೆರವಿಗೆ ಧಾವಿಸದೆ, ಪರಿಹಾರ ಒದಗಿಸಿದೆ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನೆರೆ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಲು ಜನತಾದಳ ಜಾತ್ಯತೀತ ಪಕ್ಷದ ವತಿಯಿಂದ ರಾಜ್ಯ ಪ್ರವಾಸ ಕೈಗೊಳ್ಳಲಾಗಿದೆ ಎಂದರು.

8 ಧರ್ಮಕ್ಷೇತ್ರಗಳಿಗೆ ಶಿವ ಸಾಯಿ ಯಾತ್ರೆ

ಬೆಂಗಳೂರು: ಕೇಂದ್ರ ಸರಕಾರದ ಸಹಭಾಗಿತ್ವದಲ್ಲಿ ಭಾರತ್ ಗೌರವ್ ರೈಲು ಸಂಚಾರ ಮೊತ್ತಮೊದಲಿಗೆ ಆರಂಭಿಸಿದ ಸೌತ್ ಸ್ಟಾರ್ ರೈಲು ಕಂಪನಿಯು ನವ ಬೃಂದಾವನ ಹಾಗೂ ಶ್ರೀಶೈಲ ಸೇರಿದಂತೆ 8 ಧರ್ಮಕ್ಷೇತ್ರಗಳಿಗೆ ಶಿವ ಸಾಯಿ ಯಾತ್ರೆ ಎಂಬ ಹೊಸ ಪ್ರವಾಸ ಕಾರ್ಯಕ್ರಮ ರೂಪಿಸಿದ್ದು, ಅ. 2ರಿಂದ ಈ ರೈಲು ಸಂಚಾರ ಆರಂಭಿಸಲಿದೆ. ಪ್ರವಾಸಿಗರು ರೈಲಿನಲ್ಲಿ ತೆರಳಿ ನವ ಬೃಂದಾವನ, ಮಂತ್ರಾಲಯ, ಪಂಡರಿಪುರ, ಶಿರಡಿ, ತ್ರಯಂಬಕೇಶ್ವರ, ಭೀಮಾಶಂಕರ, ಗುಷ್ನೇಶ್ವರ ಹಾಗೂ ಶ್ರೀಶೈಲಂ ಧರ್ಮಕ್ಷೇತ್ರಗಳ ದರ್ಶನ ಮಾಡಬಹುದು. ಒಟ್ಟು 11 ದಿನಗಳ ಈ ಪ್ರವಾಸವು ಎಲ್ಲೋರಾ ಗುಹೆಗಳ ಭೇಟಿಯನ್ನೂ ಒಳಗೊಂಡಿದೆ ಎಂದು ಸೌತ್ ಸ್ಟಾರ್‌ನ ಪ್ರಾಡಕ್ಟ್ ಡೈರೆಕ್ಟರ್ ವಿಘ್ನೇಶ್ ಜಿ. ತಿಳಿಸಿದ್ದಾರೆ ಈ ಪ್ರವಾಸಕ್ಕೆ ಎಲ್‌ಟಿ ಸಿ/ಎಲ್‌ಎಫ್‌ಸಿ ಅನ್ವಯವಾಗಲಿದ್ದು, ಭಾರತೀಯ ರೈಲ್ವೆಯ ಶೇಕಡಾ 33ರಷ್ಟು ಸಹಾಯಧನ ಲಭ್ಯವಾಗಲಿದೆ. ಹೆಚ್ಚಿನ ಮಾಹಿತಿಗಾಗಿ 93550 21516 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಜೆಪಿ ನಾಯಕರ ವಿರುದ್ಧ ವಿಡಿಯೊ: ಕ್ರಮಕ್ಕೆ ಆಗ್ರಹ

ಬೆಂಗಳೂರು: ಧರ್ಮಸ್ಥಳ ಚಲೋ ಮೆರವಣಿಗೆಯಲ್ಲಿ ತೆರಳುತ್ತಿದ್ದ ನಮ್ಮ ನಾಯಕರು ಮತ್ತು ಚುನಾಯಿತ ಪ್ರತಿನಿಧಿಗಳ ವಿಡಿಯೊ ಸೆರೆಹಿಡಿದು ಹಾನಿಕಾರಕ ಕಂಟೆಂಟ್ ಹಾಕಿದ್ದಾರೆ. ಇದನ್ನು ತಡೆಯಲು ಸರಕಾರ, ಗೃಹ ಇಲಾಖೆ ಕ್ರಮ ವಹಿಸಿಲ್ಲ ಎಂದು ಡಾ. ಸಿ.ಎನ್. ಅಶ್ವತ್ಥನಾರಾಯಣ್ ಆರೋಪಿಸಿದ್ದಾರೆ. ಬಿಜೆಪಿ ಜನಪ್ರತಿನಿಧಿಗಳ ವಿರುದ್ಧ ವಿಡಿಯೊ ಮಾಡಿರುವ ಸಂಬಂಧ ಪ್ರಕರಣ ದಾಖಲಿಸುವಂತೆ ಉಪ್ಪಾರಪೇಟೆ ಠಾಣೆಯಲ್ಲಿ ದೂರು ಸಲ್ಲಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಸೌಜನ್ಯ ವಿಚಾರದಲ್ಲಿ ಯಾವುದೇ ಒಪ್ಪಂದದ ನಡೆ ಇಲ್ಲ, ಸೌಜನ್ಯರ ತಾಯಿ ಇಟ್ಟಿರುವ ಬೇಡಿಕೆಯ ಪರವಾಗಿ ಇರುವುದಾಗಿ ನಮ್ಮ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಬೇರೆ ಯಾವುದೇ ಸಾಮಾಜಿಕ ಜಾಲತಾಣದ ಪೋಸ್ಟ್ ಬಂದಾಗ ಸಂಬಂಧಿತ ವ್ಯಕ್ತಿಯ ಮೇಲೆ ಕೂಡಲೇ ಕೇಸ್ ದಾಖಲಿಸಬೇಕು. ಸೋಷಿಯಲ್ ಮೀಡಿಯಾ ಕಂಟೆಂಟನ್ನು ತೆಗೆಸಿಹಾಕ ಬೇಕು ಎಂದು ಒತ್ತಾಯಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಯುಗಾರಂಭ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯುಗ ಅಂತ್ಯವಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಯುಗಾರಂಭವಾಗಿದೆ. ಸಿಎಂ ಅಧ್ಯಕ್ಷತೆಯ ಜಿಬಿಎ ಅಡಿಯಲ್ಲಿಯೇ 5 ನಗರ ಪಾಲಿಕೆಗಳು ಕಾರ್ಯ ನಿರ್ವಹಿಸಲಿದ್ದು, ಬಿಬಿಎಂಪಿ ಕೇಂದ್ರ ಕಚೇರಿ ಸೇರಿದಂತೆ ಎಲ್ಲ ಕಚೇರಿಗಳ ಹೆಸರು ಬದಲಾಗಲಿದೆ. ಯಾವ ನಗರ ಪಾಲಿಕೆಯಲ್ಲಿ ಯಾವ ವಾರ್ಡ್, ಕ್ಷೇತ್ರಗಳು ಬರಲಿವೆ ಎನ್ನುವ ಮಾಹಿತಿ ಇಲ್ಲಿದೆ. ಸದ್ಯ 198 ವಾರ್ಡ್‌ಗಳೊಂದಿಗೆ ಜಿಬಿಎ ಆರಂಭವಾಗಲಿದ್ದು, ಯಾವ ಪಾಲಿಕೆಗೆ ಎಷ್ಟು ವಾರ್ಡ್ ಬರಲಿವೆ ಎನ್ನುವ ಮಾಹಿತಿ ಇಲ್ಲಿದೆ.

ಬೆಂಗಳೂರು ಪೂರ್ವ ನಗರ ಪಾಲಿಕೆ

ವಲಯ 1ರ ಕಚೇರಿ, ವ್ಯಾಪ್ತಿ: ಮಹದೇವಪುರ ವಲಯ ಕಚೇರಿ, ಮಹದೇವಪುರ ವಿಧಾನಸಭಾ ಕ್ಷೇತ್ರ
ವಲಯ 2ರ ಕಚೇರಿ, ವ್ಯಾಪ್ತಿ: ಕೆ.ಆರ್.ಪುರ ಮುಖ್ಯ ಎಂಜಿನಿಯರ್ ಕಚೇರಿ; ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ
ಆಯುಕ್ತರು : ಡಿ.ಎಸ್. ರಮೇಶ್
ಹೆಚ್ಚುವರಿ ಆಯುಕ್ತರು (ಅಭಿವೃದ್ಧಿ): ಲೋಖಂಡೆ ಸ್ನೇಹಲ್ ಸುಧಾಕರ್
ವಿಧಾನಸಭಾ ಕ್ಷೇತ್ರ ಮತ್ತು ವಾರ್ಡ್‌ಗಳು
- ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಎಲ್ಲ ವಾರ್ಡ್‌ಗಳು ಹಾಗೂ ಬೆಳ್ಳಂದೂರು ವಾರ್ಡ್‌ನ ಕೆಲವು ಪ್ರದೇಶವನ್ನು ಹೊರತುಪಡಿಸಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಎಲ್ಲ ವಾರ್ಡ್‌ಗಳು

ಬೆಂಗಳೂರು ಉತ್ತರ ನಗರ ಪಾಲಿಕೆ

ವಲಯ 1ರ ಕಚೇರಿ, ವ್ಯಾಪ್ತಿ: ಯಲಹಂಕ ವಲಯ ಕಚೇರಿ; ಬ್ಯಾಟರಾಯನಪುರ, ಪುಲಕೇಶಿನಗರ, ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ
ವಲಯ 2ರ ಕಚೇರಿ, ವ್ಯಾಪ್ತಿ: ದಾಸರಹಳ್ಳಿ ವಲಯ ಕಚೇರಿ; ದಾಸರಹಳ್ಳಿ (ಭಾಗಶಃ), ರಾಜರಾಜೇಶ್ವರಿ ನಗರ (ಭಾಗಶಃ), ಹೆಬ್ಬಾಳ, ಯಲಹಂಕ ವಿಧಾನಸಭಾ ಕ್ಷೇತ್ರ
ಆಯುಕ್ತರು : ಪೊಮ್ಮುಲ ಸುನೀಲ್ ಕುಮಾರ್
ಹೆಚ್ಚುವರಿ ಆಯುಕ್ತರು (ಅಭಿವೃದ್ಧಿ): ಆರ್. ಲತಾ
ವಿಧಾನಸಭಾ ಕ್ಷೇತ್ರ ಮತ್ತು ವಾರ್ಡ್‌ಗಳು
- ಬ್ಯಾಟರಾಯನಪುರ, ಹೆಬ್ಬಾಳ, ಸರ್ವಜ್ಞನಗರ, ಯಲಹಂಕ ವಿಧಾನಸಭಾ ಕ್ಷೇತ್ರದ ಎಲ್ಲ ವಾರ್ಡ್‌ಗಳು.
- ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶೆಟ್ಟಿಹಳ್ಳಿ, ಮಲ್ಲಸಂದ್ರ, ಬಾಗಲಕುಂಟೆ, ಟಿ.ದಾಸರಹಳ್ಳಿ.
- ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಜಾಲಹಳ್ಳಿ, ಜೆ.ಪಿ. ಪಾರ್ಕ್
- ಯಶವಂತಪುರದ ಕೆಲವು ವಾರ್ಡ್‌ಗಳು.
- ಪುಲಕೇಶಿನಗರ ವಿಧಾನಸಭಾ ಕ್ಷೇತ್ರದ ಕುಶಾಲನಗರ ವಾರ್ಡ್ ಹೊರತುಪಡಿಸಿ ಎಲ್ಲ ವಾರ್ಡ್‌ಗಳು.

198 ವಾರ್ಡ್‌ಗಳ ಹಂಚಿಕೆ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ: 64 ವಾರ್ಡ್‌ಗಳು
ಬೆಂಗಳೂರು ಕೇಂದ್ರ ನಗರ ಪಾಲಿಕೆ: 42 ವಾರ್ಡ್‌ಗಳು
ಬೆಂಗಳೂರು ಉತ್ತರ ನಗರ ಪಾಲಿಕೆ: 41 ವಾರ್ಡ್‌ಗಳು
ಬೆಂಗಳೂರು ದಕ್ಷಿಣ ನಗರ ಪಾಲಿಕೆ: 37 ವಾರ್ಡ್‌ಗಳು
ಬೆಂಗಳೂರು ಪೂರ್ವ ನಗರ ಪಾಲಿಕೆ: 17 ವಾರ್ಡ್‌ಗಳು

ಜಿಬಿಎನಿಂದ ಅನುಕೂಲ

- ಸ್ಥಳೀಯ ಸಮಸ್ಯೆಗಳಿಗೆ ತಕ್ಷಣ ಪರಿಹಾರ ವಿಕೇಂದ್ರೀಕರಣದಿಂದ ರಸ್ತೆ, ಒಳಚರಂಡಿ, ನೀರು ಮತ್ತು ಕಸದಂತಹ ಸಮಸ್ಯೆಗಳಿಗೆ ಬೇಗನೆ ಕ್ರಮ.

- ಉತ್ತಮ ಮೂಲಸೌಕರ್ಯ ನಿರ್ವಹಣೆ ರಸ್ತೆ, ನೀರು, ಒಳಚರಂಡಿ ಮತ್ತು ಕಸದ ವ್ಯವಸ್ಥೆ ಹೆಚ್ಚು ಸಮರ್ಥವಾಗಿ ಜಾರಿಗೊಳ್ಳಲಿದೆ.
- ಕಚೇರಿಗಳಲ್ಲಿ ವಿಳಂಬದ ಕಡಿತ ಚಿಕ್ಕದಾದ ಪಾಲಿಕೆ ಕಚೇರಿಗಳಿಂದ ಜನಸಂದಣಿ ಮತ್ತು ವಿಳಂಬ ಕಡಿಮೆಯಾಗುತ್ತದೆ.
- ಸಮಾನ ಅಭಿವೃದ್ಧಿ ಪ್ರತಿಯೊಂದು ಪ್ರದೇಶಕ್ಕೂ ಸಮಾನ ಅಭಿವೃದ್ಧಿಗೆ ಆದ್ಯತೆ, ಸಮತೋಲಿತ ಬೆಳವಣಿಗೆ.
- ಜನಪ್ರತಿನಿಧಿಗಳೊಂದಿಗೆ ನೇರ ಸಂಪರ್ಕ ಸ್ಥಳೀಯ ಪ್ರತಿನಿಧಿಗಳೊಂದಿಗೆ ಹೆಚ್ಚು ಸುಲಭ ನೇರ ಸಂಪರ್ಕ ಸಾಧ್ಯ.

ಬೆಂಗಳೂರು ಕೇಂದ್ರ ನಗರ ಪಾಲಿಕೆ

ವಲಯ 1ರ ಕಚೇರಿ, ವ್ಯಾಪ್ತಿ: ಪೂರ್ವ ವಲಯ ಕಚೇರಿ, ಶಾಂತಿನಗರ, ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರ
ವಲಯ 2ರ ಕಚೇರಿ, ವ್ಯಾಪ್ತಿ: ಎನ್ ಆರ್.ಚೌಕದಲ್ಲಿರುವ ಅನೆಕ್ಸ್-3 ಕಟ್ಟಡ; ಶಿವಾಜಿನಗರ, ಗಾಂಧಿನಗರ, ಚಿಕ್ಕಪೇಟೆ, ಚಾಮರಾಜಪೇಟೆ
ಆಯುಕ್ತರು : ಪಿ. ರಾಜೇಂದ್ರ ಚೋಳನ್
ಹೆಚ್ಚುವರಿ ಆಯುಕ್ತರು (ಅಭಿವೃದ್ಧಿ) : ರಾಹುಲ್ ಶರಣಪ್ಪ ಸಂಕನೂರ
ವಿಧಾನಸಭಾ ಕ್ಷೇತ್ರ ಮತ್ತು ವಾರ್ಡ್‌ಗಳು: ಸಿ.ವಿ.ರಾಮನ್‌ನಗರ, ಚಾಮರಾಜಪೇಟೆ, ಚಿಕ್ಕಪೇಟೆ, ಗಾಂಧಿನಗರ, ಶಾಂತಿನಗರ ಹಾಗೂ ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಎಲ್ಲ ವಾರ್ಡ್‌ಗಳಿದ್ದು, ಪುಲಕೇಶಿನಗರ ವಿಧಾನಸಭಾ ಕ್ಷೇತ್ರದ ಕುಶಾಲನಗರ ವಾರ್ಡ್ ಮಾತ್ರ ಕೇಂದ್ರಕ್ಕೆ ಸೇರ್ಪಡೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ವಲಯ 1ರ ಕಚೇರಿ, ವ್ಯಾಪ್ತಿ: ಆರ್.ಆರ್. ನಗರ ವಲಯ **ಕಚೇರಿ:** ಯಶವಂತಪುರ (ಭಾಗಶಃ), ದಾಸರಹಳ್ಳಿ, ರಾಜರಾಜೇಶ್ವರಿ ನಗರ, ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರ
ವಲಯ 2ರ ಕಚೇರಿ, ವ್ಯಾಪ್ತಿ: ಐಪಿಪಿ, ಮಲ್ಲೇಶ್ವರ, ಮಲ್ಲೇಶ್ವರ, ರಾಜಾಜಿನಗರ, ಗೋವಿಂದರಾಜನಗರ, ಬಸವನಗುಡಿ, ಪದ್ಮನಾಭನಗರ (ಭಾಗಶಃ) ವಿಧಾನಸಭಾ ಕ್ಷೇತ್ರ
ಆಯುಕ್ತರು: ಕೆ.ವಿ. ರಾಜೇಂದ್ರ
ಹೆಚ್ಚುವರಿ ಆಯುಕ್ತರು (ಅಭಿವೃದ್ಧಿ) : ದಿಗ್ವಿಜಯ್ ಬೋಡ್ಕ
ವಿಧಾನಸಭಾ ಕ್ಷೇತ್ರ ಮತ್ತು ವಾರ್ಡ್‌ಗಳು:
- ಬಸವನಗುಡಿ, ಗೋವಿಂದರಾಜನಗರ, ವಿಜಯನಗರ
ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಎಲ್ಲ ವಾರ್ಡ್ ಗಳು.
- ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಚೊಕ್ಕಸಂದ್ರ, ರಾಜಗೋಪಾಲನಗರ, ಹೆಗ್ಗನಹಳ್ಳಿ ವಾರ್ಡ್
- ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಹೊಸಕೆರೆಹಳ್ಳಿ, ಗಣೇಶಮಂದಿರ, ಕರಿಸಂದ್ರ, ಯಡಿಯೂರು ವಾರ್ಡ್
- ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಎಚ್‌ಎಂಟಿ, ಲಕ್ಷ್ಮಿದೇವಿನಗರ, ಲಗ್ಗೆರೆ, ಕೊಟ್ಟಿಗೆಪಾಳ್ಯ, ಜ್ಞಾನಭಾರತಿ ವಾರ್ಡ್ ರಾಜರಾಜೇಶ್ವರಿ ನಗರ ವಾರ್ಡ್ ಕೆಲವು ಭಾಗ,
- ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್ ಕೆಲವು ಭಾಗ ಹೊರತುಪಡಿಸಿ ಎಲ್ಲ ವಾರ್ಡ್

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ವಲಯ 1ರ ಕಚೇರಿ, ವ್ಯಾಪ್ತಿ: ದಕ್ಷಿಣ ವಲಯ ಕಚೇರಿ, ಪದ್ಮನಾಭನಗರ (ಭಾಗಶಃ), ರಾಜರಾಜೇಶ್ವರಿ ನಗರ (ಭಾಗಶಃ), ಯಶವಂತಪುರ (ಭಾಗಶಃ), ಜಯನಗರ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ವಲಯ 2ರ ಕಚೇರಿ, ವ್ಯಾಪ್ತಿ: ಬೊಮ್ಮನಹಳ್ಳಿ ವಲಯ ಕಚೇರಿ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಮಹದೇವಪುರ (ಭಾಗಶಃ), ಆನೇಕಲ್ (ಭಾಗಶಃ) ವಿಧಾನಸಭಾ ಕ್ಷೇತ್ರ
ಆಯುಕ್ತರು : ಕೆ.ಎನ್. ರಮೇಶ್
ಹೆಚ್ಚುವರಿ ಆಯುಕ್ತರು (ಅಭಿವೃದ್ಧಿ) : ಪದ್ದೆ ರಾಹುಲ್ ತುಕಾರಾಮ್
ವಿಧಾನಸಭಾ ಕ್ಷೇತ್ರ ಮತ್ತು ವಾರ್ಡ್‌ಗಳು:
- ಬಿಟಿಎಂ ಲೇಔಟ್, ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಜಯನಗರ ವಿಧಾನಸಭಾ ಕ್ಷೇತ್ರದ ಎಲ್ಲ ವಾರ್ಡ್‌ಗಳು.
- ಮಹದೇವಪುರ ವಿಧಾನಸಭಾ ಕ್ಷೇತ್ರದ ಬೆಳ್ಳಂದೂರಿನ ಕೆಲವು ಭಾಗ.
- ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಬನಶಂಕರಿ ದೇವಸ್ಥಾನ, ಕುಮಾರಸ್ವಾಮಿ ಲೇಔಟ್, ಪದ್ಮನಾಭನಗರ, ಚಿಕ್ಕಲಸಂದ್ರ ವಾರ್ಡ್
- ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ರಾಜರಾಜೇಶ್ವರಿ ವಾರ್ಡ್ ಕೆಲವು ಭಾಗ.
- ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರ ವಾರ್ಡ್ ಕೆಲವು ಭಾಗ.
- ಆನೇಕಲ್ ವಿಧಾನಸಭಾ ಕ್ಷೇತ್ರದ ಸಿಂಗಸಂದ್ರ (ಕೂಡ್ಲು) ವಾರ್ಡ್

5 ದಶಕಗಳ ಸಾರ್ಥಕ ಸೇವೆಗೆ ದಿನೇಶ್‌ಗುಂಡೂರಾವ್ ಶ್ಲಾಘನೆ

ಗುಣಶೀಲ ನವೀಕೃತ ಆಸ್ಪತ್ರೆ ಉದ್ಘಾಟನೆ

ನಗರದ ಪ್ರಮುಖ ಸ್ತ್ರೀರೋಗ ಮತ್ತು ಸಂತಾನ ಸಾಫಲ್ಯ ಚಿಕಿತ್ಸೆ ನೀಡುತ್ತಿರುವ ನವೀಕೃತ ಗುಣಶೀಲ ಆಸ್ಪತ್ರೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಬುಧವಾರ ಉದ್ಘಾಟಿಸಿದರು.

ಬೆಂಗಳೂರು: ನಗರದ ಪ್ರಮುಖ ಸ್ತ್ರೀರೋಗ ಮತ್ತು ಸಂತಾನ ಸಾಫಲ್ಯ ಚಿಕಿತ್ಸೆ ನೀಡುತ್ತಿರುವ ನವೀಕೃತ ಗುಣಶೀಲ ಆಸ್ಪತ್ರೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಬುಧವಾರ ಉದ್ಘಾಟಿಸಿದರು.

ಸಂತಾನೋತ್ಪತ್ತಿ (ಐ.ವಿ.ಎಫ್) ಸಂಬಂಧಿ ಚಿಕಿತ್ಸೆಗಳು ಹಾಗೂ ಸ್ತ್ರೀರೋಗಗಳ ಚಿಕಿತ್ಸೆಯಲ್ಲಿ ಭಾರತದಲ್ಲೇ ಮುಂಚೂಣಿಯಲ್ಲಿರುವ ಗುಣಶೀಲ ಸರ್ಜಿಕಲ್ ಮತ್ತು ಮೆಟರ್ನಿಟಿ ಆಸ್ಪತ್ರೆಗೆ 50 ವರ್ಷಗಳು ತುಂಬಿದ್ದು, ಬುಧವಾರದಂದು ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತು.

ಉದ್ಘಾಟನೆಯ ಬಳಿಕ ಸಂತಾನ ಫಲ ಚಿಕಿತ್ಸೆಗಳಲ್ಲಿ ಐದು ದಶಕಗಳ ಸಾರ್ಥಕ ಸೇವೆಗಾಗಿ ಗುಣಶೀಲ ಆಸ್ಪತ್ರೆಯ ತಂಡವನ್ನು ಅಭಿನಂದಿಸಿದ ದಿನೇಶ್ ಗುಂಡೂರಾವ್ ಅವರು, ಕರ್ನಾಟಕದ ಎಲ್ಲೆಡೆ ದಂಪತಿಗಳು ಮತ್ತು ಮಹಿಳೆಯರಿಗೆ ಸುಧಾರಿತ ಸಂತಾನೋತ್ಪತ್ತಿ ಸೇವೆ ಮತ್ತು ಸ್ತ್ರೀರೋಗ ಚಿಕಿತ್ಸೆಯ ಸೌಕರ್ಯಗಳನ್ನು ಒದಗಿಸಲಿ ಎಂದು ಸಲಹೆ ನೀಡಿದರು.

ಗುಣಶೀಲ ಸರ್ಜಿಕಲ್ ಮತ್ತು ಮೆಟರ್ನಿಟಿ ಆಸ್ಪತ್ರೆಯ ಸಂತಾನಸಾಫಲ್ಯ ತಜ್ಞೆ ಡಾ. ದೇವಿಕಾ ಗುಣಶೀಲ ಮಾತನಾಡಿ, ಗುಣಶೀಲದ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲಿಟ್ಟ ದಿನ. ದಕ್ಷಿಣ ಭಾರತದ ಮೊದಲ ಪ್ರನಾಳ ಶಿಶು 1988ರಲ್ಲಿ ಜನಿಸಿದ್ದರಿಂದ ಆರಂಭಿಸಿ ಇವತ್ತಿನವರೆಗೆ ಗುಣಶೀಲ ಆಸ್ಪತ್ರೆಯು ಹೊಸ ಭರವಸೆ, ನಾವೀನ್ಯತೆ ಹಾಗೂ ಕಾರುಣ್ಯತೆಯ ಪ್ರತೀಕವಾಗಿ ನಿಂತಿದೆ. ಕಾಲ ಕಾಲಕ್ಕೆ ಜಾಗತಿಕ ಗುಣಮಟ್ಟದ ವೈದ್ಯಕೀಯ ತಂತ್ರಜ್ಞಾನಗಳನ್ನು ನಾವು ಅಳವಡಿಸಿಕೊಳ್ಳುತ್ತಾ ಬಂದಿದ್ದು, ಸಂತಾನೋತ್ಪತ್ತಿ ಮತ್ತು ಗರ್ಭಧಾರಣೆಗೆ ಸಂಬಂಧಿಸಿದ ಅತ್ಯಂತ ಸೂಕ್ಷ್ಮ ಸಮಸ್ಯೆಗೂ ಪರಿಹಾರ ನೀಡುವ ಪ್ರಯತ್ನ ಮಾಡುತ್ತಾ ಸೂಕ್ತ ಚಿಕಿತ್ಸೆ ನೀಡುತ್ತಾ ಬಂದಿದ್ದೇವೆ ಎಂದರು.

ಪುಸ್ತಕ ಲೋಕದಲ್ಲಿ ಹೊಸ ಪ್ರಯತ್ನ | ಉಡುಗೊರೆ ಇನ್ನು ಸಲೀಸು

ವೀರಲೋಕ ಬುಕ್ ಬಾಕ್ಸ್ ಸಿಎಂ ಬಿಡುಗಡೆ

ಬೆಂಗಳೂರು: ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿ ಎಂಬುದು ಎಲ್ಲರೂ ಹೇಳುವ ಮಾತು. ಆದರೆ ಪುಸ್ತಕಗಳನ್ನು ಒಂದು ಸಾಧಾರಣ ಗಿಫ್ಟ್ ಪ್ಯಾಕ್ ಮೂಲಕ ಉಡುಗೊರೆಯಾಗಿ ನೀಡಲು ಎಲ್ಲರಿಗೂ ಒಂದು ರೀತಿಯ ಮುಜುಗರ. ಅದಕ್ಕಾಗಿಯೇ ವೀರಲೋಕವು ಪುಸ್ತಕಗಳನ್ನು ಚಂದದ ಗಿಫ್ಟ್ ಬಾಕ್ಸ್ ಮೂಲಕ ತಲುಪಿಸಲು ಯೋಜನೆಯನ್ನು ರೂಪಿಸಿದೆ.

ಇಷ್ಟು ದಿನ ಬಟ್ಟೆ, ಡ್ರೈ ಫ್ರೂಟ್ಸ್, ಮೊಬೈಲ್, ಸ್ವೀಟ್ ಇತ್ಯಾದಿಗಳನ್ನು ಉಡುಗೊರೆಯಾಗಿ ನೀಡಲು ತರಹೇವಾರಿ ಉಡುಗೊರೆ ಬಾಕ್ಸ್‌ಗಳಿವೆ. ಆದರೆ ಪುಸ್ತಕಗಳಿಗಾಗಿ ಇದುವರೆಗೂ ಯಾವುದೇ ಉಡುಗೊರೆ ಬಾಕ್ಸ್ ಇರಲಿಲ್ಲ. ಆದರೆ ಈಗ ಅದು ಸಾಧ್ಯವಾಗಿದೆ. ಸುಮಾರು ಒಂದೂವರೆ ವರ್ಷದ ಪ್ರಯತ್ನ ಮತ್ತು 10 ಲಕ್ಷ ರುಪಾಯಿಗಳಿಗಿಂತ ಹೆಚ್ಚಿನ ಹೂಡಿಕೆಯ ಕಾರಣಕ್ಕೆ ಇಂತಹ ಯೋಜನೆ ಈಗ ಸಿದ್ಧಗೊಂಡಿದೆ. ವೀರಕಪುತ್ರದ ಈ ವಿನೂತನ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬಿಡುಗಡೆಗೊಳಿಸಿ ಶುಭ ಹಾರೈಸಿದರು.

ಈ ಬಾಕ್ಸ್‌ಗಳನ್ನು www.veeralokabooks.com ಆರ್ಡರ್ ಮಾಡಬಹುದು ಅಥವಾ ಫೋನ್ 7022122121, 8861212172 ಮೂಲಕವೂ ನೀವು ಈ ಉಡುಗೊರೆ ಪೆಟ್ಟಿಗೆಯನ್ನು ತರಿಸಿಕೊಳ್ಳಬಹುದು ಎಂದು ಹೇಳಿದ್ದಾರೆ.

ಉಡುಗೊರೆ ಕೊಡುವ ಪುಸ್ತಕಗಳಿಗೆ ಬಾಕ್ಸ್ ಹೊರತಂದಿರುವ ವೀರಲೋಕ ಬುಕ್ಸ್ ಬಾಕ್ಸ್‌ನ್ನು ಸಿಎಂ ಸಿದ್ದರಾಮಯ್ಯ ಅವರು ಅನಾವರಣಗೊಳಿಸಿದರು.

ಬುಕ್ ಬಾಕ್ಸ್ ವಿಶೇಷತೆಗಳು

ಓದುಗರು ತಮ್ಮಿಷ್ಟದ ಬರಹಗಾರರ, ತಮ್ಮಿಷ್ಟದ ಪುಸ್ತಕಗಳನ್ನು ತಮ್ಮಿಷ್ಟದವರಿಗೆ ಉಡುಗೊರೆ ನೀಡಬಹುದು. ಆ ಉಡುಗೊರೆಯನ್ನು ಈ ಬುಕ್ ಬಾಕ್ಸ್‌ಗಳ ಮೂಲಕ ನೀಡಿದರೆ ಅದರ ಮಹತ್ವ ಹೆಚ್ಚಿರುತ್ತದೆ. ಉಡುಗೊರೆ ಓಪನ್ ಮಾಡಿದ ತಕ್ಷಣ ಈ ಬಾಕ್ಸ್‌ಗಳು ಕಸದ ಬುಟ್ಟಿ ಸೇರುವುದಿಲ್ಲ. ಬದಲಾಗಿ ಓದುಗರ ಕಪಾಟನ್ನು ಅಲಂಕರಿಸುತ್ತವೆ. ಮದುವೆ, ನಾಮಕರಣ, ಪಾರ್ಟಿ, ಗೃಹಪ್ರವೇಶ, ಉದ್ಘಾಟನೆಗಳೂ ಸೇರಿದಂತೆ ಎಲ್ಲಾ ಶುಭ ಸಮಾರಂಭಗಳಿಗೂ ಹೊಂದಿಕೆಯಾಗುವಂತಹ ಗಿಫ್ಟ್ ಬಾಕ್ಸುಗಳಿವೆ. ಈ ಗಿಫ್ಟ್ ಬಾಕ್ಸ್‌ಗಳ ಮೇಲೆ ತಮಗೆ ಬೇಕಾದ ಬರಹಗಾರರ ಕಸ್ಟಮೈಸ್ಡ್ ಸ್ಟಿಕರ್‌ಗಳನ್ನು ಡೆಕೋರೇಟ್ ಮಾಡಿ ನೀಡಲಾಗುವುದು. ಒಟ್ಟು ಹತ್ತು ವಿವಿಧ ವಿನ್ಯಾಸಗಳ ಬಾಕ್ಸ್‌ಗಳು ಈಗ ಲಭ್ಯವಿವೆ. ಮ್ಯಾಚ್ ಬಾಕ್ಸ್, ತಿಜೋರಿ ಪೆಟ್ಟಿಗೆ, ಮ್ಯಾಗ್ನೆಟಿಕ್ ಬಾಕ್ಸ್, ಬಟರ್ ಫ್ಲೈಬಾಕ್ಸ್ ಮತ್ತಿತರ ಬಾಕ್ಸುಗಳು ಈಗ ಲಭ್ಯ ಇವೆ ಎಂದು ವೀರಲೋಕದ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ್ ತಿಳಿಸಿದ್ದಾರೆ.

ಕೃಷ್ಣ ಮೇಲ್ದಂಡೆ ಯೋಜನೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಘಟನೆ

ಸಚಿವರ ವಿರುದ್ಧ ಡಿಸಿಎಂ ಗರಂ

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ನಡುವೆ ಸಣ್ಣ ವಾಗ್ವಾದ ನಡೆದ ಪ್ರಸಂಗ ವಿಧಾನಸೌಧದಲ್ಲಿ ನಡೆಯಿತು.

ಯೋಜನೆಯ 3ನೇ ಹಂತದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ, ಪುನರ್ ವಸತಿ, ಪುನರ್ ನಿರ್ಮಾಣ, ಭೂ ಪರಿಹಾರ, ವಿವಿಧ ನ್ಯಾಯಾಲಯಗಳಲ್ಲಿ ಹೆಚ್ಚುವರಿ ಪರಿಹಾರ ಕೋರಿ ದಾಖಲಿಸಿರುವ ಪ್ರಕರಣಗಳ ಕುರಿತು ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಸಮ್ಮೇಳನ ಸಭಾಂಗಣದಲ್ಲಿ ಸಭೆ ಕರೆದಿದ್ದರು.

ಈ ಸಭೆಯಲ್ಲಿದ್ದ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, ಪ್ರತಿ ಎಕರೆಗೆ 40 ರಿಂದ 50 ಲಕ್ಷ ರು.ವರೆಗೆ ಭೂ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಇದರಿಂದ ಸಿಟ್ಟಾದ ಡಿ.ಕೆ.ಶಿವಕುಮಾರ್, 'ಮಿಸ್ಟರ್ ಮಿನಿಸ್ಟರ್ ಸಂಪುಟದ ಸಚಿವರಾಗಿ ನೀವು ಈ ರೀತಿ ಮಾತನಾಡುವುದು ಸರಿಯಲ್ಲ. ಈ ಹಿಂದೆ ಜಲಸಂಪನ್ಮೂಲ ಸಚಿವರಾಗಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೂ ಪರಿಹಾರಕ್ಕೆ ಒಂದು ದರ ನಿಗದಿ ಮಾಡಿದ್ದಾರೆ. ಈಗ ಸಚಿವರಾಗಿರುವ ನಿಮಗೆ ಗೌರವ ಸಿಗಬೇಕು ಎಂಬ ಕಾರಣಕ್ಕೆ ಅದರ ಮೇಲೆ ಒಂದಿಷ್ಟು ಹೆಚ್ಚಳ ಮಾಡಿ ಪರಿಹಾರ ನೀಡಬಹುದು. ನೀವು ಹೇಳಿದಂತೆ 40 ರಿಂದ 50 ಲಕ್ಷ ವರೆಗೆ ನೀಡಲು ಸಾಧ್ಯವಿಲ್ಲ ಎಂದು ಖಡಕ್ಕಾಗಿ ಹೇಳಿದರು. ಇದಕ್ಕೆ ಅಸಮಾಧಾನದಲ್ಲಿಯೇ ಪ್ರತಿಕ್ರಿಯಿಸಿರುವ ಸಚಿವ ತಿಮ್ಮಾಪುರ, ಜನರ ಅಭಿಪ್ರಾಯಗಳನ್ನು ನಿಮ್ಮ ಗಮನಕ್ಕೆ ತರುವುದು ನನ್ನ ಜವಾಬ್ದಾರಿ. ಆ ಕೆಲಸ ಮಾಡಿದ್ದೇನೆ. ನಿಮ್ಮ ಅನುಭವ ಹಾಗೂ ಅವಕಾಶದಲ್ಲಿ ನಿರ್ಧಾರ ತೆಗೆದುಕೊಳ್ಳಿ ಎಂದು ಪ್ರತಿಕ್ರಿಯಿಸಿದರು. ಶಾಸಕರು, ರೈತ ಮುಖಂಡರುಗಳು ಮಾತನಾಡಲಿ. ಇಂತಹ ವೇದಿಕೆಯಲ್ಲಿ ನೀವು ಸಚಿವರಾಗಿ ಈ ರೀತಿ ಮಾತನಾಡಬಾರದು ಎಂದು ಡಿ.ಕೆ.ಶಿವಕುಮಾರ್ ಗರಂ ಆದರು. ಮಾಧ್ಯಮಗಳ ಮುಂದೆ ಈ ವಾಗ್ವಾದ ನಡೆಯುತ್ತಿರುವುದನ್ನು ಗಮನಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಈ ಜಟಾಪಟಿ ಬಹಿರಂಗಗೊಂಡು ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಸೃಷ್ಟಿಯಾಗಬಾರದು ಎಂಬ ಕಾರಣಕ್ಕಾಗಿ ಮಾಧ್ಯಮಗಳ ಕ್ಯಾಮೆರಾಮನ್‌ಗಳನ್ನು ಹೊರಗೆ ಕಳುಹಿಸಲು ಪ್ರಯತ್ನಿಸಿದರು. ಇದಕ್ಕೂ ಅವಕಾಶ ನೀಡದ ಡಿ.ಕೆ. ಶಿವಕುಮಾರ್ ಮಾಧ್ಯಮಗಳು ಇರಲಿ ಎಂದು ಹೇಳಿ ಅವರು ಮಾತನಾಡಲಿ ಎಂದು ಶಾಸಕರಿಗೆ ಅವಕಾಶ ಮಾಡಿಕೊಟ್ಟರು.

ಹಂತ-3ರ ಅನುಷ್ಠಾನಕ್ಕೆ ಬದ್ಧ

ಸಭೆಯ ಬಳಿಕ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3ರ ಅನುಷ್ಠಾನಕ್ಕೆ ಕೇಂದ್ರ ಜಲಶಕ್ತಿ ಸಚಿವರಲ್ಲಿ ಮನವಿ ಮಾಡಿದ್ದೇನೆ. ಅವರೂ ಸಹ ಈ ಬಗ್ಗೆ ಶೀಘ್ರದಲ್ಲೇ ಸಭೆ ನಿಗದಿ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ. ನಮ್ಮ ಸರಕಾರ ಈ ಯೋಜನೆ ಸಾಕಾರಕ್ಕೆ ಬದ್ಧವಾಗಿದೆ. ಎರಡು-ಮೂರು ದಿನಗಳಲ್ಲಿ ಅಂತಿಮ ತೀರ್ಮಾನ ಮಾಡಲಾಗುತ್ತದೆ ಎಂದರು.

ಭೂಸ್ವಾಧೀನ, ಪುನರ್ವಸತಿ, ಪುನರ್ ನಿರ್ಮಾಣ, ಭೂಪರಿಹಾರದ ಬಗ್ಗೆ ಪರಿಹಾರ ಕಂಡುಹಿಡಿಯಬೇಕು ಎಂದು ಮೂರ್ನಾಲ್ಕು ಸುತ್ತು ಚರ್ಚೆ ನಡೆಸಿದ್ದೇವೆ. ಈ ಹಿಂದಿನ ಸಿಎಂ ಬಸವರಾಜ ಬೊಮ್ಮಾಯಿ ಅವರ ಅಧಿಕಾರವಧಿಯಲ್ಲಿ ಸಂಪುಟ ಸಭೆ ಹಾಗೂ ಉಪ ಸಮಿತಿ ಸಭೆಯಲ್ಲಿ ಪ್ರತಿ ಎಕರೆ ನೀರಾವರಿ ಜಮೀನಿಗೆ 24 ಲಕ್ಷ ರು., ಒಣ ಭೂಮಿಗೆ 20 ಲಕ್ಷ ಎಂದು ತೀರ್ಮಾನ ಮಾಡಿದ್ದರು. ಆದರೆ, ಇದನ್ನು ಯಾವ ರೈತರೂ ಒಪ್ಪಲಿಲ್ಲ. ಬದಲಿಗೆ ಧರಣಿ ಕುಳಿತು ಹೋರಾಟ ಮಾಡುತ್ತಿದ್ದರು. ಹಿಂದೆ ಈ ಬಗ್ಗೆ ನಾವೇ ಬೆಳಗಾವಿಯಲ್ಲಿಯೂ ಸಭೆ ನಡೆಸಿದ್ದೆವು. ಪರಿಹಾರ ಮೊತ್ತದ ವಿಚಾರವಾಗಿ ನ್ಯಾಯಲಯದಲ್ಲಿ ವ್ಯತಿರಿಕ್ತ ತೀರ್ಪು ಬಂದಿದೆ. ಹೆಚ್ಚು ಪರಿಹಾರ ಕೊಡಬೇಕು ಎಂದು ಹೇಳಿದೆ. ಇದನ್ನು ನೀಡಲು ಸಾಧ್ಯವಿಲ್ಲವೆಂದು ತೀರ್ಮಾನಿಸಲಾಗಿದೆ. ಸಚಿವ ಸಂಪುಟ ಸಭೆಯಲ್ಲಿಯೂ ಈ ಬಗ್ಗೆ ಚರ್ಚೆ ನಡೆಸಲಾಗಿದೆ. ಕೃಷ್ಣಾ ಮೇಲ್ದಂಡೆ ವಿಚಾರವಾಗಿ ರೈತರು ಸೇರಿದಂತೆ ಎಲ್ಲಾ ಪಕ್ಷಗಳ ಮುಖಂಡರು, ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಲಾಗುವುದು. ಪ್ರಸ್ತುತ ಸಭೆಯ ಬಗ್ಗೆ ಮುಖ್ಯಮಂತ್ರಿಗಳಿಗೂ ದೂರವಾಣಿ ಮೂಲಕ ಮಾಹಿತಿ ನೀಡಿದ್ದೇನೆ. ವಿಜಯಪುರ ಭಾಗದ ರೈತರು ನ್ಯಾಯಯುತ ಪರಿಹಾರ ನೀಡಿದರೆ ಒಪ್ಪುತ್ತೇವೆ ಎಂದಿದ್ದಾರೆ'' ಎಂದು ಹೇಳಿದರು.

ಬಂಗಾಳಕೊಲ್ಲಿಯ ನೈಋತ್ಯ ಭಾಗದಲ್ಲಿ ಚಂಡಮಾರುತ

ಸೆ.7ರವರೆಗೆ ಭಾರೀ ಮಳೆ ಮುಂದುವರಿಕೆ

ಬೆಂಗಳೂರು: ನಗರದಲ್ಲಿ ಕಳೆದ ಕೆಲ ದಿನಗಳಿಂದ ಭಾರೀ ಮಳೆಯಾಗುತ್ತಿದ್ದು, ಬುಧವಾರವೂ ನಗರದ ವಿವಿಧ ಭಾಗಗಳಲ್ಲಿ ಅಬ್ಬರದ ಮಳೆ ಸುರಿದಿದೆ.

ಬಂಗಾಳಕೊಲ್ಲಿಯ ನೈಋತ್ಯ ಭಾಗದಲ್ಲಿ ಹಾಗೂ ಒಡಿಶಾ ಕರಾವಳಿ ಸಮೀಪ ಚಂಡಮಾರುತ ಪ್ರಸರಣವುಂಟಾಗಿದ್ದು, ಈ ಭಾಗದಿಂದ ಕರ್ನಾಟಕದ ಮೇಲೆ ಬಿರುಗಾಳಿ ಬೀಸುತ್ತಿದೆ. ಇದರ ಪ್ರಭಾವದಿಂದಾಗಿ ನಗರದಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿದ್ದು, ಕಳೆದೊಂದು ವಾರದಿಂದಲೂ ಸುರಿಯುತ್ತಿರುವ ಮಳೆಯು ಮುಂದಿನ ಒಂದು ವಾರಗಳ ಕಾಲ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬುಧವಾರ ನಗರದ ಹಲವು ಭಾಗಗಳಲ್ಲಿ ಮೋಡ ಮುಸುಕಿದ ವಾತಾವರಣ ಕಂಡು ಬಂದಿದ್ದು, ಮಧ್ಯಾಹ್ನದ ವೇಳೆಗೆ ಹಲವು ಭಾಗಗಳಲ್ಲಿ ಭಾರಿ ಮಳೆ ಸುರಿಯಲು ಆರಂಭಿಸಿದೆ. ಸಂಜೆಯ ಬಳಿಕವೂ ಮಳೆ ಮುಂದುವರಿದಿದ್ದು, ಆರ್‌ಆರ್.ನಗರ, ಕೆಂಗೇರಿ, ಬಾಣಸವಾಡಿ, ಕೆಂಗೇರಿಯಲ್ಲಿ ಅತ್ಯಧಿಕ ಮಳೆ ದಾಖಲಾಗಿದೆ. ಕೋರಮಂಗಲ, ಎಲೆಕ್ಟ್ರಾನಿಕ್ ಸಿಟಿ, ಗೊಟ್ಟಿಗೇರೆ, ವಿ.ನಾಗೇನಹಳ್ಳಿ, ರಿಚ್‌ಮಂಡ್ ರಸ್ತೆ, ಎಂಜಿ ರಸ್ತೆ, ಕೆ.ಆರ್ ಪುರ , ಗುರುಡಾಚಾರ್‌ಪಾಳ್ಯ, ಶೆಟ್ಟಿಹಳ್ಳಿ, ರಾಜಾಜಿನಗರ, ವಿಧಾನಸೌಧ, ಪದ್ಮನಾಭ ನಗರ, ಮೆಜೆಸ್ಟಿಕ್, ಮೈಸೂರು ಬ್ಯಾಂಕ್ ಸರ್ಕಲ್ ಸೇರಿದಂತೆ ಅನೇಕ ಕಡೆಗಳಲ್ಲಿ ಉತ್ತಮ ಮಳೆ ಆಗಿದೆ. ನಗರದಲ್ಲಿ ಸೆ.4ರಂದು ಸಾಮಾನ್ಯವಾಗಿ ಮೋಡ ಕವಿದ ವಾತಾವರಣ, ಕಂಡು ಬರಲಿದ್ದು, ಹೆಚ್ಚಿನ ಮಳೆ ನಿರೀಕ್ಷೆ ಇದೆ. ಅಷ್ಟು ಮಾತ್ರವಲ್ಲದೆ ಸೆ.7ರವರೆಗೆ ಬೆಂಗಳೂರಿನಾದ್ಯಂತ ತುಂತುರು ಮಳೆ ಆಗಬಹುದು. ಗರಿಷ್ಠ ತಾಪಮಾನ 27 ಮತ್ತು ಕನಿಷ್ಠ ತಾಪಮಾನ 20 ಡಿಗ್ರಿ ಸೆಲ್ಸಿಯಸ್ ಕಂಡು ಬರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು

ಆರಆರ್ ನಗರ, ನಾಯಂಡಹಳ್ಳಿ, ಕೆ.ಆರ್, ಮಾರುಕಟ್ಟೆ, ಲಾಲ್ ಬಾಗ್, ಟೌನ್ ಹಾಲ್, ರಾಜಾಜಿನಗರ ರಸ್ತೆಗಳ ಮೇಲೆ ನೀರು ನಿಂತುಕೊಂಡಿದ್ದು, ಪ್ರಮುಖ ರಸ್ತೆ ಅಂಡರ್‌ಪಾಸ್‌ಗಳು ಹಾಗೂ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನಿಂತು ಅವಾಂತರ ಸೃಷ್ಟಿಯಾಗಿದೆ. ಟ್ರಾಫಿಕ್ ಸಿಗ್ನಲ್‌ಗಳಲ್ಲಿ ದಟ್ಟಣೆಯುಂಟಾಗಿತ್ತು.

ನಗರದಲ್ಲಿ ಬುಧವಾರ ಸಂಜೆ ಸುರಿದ ಮಳೆಗೆ ಜ್ಞಾನಭಾರತಿ ಅಂಡರ್‌ಪಾಸ್‌ನಲ್ಲಿ ಟ್ರಾಫಿಕ್ ಜಾಮ್‌ಉಂಟಾಗಿ ವಾಹನ ಸವಾರರು ಪರದಾಡಿದರು.

ಎಲ್ಲಿ ಎಷ್ಟು ಮಳೆ?

ಆರ್‌ಆರ್ ನಗರ ಕೆಂಗೇರಿ ಭಾಗದಲ್ಲಿ 35 ಮಿಲಿ ಮೀಟರ್, ಗೊಟ್ಟಿಗೆರೆ 32 ಮಿ.ಮೀ., ವಿ.ನಾಗೇನಹಳ್ಳಿ 29.5 ಮಿ.ಮೀ., ಹೆಮ್ಮಿಗೆಪುರ 24 ಮಿ.ಮೀ. ಬಾಣಸವಾಡಿ 27 ಮಿ.ಮೀ., ಹೆಮ್ಮಿಗೆಪುರ 2 ನಲ್ಲಿ 24.5ಮಿ.ಮೀ., ದೊರೆಸಾನಿಪಾಳ್ಯ 24 ಮಿ.ಮೀ., ಎಚ್.ಗೊಳ್ಳಹಳ್ಳಿ 23 ಮಿ.ಮೀ., ಹಂಪಿನಗರ 23 ಮಿ.ಮೀ., ಅಂಜನಾಪುರ 21 ಮಿ.ಮೀ., ಅರಕೆರೆ 21 ಮಿ.ಮೀ., ಗರುಡಾಚಾರಪಾಳ್ಯ 20.50 ಮಿ.ಮೀ. ಮಳೆ ದಾಖಲಾಗಿದೆ. ಉಳಿದಂತೆ ಕುಶಾಲನಗರ, ಬಿಳೇಕಹಳ್ಳಿ, ಕಾಡುಗೋಡಿ, ಚಾಮರಾಜಪೇಟೆ, ದೊಡ್ಡಬಿದರಕಲ್ಲು, ಹೊರಮಾವು ಸೇರಿದಂತೆ ಅನೇಕ ಕಡೆಗಳಲ್ಲಿ ಜಿಟಿ ಜಿಟಿ ಮಳೆ ಆಗಿದೆ ಎಂದು ಹವಾಮಾನ ಇಲಾಖೆ ವರದಿ ತಿಳಿಸಿದೆ.

ಜಿಎಸ್‌ಟಿ ಭಾರ ಇಳಿಕೆ

← ಮೊದಲಪುಟದಿಂದ

ಇದರ ಜೊತೆಗೆ ಕಾನ್ಸರ್ ಔಷಧಿಗಳು ಸೇರಿದಂತೆ 33 ಜೀವರಕ್ಷಕ ಔಷಧಿಗಳಿಗೂ ಇನ್ನು ಮುಂದೆ ತೆರಿಗೆ ಇರುವುದಿಲ್ಲ ಎಂದು ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದ್ದಾರೆ. ಇದಲ್ಲದೆ ಎಲ್ಲಾ ರೀತಿಯ ಬ್ರೆಡ್, ಹಾಲಿನ ಉತ್ಪನ್ನಗಳಿಗೂ ಶೂನ್ಯ ತೆರಿಗೆ ವಿಧಿಸಲಾಗಿದೆ. ಅದೇ ರೀತಿ ಸಾದಾ ಚಪಾತಿಗಳು, ಪರೋಟ, ಕಾಕ್ರಾ, ರೋಟಿಗಳನ್ನೂ ಶೂನ್ಯ ತೆರಿಗೆ ವ್ಯಾಪ್ತಿಗೆ ತರಲಾಗಿದೆ.

ಎಲ್ಲಾ ರಾಜ್ಯಗಳು ಜಿಎಸ್ ಟಿ ದರ ತರ್ಕಬದ್ಧಗೊಳಿಸುವಿಕೆಗೆ ಬೆಂಬಲ ನೀಡಿವೆ ಮತ್ತು ಇದು ಒಮ್ಮತದ ನಿರ್ಧಾರವಾಗಿದೆ ಎಂದು ಜಿಎಸ್ ಟಿ ಮಂಡಳಿ ಸಭೆ ನಂತರ ಬಿಹಾರ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ಹೇಳಿದ್ದಾರೆ. ಜಿಎಸ್‌ಟಿ ಸರಳೀಕರಣದಿಂದ ಕೇಂದ್ರದ ಬೊಕ್ಕಸಕ್ಕೆ 96 ಸಾವಿರ ಕೋಟಿ ಆದಾಯ ಖೋತಾ ನಿರೀಕ್ಷಿಸಲಾಗಿದೆ.

2,500 ವರೆಗಿನ ಬೆಲೆಯ ಪಾದರಕ್ಷೆಗಳು ಮತ್ತು ಸಿದ್ಧ ಉಡುಪುಗಳ ಮೇಲಿನ ತೆರಿಗೆಯನ್ನು ಶೇ. 5ಕ್ಕೆ ಇಳಿಸಲು ಜಿಎಸ್‌ಟಿ ಮಂಡಳಿ ಒಪ್ಪಿಗೆ ನೀಡಿದೆ. ಪ್ರಸ್ತುತ, 1,000 ರೂ.ವರೆಗಿನ ವಸ್ತುಗಳಿಗೆ ಶೇ. 5 ಮತ್ತು ಅದಕ್ಕಿಂತ ಹೆಚ್ಚಿನ ಬೆಲೆಯ ವಸ್ತುಗಳಿಗೆ ಶೇ. 12ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

ಕಾರುಗಳ ಬೆಲೆಯಲ್ಲಿ ಭಾರಿ ಇಳಿಕೆ: ಜಿಎಸ್ ಟಿ ಸ್ಲ್ಯಾಬ್ ಗಳ ಪರಿಷ್ಕರಣೆಯಲ್ಲಿ ಕಾರುಗಳ ಮೇಲಿನ ಜಿಎಸ್ ಟಿಯನ್ನು ಶೇ. 28 ರಿಂದ ಶೇ. 18ಕ್ಕೆ ಇಳಿಸಲಾಗಿದ್ದು, ಹಬ್ಬದ ಅವಧಿಯಲ್ಲಿ ವಾಹನಗಳ ಬೆಲೆಯಲ್ಲಿ ಭಾರೀ ಕಡಿತವಾಗಲಿದೆ.

ನಾನು ಕಾಂಗ್ರೆಸ್ ಪಕ್ಷ ಬಿಡಲ್ಲ

ಸಿದ್ದರಾಮಯ್ಯ ಇರೋವರೆಗೂ ನನಗೆ ತೊಂದರೆ ಇಲ್ಲ: ಮಾಜಿ ಸಚಿವ ರಾಜಣ್ಣ

ತುಮಕೂರು: ಕಾಂಗ್ರೆಸ್ ಪಕ್ಷ ನನಗೆ ಮೋಸ ಮಾಡಿಲ್ಲ. ಯಾವುದೇ ಕಾರಣಕ್ಕೂ ನಾನು ಪಕ್ಷ ಬಿಡಲ್ಲ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಸ್ಪಷ್ಟಪಡಿಸಿದ್ದಾರೆ. ಬಿಜೆಪಿ ಸೇರುತ್ತಾರೆಂಬ ಆರೋಪವನ್ನು ಅಲ್ಲಗಳೆದಿದ್ದಾರೆ.

ಮಧುಗಿರಿಯ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ರಾಜಣ್ಣ, ಅನ್ನಭಾಗ್ಯ ಕಾರ್ಯಕ್ರಮ ನನಗೆ ಬಹಳ ಪ್ರೀತಿಯ ಯೋಜನೆ. ಸಿದ್ದರಾಮಯ್ಯ ಅವರು ಅನ್ನಭಾಗ್ಯ ಕಾರ್ಯಕ್ರಮದಿಂದ ನನಗೆ ಅಚ್ಚುಮೆಚ್ಚು. ಅದಕ್ಕೆ ನಾನು ಅವರನ್ನು ಹೆಚ್ಚು ಪ್ರೀತಿ ಮಾಡುತ್ತೇನೆ. ಹಸಿವಿನ ಪಿಡುಗು ತೊಡೆದು ಹಾಕಿದ್ದು ಮಾನ್ಯ ಸಿದ್ದರಾಮಯ್ಯ. ಉಳಿದ ಸಿಎಂಗಳಿಗೆ ಮನಸ್ಥಿತಿ ಇರಲಿಲ್ಲ. ಹಾಗಾಗಿ ಅವರು ಅನ್ನಭಾಗ್ಯದಂತಹ ಕಾರ್ಯಕ್ರಮ ತಂದಿಲ್ಲ. ಸಿದ್ದರಾಮಯ್ಯನವರು ಅವರ ಮನೆಯಿಂದ ತಂದು ಕೊಟ್ಟಿಲ್ಲ ನಿಜ. ಆದರೆ ಬೇರೆ ಸಿಎಂಗಳು ಯಾಕೆ ಕೊಟ್ಟಿಲ್ಲ. ಮಧುಗಿರಿ ತಾಲೂಕಿನಲ್ಲಿ ಅನ್ನಭಾಗ್ಯ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ. ಬಡವರ ಕಾರ್ಯಕ್ರಮ ಮಂಜೂರು ಮಾಡುವಾಗ ನಾವು ತಾರತಮ್ಯ ಮಾಡಿಲ್ಲ. ಪಕ್ಷಕ್ಕೆ ಮತ ಹಾಕಿಲ್ಲ ಎಂದು ಸವಲತ್ತು ಕೊಡದೇ ಇಲ್ಲ ನಾನು. ಎಲ್ಲಾ ಪಕ್ಷ, ಜಾತಿಯವರಿಗೆ ಮನೆಗಳು ಮಂಜೂರು ಮಾಡಿದ್ದೇನೆ ಎಂದು ತಿಳಿಸಿದ್ದಾರೆ.

ನಾನು ಮಾಜಿ ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಅದರಿಂದ ಬೇಜಾರಿಲ್ಲ. 35 ಸಾವಿರ ಲೀಡ್‌ನಿಂದ ನಾನು ಗೆದ್ದಿದ್ದೇನೆ. ಈಗ ಚುನಾವಣೆ ಆದರೂ ನಾನೂ ಹೆಚ್ಚು ಮತದಿಂದ ಗೆಲ್ಲುತ್ತೇನೆ. ನಾನು ಭ್ರಷ್ಟಾಚಾರ ಮಾಡಿಲ್ಲ. ಆದರೂ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟೆ ಎಂದು ಮಾತನಾಡಿದ್ದಾರೆ. ರಾಜಕೀಯದಲ್ಲಿ ದುಡ್ಡು ಅಥವಾ ಜಾತಿ ಇದ್ದಾಗ ಮಾತ್ರ ಬೆಳೆಯಬಹುದು. ಅದು ಎರಡೂ ನನ್ನ ಬಳಿ ಇಲ್ಲ. ಆದರೂ ಕ್ಷೇತ್ರದ ಜನರು ನನ್ನ ಬೆಳೆಸಿದ್ದಾರೆ. ಎಂದಿದ್ದಾರೆ.

ಯಾವ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸಿದರೂ ಗೆಲುವು ಸಾಧಿಸುತ್ತೇನೆ. ಪಕ್ಷೇತರನಾಗಿ ನಿಂತರೂ ಗೆಲ್ಲುತ್ತೇನೆ. ಯಾವುದೇ ಕಾರಣಕ್ಕೂ ಕಾಂಗ್ರೆಸ್ ತೊರೆಯುವುದಿಲ್ಲ. ರಾಹುಲ್ ಗಾಂಧಿ ನಡೆಸುತ್ತಿರುವ ಮತ ಕಳ್ಳತನ ಹೋರಾಟ ಬೆಂಬಲಿಸುತ್ತೇನೆ. ನನ್ನನ್ನು ಮತ್ತೆ ಸಚಿವರನ್ನಾಗಿ ಮಾಡುವಂತೆ ಒತ್ತಾಯಿಸಲು ಹೆಚ್ಚಿನ ಸಂಖ್ಯೆಯಲ್ಲಿ ದೆಹಲಿಗೆ ಹೋಗುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

-ಕೆ.ಎನ್.ರಾಜಣ್ಣ ಮಾಜಿ ಸಚಿವ

ದೆಹಲಿಯಲ್ಲಿ ಶಕ್ತಿ ಪ್ರದರ್ಶನ

ಈ ನಡುವೆ ರಾಜಣ್ಣ ಅವರಿಗೆ ಸಚಿವ ಸ್ಥಾನವನ್ನು ಮರಳಿ ಕೊಡಿಸಬೇಕು ಎನ್ನುವ ನಿಟ್ಟಿನಲ್ಲಿ ದೆಹಲಿಯಲ್ಲಿ ಶಕ್ತಿ ಪ್ರದರ್ಶನ ಮಾಡಲು ಆಪ್ತರು ಮುಂದಾಗಿದ್ದಾರೆ. ಭಾನುವಾರ ರಾಜಣ್ಣ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿದ್ದು, ಆಪ್ತರು ಹಾಗೂ ಕಾರ್ಯಕರ್ತರೊಂದಿಗೆ ದೆಹಲಿಗೆ ತೆರಳಿ ವರಿಷ್ಠರೊಂದಿಗೆ ಚರ್ಚಿಸಲು ತೀರ್ಮಾನಿಸಿದ್ದಾರೆ. ಇದೇ ವೇಳೆ ರಾಹುಲ್ ಗಾಂಧಿ ಅವರ ಸಮಯ ಸಿಕ್ಕರೆ ಅವರಿಗೂ ಸಚಿವ ಸ್ಥಾನವನ್ನು ಮರಳಿ ಕೊಡಿಸುವಂತೆ ಒತ್ತಡ ಹೇರುವ ಲೆಕ್ಕಾಚಾರದಲ್ಲಿ ರಾಜಣ್ಣ ಇದ್ದಾರೆ ಎನ್ನಲಾಗಿದೆ. ಆರಂಭದಲ್ಲಿ ಈ ನಿಯೋಗದಲ್ಲಿ ಸತೀಶ್ ಜಾರಕಿಹೊಳಿ ಅವರು ಇರಲಿದ್ದಾರೆ ಎನ್ನಲಾಗಿತ್ತು. ಆದರೀಗ, ಜಾರಕಿಹೊಳಿ ಅವರು ಈ ವಿಷಯದಲ್ಲಿ ಅಂತರ ಕಾಯ್ದುಕೊಳ್ಳಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಾನ್ಯಾಕೆ ಬಿಜೆಪಿ ಸೇರಲಿ?

ನಾನ್ಯಾಕೆ ಬಿಜೆಪಿ ಸೇರಲಿ? ಅವಕಾಶ ಇಲ್ಲ ನನಗೆ. ಪಾರ್ಟಿ ನನಗೆ ಏನೂ ಮೋಸ ಮಾಡಿಲ್ಲ. ಯಾವ ಕಾರಣಕ್ಕೂ ನಾನು ಕಾಂಗ್ರೆಸ್ ಬಿಡಲ್ಲ. ಜನರು ನನಗೆ ಕಾಂಗ್ರೆಸ್, ಬಿಜೆಪಿ ಅಥವಾ ಇಂಡಿಪೆಂಡೆಂಟ್ ನಿಂತರೂ ಮತ ಹಾಕುತ್ತಾರೆ. ರಾಹುಲ್ ಗಾಂಧಿ ಮತಗಳ್ಳತನ ಹೋರಾಟವನ್ನು ನಾನು ಬೆಂಬಲಿಸುತ್ತೇನೆ. ಸಿದ್ದರಾಮಯ್ಯ ನೇತೃತ್ವ ಇರೋವರೆಗೂ ನನ್ನ ಭವಿಷ್ಯಕ್ಕೆ ತೊಂದರೆ ಇಲ್ಲ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ಧರ್ಮಸ್ಥಳ ಪ್ರಕರಣ: ಎಸ್‌ಐಟಿ ಮಧ್ಯಂತರ ವರದಿ ಸಲ್ಲಿಸಲಿ

ಮಂಗಳೂರು: ಧರ್ಮಸ್ಥಳದ ವಿರುದ್ಧದ ಅಪಪ್ರಚಾರ ಬಗ್ಗೆ ಸಹಿಸುವುದಿಲ್ಲ. ಸಂಚುಕೋರರನ್ನು ಆರಂಭದಲ್ಲಿಯೇ ಬಂಧಿಸಿದ್ದರೆ, ಈ ಪರಿಸ್ಥಿತಿ ಬರುತ್ತಿರಲಿಲ್ಲ. ಇದೀಗ ಸಂಚುಕೋರರ ಬಾಯಿಯಿಂದಲೇ ಸತ್ಯ ಹೊರಬರುತ್ತಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರ ತ್ವರಿತ ಕ್ರಮ ಕೈಗೊಳ್ಳಬೇಕಿತ್ತು. ಧರ್ಮಸ್ಥಳದ ವಿರುದ್ಧ ಷಡ್ಯಂತ್ರಕ್ಕೆ ವಿದೇಶಿ ಹಣಕಾಸು ನೆರವು ಬಂದಿದೆ. ರಾಷ್ಟ್ರವಿರೋಧಿಗಳು ಕೈಜೋಡಿಸಿದ್ದಾರೆ. ಎಸ್ ಐಟಿಯಿಂದಾಗಿ, ಸಾಕಷ್ಟು ಮಾಹಿತಿ ಹೊರಬರುತ್ತಿದೆ. ನಾನು ಅವರಿಗೆ ಧನ್ಯವಾದ ಹೇಳುತ್ತೇನೆ. 18 ಅಡಿ ಆಳದಲ್ಲಿ ಶವವನ್ನು ಹುಡುಕಲು ಸಾಧ್ಯವೇ? ಪ್ರಕರಣವನ್ನು ಎನ್ ಐಎಗೆ ಹಸ್ತಾಂತರಿಸಬೇಕು. ಎಂ .ಡಿ ಸಮೀರ್‌ಗೆ ಎಸ್‌ಡಿಪಿಐ ಜತೆ ಸಂಪರ್ಕವಿದೆ ಎಂದು ಆರೋಪಿಸಿದರು.

ಸಾಕ್ಷಿ-ದೂರುದಾರರ ವ್ಯಕ್ತಿ ಸುಳ್ಳು ಹೇಳುತ್ತಿದ್ದಾನೆ. ಕಳೆದ 14 ವರ್ಷಗಳಿಂದ ಧರ್ಮಸ್ಥಳವನ್ನು ಗುರಿಯಾಗಿಸಲಾಗುತ್ತಿದೆ. ರಾಜ್ಯ ಸರಕಾರ ಎಸ್‌ಐಟಿ ರಚಿಸಿದ ನಂತರ, ಸಾಕ್ಷಿ- ದೂರುದಾರರಾದ ಸಮೀರ್ ಮತ್ತು ಮಟ್ಟಣ್ಣವರ್ ಆರೋಪಗಳಿಂದ ಹಿಂದೆ ಸರಿದಿದ್ದಾರೆಂದು ತಿಳಿದುಬಂದಿದೆ. ಅವರಿಗೆ ಮತ್ತು ಅವರ ವಕೀಲರಿಗೆ ಯಾರು ಹಣ ನೀಡುತ್ತಿದ್ದಾರೆ? ಅದನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ನ್ಯಾಯ ಸಿಗುವವರೆಗೂ ಹೋರಾಟ ನಿಲ್ಲಲ್ಲ

ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಮಧ್ಯಂತರ ವರದಿಯನ್ನು ಸಲ್ಲಿಸಬೇಕು. ದೂರುದಾರ ವ್ಯಕ್ತಿ ನೂರಾರು ಶವಗಳನ್ನು ಹೂಳಲಾಗಿದೆ ಎಂದು ಹೇಳಿದ್ದಾನೆ. ಹಾಗೆ ಮಾಡಲು ಸಾಧ್ಯವೇ? ಧರ್ಮಾಧಿಕಾರಿ ಡಿ ವೀರೇಂದ್ರ ಹೆಗ್ಗಡೆ ಅವರ ಪರವಾಗಿ ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರಿಸುವಂತೆ ನಾನು ಸರಕಾರಕ್ಕೆ ಮನವಿ ಮಾಡುತ್ತೇನೆ. ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ತಿಳಿಸಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕ್
ಆವರಣ ಮತ್ತು ಸ್ವತ್ತು ವಿಭಾಗ, ಸ್ಥಳೀಯ ಪ್ರಧಾನ ಕಚೇರಿ,
#65, ಸಂತ ಮಾರ್ಕರ ರಸ್ತೆ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ: 080 2594 3867

ಭಾರತೀಯ ಸ್ಟೇಟ್ ಬ್ಯಾಂಕ್ ದೈನಂದಿನ / ಮಾಸಿಕ ಆಧಾರದ ಮೇಲೆ ವಾಹನಗಳನ್ನು ಬಾಡಿಗೆಗೆ ಪಡೆಯಲು **"ದರ ಗುತ್ತಿಗೆ ಟೆಂಡರ್"** ಅನ್ನು ಆಹ್ವಾನಿಸಿದೆ. ಈ ಉದ್ದೇಶಕ್ಕಾಗಿ ವಿವರವಾದ ಟೆಂಡರ್ ದಾಖಲೆ, ಅರ್ಹತಾ ಮಾನದಂಡಗಳು ಇತ್ಯಾದಿಗಳನ್ನು ನಮ್ಮ ವೆಬ್ ಸೈಟ್ <bank.sbi> ನಲ್ಲಿರುವ 'SBI in the News' => 'Procurement News' https://bank.sbi/web/sbi-in-the-news/procurement-news ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03.10.2025

ಸ್ಥಳ: ಬೆಂಗಳೂರು
ದಿನಾಂಕ: 04-09-2025
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಸ್ವ)

ಮುನಿರತ್ನಗೆ ಬಿಗ್ ರಿಲೀಫ್

← ಮೊದಲಪುಟದಿಂದ

ಪ್ರಕರಣದ ಹಿನ್ನೆಲೆ ಏನು?: ಈ ಹಿಂದೆ ನಾನು ಬಿಜೆಪಿಯಲ್ಲಿದ್ದ ಕಾರಣಕ್ಕೆ ಆಗ ಕಾಂಗ್ರೆಸ್‌ನಲ್ಲಿದ್ದ ಶಾಸಕ ಮುನಿರತ್ನ ನನ್ನ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಜೈಲಿಗೆ ಕಳುಹಿಸಿದ್ದರು. ಬಳಿಕ 2023ರ ಜೂನ್ 11ರಂದು ಜೆ.ಪಿ ಪಾರ್ಕ್ ಬಳಿಯಿರುವ ಶಾಸಕರ ಕಚೇರಿಯ ಎರಡನೇ ಮಹಡಿಗೆ ಕರೆದೊಯ್ದು ಬೆತ್ತಲೆಗೊಳಿಸಿ, ತನ್ನ ಇಬ್ಬರು ಸಹಚರರಿಂದ ಸಾಮೂಹಿಕ ದೌರ್ಜನ್ಯಕ್ಕೆ ಕಾರಣರಾಗಿದ್ದರು. ಜತೆಗೆ, ಅಪಾಯಕಾರಿ ಕಾಯಿಲೆ ಬರುವಂತಹ ಇಂಜೆಕ್ಷನ್ ನೀಡಿದ್ದರು. ಈ ವಿಚಾರ ಎಲ್ಲಿಯೂ ಬಾಯಿ ಬಿಡದಂತೆ ಮುನಿರತ್ನ ಬೆದರಿಕೆ ಹಾಕಿದ್ದಲ್ಲದೆ, ಮುಖದ ಮೇಲೆ ಮೂತ್ರ ವಿಸರ್ಜಿಸಿದ್ದರು ಎಂದು ಮಹಿಳೆ ಆರೋಪಿಸಿದ್ದರು. ಸರಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಸ್‌ಐಟಿಗೆ ಆದೇಶಿಸಿತ್ತು.

ಅಭಿಮನ್ಯುಗೆ 500 ಕೆಜಿ ಭಾರ ಹೊರಿಸಿ ತಾಲೀಮು

ಬನ್ನಿಮಂಟಪದವರೆಗೆ ನಿರಾಯಾಸವಾಗಿ ಹೆಜ್ಜೆ | ಕಾವೇರಿ, ಹೇಮಾವತಿ ಸಾಥ್

ಮೈಸೂರು: ಅಂಬಾರಿ ಹೊರುವ ಅಭಿಮನ್ಯು ನೇತೃತ್ವದ ಗಜಪಡೆಗೆ ಬುಧವಾರದಿಂದ ಭಾರ ಹೊರಿಸುವ ತಾಲೀಮು ಆರಂಭವಾಗಿದ್ದು, ಮೊದಲ ದಿನವೇ ಕ್ಯಾಪ್ಟನ್ ಅಭಿಮನ್ಯು 500 ಕೆಜಿ ಭಾರ ಹೊತ್ತು ಬನ್ನಿಮಂಟಪದವರೆಗೆ ನಿರಾಯಾಸವಾಗಿ ಹೆಜ್ಜೆ ಹಾಕಿದ.

ಅರಮನೆಯಿಂದ 5 ಕಿ.ಮೀ ದೂರದ ಬನ್ನಿಮಂಟಪಕ್ಕೆ ಸುಮಾರು 500 ಕೆ.ಜಿ ಭಾರ ಹೊತ್ತ ಅಭಿಮನ್ಯು, ಕುಮ್ಕಿ ಆನೆಗಳಾದ ಕಾವೇರಿ ಹಾಗೂ ಹೇಮಾವತಿ ಜತೆಗೆ ಗಾಂಭೀರ್ಯದಿಂದ ನಡೆಯುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಅರ್ಜುನನನ್ನು ಉಳಿದ 11 ಆನೆಗಳು ಅನುಸರಿಸಿದವು. ಗೋಪಿ ವಿಶ್ರಾಂತಿಯಲ್ಲಿದ್ದ.

ಶಾಸ್ತ್ರೋಕ್ತ ಪೂಜೆ: ಜಂಬೂಸವಾರಿಗೆ 28 ದಿನ ಬಾಕಿ ಇದ್ದು ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗ ಬುಧವಾರ ಪೂಜೆ ಸಲ್ಲಿಸಿ ಭಾರ ಹೊರಿಸಲಾಯಿತು. ಡಿಸಿಎಫ್ ಐ.ಬಿ.ಪ್ರಭುಗೌಡ ಸಂಜೆ 4.2ಕ್ಕೆ ಅಭಿಮನ್ಯು ಹಾಗೂ ಕುಮ್ಕಿಗಳಾದ ಹೇಮಾವತಿ ಹಾಗೂ ಕಾವೇರಿ ಆನೆಗಳಿಗೆ ಪೂಜೆ ಸಲ್ಲಿಸಿ ಭಾರ ಹೊರಿಸುವ ತಾಲೀಮಿಗೆ ಚಾಲನೆ ನೀಡಿದರು. ಅರಮನೆ ಅರ್ಚಕ ಪ್ರಹ್ಲಾದ ರಾವ್ ಪೂಜಾ ವಿಧಿವಿಧಾನ ನೆರವೇರಿಸಿದರು. ಅರಿಶಿಣ, ಗಂಧವನ್ನಿಟ್ಟು, ಧೂಪ ದೀಪದ ಆರತಿ ಮಾಡಿದರು. ಪಾದಗಳಿಗೆ ಹೂಗಳನ್ನಿಟ್ಟು ಪೂಜೆ ಸಲ್ಲಿಸಿದರು. ಹಣ್ಣು, ಕಾಯಿ, ಕಬ್ಬುಗಳನ್ನು ನೈವೇದ್ಯ ನೀಡಿದರು. ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಹೂವು ನೀಡಿ ದುರ್ಗಾ ಸ್ತೋತ್ರ ಹೇಳಿಸಿ, ಪುಷ್ಪವೃಷ್ಟಿ ಮಾಡಿಸಿದರು.

ಮರಳಿನ ಮೂಟೆ: ಮೊದಲಿಗೆ ಆನೆಗಳನ್ನು ಕುಳ್ಳಿರಿಸಿದ ಮಾವುತರು ನಮ್ದಾ ಗಾದಿ (ಮೆತ್ತನೆಯ ಹಾಸಿಗೆ)ಯನ್ನು ಆನೆಯ ಬೆನ್ನ ಮೇಲೇರಿಸಿ ಕಟ್ಟಿದರು. ನಂತರ, ವಿವಿಧ ತೂಕಗಳ ಮರಳಿನ ಮೂಟೆಗಳನ್ನು ಹೊರಿಸಲಾಯಿತು. ನಂತರ ಪ್ರಹ್ಲಾದ ರಾವ್ ಆರತಿ ಬೆಳಗಿದರೆ, ತಾಲೀಮು ಉಸ್ತುವಾರಿ ಅಕ್ರಂ ಈಡುಗಾಯಿ ಒಡೆದರು.

ಇಂದಿನಿಂದ ಆನೆಗಳಿಗೆ ಭಾರ ಹೊರಿಸುವ ತಾಲೀಮು ಆರಂಭಿಸಲಾಗಿದೆ. ಮೊದಲ ದಿನ ಅಭಿಮನ್ಯುವಿಗೆ ಭಾರ ಹಾಕಿದ್ದು, ಮೊದಲ ಹಂತದಲ್ಲಿ 500 ಕೆಜಿ ಭಾರ ಹೊರಿಸಲಾಗಿದೆ. ಹಂತ ಹಂತವಾಗಿ ಭಾರ ಹೆಚ್ಚಿಸಲಾಗುವುದು. ಸಾವಿರ ಕೆಜಿ ಭಾರ ಹೊರಲು ಅನುಕೂಲವಾಗುವಂತೆ ತಾಲೀಮು ನೀಡಲಾಗುವುದು.

-ಡಾ.ಪ್ರಭುಗೌಡ ಡಿಸಿಎಫ್

ಮೈಸೂರು ದಸರಾ ಜಂಬೂಸವಾರಿ ವೇಳೆ ಅಂಬಾರಿ ಹೊರುವ ಅಭಿಮನ್ಯುಗೆ 500 ಕೆ.ಜಿ. ಭಾರ ಹಾಕಿ ತಾಲೀಮು ನಡೆಸಲಾಯಿತು.

ಒಂದೂವರೆ ಗಂಟೆ ಪಯಣ

ಅಭಿಮನ್ಯು, ಕಾವೇರಿ ಹಾಗೂ ಹೇಮಾವತಿಯನ್ನು ಭೀಮ, ಏಕಲವ್ಯ, ಸುಗ್ರೀವ, ಮಹೇಂದ್ರ, ಪ್ರಶಾಂತ, ಕಾವೇರಿ, ಕಂಜನ್, ರೂಪ, ಶ್ರೀಕಂಠ ಹಾಗೂ ಧನಂಜಯ ಆನೆಗಳು ಅನುಸರಿಸಿದವು. ಮಧ್ಯದಲ್ಲಿ ಅನುಭವಿಗಳಾದ ಮಹೇಂದ್ರ, ಕೊನೆಯಲ್ಲಿನ ಅರ್ಜುನನ ಜಾಗದಲ್ಲಿ ಧನಂಜಯ ಇದ್ದು, ಗಜಪಡೆ ಸಾಲನ್ನು ನಿರ್ದೇಶಿಸುತ್ತಿದ್ದರು. ಅರಮನೆ ಬಲರಾಮ ದ್ವಾರದಿಂದ ಹೊರಟ ಆನೆಗಳು ಬನ್ನಿಮಂಟಪ ತಲುಪಲು ಒಂದೂವರೆ ಗಂಟೆ ತೆಗೆದುಕೊಂಡವು. ನಂತರ 20 ನಿಮಿಷ ವಿರಮಿಸಿ 7ರ ಸುಮಾರು ಅರಮನೆಗೆ ವಾಪಸಾದವು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಕನೀನಿನಿ, ಮಬದಕಾನಿ ವಿಭಾಗ ನಂ.4, ನವಲಗುಂದ.
ದೂರವಾಣಿ ಸಂಖ್ಯೆ: 08380-229248, ಫ್ಯಾಕ್ಸ್ ಸಂಖ್ಯೆ: 08380-229017
ಇ-ಮೇಲ್: knnl.mrbcc4@gmail.com

ಸಂಖ್ಯೆ:ಕನೀನಿನಿ/ಮಬದ-4/ಪಿ.ಬಿ/ಜೆ.ಇ/2025-26/570 ದಿನಾಂಕ: 02-09-2025

ಕೋಟೇಷನ್ ದರಗಳನ್ನು ಆಹ್ವಾನಿಸುವ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ಮಬದಕಾನಿ ವಿಭಾಗ ನಂ.4, ನವಲಗುಂದ ಇವರ ಕಛೇರಿಯಡಿ ಈ ಕೆಳಗೆ ನಮೂದಿಸಿರುವ ಕಾಮಗಾರಿಗೆ ಸಂಬಂಧಿಸಿದ ಸನಗುಗಳಿಗೆ ಕೋಟೇಷನ್ ದರವನ್ನು ಅಂದಾಜು ಪಟ್ಟಿ ತಯಾರಿಸಲು ಮಾತ್ರ ಈ ಮೂಲಕ ಆಹ್ವಾನಿಸಲಾಗಿದೆ.

Sl. No.	Item Description	Unit	Rate Per Unit (Rs.)
1	Conducting Dynamic Pile load test for 600mm dia, Pile as per ASTM 4945 Section 08.	No	
2	Detailed Videography / Drone view of Ch-53 to 148 Km of Bennihalla i.e before commencing of work while work under progress and after completion of work including submitting of videography in required format. (Total Three Times)	Per Km	
3	Printing of Photos (MR)	Per Photo	
4	Conveyance Allowance Charges (1 vehicles, 365 days)	Per Km	

Note: G.S.T. shall be mentioned Separately.

ದರವನ್ನು ನಮೂದಿಸಿದ ಲಕೋಟೆಯನ್ನು ದಿನಾಂಕ: **11-09-2025 ರಂದು ಸಂಜೆ 5.30 ಗಂಟೆವರೆಗೆ ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ಮಬದಕಾನಿ ವಿಭಾಗ ನಂ.4, ನವಲಗುಂದ ಕಚೇರಿಗೆ** ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ತಾಂತ್ರಿಕ ಸಹಾಯಕರ ಮೊಬೈಲ್ ಸಂಖ್ಯೆ: **9663137692** ಹಾಗೂ ಇ-ಮೇಲ್: **knnl.mrbcc4@gmail.com** ಅಥವಾ ಈ ಮೇಲಿನ ಕಚೇರಿಗೆ ಖುದ್ದಾಗಿ ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ.4 ನವಲಗುಂದ.
ವಾಸಾಸಂಇ/ಧಾರವಾಡ/622/ಅಡ್ವರ್ಟೋರ್/2025-26

ನಗರಸಭಾ ಕಾರ್ಯಾಲಯ ಹೊಸಪೇಟೆ.
ಕ್ರಸಂ/ನಸಹೊ/ತಾಂ.ಶಾ/ಟೆಂಡರ್/15ನೇ ಹಣಕಾಸು(ಅನ್‌ಟೈಡ್)2025-26
ದಿನಾಂಕ: 30.08.2025

ಟೆಂಡರ್ ಪ್ರಕಟಣೆ(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ)

2024-25ನೇ ಸಾಲಿನ 15ನೇ ಹಣಕಾಸು ಉಳಿತಾಯ ಮೊತ್ತದ ಅನುದಾನದಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು.

1.ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ: **15.09.2025ಸಂಜೆ 5.00 ಗಂಟೆ ವರೆಗೆ.** 2.ಟೆಂಡರ್‌ನ್ನು ತೆರೆಯುವ ದಿನಾಂಕ: **16.09.2025 ಸಂಜೆ 5:10 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ ಹೊಸಪೇಟೆ.**

ಕಾಮಗಾರಿ ವಿವರ : DMA/2025/OW/WORK_INDENT 48065. **ಟೆಂಡರ್ ಗಿಟ್ಟ ಅಂದಾಜು ಮೊತ್ತ ಲಕ್ಷಗಳಲ್ಲಿ :** 56.00

ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ-ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/-ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹೊಸಪೇಟೆ.
ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/231

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:26:2025-26 ದಿನಾಂಕ:30-08-2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)

ಸ್ವಚ್ಛ ಭಾರತ್ ಮಿಷನ್ (2.0)-01 ಕಾಮಗಾರಿಗಳು, ಒಟ್ಟು 01 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91-8046010000 +91-8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಕ್ರಮ ಸಂ 01ರ ಅಲ್ಪಾವಧಿ ಕಾಮಗಾರಿಗೆ:- ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ : 02-09-2025. ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 20-09-2025 ಸಮಯ : 16.00. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 20-09-2025 ಸಮಯ : 17.00 ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22-09-2025 ಸಮಯ : 11.00

ವಾಸಾಇ/ದಾವಣಗೆರೆ/307/ ಕೆಎಸ್‌ಎಂಸಿಎ/2025-26
ಸಹಿ/-ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಗ್ರೇಟರ್ ಬದಲಿಗೆ ಸೂಕ್ತ ಪದ ಸಿಕ್ಕರೆ ಹೆಸರು ಬದಲು

← ಮೊದಲಪುಟದಿಂದ

ಪಾಲಿಕೆಗಳ ವ್ಯಾಪ್ತಿಗೆ ಬರುವ ರಸ್ತೆ, ಚರಂಡಿ ಸೇರಿದಂತೆ ಇತರೇ ಸಂಗತಿಗಳನ್ನು ಗುರುತಿಸುವ ಕೆಲಸವಾಗಲಿದೆ. ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಸ್ಥಳೀಯ ಸಂಸ್ಥೆಗಳನ್ನು ಜಿಬಿಎ ವ್ಯಾಪ್ತಿಗೆ ಈಗಲೇ ಸೇರಿಸಿದರೆ ಪ್ರಸ್ತುತ ಪ್ರತಿನಿಧಿಗಳಾಗಿರುವವನ್ನೂ ಪಾಲಿಕೆ ಸದಸ್ಯರು ಎಂದು ಪರಿಗಣಿಸಬೇಕಾಗುತ್ತದೆ. ಮೊದಲು ಈಗ ರಚನೆಯಾಗಿರುವ ಪಾಲಿಕೆಗಳಿಗೆ ಚುನಾವಣೆ ನಡೆದ ನಂತರ ಇತರೇ ಪ್ರದೇಶಗಳ ವಿಲೀನದ ಬಗ್ಗೆ ಭವಿಷ್ಯದಲ್ಲಿ ಯೋಚಿಸಲಾಗವುದು ಎಂದರು.

ನೂತನ ಆಯುಕ್ತರು ಜನರ ನಡುವೆಯಿದ್ದು ಕೆಲಸ ಮಾಡಬೇಕು. ಜಿಬಿಎ ಆಯುಕ್ತರು ಪಾದಚಾರಿ ಮಾರ್ಗ, ನೀರು, ರಸ್ತೆ ಸೇರಿದಂತೆ ಇತರೇ ಕೆಲಸಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ದಿನಕ್ಕೆ 17- 18 ಗಂಟೆ ಕೆಲಸ ಮಾಡಬೇಕಾಗುತ್ತದೆ. ಆದ ಕಾರಣಕ್ಕೆ ಹಿರಿಯ ಅಧಿಕಾರಿಗಳ ಜತೆ ಯುವ ಅಧಿಕಾರಿಗಳನ್ನೂ ನಿಯೋಜನೆ ಮಾಡಲಾಗಿದೆ. ಮಹೇಶ್ವರ್ ರಾವ್‌ರು ಜಿಬಿಎಗೆ ಮುಖ್ಯ ಆಯುಕ್ತರಾಗಿ ಹಾಗೂ ಆಡಳಿತಾಧಿಕಾರಿಯಾಗಿ ಚುನಾವಣೆ ನಡೆಯುವವರೆಗೂ ಕಾರ್ಯನಿರ್ವಹಣೆ ಮಾಡಲಿದ್ದಾರೆ. ಪ್ರಾಧಿಕಾರದ ಸಮಿತಿಗೆ 75 ಸದಸ್ಯರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಈ ವೇಳೆ ಬಿಡಿಎ ಅಧ್ಯಕ್ಷ ಎನ್.ಎ ಹ್ಯಾರಿಸ್, ಶಾಸಕರಾದ ರವಿ ಸುಬ್ರಮಣ್ಯ, ಉದಯ್ ಗರುಡಾಚಾರ್, ಎಸ್.ಟಿ ಸೋಮಶೇಖರ್, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಪ್ರೀತಿ ಗೆಹ್ಲೋಟ್, ನಗರ ಪಾಲಿಕೆಗಳ ಆಯುಕ್ತರಾದ ರಮೇಶ್ ಡಿ.ಎಸ್, ಕೆ.ಎನ್ ರಮೇಶ್, ಪೊಮ್ಮಲ ಸುನೀಲ್ ಕುಮಾರ್, ರಾಜೇಂದ್ರ ಕೆ.ವಿ, ಅಪರ ಆಯುಕ್ತೆ (ಅಭಿವೃದ್ಧಿ)ಲತಾ ಮತ್ತಿತರ ಅಧಿಕಾರಿಗಳು ಇದ್ದರು.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸಇಂ - 1/ ಟೆಂಡರು/2025-26/3097 ದಿನಾಂಕ 02/09/2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-ರಾಜ್ಯ ಹೆದ್ದಾರಿ ನಿರ್ವಹಣೆ ಅಡಿ 6 ಕಾಮಗಾರಿಗಳು ಮತ್ತು ಲೆಕ್ಕ ಶೀರ್ಷಿಕ 3054-ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 10 ಕಾಮಗಾರಿಗಳು, ಹೀಗೆ ಒಟ್ಟು 16 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 4.80 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 58.80 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ

ಗುತ್ತಿಗೆ ಪಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1) ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 10-09-2025 (ಸಾಯಂಕಾಲ 5.30 ಗಂಟೆಯವರೆಗೆ)
2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 12-09-2025 (ಸಾಯಂಕಾಲ 5.00 ಗಂಟೆಯವರೆಗೆ)
3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 15-09-2025 (ಸಾಯಂಕಾಲ 4.30 ಗಂಟೆಗೆ)
4) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ
5) ಯಾವುದೇ ಗುತ್ತಿಗೆ ಅಂತಿಮ ದಿನಾಂಕದೆದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಕಾರ್ಯನಿರ್ವಾಹಕ ಇಂಜಿನೀಯರರು
ಲೋಕೋಪಯೋಗಿ ಇಲಾಖೆ,
ವಿಭಾಗ ಚಿಕ್ಕೋಡಿ.
DIPR/ BGM/ RO-NO- 934-2025-26

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ
ಬೆಂಗಳೂರು ನಗರ ಜಿಲ್ಲೆ-562157, ದೂರವಾಣಿ:-080-23901864
Email:-itstaff.ulb.hmhalli@gmail.com Web:- hunasamaranahallitown.mrc.gov.in
ನಂ:ಪುಸಹು/ಆ.ಶಾ/ಪ.ಅ/ಸಿ.ಆರ್/12/2024-25 ದಿನಾಂಕ:- 02.09.2025

ಆಸಕ್ತಿ ಅಭಿವ್ಯಕ್ತಿಗಾಗಿ ಆಹ್ವಾನ(Invitation for Expression of Interest)

ಹುಣಸಮಾರನಹಳ್ಳಿ ಪುರಸಭೆಯಲ್ಲಿ ಸ್ವಚ್ಛ ಭಾರತ ಅಭಿಯಾನ 2.0 ಯೋಜನೆಯಡಿಯಲ್ಲಿ 3 ವರ್ಷಗಳ ಅವಧಿಗೆ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ (IEC) ಚಟುವಟಿಕೆ ಕೈಗೊಳ್ಳಲು ಸ್ವಸಹಾಯ ಗುಂಪುಗಳ (SHG) ಸದಸ್ಯರನ್ನು Community Mobiliser ಎಂಬುವುದಾಗಿ ನೇಮಕಾತಿ ಮಾಡಿಕೊಳ್ಳಲು ಈ ಮೂಲಕ ಆಸಕ್ತಿಯ ಅಭಿವ್ಯಕ್ತಿ ಆಹ್ವಾನಿಸಲಾಗಿದೆ.

ಸರ್ಕಾರದಿಂದ ನೋಂದಾಯಿತ ಸ್ವಸಹಾಯ ಗುಂಪುಗಳ ಸದಸ್ಯರಾಗಿದ್ದು, ಕನಿಷ್ಠ ಗಣಕಯಂತ್ರದಲ್ಲಿ M.S Excel ಹಾಗೂ M.S Office ಮೂಲಕ ದಾಖಲೀಕರಣ ಅನುಭವ ಹೊಂದಿರುವವರು ಅಭಿವ್ಯಕ್ತಿ ಸಲ್ಲಿಸಲು ಅರ್ಹರಾಗಿರುತ್ತಾರೆ. ವಿವರವಾದ TOR, ಆಯ್ಕೆ ಪ್ರಕ್ರಿಯೆ, ಸಂಭಾವನೆ ಹಾಗೂ ಅರ್ಜಿಯ ನಮೂನೆಯನ್ನು https://www.hunasamaranahallitown.mrc.gov.in ಜಾಲತಾಣದಲ್ಲಿ ಲಭ್ಯವಿರುತ್ತದೆ.

ಆಸಕ್ತರು ಅವಶ್ಯಕ ದಾಖಲೆಗಳನ್ನು ಲಗತ್ತಿಸಿ, ನಿಗದಿತ ನಮೂನೆಯಲ್ಲಿ "ಆಸಕ್ತಿಯ ಅಭಿವ್ಯಕಿ" ಅರ್ಜಿಯನ್ನು **ದಿನಾಂಕ:- 10/09/2025 ರಂದು ಸಾಯಂಕಾಲ 5.00 ಗಂಟೆಯೊಳಗಾಗಿ** ಇ-ಮೇಲ್ ವಿಳಾಸ **Ka.hunasamaranahalli.tmc@gmail.com** ಮೂಲಕ ಸಲ್ಲಿಸತಕ್ಕದ್ದು. ಹಾಗೂ ಒಂದು ಪ್ರತಿಯನ್ನು ಪುರಸಭೆಯ ಆರೋಗ್ಯ ವಿಭಾಗಕ್ಕೆ ಸಲ್ಲಿಸುವುದು, ಅರ್ಜಿಯೊಂದಿಗೆ **1) ಗುರುತಿನ ಪುರಾವೆ, 2) ವಿಳಾಸ ಪುರಾವೆ, 3) SHG ನೋಂದಣಿ ಪುರಾವೆ** ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯ.

ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ಹುಣಸಮಾರನಹಳ್ಳಿ
ಸಹಿ/- ಮುಖ್ಯಾಧಿಕಾರಿ ಪುರಸಭೆ, ಹುಣಸಮಾರನಹಳ್ಳಿ
ವಾಸಸಂಇ/ವಾ.ಪ್ರ./2622/ಎಸ್‌ಎಸ್‌ಸಿ/2025-26

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ-2271200, 2272200, ಫ್ಯಾಕ್ಸ್: 2275106, ಇ-ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ:ಆಶಾ/ಸಿಆರ್-04/2025-26 ದಿನಾಂಕ: 01.09.2025

ಅಲ್ಪಾವಧಿ ಟೆಂಡರ್/ಮರು ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್2000ರ ನಿಯಮದಂತೆಈ ಕೆಳಕಂಡ ವಿವಿಧ ಕಾಮಗಾರಿಗೆ ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ಮಾಹಿತಿಯನ್ನು kppp.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	ತುಮಕೂರು ಮಹಾನಗರ ಪಾಲಿಕೆ ವಾರ್ಡ-01 ರಿಂದ 10ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	25.00
2	ತುಮಕೂರು ಮಹಾನಗರ ಪಾಲಿಕೆ ವಾರ್ಡ-11 ರಿಂದ 20ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	19.00
3	ತುಮಕೂರು ಮಹಾನಗರ ಪಾಲಿಕೆ ವಾರ್ಡ-21 ರಿಂದ 30ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	23.00
4	ತುಮಕೂರು ಮಹಾನಗರ ಪಾಲಿಕೆ ವಾರ್ಡ-31 ರಿಂದ 35ರವರೆಗೆ ಉದ್ಯಾನವನಗಳ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ	34.00
5	ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಟವಾಡಿ ಸರ್ವೀಸ್ ರಸೆ ಪ್ರಾರಂಭದಿಂದ ಬಾಲಗಂಗಾಧರನಾಥ ಸ್ವಾಮಿ ವೃತ್ತದವರೆಗೆ ವಿಭಜಕಗಳಲ್ಲಿ ಅಲಂಕಾರಿಕಾ /ಹೂ ಗಿಡಗಳನ್ನು ನೆಟ್ಟು ಪೋಷಿಸುವ ಕಾಮಗಾರಿ	50.50
6	ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅಶೋಕ ರಸ್ತೆ, ಜೆ.ಸಿ ರಸ್ತೆ, ಶಿರಾ ಮುಖ್ಯರಸ್ತೆ, ಬಟವಾಡಿ ಸರ್ವೀಸ್ ರಸ್ತೆಗಳ ವಿಭಜಕಗಳಲ್ಲಿ ಅಲಂಕಾರಿಕಾ /ಹೂ ಗಿಡಗಳನ್ನು ನೆಟ್ಟು ಪೋಷಿಸುವ ಕಾಮಗಾರಿ	66.50

ಅಲ್ಪಾವಧಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ :

1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 01.09.2025 ರಿಂದ 08.09.2025 ರವರೆಗೆ. 2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: 08.09.2025 ರಂದು ಸಾಯಂಕಾಲ 4.30 ಗಂಟೆವರೆಗೆ. 3. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 09.09.2025 ಸಾಯಂಕಾಲ 4.45 ಗಂಟೆಗೆ.

ಸಹಿ/-ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.
DIPR/TUM/289/KSMCA/2025-26

...ಅನುಮೋದನೆ?

← ಮೊದಲಪುಟದಿಂದ

ನಾಲ್ಕು ಅಂತಸ್ತಿನಲ್ಲಿ ಮೊದಲ ಮಹಡಿಯಲ್ಲಿ ಕೋರ್ಟ್ ಹಾಲ್, ಆಯುಕ್ತರ ಕಚೇರಿ, ಸರ್ವೆ ಇಲಾಖೆ ಇರಲಿದ್ದು, ಎರಡನೇ ಮಹಡಿಯಲ್ಲಿ ಆಗಮ ಸೆಕ್ಷನ್ ಅಧಿಕಾರಿ, ಐಟಿ, ಎಂಜಿನಿಯರಿಂಗ್ ವಿಭಾಗ, ಸಭಾಂಗಣ, ಎಚ್‌ಕ್ಯೂ ಒನ್ ಕೊಠಡಿ ಇರಲಿದೆ. ಮೂರನೇ ಮಹಡಿಯಲ್ಲಿ ಓಪನ್ ಆಫೀಸ್, ಸೂಪರಿಂಟೆಂಡೆಂಟ್ ಕಚೇರಿಗಳು, ಡಿಜಿಟಲ್ ಗ್ರಂಥಾಲಯ, ಆರ್‌ಡಿಪಿಆರ್, ದಾಖಲೆ ಕೊಠಡಿ ಇರಲಿದ್ದು, 4ನೇ ಮಹಡಿಯಲ್ಲಿ ಆಡಿಟೋರಿಯಂ ನಿರ್ಮಿಸಲು ತೀರ್ಮಾನಿಸಲಾಗಿದೆ. ಸಂಪುಟದಲ್ಲಿ ನೀಲನಕ್ಷೆ ಅಂತಿಮಗೊಳಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಅವಹೇಳನಕಾರಿ ಹೇಳಿಕೆ: ಕೇಸ್

ದಾವಣಗೆರೆ: ಎಸ್ಪಿಯನ್ನು ನಾಯಿಗೆ ಹೋಲಿಸಿ ಅವಮಾನ ಮಾಡಿದ ಆರೋಪದ ಮೇರೆಗೆ ಹರಿಹರದ ಬಿಜೆಪಿ ಶಾಸಕ ಬಿ.ಪಿ. ಹರೀಶ್ ವಿರುದ್ಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಬುಧವಾರ ಪ್ರಕರಣ ದಾಖಲಾಗಿದೆ. ಶಾಸಕರು ನನ್ನ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಎಸ್ಪಿ ಉಮಾ ಪ್ರಶಾಂತ್ ಠಾಣೆಗೆ ದೂರು ನೀಡಿದ್ದರು. ಇದನ್ನು ಆಧರಿಸಿ ಭಾರತೀಯ ನ್ಯಾಯ ಸಂಹಿತೆಯ ಕಾಲಂ 79 ಹಾಗೂ 132 ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಚಾರ ಸಣ್ಣದಲ್ಲ

ಸಚಿವರ ಹೆಸರಿನಲ್ಲಿ 27 ಲಕ್ಷ ರು.ವಂಚನೆ

ಮೈಸೂರು: ಸಚಿವ ಎಚ್.ಸಿ ಮಹದೇವಪ್ಪ ಅವರ ಹೆಸರಿನಲ್ಲಿ ಖತರ್ನಾಕ್ ಮಹಿಳೆಯೊಬ್ಬಳು 27 ಲಕ್ಷ ರು. ವಂಚಿಸಿರುವ ಘಟನೆ ಜಿಲ್ಲೆಯ ಟಿ. ನರಸೀಪುರ ತಾಲೂಕಿನ ಕೊಳತ್ತೂರು ಗ್ರಾಮದಲ್ಲಿ ನಡೆದಿದೆ. ಇದೇ ಗ್ರಾಮದ ಜ್ಯೋತಿ ಎಂಬ ಮಹಿಳೆ, ಸರಕಾರದ ವಿವಿಧ ಯೋಜನೆಗಳ ಸವಲತ್ತು ಹಾಗೂ ಸಾಲ ಕೊಡಿಸುವುದಾಗಿ ನಂಬಿಸಿ ನೂರಾರು ಮಹಿಳೆಯರು ಮತ್ತು ಯುವಕರಿಂದ ಲಕ್ಷಾಂತರ ರು. ಹಣ ಪಡೆದು ವಂಚಿಸಿದ್ದಾಳೆ . ಬರೋಬ್ಬರಿ 27 ಲಕ್ಷ ರು. ವರೆಗೆ ಹಣ ವಂಚನೆ ಮಾಡಿದ್ದಾಳೆ. ವಂಚನೆಗೊಳಗಾದ ಗ್ರಾಮಸ್ಥರು ತಲಕಾಡು ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಿದ್ದು, ನ್ಯಾಯ ಕೊಡಿಸುವಂತೆ ಪೋಲೀಸರಿಗೆ ಮೊರೆ ಇಟ್ಟಿದ್ದಾರೆ. ಪೊಲೀಸರು ತನಿಖೆಗೆ ತಯಾರಿ ನಡೆಸಿದ್ದಾರೆ.

ಆಲಮಟ್ಟಿ ಡ್ಯಾಮ್‌ಗೆ ಸೆ.6ಕ್ಕೆ ಸಿಎಂ ಬಾಗಿನ

ಆಲಮಟ್ಟಿ: ಉತ್ತರ ಕರ್ನಾಟಕದ ರೈತರ ಜೀವನಾಡಿ ಆಲಮಟ್ಟಿ ಜಲಾಶಯ ಬಹುತೇಕ ಭರ್ತಿಯಾಗಿದ್ದು, ಇಲ್ಲಿಯ ಕೃಷ್ಣೆಯ ಜಲಧಿಗೆ ಮುಖ್ಯಮಂತ್ರಿ, ಸಿದ್ದರಾಮಯ್ಯ ಸೆ.6ರಂದು ಬಾಗಿನ ಅರ್ಪಿಸುವ ಸಾಧ್ಯತೆ ಇದೆ ಎಂದು ಆಲಮಟ್ಟಿ ಅಣೆಕಟ್ಟು ವಲಯ ಮುಖ್ಯಎಂಜಿನಿಯರ್ ಡಿ.ಬಸವರಾಜ ತಿಳಿಸಿದ್ದಾರೆ. ಸೆ.18 ರಂದು ವಿಜಯಪುರದಲ್ಲಿ ರಾಜ್ಯ ಸರಕಾರದ ಸಚಿವ ಸಂಪುಟ ಸಭೆಯೂ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ. ಒಂದು ವೇಳೆ ಸಚಿವ ಸಂಪುಟ ಸಭೆ ನಿಗದಿಯಾದರೆ, ಆ ದಿನವೇ ಬಾಗಿನ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.

ವಿದ್ಯುತ್ ತಗುಲಿ ಯುವಕ ಸಾವು

ವಿಜಯಪುರ: ನಗರದಲ್ಲಿ ಮಂಗಳವಾರ ತಡರಾತ್ರಿ ಗಣಪತಿ ವಿಸರ್ಜನಾ ಮೆರವಣಿಗೆ ವೇಳೆ ವಿದ್ಯುತ್ ಅವಘಡ ಸಂಭವಿಸಿ ಯುವಕನೊಬ್ಬ ಸಾವಿಗೀಡಾಗಿದ್ದು, ಇಬ್ಬರು ಗಾಯಗೊಂಡಿದ್ದಾರೆ. ರಾಮಪ್ರಸಾದ ಗಲ್ಲಿ ನಿವಾಸಿಯಾಗಿದ್ದ ಶಿವಾಜಿ ಅಲಿಯಾಸ್ ಶುಭಂ ಸಕ್ಪಾಲ್(21) ವಿದ್ಯುತ್ ತಗುಲಿ ಸಾವಿಗೀಡಾಗಿದ್ದಾರೆ. ಲಖನ್ ಚವ್ಹಾಣ ಮತ್ತು ಪ್ರಭು ಜಗತೆ ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಮರಾಠ ಸಮಾಜದಿಂದ ಡೋಬಳೆ ಗಲ್ಲಿಯಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನೆ ವೇಳೆ ದುರಂತ ಸಂಭವಿಸಿದ್ದು, ಗಾಂಧಿಚೌಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂದು ಬರಪುರ, ಇಂದು ಹಸಿರು ವಿಜಯಪುರ | ಎಂ.ಬಿ.ಪಾಟೀಲ್ ದೂರದೃಷ್ಟಿಯ ಫಲ

ಹಸಿರು ತಬ್ಬಿದ ಬಿಸಿಲನಾಡು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಸಿರ ಬಡತನ ನೀಗಿ ಪರಿಸರದ ಸಿರಿತನ ಹೊಂದಿರುವ ವಿಜಯಪುರ ಜಿಲ್ಲೆ ಹಸಿರುಮಯ ಪ್ರಾಂತ್ಯವಾಗಿ ಹೊರಹೊಮ್ಮಿದೆ. ಸಿಲಿಕಾನ್ ಸಿಟಿಯಲ್ಲಿರುವ ಲಾಲ್‌ಬಾಗ್, ಕಬ್ಬನ್‌ಪಾರ್ಕ್‌ನಂತೆ ಹಸಿರುಮಯ ವಾತಾವರಣ ವಿಜಯಪುರದಲ್ಲಿ ನಿರ್ಮಾಣವಾಗಿದೆ.



25 ದಶಕಗಳ ಹಿಂದೆ ಪಂಚನದಿಗಳ ಬೀಡು, ಉತ್ತರದ ಪಂಜಾಬ್ ಎಂದೇ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದ ವಿಜಯಪುರ ಜಿಲ್ಲೆ ಮಳೆ ಪ್ರಮಾಣ ಕಡಿಮೆಯಾದ ನಂತರ ಭೀಕರ ಬರಕ್ಕೆ ತುತ್ತಾಗುತ್ತಾ ಬಂದಿದೆ. ಇದನ್ನು ಅಳಿಸಲು ಶೇ.0.17ರಷ್ಟಿರುವ ಅರಣ್ಯ ಪ್ರದೇಶವನ್ನು ಕನಿಷ್ಠ ಶೇ.3ಕ್ಕೆರಿಸಲು ವಿಜಯಪುರ ಜಿಲ್ಲೆ ಕೋಟಿ ವೃಕ್ಷ ಅಭಿಯಾನ ಹಮ್ಮಿಕೊಂಡಿದ್ದರಿಂದಾಗಿ ಈಗ ಹಸಿರು ನಳನಳಿಸುತ್ತಿದೆ. 2016ರಲ್ಲಿಆರಂಭವಾದ ಕೋಟಿವೃಕ್ಷ ಅಭಿಯಾನ ಫಲಭ್ರದಗೊಂಡಿದ್ದು, 15 ದಶಲಕ್ಷ ಸಸಿಗಳನ್ನು ನೆಡಲಾಗಿದೆ. ಕರ್ನಾಟಕದ ಒಟ್ಟಾರೆ ಅರಣ್ಯ ಪ್ರದೇಶವು ಸುಮಾರು ಶೇಕಡಾ 20 ರಷ್ಟಿತ್ತು. ಅಂದು ರಾಜ್ಯ ಜಲಸಂಪನ್ಮೂಲ ಸಚಿವರಾಗಿದ್ದ ಎಂ.ಬಿ. ಪಾಟೀಲ್, ವಿಜಯಪುರದಲ್ಲಿ ಕೇವಲ ಶೇ. 0.17 ರಷ್ಟು ಅರಣ್ಯ ಪ್ರದೇಶವಿದೆ ಎಂದು ಅರಣ್ಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಪಾಟೀಲ್ ಅರಣ್ಯ ಅಧಿಕಾರಿಗಳು ಮತ್ತು ಇತರ ಪ್ರಕೃತಿ ಪ್ರಿಯರೊಂದಿಗೆ ಸೇರಿ ಒಂದು ಯೋಜನೆಯನ್ನು ರೂಪಿಸಿದರು.

ಸಾರ್ವಜನಿಕ-ಖಾಸಗಿ ಸಹಭಾಗಿತ್ವವು ಅರಣ್ಯ ಪ್ರದೇಶ ವಿಸ್ತರಿಸಲು ಸುಮಾರು ಎರಡು ಶತಕೋಟಿ ರುಪಾಯಿಗಳನ್ನು (ಸುಮಾರು 22 ಮಿಲಿಯನ್) ಹೂಡಿಕೆ ಮಾಡಲಾಗಿತ್ತು. ಲಾಭರಹಿತ ಸಂಸ್ಥೆಗಳನ್ನು ಒಗ್ಗೂಡಿಸಲಾಯಿತು. ಮುಂದಿನ 10 ರಿಂದ 15 ವರ್ಷಗಳಲ್ಲಿ ಲಕ್ಷಾಂತರ ಮರಗಳನ್ನು ನೆಡಲು ಅರಣ್ಯ ಅಧಿಕಾರಿಗಳು ಭೂಮಿಯನ್ನು ಗುರುತಿಸಿದರು. 14 ಸರಕಾರಿ ನರ್ಸರಿಗಳು ಸಸಿಗಳನ್ನು ಒದಗಿಸಿದವು. ವಿಜಯಪುರ ಜಿಲ್ಲೆಯನ್ನು ಹಸಿರುಮಯವನ್ನಾಗಿಸಲು ಪಣತೊಟ್ಟ ಸಚಿವ ಎಂ.ಬಿ.ಪಾಟೀಲ್ ಅವರು, ಇಡೀ ಭಾರತ ದೇಶಕ್ಕೆ ಹಸಿರು ಪ್ರಾಂತ್ಯವನ್ನಾಗಿ ವಿಜಯಪುರ ಜಿಲ್ಲೆಯನ್ನು ಪರಿಚಯಿಸಿದ್ದಾರೆ.

ನರ್ಸರಿಗಳು ಆಲದ ಮರದಿಂದ ಹುಣಸೆ ಹಣ್ಣಿನ ವರೆಗೆ ಈ ಪ್ರದೇಶಕ್ಕೆ ಸ್ಥಳೀಯವಾದ 200 ಕ್ಕೂ ಹೆಚ್ಚು ಮರ ಪ್ರಭೇದಗಳನ್ನು ಬೆಳೆಸಿದವು. ಆದರೆ ಕೆಲವು ರೈತರು ಲಾಭದಾಯಕವಲ್ಲದ ಸಸಿ ಪ್ರಭೇದಗಳನ್ನು ನೆಡಲು ಹಿಂಜರಿಯುತ್ತಿದ್ದರು. ರೈತರ ಮನವಿಯನ್ನು ಪರಿಗಣಿಸಿ ಸರಕಾರವು, ಮಾವು, ಬೇವು ಮತ್ತು ವ್ಯಾಪಾರ ಮಾಡಲಾಗುವ ಹಣ್ಣುಗಳನ್ನು ಹೊಂದಿರುವ ಇತರ ಮರ ಪ್ರಭೇದಗಳನ್ನು ಬೆಳೆಸಲು ಪ್ರಾರಂಭಿಸಿತು. ಮರಗಳಿಂದಾಗಿ ಬರೆ ನೀಗಿಸಿದಲ್ಲದೆ ಬತ್ತಿ ಹೋಗಿದ್ದ ನದಿಗಳು ನಳಿ ನಳಿಸುವಂತಾಯಿತು. ನದಿ ನೀರನ್ನು ಬೇರೆಡೆಗೆ ತಿರುಗಿಸಲು ಕಾಲುವೆಗಳು ಮತ್ತು ಎತ್ತರದ ನಾಲೆಗಳನ್ನು ನಿರ್ಮಿಸಲಾಯಿತು. ಇದು ಅಂತರ್ಜಲ ಮಟ್ಟವನ್ನು ಮತ್ತು ಮೂಲಭೂತ ಸಂಪನ್ಮೂಲವಾದ ಕುಡಿಯುವ ನೀರಿನ ಲಭ್ಯತೆಯನ್ನು ಸುಧಾರಿಸಿತು. ಅಲ್ಲದೆ ಅಳಿವಿನಂಚಿನಲ್ಲಿರುವ ಕೃಷ್ಣಮೃಗಗಳು, ಚಿರತೆಗಳು, ಹಾವುಗಳು ಮತ್ತು ಹಲವಾರು ಜಾತಿಯ ಪಕ್ಷಿಗಳು ವಿಜಯಪುರ ಅರಣ್ಯ ಪ್ರದೇಶಗಳಲ್ಲಿ ಕಾಣಬಹುದಾಗಿದೆ.

ಅರಣ್ಯ ಪ್ರದೇಶದ ವಿಸ್ತರಣೆಯಿಂದಾಗಿ ಈಗ ವಿಜಯಪುರದ ಉತ್ತರ ತುದಿಯಿಂದ ದಕ್ಷಿಣ ಪ್ರದೇಶದ ಗ್ರಾಮೀಣ ಹೊರವಲಯದವರೆಗೆ ಹಸಿರು ಹೊದಿಕೆಯಾಗಿದೆ. ರಾಜ್ಯ ಸರಕಾರದ ಅಂಕಿಅಂಶಗಳ ಪ್ರಕಾರ, 2017 ರಿಂದ 2023 ರವರೆಗೆ ವಿಜಯಪುರ ಪ್ರದೇಶದಲ್ಲಿ ತಾಪಮಾನ ಗಣನೀಯವಾಗಿ ಇಳಿಕೆಯಾಗಿದೆ.

- ಎಂ.ಬಿ. ಪಾಟೀಲ್‌ರ ದೂರದೃಷ್ಟಿಯಿಂದ ವಿಜಯಪುರ ಜಿಲ್ಲೆ ಇಡೀ ದೇಶಕ್ಕೆ ಮಾದರಿ
- ಕೋಟಿ ವೃಕ್ಷ ಅಭಿಯಾನದಿಂದ ಹಸಿರ ಬಡತನ ನೀಗಿ ಪರಿಸರದ ಸಿರಿತನ ಹೊಂದಿದ ವಿಜಯಪುರ
- ಭೂತನಾಳ ಕೆರೆ ಅಭಿವೃದ್ಧಿ ಮಾಡಿ ವಿಜಯಪುರ ನಗರದ ಐದು ಲಕ್ಷ ನಿವಾಸಿಗಳಿಗೆ ನೀರಿನ ಸೌಲಭ್ಯ
- 2016 ರಿಂದ ಕೋಟಿವೃಕ್ಷ ಅಭಿಯಾನದ ಮೂಲಕ 15 ದಶಲಕ್ಷ ಸಸಿಗಳ ನೆಟ್ಟು ಪೋಷಣೆ

ಕೋಟಿ ವೃಕ್ಷ ಅಭಿಯಾನದಿಂದ ಶುದ್ಧಗಾಳಿ: ವಿಜಯಪುರ ಪ್ರಥಮ

ಒಂದು ಕಾಲದಲ್ಲಿ 'ಧೂಳಿನಪುರ' ಎಂದು ಕುಖ್ಯಾತಿ ಗಳಿಸಿದ್ದ ನಮ್ಮ ವಿಜಯಪುರ, ಇಂದು ಶುದ್ಧಗಾಳಿಯಲ್ಲಿ ರಾಜ್ಯಕ್ಕೆ ನಂಬರ್ 1 ಸ್ಥಾನದಲ್ಲಿದೆ ಎಂಬುದು ಹರ್ಷದ ಸಂಗತಿ. ವಿಜಯಪುರ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳ ಸಮರ್ಪಕ ಅನುಷ್ಠಾನದಿಂದ ಕೃಷಿ ಚಟುವಟಿಕೆಗಳು ನಿರಂತರವಾಗಿವೆ. ದೂರದೃಷ್ಟಿ ವಹಿಸಿ ಕೈಗೊಂಡ ಕೋಟಿ ವೃಕ್ಷ ಅಭಿಯಾನವು ಶುದ್ಧಗಾಳಿ ಉತ್ಪಾದನೆಗೆ ಮಹತ್ವದ ಕೊಡುಗೆ ನೀಡುತ್ತಿದೆ.

ಬರ ನೀಗಿ ನೀರಿನಿಂದ ತುಂಬಿ ತುಳುಕುತ್ತಿದೆ ವಿಜಯಪುರ

2016 ರಿಂದ, ವಿಜಯಪುರ ನಗರದ ಐದು ಲಕ್ಷ ನಿವಾಸಿಗಳು ಬೇಸಿಗೆಯಲ್ಲೂ ಸಹ 24★7 ನೀರಿನ ಸೌಲಭ್ಯ ಪಡೆಯುತ್ತಿದ್ದಾರೆ. ಭೂತನಾಳ ಕೆರೆ ಹಾಗೂ ಕೃಷ್ಣಾ ನದಿ, ಆಲಮಟ್ಟಿ ಅಣೆಕಟ್ಟಿನ ಜಲಾಶಯದ ನೀರಿನಿಂದ ತುಂಬಿರುವುದು ಇದಕ್ಕೆ ಕಾರಣ. 1570 ರಲ್ಲಿ ನಿರ್ಮಿಸಲಾದ ಚಾಂದ್ ಬಾವಡಿ ಮತ್ತು 1620 ರಲ್ಲಿ ನಿರ್ಮಿಸಲಾದ ತಾಜ್ ಬಾವಡಿ ಜಲಮೂಲಗಳು ತುಂಬಿವೆ. ಸ್ವಚ್ಛಗೊಳಿಸಲ್ಪಟ್ಟಿದ್ದು, ಅವುಗಳ ವಾಸ್ತುಶಿಲ್ಪದ ವೈಭವವನ್ನು ಪುನಃಸ್ಥಾಪಿಸಲಾಗಿದೆ. ಜತೆಗೆ, ವಿಜಯಪುರ ಜಿಲ್ಲೆ ಮತ್ತು ನೆರೆಯ ಬಾಗಲಕೋಟೆ ಜಿಲ್ಲೆಯ ಬಹುತೇಕ ಎಲ್ಲಾ ಹಳ್ಳಿಗಳಲ್ಲಿ ಮತ್ತು ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಯಲ್ಲಿರುವ ಬೆಳಗಾವಿ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರು ಕಲ್ಪಿಸಲಾಗಿದೆ. ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟು ಜಲಾಶಯಗಳಿಂದ ನೀರನ್ನು ಒದಗಿಸಲಾಗುತ್ತಿದೆ. ವಿಜಯಪುರಕ್ಕೆ ನೀರು ತರುವ ಪ್ರಯತ್ನದ ಮೂಲಕತ್ರ ಹಿರಿಯ ಕಾಂಗ್ರೆಸ್ ರಾಜಕಾರಣಿ ಎಂ.ಬಿ. ಪಾಟೀಲ್ ಅವರು. ಇವರ ದೂರದೃಷ್ಟಿಯಿಂದ ವಿಜಯಪುರ ಜಿಲ್ಲೆ ಇಡೀ ದೇಶಕ್ಕೆ ಮಾದರಿಯಾಗಿದ್ದು, ಹೆಗ್ಗಳಿಕೆ ಪಾತ್ರವಾಗಿದೆ.

ದರ್ಶನ್ ಮಾದರಿಯಲ್ಲೇ ಫಯಾಜ್ ಜಾಮೀನಿಗೆ ಮನವಿ

ನೇಹಾ ಹತ್ಯೆ: ಜಾಮೀನು ವಜಾ

ಧಾರವಾಡ: ರಾಜ್ಯದಲ್ಲಿ ತೀವ್ರ ಸಂಚಲನ ಸೃಷ್ಟಿಸಿದ್ದ ಹುಬ್ಬಳ್ಳಿಯ ನೇಹಾ ಹಿರೇಮಠ ಹತ್ಯೆಯ ಆರೋಪಿ ಫಯಾಜ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಧಾರವಾಡ ಹೈಕೋರ್ಟ್ ಪೀಠವು ಬುಧವಾರ ವಜಾಗೊಳಿಸಿದೆ.

ಫಯಾಜ್‌ನ ಬಂಧನ ಪ್ರಕ್ರಿಯೆ ಸರಿಯಾಗಿ ನಡೆಸಿಲ್ಲ, ಬಂಧನಕ್ಕೆ ಸಂಬಂಧಿಸಿದಂತೆ ಆತನ ಪೋಷಕರಿಗೆ ಯಾವುದೇ ಮಾಹಿತಿ ನೀಡಿಲ್ಲ. ಅಲ್ಲದೆ, ಪೊಲೀಸರು ಈ ಪ್ರಕರಣದಲ್ಲಿ ಸರಿಯಾದ ಸಾಕ್ಷಿ ಮತ್ತು ಆಧಾರಗಳನ್ನು ಸಂಗ್ರಹಿಸಿಲ್ಲ, ಹೀಗಾಗಿ ಫಯಾಜ್‌ಗೆ ಜಾಮೀನು ನೀಡಬೇಕು ಎಂದು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಲವು ಪ್ರಮುಖ ಅಂಶ ಗಳನ್ನು ಮುಂದಿಟ್ಟು ವಾದ ಮಂಡಿಸಿದ್ದರು.

2024 ಏ.18 ರಂದು ಹುಬ್ಬಳ್ಳಿಯಲ್ಲಿ ಕಾಲೇಜು ಆವರಣದಲ್ಲಿಯೇ ಫಯಾಜ್ ನೇಹಾ ಹಿರೇಮಠನನ್ನು ಕೊಲೆ ಮಾಡಿದ್ದ. ಈತನ ಜಾಮೀನು ಅರ್ಜಿಯನ್ನು ಹುಬ್ಬಳ್ಳಿಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ತಿರಸ್ಕಾರ ಮಾಡಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಜಾಮೀನು ಅರ್ಜಿಯನ್ನು ಧಾರವಾಡ ಹೈಕೋರ್ಟ್ ಪೀಠವೂ ಇದೀಗ ವಿಚಾರಣೆ ಕೈಗೊಂಡು ತಿರಸ್ಕರಿಸಿದೆ. ಇದೇ ವೇಳೆ, ಇತ್ತೀಚೆಗೆ ಜಾಮೀನು ಪಡೆದಿದ್ದ ನಟ ದರ್ಶನ್ ಅವರ ಪ್ರಕರಣವನ್ನು ಉಲ್ಲೇಖಿಸಿ, ದರ್ಶನ್ ಮಾದರಿಯಲ್ಲಿ ನಮಗೂ ಜಾಮೀನು ನೀಡಿ ಎಂದು ವಾದ ಮಂಡಿಸಿದ್ದರು. ಆದರೆ, ನ್ಯಾಯಾಧೀಶರು ಸುದೀರ್ಘ ವಾದ-ಪ್ರತಿವಾದವನ್ನು ಆಲಿಸಿದ ನಂತರ ಫಯಾಜ್ನ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದಾರೆ.

ಉದಯ್ ಜೈನ್ ವಿಚಾರಣೆ

ಮಂಗಳೂರು: 2012ರ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಸೌಜನ್ಯ ಅವರ ಕುಟುಂಬದಿಂದ ಆರೋಪ ಎದುರಿಸುತ್ತಿರುವ ಉದಯ್ ಜೈನ್ ಬುಧವಾರ ಎಸ್‌ಐಟಿ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾದರು.

ಬೆಳ್ತಂಗಡಿಯಲ್ಲಿ ವಿಶೇಷ ತನಿಖಾ ತಂಡದ ಮುಂದೆ ಹಾಜರಾದ ಉದಯ್ ಜೈನ್ ಅಧಿಕಾರಿಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ. ಸೌಜನ್ಯ ಅವರ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಉದಯ್ ಜೈನ್ ಅವರ ವಿರುದ್ಧ ಆರೋಪ ಕೇಳಿಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗಾಗಿ ಎಸ್‌ಐಟಿ ನೀಡಿದ ಸಮನ್ಸ್ ನಂತರ ಜೈನ್ ಹಾಜರಾಗಿದ್ದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಎಫ್‌ಐಆರ್ ಕುರಿತು ಉದಯ್ ಜೈನ್ ಹೇಳಿದ್ದೇನು?

ಎಸ್‌ಐಟಿ ವಿಚಾರಣೆಗೆ ಹಾಜರಾದ ಉದಯ್ ಜೈನ್ ಸುದ್ದಿಗಾರರೊಂದಿಗೆ ಮಾತನಾಡಿ, ಬುಧವಾರ 11 ಗಂಟೆಗೆ ಕಚೇರಿಗೆ ಹಾಜರಾಗುವಂತೆ ಎಸ್‌ಐಟಿ ಅಧಿಕಾರಿಯೊಬ್ಬರು ದೂರವಾಣಿ ಕರೆ ಮಾಡಿ ತಿಳಿಸಿದ್ದರು. ಹಾಗಾಗಿ ಇಲ್ಲಿಗೆ ಬಂದಿದ್ದೇನೆ ಎಂದು ಹೇಳಿದರು. ಸೌಜನ್ಯ ಕೊಲೆ ಪ್ರಕರಣದ ಎಫ್‌ಐಆರ್ ನಲ್ಲಿ ನಮ್ಮ ಹೆಸರು ಇರಲಿಲ್ಲ. ಆದರೂ ನಮ್ಮನ್ನು ಆರೋಪಿಗಳನ್ನಾಗಿಸುವ ಷಡ್ಯಂತ್ರ ನಡೆದಿತ್ತು. ಸಿಬಿಐ ಮತ್ತು ಸಿಐಡಿ ಅಧಿಕಾರಿಗಳು ನಮ್ಮನ್ನು ವಿಚಾರಣೆಗೆ ಒಳಪಡಿಸಿದ್ದರು. ನಮ್ಮ ಮಂಪರು ಪರೀಕ್ಷೆಯನ್ನೂ ನಡೆಸಲಾಗಿತ್ತು. ಆ ಪ್ರಕರಣದಲ್ಲಿ ನಮ್ಮ ಪಾತ್ರ ಇಲ್ಲ ಎಂದು ಸಾಬೀತಾಗಿತ್ತು .ಅಂತೆಯೇ, ಈಗ ಎಸ್‌ಐಟಿಯವರು ಯಾವ ಪ್ರಕರಣ ಸಂಬಂಧ ವಿಚಾರಣೆಗೆ ಕರೆದಿದ್ದಾರೆ ಎಂದು ಗೊತ್ತಿಲ್ಲ. ನನ್ನಂತೆಯೇ, ಇನ್ನಿಬ್ಬರಿಗೂ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿಯವರು ಕರೆ ಮಾಡಿದ್ದಾರೆ. ನಾನು ಧೀರಜ್ ಕೆಲ್ಲ ಅವರಿಗೆ ಕರೆ ಮಾಡಿದ್ದೆ. ಆಗ ಅವರು ಈ ವಿಚಾರ ತಿಳಿಸಿದ್ದಾರೆ. ಎಸ್‌ಐಟಿಯವರು ಕರೆದಿದ್ದಾರೆ ಎಂದ ಮೇಲೆ ಅವರು ಕೂಡ ಬರಲೇಬೇಕಾಗುತ್ತದೆ ಅಲ್ಲವೇ' ಎಂದು ಉದಯ್ ಜೈನ್ ಹೇಳಿದರು.

ಗುಂಡು ಹಾರಿಸಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷನ ಕೊಲೆ

ಭೀಮಾತೀರದಲ್ಲಿ ಮತ್ತೆ ಗುಂಡಿನ ಸದ್ದು

ವಿಜಯಪುರ: ಜಿಲ್ಲೆಯ ಚಡಚಣ ತಾಲ್ಲೂಕಿನ ದೇವರನಿಂಬರಗಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಭೀಮನಗೌಡ ಬಿರಾದಾರ(40) ಅವರನ್ನು ಬುಧವಾರ ಗುಂಪೊಂದು ನಾಡ ಪಿಸ್ತೂಲ್‌ನಿಂದ ಗುಂಡು ಹಾರಿಸಿ, ಕೊಲೆ ಮಾಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಅದೇ ಗ್ರಾಮದ ವಾಸಿಂ ಮಣಿಯಾರ, ರಝಿವುಲ್ಲಾ ಮಕಾಂದರ್, ಮೌಲಸಾಬ ಬೋರಗಿ, ಫಿರೋಜ ಶೇಖ್ ಅವರಾದನನ್ನು ಬಂಧಿಸಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ. ಭೀಮನಗೌಡ ಬಿರಾದಾರ ಗ್ರಾಮದ ಕಟಿಂಗ್ ಶಾಪ್‌ವೊಂದರಲ್ಲಿ ಇದ್ದ ವೇಳೆ ಆರೋಪಿಗಳು ಅಂಗಡಿಗೆ ನುಗ್ಗಿ, ಕಣ್ಣಿಗೆ ಕಾರದ ಪುಡಿ ಎರಚಿ, ಬಳಿಕ ಮೂರ್ನಾಲ್ಕು ಸುತ್ತು ಗುಂಡು ಹಾರಿಸಿ ಕೊಲೆ ಮಾಡಿದ್ದಾರೆ ಎಂದು ಹೇಳಿದರು.

ಕೊಲೆಗೆ ಹಣಕಾಸು ವ್ಯವಹಾರ, ರಾಜಕೀಯ ಮತ್ತು ವೈಯಕ್ತಿಕ ಸೇರಿದಂತೆ ಹಲವು ಕಾರಣಗಳು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಭೀಮಾತೀರದ ಅಪರಾಧ ಪ್ರಕರಣಗಳಿಗೂ ಇದಕ್ಕೂ ಸಂಬಂಧ ಇರುವ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಲಭಿಸಿಲ್ಲ. ಕೊಲೆಗೆ ಸಂಬಂಧಿಸಿದಂತೆ ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುವುದು' ಎಂದರು. 2023ರಲ್ಲಿ ಗ್ರಾಮದ ಪಿಡಿಒ ಠಾರೋಡ ಎಂಬುವವರೊಂದಿಗೆ ಆರೋಪಿಗಳು ಕೆಲಸದ ವಿಷಯವಾಗಿ ಜಗಳವಾಡಿಕೊಂಡಿದ್ದರು. ಈ ವೇಳೆ ಆರೋಪಿಗಳ ವಿರುದ್ಧ ಜಾತಿ ನಿಂದನೆ ದೂರು ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಕೀರ್ ಮಣಿಯಾರ ಎಂಬಾತ ಜೈಲಿಗೆ ಹೋಗಿ ಬಂದಿದ್ದನು. ಈ ಪ್ರಕರಣದಲ್ಲೂ ಭೀಮನಗೌಡ ಬಿರಾದಾರನ ಪಾತ್ರ ಇದೆ ಎಂದು ಆರೋಪಿಸಿ ಈ ಹಿಂದೆ ಗಲಾಟೆ ಮಾಡಿ, ಜೀವ ಬೆದರಿಕೆ ಹಾಕಿದ್ದರು ಎಂದು ಆರೋಪಿಸಿ ಕೊಲೆಯಾದ ಬಿರಾದಾರ ಅವರ ಪತ್ನಿ ರಾಜಶ್ರೀ ಬಿರಾದಾರ ದೂರು ನೀಡಿದ್ದಾರೆ ಎಂದರು.

ಹಣ ವಾಪಸ್ ಕೊಟ್ಟಿರಲಿಲ್ಲ

ಬಿರಾದಾರ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದಾಗ ಆಶ್ರಯ ಯೋಜನೆ ಮನೆ ಕೊಡಿಸುವುದಾಗಿ ಹೇಳಿ ಆರೋಪಿ ಯೊಬ್ಬನಿಂದ 1 ಲಕ್ಷ ಹಣ ತೆಗೆದುಕೊಂಡಿದ್ದರು. ಆದರೆ, ಮನೆಯನ್ನು ಕೊಡಿಸಲಿಲ್ಲ, ಹಣವನ್ನು ವಾಪಸ್ ಕೊಟ್ಟಿರಲಿಲ್ಲ ಎಂಬ ಕಾರಣಕ್ಕೆ ಕೊಲೆ ಮಾಡಲಾಗಿದೆ ಎಂದು ಆರೋಪಿಯೊಬ್ಬ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ರಾಜಕೀಯ ವೈಷಮ್ಯಕ್ಕೆ ಬರ್ಬರ ಕೊಲೆ

ದೇವರ ನಿಂಬರಗಿ ಗ್ರಾಮ ಪಂಚಾಯಿತಿ ಆಡಳಿತ ಸುಮಾರು 10 ವರ್ಷಗಳಿಂದ ಕೊಲೆಯಾದ ಬಿರಾದಾರ ಅವರ ಹಿಡಿ ತದಲ್ಲಿ ಇತ್ತು. ಅಲ್ಲದೇ, ತೆರವಾಗಿರುವ ಅಧ್ಯಕ್ಷ ಸ್ಥಾನಕ್ಕೆ ಶೀಘ್ರದಲ್ಲೇ ನಡೆಯಲಿ ರುವ ಚುನಾವಣೆಯಲ್ಲೂ ಬಿರಾದಾರ ಬೆಂಬಲಿತರು ಅಧ್ಯಕ್ಷರಾಗುವ ಸಾಧ್ಯತೆ ಇತ್ತು. ರಾಜಕೀಯ ವೈಷಮ್ಯಕ್ಕೆ ಬಿರಾ ದಾರ ಕೊಲೆಯಾಗಿದೆ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ದಸರೆ: ಬಾನುಗೆ ಅಧಿಕೃತ ಆಹ್ವಾನ

ಹಾಸನ: ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಸರಕಾರದಿಂದ ಆಯ್ಕೆಯಾಗಿರುವ ಕನ್ನಡದ ಖ್ಯಾತ ಲೇಖಕಿ, ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ಮೈಸೂರು ಜಿಲ್ಲಾಡಳಿತ ಬುಧವಾರ ಅಧಿಕೃತ ಆಹ್ವಾನ ನೀಡಿತು.

ಮೈಸೂರಿನಿಂದ ಆಗಮಿಸಿದ ದಸರಾ ಆಚರಣೆ ವಿಶೇಷಾಧಿಕಾರಿ ಹಾಗೂ ಮೈಸೂರು ಜಿಲ್ಲಾಧಿಕಾರಿ ಡಾ. ಲಕ್ಷ್ಮಿಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿ ಶಿವರಾಜ್, ಚಾಮುಂಡಿ ದೇವಾಲಯದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ ರೂಪಾ, ಜಿ.ಪಂ ಸಿಇಒ ಯುಕೇಶ್ ಕುಮಾರ್, ಮೈಸೂರು ಪಾಲಿಕೆ ಆಯುಕ್ತ ತನ್ವಿರ್ ಆಸಿಫ್ ಅವರನ್ನೊಳಗೊಂಡ ಅಧಿಕಾರಿಗಳ ತಂಡ ಆಗಮಿಸಿ ಬಾನು ಮುಷ್ತಾಕ್ ಅವರಿಗೆ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಆನೆ ವಿಗ್ರಹ ನೀಡಿ ಆತ್ಮೀಯವಾಗಿ ಸನ್ಮಾನಿಸಿದ ನಂತರ ದಸರಾ ಆಹ್ವಾನ ಪತ್ರಿಕೆ ನೀಡಿ ತಾವು ಮೈಸೂರಿಗೆ ಆಗಮಿಸಿ, ನಾಡಹಬ್ಬಕ್ಕೆ ಶುಭ ಚಾಲನೆ ನೀಡಬೇಕು ಎಂದು ಮನವಿ ಮಾಡಿದರು.

ಸಂತೋಷದ ಸಮ್ಮತಿ: ಕುಟುಂಬ ಸಮೇತರಾಗಿ ದಸರಾ ಹಬ್ಬಕ್ಕೆ ಬರಬೇಕೆಂದು ಮೈಸೂರು ಡಿ.ಸಿ ಲಕ್ಷ್ಮಿಕಾಂತರೆಡ್ಡಿ ಆಹ್ವಾನಿಸಿದರು. ಈ ಆಹ್ವಾನವನ್ನು ಬಾನು ಮುಷ್ತಾಕ್ ಅವರು ಸಂತೋಷದಿಂದ ಒಪ್ಪಿಕೊಂಡರು. ಈ ಸಂದರ್ಭದಲ್ಲಿ ಬಾನು ಮುಷ್ತಾಕ್ ಅವರ ಪತಿ ಹಾಗೂ ಕುಟುಂಬ ಸದಸ್ಯರು ಹಾಜರಿದ್ದರು. ಈ ವೇಳೆ ಮಾತನಾಡಿದ ಬಾನು ಮುಷ್ತಾಕ್ ಅವರು, ದಸರಾ ಉದ್ಘಾಟನೆಗೆ ನನ್ನನ್ನು ಆಯ್ಕೆಮಾಡಿದ ಆರಂಭದಲ್ಲೇ ನಾನು ಅತೀವ ಸಂತೋಷ ವ್ಯಕ್ತಪಡಿಸಿದ್ದೆ. ಈಗ ಜಿಲ್ಲಾಡಳಿತದ ಇಡೀ ತಂಡ ಆಗಮಿಸಿ ನನಗೆ ಅಧಿಕೃತ ಆಹ್ವಾನ ನೀಡಿ ಸ್ವಾಗತ ನೀಡಿರುವುದು ಮತ್ತಷ್ಟು ಖುಷಿ ಹೆಚ್ಚು ಮಾಡಿದೆ ಎಂದರು. ಇದಕ್ಕಾಗಿ ರಾಜ್ಯ ಸರಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಡಿನ ಸಮಸ್ತ ಜನತೆಗೆ, ಮೈಸೂರು ಜಿಲ್ಲಾಡಳಿತಕ್ಕೆ ಅನಂತ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು.

ಕಡೆಯಲ್ಲಿ ದಸರಾ ಉದ್ಘಾಟನೆಗೆ ತಮ್ಮನ್ನು ಆಹ್ವಾನಿಸಲು ಬಂದಿದ್ದ ಅಧಿಕಾರಿಗಳಿಗೆ ತಮಗೆ ಬುಕರ್ ಪ್ರಶಸ್ತಿ ತಂದುಕೊಟ್ಟ ಎದೆಯ ಹಣತೆ ಪುಸ್ತಕಕ್ಕೆ ಶುಭ ನುಡಿ ಬರೆದು ಬಾನು ಮುಷ್ತಾಕ್ ಅವರು ನೀಡಿದರು.

ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟಕರಾಗಿ ಆಯ್ಕೆಯಾಗಿರುವ ಪ್ರತಿಷ್ಠಿತ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತೆ ಲೇಖಕಿ ಬಾನು ಮುಷ್ತಾಕ್ ಅವರಿಗೆ ಜಿಲ್ಲಾಡಳಿತದಿಂದ ಅಧಿಕೃತವಾಗಿ ಬುಧವಾರ ಆಮಂತ್ರಣ ನೀಡಲಾಯಿತು.

ಗೃಹಜ್ಯೋತಿ ಅನರ್ಹ ಗ್ರಾಹಕರಿಗೆ ಅನುಕೂಲ | ಬೆಸ್ಕಾಂ ವ್ಯಾಪ್ತಿಯಲ್ಲಿ 4 ಸಾವಿರಕ್ಕೂ ಹೆಚ್ಚು ಮನೆಗಳಿಗೆ ಸೋಲಾರ್ ಪ್ಯಾನೆಲ್

ಮನೆ ಬೆಳಗುವ ಸೂರ್ಯಘರ್‌ಗೆ ಹೆಚ್ಚಿದ ಆಸಕ್ತಿ

ಅಪರ್ಣಾ ಎ.ಎಸ್ ಬೆಂಗಳೂರು

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಯ ಫಲವಾಗಿ ಕೇಂದ್ರ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದ ಸೂರ್ಯ ಘರ್ ಯೋಜನೆ ನಿರೀಕ್ಷಿತ ಯಶಸ್ಸು ಸಿಕ್ಕಿಲ್ಲ ಎನ್ನುವ ಆರೋಪದ ಹೊರತಾಗಿಯೂ ಕಳೆದ ಮೂರು ನಾಲ್ಕು ತಿಂಗಳಲ್ಲಿ ಸೂರ್ಯಘರ್ ಯೋಜನೆಗೆ ವೇಗ ಸಿಕ್ಕಿದೆ ಎನ್ನುವುದು ಅಂಕಿ-ಅಂಶಗಳಿಂದ ಸಾಬೀತಾಗಿದೆ.

ನವೀಕರಿಸಬಹುದಾದ ಇಂಧನವನ್ನು ಬಳಸಿಕೊಂಡು ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಜಾರಿಗೊಂಡಿದ್ದ ಸೂರ್ಯಘರ್ ಯೋಜನೆಯಲ್ಲಿ ಸಬ್ಸಿಡಿ ದರದಲ್ಲಿ ಮನೆಗಳಿಗೆ ಸೋಲಾರ್ ಪ್ಯಾನೆಲ್ ಅಳವಡಿಸಲಾಗುತ್ತದೆ. ಆದರೆ ಆರಂಭದಲ್ಲಿ ಕರ್ನಾಟಕದಲ್ಲಿ ರಾಜ್ಯ ಸರಕಾರ ಜಾರಿಗೊಳಿಸಿರುವ 'ಗೃಹಜ್ಯೋತಿ' ಯೋಜನೆಯಿಂದ ಅನೇಕರು ಪ್ರಧಾನ ಮಂತ್ರಿ ಸೂರ್ಯಘರ್ ಯೋಜನೆಗೆ ಹೆಚ್ಚು ಆಸಕ್ತಿ ತೋರಿಸಿರಲಿಲ್ಲ. ಆದರೀಗ ಇಂಧನ ಇಲಾಖೆಯ ಸೂರ್ಯಘರ್ ಯೋಜನೆಯನ್ನು ಹೆಚ್ಚು ಜನರಿಗೆ ತಲುಪಿಸಲು ಜಾಗೃತಿ ಮೂಡಿಸಿದ ಪರಿಣಾಮ ಬೆಸ್ಕಾಂ ವ್ಯಾಪ್ತಿಯಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ನಿವಾಸಗಳಿಗೆ ಯೋಜನೆಯನ್ನು ತಲುಪಿಸಲಾಗಿದೆ.

ಆರಂಭಿಕ ಹಂತದಲ್ಲಿ ಕೇಳಿಬಂದಿದ್ದ ನಿರಾಸಕ್ತಿಯ ಹೊರತಾಗಿಯೂ ಸದ್ಯ ಸೂರ್ಯಘರ್ ಯೋಜನೆಗೆ ಭರ್ಜರಿ ಬೇಡಿಕೆ ಉಂಟಾಗಿದ್ದು, ರಾಜ್ಯದಲ್ಲಿ ಈ ಯೋಜನೆಯ ಅನುಷ್ಠಾನದಲ್ಲಿ ಪ್ರಗತಿ ಕಂಡು ಬಂದಿದೆ. ಅಧಿಕಾರಿಗಳ ಪ್ರಕಾರ, ಸೂರ್ಯಘರ್ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಸೌರಶಕ್ತಿ ಬಳಸಿ ವಿದ್ಯುತ್ ಉತ್ಪಾದಿಸುವ ಮೂಲಕ ನೈಸರ್ಗಿಕ ಸಂಪನ್ಮೂಲದ ಸದ್ಬಳಕೆ ಮತ್ತು ವಿದ್ಯುತ್ ಉತ್ಪಾದನೆಯ ಮೇಲಿನ ಅವಲಂಬನೆ ತಗ್ಗಿಸುವ ಪ್ರಮುಖ ಗುರಿ ಈ ಯೋಜನೆಯದ್ದಾಗಿದೆ. ಮನೆಯಲ್ಲಿಯೇ ವಿದ್ಯುತ್ ಉತ್ಪಾದಿಸಿ ಸರಕಾರಕ್ಕೆ ಮಾರಾಟ ಮಾಡುವ ವ್ಯವಸ್ಥೆಯೂ ಇದರಲ್ಲಿದೆ. ಸೂರ್ಯ ಘರ್ ಯೋಜನೆ ಬಗ್ಗೆ ಮತ್ತಷ್ಟು ಜಾಗೃತಿ ಮೂಡಿಸಿದರೆ ಇನ್ನೂ ಹಲವರು ಈ ಯೋಜನೆ ಲಾಭಪಡೆದುಕೊಳ್ಳಬಹುದಾಗಿದೆ.

ಗೃಹ ಜ್ಯೋತಿ ಇಲ್ಲದವರಿಂದ ಸೂರ್ಯಘರ್ ಅನುಷ್ಠಾನ: ರಾಜ್ಯ ಸರಕಾರದ ಗೃಹಜ್ಯೋತಿ ಯೋಜನೆಯೂ 200 ಯುನಿಟ್‌ಗೆ ಸೀಮಿತವಾಗಿರುವುದರಿಂದ ಈ ಯೋಜ ನೆಯ ಫಲಾನುಭವಿಗಳಾಗದವರು ಗಮನದಲ್ಲಿರಿಸಿ ಕೊಂಡು ಬೆಸ್ಕಾಂ ಸೂರ್ಯಘರ್ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಾಗಿದೆ. ಇದರೊಂದಿಗೆ ಸೂರ್ಯಘರ್ ಯೋಜನೆ ದೀರ್ಘಾವಧಿ ಲಾಭದ ಬಗ್ಗೆಯೂ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಆದ್ದ ರಿಂದ ಹೆಚ್ಚೆಚ್ಚು ಜನ ಈ ಯೋಜನೆಯತ್ತ ಗಮನಹರಿಸುತ್ತಿದ್ದಾರೆ ಎನ್ನಲಾಗಿದೆ. ಸೂರ್ಯಘರ್ ಯೋಜನೆಯಲ್ಲಿರುವವರು 25 ವರ್ಷ ಕಾಲ ವಿದ್ಯುತ್ ಬಿಲ್ ಪಾವತಿಸುವ ಅಗತ್ಯವಿರುವುದಿಲ್ಲ. ಹೆಚ್ಚುವರಿ ವಿದ್ಯುತ್ತನ್ನು ಗ್ರಿಡ್‌ಗೆ ನೀಡಲು ಅವಕಾಶವಿದ್ದು, ಈ ವಿದ್ಯುತ್ತಿಗೆ ಬೆಸ್ಕಾಂ ವತಿಯಿಂದ ಹಣ ಪಾವತಿಸಲಾಗುತ್ತದೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಯುತ್ತಿದೆ.

ಇದರ ಪರಿಣಾಮ ಬೆಸ್ಕಾಂ ವ್ಯಾಪ್ತಿಯ 4,476 ಮನೆಗಳಲ್ಲಿ ಸೂರ್ಯಘರ್ ಯೋಜನೆಯಡಿ ಸೋಲಾರ್ ವಿದ್ಯುತ್ ಪ್ಯಾನಲ್ ಗಳನ್ನು ಅಳವಡಿಸಿ ಜುಲೈ ಅಂತ್ಯದ ವೇಳೆಗೆ ಸುಮಾರು 20.2 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ. ಅದಕ್ಕಾಗಿ 30.96 ಕೋಟಿ ರು. ಸಬ್ಸಿಡಿಯನ್ನು ಗ್ರಾಹಕರಿಗೆ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಎಷ್ಟು ಅಳವಡಿಕೆ

ವಲಯ	ಅಳವಡಿಕೆ	ಮೆ.ವ್ಯಾ
ಬೆಂಗಳೂರು ಪೂರ್ವ	619	2.87ಮೆ.ವ್ಯಾ
ಬೆಂಗಳೂರು ಉತ್ತರ	692	3.02
ಬೆಂ.ಗ್ರಾಮಾಂತರ	319	1.45
ಬೆಂಗಳೂರು ದಕ್ಷಿಣ	1170	6.29
ಬೆಂಗಳೂರು ಪಶ್ಚಿಮ	906	3.86
ದಾವಣಗೆರೆ	228	0.76
ಕೋಲಾರ	73	0.22
ರಾಮನಗರ	331	1.29
ತುಮಕೂರು	137	0.48
ಒಟ್ಟು	4476	20.2

30ಸಾವಿರ ಸಬ್ಸಿಡಿ

ದೇಶದ ಕೋಟಿ ಮನೆಗಳ ಮೇಲ್ಛಾವಣಿಯಲ್ಲಿ ಸೋಲಾರ್ ಫಲಕ ಅಳವಡಿಸಲು ಈ ಯೋಜನೆಯನ್ನು ಆರಂಭಿಸಲಾಗಿದ್ದು, ಈ ಯೋಜನೆಯಲ್ಲಿ ಸೋಲಾರ್ ರೂಫ್ ಹಾಕಿಸಿಕೊಂಡರೆ ಒಂದು ಕೆ.ವಿ ವ್ಯಾಟ್ ಸಾಮರ್ಥ್ಯದ ವ್ಯವಸ್ಥೆಗೆ 30,000 ರು. ಸಬ್ಸಿಡಿ ದೊರೆಯುತ್ತಿದ್ದು, ಎರಡು ಕೆವಿ ವ್ಯಾಟ್ ಸಾಮರ್ಥ್ಯದ ವ್ಯವಸ್ಥೆಗೆ 60,000 ರು. ಸಬ್ಸಿಡಿ ನಿಗದಿ ಪಡಿಸಲಾಗಿದೆ. 3 ಕಿಲೋ ವ್ಯಾಟ್ ಮೇಲ್ಪಟ್ಟ ವ್ಯವ ಸ್ಥೆಗೆ ಗರಿಷ್ಠ ಸಬ್ಸಿಡಿ ಮಿತಿ 78,000 ರು. ದೊರೆಯಲಿದೆ.

ಗ್ರಿಡ್ ಸಂಪರ್ಕದ ಲಾಭವೇನು?

- ಮನೆಯಲ್ಲಿಯೇ ಮನೆಗೆ ಅಗತ್ಯವಿರುವ ವಿದ್ಯುತ್ ಅನ್ನು ಉತ್ಪಾದಿಸಬಹುದು
- ಮೇಲ್ಛಾವಣಿಯಲ್ಲಿ ಸೋಲಾರ್ ಪ್ಯಾನೆಲ್ ಅಳವ ಡಿಸುವುದರಿಂದ ಹೆಚ್ಚುವರಿ ಜಾಗದ ಅಗತ್ಯವಿಲ್ಲ.
- ಮನೆ ಬಳಕೆಯ ಬಳಿಕ ಹೆಚ್ಚುವರಿ ವಿದ್ಯುತ್ ಇದ್ದರೆ ಇಂಧನ ಇಲಾಖೆಯೇ ಖರೀದಿಸಲು ಅವಕಾಶ
- ನಿರ್ವಹಣೆ ವೆಚ್ಚ ತೀರಾ ಕಡಿಮೆ
- ಒಂದು ಕೆ.ವಿ ವ್ಯಾಟ್ ಸಾಮರ್ಥ್ಯದ ವ್ಯವಸ್ಥೆಗೆ 30,000 ರು. ಸಬ್ಸಿಡಿ

ಪರಿಸರ ಸ್ನೇಹಿಯಾದ ಸೂರ್ಯ ಘರ್ ಯೋಜನೆ ದೀರ್ಘ ಕಾಲ ಬಾಳಿಕೆ ಬರುತ್ತದೆ. ಜತೆಗೆ ಹಣ ಉಳಿತಾಯ ಆಗುವುದರಿಂದ ನಗರ ಪ್ರದೇಶಗಳಲ್ಲಿ ಜನರು ಒಲವು ತೋರುತ್ತಿದ್ದು, ಸಬ್ಸಿಡಿಯ ಲಾಭ ಪಡೆಯುತ್ತಿದ್ದಾರೆ. ಹೆಚ್ಚಿನ ಜನರು ಪ್ರಯೋಜನ ಪಡೆಯಬೇಕೆಂಬುದು ನಮ್ಮ ಉದ್ದೇಶ.

– ಕೆ.ಜೆ. ಜಾರ್ಜ್, ಇಂಧನ ಸಚಿವರು

ಆರೋಗ್ಯ ವೃದ್ಧಿಗೆ ಆಲ್ಕೋಫ್ರೆಂಡ್ ಕಾಫಿ ಸಹಕಾರಿ

ಕಾಫಿ ಕುಡಿದು ಲಿವರ್ ಕಾಪಾಡಿಕೊಳ್ಳಿ

ಬೆಂಗಳೂರು: ಲಿವರ್ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ವಿಶ್ವದ ಮೊದಲ ಕಾಫಿ ಪರಿಚಯಿಸಲಾಗಿದೆ.

ಹೌದು, ಬೆಂಗಳೂರು ಮೂಲದ ಸಂಸ್ಥೆಯೊಂದು ವಿಶ್ವದ ಮೊದಲ ಆಲ್ಕೋಫ್ರೆಂಡ್ (Alcofriend Coffee) ಕಾಫಿಯನ್ನು ಪರಿಚಯಿಸಿದ್ದು, ಇದರಿಂದ ಲಿವರ್ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಈ ಕಾಫಿಯಲ್ಲಿ ಲಿವರ್ ಆರೋಗ್ಯವನ್ನು ವೃದ್ಧಿಸುವ 12 ಅಂಶಗಳಿವೆ ಎನ್ನುವುದನ್ನು ವೈಜ್ಞಾನಿಕವಾಗಿ ಈಗಾಗಲೇ ಸಾಬೀತುಪಡಿಸಲಾಗಿದೆ.

ಡಾಕ್‌ಪ್ರೋ ಬಯೋಲಾಜಿಕ್ಸ್ ಎನ್ನುವ ಸಂಸ್ಥೆ ಈ ವಿನೂತನ ಕಾಫಿಯನ್ನು ಪರಿಚಯಿಸಿದ್ದು, ಆನ್‌ಲೈನ್ ಮಾರುಕಟ್ಟೆಯಲ್ಲಿ ಲಭ್ಯವಿದೆ. ಇತ್ತೀಚಿನ ದಿನದಲ್ಲಿ ಭಾರತದಲ್ಲಿ ಶೇ.20ರಿಂದ 30ರಷ್ಟು ವಯಸ್ಕರಲ್ಲಿ ಫ್ಯಾಟಿ ಲಿವರ್ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ಲಿವರ್ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಅಗತ್ಯವಿರುವ ಪೋಷಕಾಂಶಗಳನ್ನು ಸೇರಿಸಿ ಸಿದ್ಧಪಡಿಸಲಾಗಿದೆ ಎಂದು ಹೇಳಲಾಗಿದೆ. ವೈಜ್ಞಾನಿಕವಾಗಿ ಸಜ್ಜಾಗಿರುವ ಈ ಕಾಫಿಯೂ ಲಿವರ್ ಆರೋಗ್ಯವನ್ನು ವೃದ್ಧಿಸುವ ಶಕ್ತಿಯನ್ನು ಹೊಂದಿದೆ. ಪ್ರಮುಖವಾಗಿ ಫ್ಯಾಟಿ ಲಿವರ್, ಫೈಬ್ರೋಸಿಸ್ ಹಾಗೂ ಸಿರೋಸಿಸ್ ಸಮಸ್ಯೆಗಳನ್ನು ನಿಯಂತ್ರಿಸುವ ಹಾಗೂ ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಆಲ್ಕೋಫ್ರೆಂಡ್ ಕಾಫಿಯೂ ಮಹತ್ವದ ಪಾತ್ರನಿರ್ವಹಿಸಲಿದೆ. ಆಲ್ಕೋಫ್ರೆಂಡ್ ಕಾಫಿಯಲ್ಲಿ ಲಿವರ್ ಸೆಲ್‌ಗಳನ್ನು ರಕ್ಷಿಸಲು, ಡಿಟಾಕ್ಸ್ ಮಾಡಲು ಮತ್ತು ಪುನರುತ್ಪಾದನೆ ಮಾಡಲು ಸಹಕಾರ ನೀಡುವ 12 ಪೂರಕ ಪೋಷಕಾಂಶಗಳಿವೆ ಎಂದು ಹೇಳಲಾಗಿದೆ. ಈ ಕಾಫಿಯಲ್ಲಿ ಔಷಧೀಯ ಗುಣಗಳನ್ನು ಹೊಂದಿದ್ದರೂ, ಕಾಫಿಯ ರುಚಿಯನ್ನೇ ನೀಡುವುದರಿಂದ ಕಾಫಿ ಪ್ರಿಯರಿಗೆ ಯಾವುದೇ ಬದಲಾವಣೆ ಎನಿಸುವುದಿಲ್ಲ. ಈ ಕಾಫಿಯ ಬಳಕೆಯಿಂದ ಲಿವರ್ ಆರೋಗ್ಯವಾಗಿರಲು ಸಹಕಾರಿಯಾಗಿರಲಿದೆ.

ಲಿವರ್ ಸಮಸ್ಯೆ ಹೆಚ್ಚಳ

ಇತ್ತೀಚಿನ ವರ್ಷದಲ್ಲಿ ಭಾರತೀಯರಲ್ಲಿ ಫ್ಯಾಟಿ ಲಿವರ್ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಶೇ.20ರಿಂದ 30ರಷ್ಟು ವಯ ಸ್ಕರಲ್ಲಿ ಈ ಸಮಸ್ಯೆಯಿದೆ. ಇದರೊಂದಿಗೆ ಇಂದಿನ ಒತ್ತಡದ ಜೀವನ ಶೈಲಿ, ಮದ್ಯಪಾನ, ಮಧುಮೇಹ, ಆಹಾರದಲ್ಲಿ ರುವ ಅಸಮತೋಲನ ಸೇರಿ ಹಲವು ಕಾರಣಗಳಿಂದ ಫ್ಯಾಟಿ ಲಿವರ್ ಕಾಣಿಸಿಕೊಳ್ಳುತ್ತಿದೆ. ಈ ಫ್ಯಾಟಿ ಲಿವರ್‌ನ್ನು ನಿರ್ಲಕ್ಷಿಸಿ ದರೆ ಲಿವರ್ ಫೈಬ್ರೋಸಿಸ್ ಹಾಗೂ ಸಿರೋಸಿಸ್‌ಗೆ ಕಾರಣವಾಗಬಹುದು. ಆದ್ದರಿಂದಲೇ ಇದೀಗ ಈ ವಿನೂತನ ಮಾದರಿಯ ಕಾಫಿಯನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ.

ಎಲ್ಲೆಲ್ಲಿ ಲಭ್ಯ ವೆಬ್‌ಸೈಟ್ : www.docprobiologics.com

ಇಮೇಲ್ : docprobiologics@gmail.com

ಇ ಕಾಮರ್ಸ್: ಅಮೆಜಾನ್

ವಿಶ್ವವಾಣಿ

ಸಂಪಾದಕೀಯ

ಇಸ್ರೋ ಸಾಧನೆಗೆ ಇನ್ನೊಂದು ಗರಿ

ದೇಶದ ಮೊದಲ ಸಂಪೂರ್ಣ ಸ್ಥಳೀಯ ನಿರ್ಮಿತ 32-ಬಿಟ್ ಮೈಕ್ರೋಪ್ರೊಸೆಸರ್ VIKRAM-32 ಅನ್ನು ಬಿಡುಗಡೆ ಮಾಡುವ ಮೂಲಕ ಭಾರತ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಸ್ವಾವಲಂಬನೆಯತ್ತ ಮತ್ತೊಂದು ಹೆಜ್ಜೆ ಇಟ್ಟಿದೆ. ಈ ಪ್ರೊಸೆಸರ್ ಹಳೆಯ VIKRAM-1601 ರ ಉತ್ತರಾಧಿಕಾರಿಯಾಗಿದ್ದು, ಇದು ಒಂದು ದಶಕಕ್ಕೂ ಹೆಚ್ಚು ಕಾಲ ಇಸ್ರೋದ ಉಡಾವಣಾ ವಾಹನಗಳಿಗೆ ಶಕ್ತಿ ತುಂಬಿದ 16-ಬಿಟ್ ಚಿಪ್ ಆಗಿದೆ. ಈ ಹಿಂದೆ 16 ಬಿಟ್‌ನ ಚಿಪ್ ಅಭಿವೃದ್ಧಿಪಡಿಸಿದ್ದ ಇಸ್ರೋ ಇದೀಗ ವಿಕ್ರಮ ಹೆಸರಿನ 32 ಬಿಟ್‌ನ ಚಿಪ್ ಅಭಿವೃದ್ಧಿಪಡಿಸಿದೆ. ಇದನ್ನು



ಕಳೆದ ವರ್ಷ ಡಿಸೆಂಬರ್‌ನಲ್ಲಿ ಉಡಾವಣೆಗೊಂಡ ಸ್ಪೇಡೆಕ್ಸ್ ನೌಕೆಯಿದ್ದ ಪಿಎಸ್‌ಎಲ್‌ವಿ ಸಿ60 ರಾಕೆಟ್ ನಲ್ಲಿ ಯಶಸ್ವಿಯಾಗಿ ಬಳಸಲಾಗಿತ್ತು. ಹಿಂದಿನ VIKRAM-1601 ಇಸ್ರೋಗೆ ಉತ್ತಮ ವಾಗಿ ಸೇವೆ ಸಲ್ಲಿಸಿತ್ತು. ಆದರೆ ಕಾರ್ಯಾಚರಣೆಗಳು ಹೆಚ್ಚು ಸಂಕೀರ್ಣವಾಗುತ್ತಿದ್ದಂತೆ, ಹೆಚ್ಚಿನ ನಿಖರತೆ ಮತ್ತು ಉತ್ತಮ ಕಂಪ್ಯೂಟಿಂಗ್ ಶಕ್ತಿಯ ಅಗತ್ಯವು ಬೆಳೆದಿದೆ. 16-ಬಿಟ್‌ನಿಂದ 32-ಬಿಟ್ ಆರ್ಕಿಟೆಕ್ಚರ್‌ಗೆ ಬದಲಾಯಿಸುವುದರಿಂದ ಹೊಸ ಪ್ರೊಸೆಸರ್ ಹೆಚ್ಚಿನ ಪ್ರಮಾಣದ ಡೇಟಾವನ್ನು ನಿರ್ವಹಿಸಲು, ಆಧುನಿಕ ಸಾಫ್ಟ್‌ವೇರ್ ಅನ್ನು ಬೆಂಬಲಿಸಲು ಮತ್ತು ವೇಗವಾಗಿ, ಹೆಚ್ಚು ನಿಖರವಾದ ಲೆಕ್ಕಾಚಾರಗಳನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಇದು ಮುಂದಿನ ಪೀಳಿಗೆಯ ಉಡಾವಣಾ ವಾಹನಗಳು ಮತ್ತು ಬಾಹ್ಯಾಕಾಶ ಕಾರ್ಯಾಚರಣೆಗಳಿಗೆ ಅನುಕೂಲವಾಗಲಿದೆ. ಇದು ಇಸ್ರೋ ಸಾಧನೆಗೆ ಇನ್ನೊಂದು ಗರಿ. 2021ರಿಂದ ಭಾರತದಲ್ಲಿ 10 ಸೆಮಿಕಂಡಕ್ಟರ್ ಯೋಜನೆಗಳಿಗೆ 1.5 ಲಕ್ಷ ಕೋಟಿ ರು. ಹೂಡಿಕೆಗೆ ಅನುಮತಿ ದೊರೆತಿದೆ. ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಚೀನಾದ ಪ್ರಗತಿಯನ್ನು ನೋಡಿದರೆ ಭಾರತ ಈ ದಿಶೆಯಲ್ಲಿ ಬಹು ದೂರ ಸಾಗಬೇಕಾಗಿದೆ. ಎಲೆಕ್ಟ್ರಾನಿಕ್ ಜಗತ್ತಿನಲ್ಲಿ ಚಿಪ್‌ಗೆ ಕಪ್ಪು ಚಿನ್ನ ಎಂದು ಹೇಳಲಾಗುತ್ತದೆ, ಚಿಪ್‌ಗಳು ಡಿಜಿಟಲ್ ವಜ್ರಗಳಾಗಿವೆ. ಇದುವರೆಗೆ ಜಗತ್ತು ಈ ವಜ್ರಕ್ಕಾಗಿ ಬಹುತೇಕ ಚೀನಾವನ್ನೇ ಅವಲಂಬಿಸಿದೆ. ದೆಹಲಿಯಲ್ಲಿ ನಡೆದ ಸೆಮಿಕಾನ್ ಇಂಡಿಯಾ ಸಭೆ ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ದೇಶದ ಪ್ರಗತಿಗೆ ಒತ್ತು ನೀಡುವ ನಿರೀಕ್ಷೆ ಇದೆ.

ಸೊಂಪಾದಕೀಯ

ಹೆಣ್ಮಕ್ಕಳದ್ದೇ ಮೇಲುಗೈ

ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳೂ ದುಡೀತಾರೆ ಅನ್ನೋದು ಎಲ್ಲರಿಗೂ ಗೊತ್ತಿರೋ ಸತ್ಯ. ಆದ್ರೆ, ಅವರ ದುಡಿಮೆಗೆ ಅಷ್ಟೊಂದು ಬೆಲೆ ಸಿಗೋದು ಕಷ್ಟ. ಅಲ್ಲದೆ ಬಹುತೇಕ ಸಮಯದಲ್ಲಿ ಅವರ ದುಡಿಮೆಗೆ ಹಣದ ರೂಪದ ಬೆಲೆ ಕೂಡಾ ಕಮ್ಮಿ. ಜೊತೆಗೆ ಎಷ್ಟೇ ದುಡಿದರೂ ಮನೆಗೆಲಸ ಕೂಡಾ ಮಾಡೋದು ಬಹುತೇಕರ ಹಣೆಬರಹ. ಇನ್ನು ದೈಹಿಕ ದುಡಿಮೆಗೆ ಬಂದರೆ ಕೂಲಿ ಕೆಲಸಗಳಲ್ಲಿ ಗಂಡಾಳಿಗೆ ಸಿಕ್ಕಷ್ಟು ಹಣ ಹೆಣ್ಣಾಳಿಗೆ ಸಿಗಲ್ಲ. ಆದರೆ ಈ ಮಿಥ್‌ಗಳನ್ನು ಮೀರಿ ಈಗ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಹೆಣ್ಣಾಳುಗಳು ಭಾರತೀಯ ಪುರುಷರ ತಂಡಕ್ಕಿಂತ ಹೆಚ್ಚು ಹಣ ಗಳಿಸುವ ಸುದ್ದಿಯೊಂದು ಬಂದಿದೆ. ಅದು ಏಕದಿನ ವಿಶ್ವಕಪ್ ಪಂದ್ಯಾವಳಿಗೆ ಸಂಬಂಧಪಟ್ಟಿದ್ದು. ಈಗ ಹೊರಡಿಸಲಾಗಿರುವ ಹೊಸ ಆದೇಶದ ಪ್ರಕಾರ ಈ ಬಾರಿಯ ಮಹಿಳಾ ಏಕದಿನ ವಿಶ್ವಕಪ್ ವಿಜೇತ ತಂಡಕ್ಕೆ ಸುಮಾರು 40 ಕೋಟಿ ರುಪಾಯಿ ಬಹುಮಾನದ ಮೊತ್ತ ಸಿಗಲಿದೆ. ಇನ್ನು ಈ ಪಂದ್ಯಾವಳಿಯ ಒಟ್ಟು

ಬಹುಮಾನದ ಮೊತ್ತ 122 ಕೋಟಿ ಅಂತೆ. ಪುರುಷರ ಏಕದಿನ ವಿಶ್ವಕಪ್ ವಿಜೇತರ ತಂಡಕ್ಕೆ ಸಿಗೋ ಬಹುಮಾನದ ಮೊತ್ತಕ್ಕೆ ಹೋಲಿಕೆ ಮಾಡಿದರೆ ಇದು ಡಬಲ್ ಅಂತ ಅಂದಾಜು ಮಾಡಲಾಗಿದೆ. ಜಾಗತಿಕ ಮಟ್ಟದಲ್ಲಿ ಮಹಿಳಾ ಕ್ರಿಕೆಟ್‌ಗೆ ಇರೋ ಘನತೆಯನ್ನು ಹೆಚ್ಚಿಸುವ ಸಲುವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಅಂತ ಇದಕ್ಕೆ ಸ್ಪಷ್ಟನೆ ಕೊಡಲಾಗಿದೆ. ಹಾಗಾಗಿ ಈಗ ನಮ್ಮ ಕ್ರಿಕೆಟ್ ಆಡುವ ಹೆಣ್ಣುಮಕ್ಕಳು ನಾವು ಪುರುಷರಿಗಿಂತ ಹೆಚ್ಚು ದುಡೀತೀವಿ ಅಂತ ಹೆಮ್ಮೆಯಿಂದ ತಲೆ ಎತ್ತಿಕೊಂಡು ಹೇಳಬಹುದು. ಆದರೆ ಆಟಗಾರರಿಗೆ ಸಿಗುವ ವಾರ್ಷಿಕ ವೇತನದ ವಿಷಯದಲ್ಲಿ ಈಗಲೂ ಪುರುಷ ಆಟಗಾರರದ್ದೇ ಮೇಲುಗೈ ಎನ್ನಬಹುದು. ಈಗ ವಿಶ್ವಕಪ್ ಬಹುಮಾನದ ವಿಷಯದಲ್ಲಿ ಹೋಗಲಾಡಿಸಿರುವ ತಾರತಮ್ಯ, ವೇತನದ ವಿಷಯದಲ್ಲೂ ಜಾರಿಗೆ ಬರಬಹುದು ಯಾರಿಗೆ ಗೊತ್ತು. ಆದರೆ, ಈ ವಿಷಯ ಕೇಳಿ ಪುರುಷ ಆಟಗಾರರು ಹೌ ಕೆನ್ ಇಟ್ ಬಿ ಪಾಸಿಬಲ್ ಅಂತ ಹೌಹಾರಿದ್ದಾರಂತೆ. ಈಗ ಮುಂದೆ 2027ರಲ್ಲಿ ನಡೆಯಲಿರುವ ವಿಶ್ವಕಪ್ ಪಂದ್ಯಾವಳಿಯ ವೇಳೆಗೆ ತಮ್ಮ ಬಹುಮಾನದ ಮೊತ್ತವೂ ಹೆಚ್ಚಾಗಿ ಅದು ಮಹಿಳೆಯರ ಕ್ರಿಕೆಟ್ ನ ಬಹುಮಾನದ ಮೊತ್ತಕ್ಕಿಂತ ಹೆಚ್ಚಾಗುತ್ತದೆ ಅಂತ ಪುರುಷ ಆಟಗಾರರು ನಿರೀಕ್ಷೆಯಲ್ಲಿದ್ದಾರೆ.

ಸಂಪಾದಕರ ಸದ್ಯಶೋಧನೆ

ಹೆಸರಿನ ಬಗ್ಗೆ ಮತ್ತಷ್ಟು

ಅಮೆರಿಕದ 'ದಿ ಬೋಸ್ಟನ್ ಗ್ಲೋಬ್' ಪತ್ರಿಕೆಯನ್ನು ಓದುತ್ತಿದ್ದಾಗ ಪತ್ರಕರ್ತೆಯೊಬ್ಬಳ ಹೆಸರು ಗಮನ ಸೆಳೆಯಿತು. ಅವಳ ಹೆಸರು 'ಜೆನ್ನಿಫರ್ 8.ಲೀ' ಅಂತ. 'ಜೇಮ್ಸ್ ಬಾಂಡ್ 007' ಎಂಬ ಹೆಸರನ್ನು ಬಿಟ್ಟರೆ, ನಾನು ವ್ಯಕ್ತಿಗಳ ಹೆಸರಿನಲ್ಲಿ ಸಂಖ್ಯೆಗಳನ್ನು ನೋಡಿದ್ದಿಲ್ಲ. ವ್ಯಕ್ತಿಗಳ ಹೆಸರಿನಲ್ಲಿ ಸಂಖ್ಯೆಯಿರುವುದು ತೀರಾ ವಿಚಿತ್ರ, ವಿಲಕ್ಷಣ ಎಂದೆನಿಸಿತು. ಹಾಗಂತ ಈಕೆ ಸಾಮಾನ್ಯಳೇನೂ ಅಲ್ಲ. 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಕೆಲಸ ಮಾಡಿದವಳು. 'ದಿ ಬೋಸ್ಟನ್ ಗ್ಲೋಬ್' ಪತ್ರಿಕೆಯಲ್ಲೂ ಕೆಲಸ ಮಾಡಿದ್ದಾಳೆ. ನಿಕೋಡ್ ಇಮೋಜಿ ಸಮಿತಿಯಲ್ಲಿ ಕೆಲಸ ಮಾಡಿದವಳು. ಅಂದರೆ ಯುನಿಕೋಡ್‌ನಲ್ಲಿ ಬಳಸುವ ಇಮೋಜಿಯನ್ನು ಬಳಕೆಗೆ ಬಿಡುವ ಮುನ್ನ ಪರಿಶೀಲಿಸುವ ಸಮಿತಿಯದು. ಮೂಲತಃ ತೈವಾನಿನವಳಾದ ಲೀ, ಬಾಲ್ಯದಲ್ಲಿಯೇ ಅಮೆರಿಕಕ್ಕೆ ಬಂದಳು. ತನ್ನ ಹೆಸರು ಬಹಳ ಸಾಮಾನ್ಯ ಎಂಬುದು ಅವಳಿಗೆ ತಿಳಿಯಿತು. ಅವಳು ವಾಸಿಸುತ್ತಿದ್ದ ನಗರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜೆನ್ನಿಫರ್ ಲೀಗಳು ಇದ್ದಾರೆಂದು ತಿಳಿಯಿತು. ಅಂದರೆ ತಾನು ತನ್ನ ಹೆಸರಿನಿಂದ ಗುರುತಿಸಿಕೊಳ್ಳುವುದು ಸಾಧ್ಯವೇ ಇಲ್ಲ ಮತ್ತು ಅದಕ್ಕಿಂತ ಹೆಚ್ಚಾಗಿ ಈ ರೀತಿ ಒಂದೇ ಹೆಸರಿನ ಅನೇಕ ವ್ಯಕ್ತಿಗಳು ಒಂದೇ ನಗರದಲ್ಲಿ ಇರುವುದರಿಂದ ಗೊಂದಲಕ್ಕೆ ಕಾರಣವಾಗುತ್ತದೆ ಎಂಬುದು ಅವಳಿಗೆ ಬಲವಾಗಿ ಅನಿಸಿತು.

ಹಾಗೆಂದು ತನ್ನ ಪಾಲಕರು ಇಟ್ಟ ಹೆಸರನ್ನು ಬದಲಿಸಿಕೊಳ್ಳಲು ಆಕೆಗೆ ಇಷ್ಟವಿರಲಿಲ್ಲ. ತನ್ನ ಹೆಸರಿನಲ್ಲಿ ಸಂಖ್ಯೆಯನ್ನು ಸೇರಿಸಿದರೆ ಹೇಗೆ ಎಂಬ ಆಲೋಚನೆ ಬಂತು. 'ಜೆನ್ನಿಫರ್ 8.ಲೀ' ಅಂತ ಬದಲಿಸಿಕೊಂಡಳು. ಜಗತ್ತಿನಾದ್ಯಂತ ಜೆನ್ನಿಫರ್ ಲೀ ಎನ್ನುವವರು ಲಕ್ಷಾಂತರ ಮಂದಿ ಇರಬಹುದು. ಆದರೆ, 'ಜೆನ್ನಿಫರ್ 8.ಲೀ' ಎನ್ನುವವಳು ಅವಳೊಬ್ಬಳೇ. ನೀವು ಕಾಮಿಡಿಯನ್ ಜಾರ್ಜ್ ಎಲ್. ಗೊಬೆಲ್ ಹೆಸರನ್ನು ಕೇಳಿರಬಹುದು. ಆತನ ಹೆಸರಿನಲ್ಲಿ 'ಎಲ್' ಎಂಬುದಕ್ಕೆ ಅರ್ಥವಿಲ್ಲ. ಎಲ್ ಇಲ್ಲದಿದ್ದರೆ, ಆತನ ಇನಿಶಿಯಲ್ 'ಜಿಜಿ' ಎಂದಾಗುತ್ತಿತ್ತು. ಆದರೆ, ಅವನ ಮನೆ ಇರುವ ಪ್ರದೇಶದಲ್ಲೇ ಹಾಲಿವುಡ್‌ನ ಖ್ಯಾತ ನಟಿ ಗ್ರೇಟಾ ಗಾರ್ಬೋ ಮನೆ ಸಹ ಇತ್ತು. ಅವಳ ಇನಿಶಿಯಲ್ ಸಹ 'ಜಿಜಿ' ಲಾಂಡ್ರಿಗೆ ಬಟ್ಟೆಯನ್ನು ಕೊಟ್ಟಾಗ ಇವರಿಬ್ಬರ ಉಡುಪುಗಳು ಅದಲು ಬದಲಾಗುತ್ತಿದ್ದವು. ಈ ಗೊಂದಲವನ್ನು ನಿವಾರಿಸಲು ಆತ 'ಜಿಎಲ್‌ಜಿ' ಎಂಬ ಇನಿಶಿ ಯಲ್ಲನ್ನು ಇಟ್ಟುಕೊಂಡಿದ್ದ. ಹೆಸರನ್ನು ವಿಸ್ತರಿಸಿ ಬರೆಯುವಾಗ ಮಾತ್ರ ಜಾರ್ಜ್ ಎಲ್. ಗೊಬೆಲ್ ಎಂದು ಬರೆಯುತ್ತಿದ್ದ. ಆದರೆ, 'ಎಲ್' ಅಂದರೆ ಲೆಸ್ಲಿ ಎಂದು ಆತ ಕೇಳಿದವರಿಗೆ ಮಾತ್ರ ಸಮಜಾಯಿಷಿ ಕೊಡುತ್ತಿದ್ದ. ಆದರೆ, ಲೆಸ್ಲಿ ಎಂಬುದು ಅವನ ತಂದೆ, ತಾಯಿ ಅಥವಾ ಕುಟುಂಬದ ಹೆಸರೂ ಆಗಿರಲಿಲ್ಲ. ಅಸಲಿಗೆ ಅದು ಸುಮ್ಮನೆ ಇಟ್ಟುಕೊಂಡ ಹೆಸರಾಗಿತ್ತು.

ಕೆಲವೊಮ್ಮೆ ಸೋಲುಗಳು ನಮ್ಮ ಸಾಮರ್ಥ್ಯವನ್ನು ತೋರಿಸುತ್ತವೆ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಪ್ರಾಯಶಃ ಆ ನೋವು, ವಿಷಾದ ನನ್ನಲ್ಲಿ ಸದಾ ಉಳಿದುಕೊಂಡು ಬಿಟ್ಟಿದೆ. ಅದಾಗಬಾರದು ಅಂತಿದ್ದರೆ, ನಾನು ಆದಷ್ಟು ಬೇಗ ಅದನ್ನು ಈಡೇರಿಸಬೇಕು. ಅಲ್ಲಿಯ ತನಕ ಅದು ಒಂದು ಕೊರಗಾಗಿ, ಕಾರುಣ್ಯ (Pathos) ಗೀತೆಯಾಗಿ ಉಳಿದುಬಿಡಬಹುದು.

ಕೆಲ ವರ್ಷದ ಹಿಂದೆ ದಕ್ಷಿಣ ಆಫ್ರಿಕಾಕ್ಕೆ ಹೋಗಿ, ಅಲ್ಲಿಂದ ವಾಪಾಸಾದ ಬಳಿಕ ಅಂಥದ್ದೊಂದು ಭಾವ ನನ್ನನ್ನು ಆವರಿಸಿಕೊಂಡಿತ್ತು. ಕೆಲವು ಭಾವಗಳನ್ನು ಸಂತೈಸುವುದು ಕಷ್ಟ. ಸಂತೈಸಿದಷ್ಟೂ ಪದೇ ಪದೆ ಇಣುಕು ಹಾಕುತ್ತಲೇ ಇರುತ್ತವೆ. ಅಷ್ಟೇ ಅಲ್ಲ, ಇಂಥ ಭಾವನೆಗಳು ನಮ್ಮನ್ನು ಕ್ರಮೇಣ ಆಳತೊಡಗುತ್ತವೆ. ಅಂಥದ್ದೊಂದು ವಿಚಿತ್ರ ಭಾವ ನನ್ನನ್ನು ಸಣ್ಣಗೆ ಕೊರೆಯುತ್ತಲೇ ಇದೆ. ಅಂದುಕೊಂಡಿದ್ದನ್ನು ಸಾಧಿಸಲಾಗದಿದ್ದರೆ, ಅದೊಂದು ಹಲ್ಲಿಗೆ ಸಿಕ್ಕಿದ ಆಹಾರದ ತುಣುಕಿನಂತೆ ಸದಾ ಕಾಡುತ್ತಲೇ ಇರುತ್ತದೆ. ನಾಲಗೆಗಂತೂ ಸಮಾಧಾನವಿಲ್ಲ.

ಏನೇ ಹೇಳಿ, ಅಂದು ನಾನು ಕೈಚೆಲ್ಲಬಾರದಿತ್ತು. ನನ್ನ ಕೈಯಲ್ಲಿ ಆಗೊಲ್ಲ ಎಂದು ಹಿಂದೆ ಸರಿಯಬಾರದಿತ್ತು. ನನ್ನೊಳಗೆ ಅಂಥದ್ದೊಂದು ಆತಂಕ, ಸೋಲು ನನಗೆ ಗೊತ್ತಿಲ್ಲದಂತೆ ಮನೆ ಮಾಡಿಕೊಂಡು ಬೆಚ್ಚಗೆ ಆಶ್ರಯ ಪಡೆದಿತ್ತು ಎಂಬುದು ಇಷ್ಟು ವರ್ಷಗಳವರೆಗೆ ಗೊತ್ತೇ ಇರಲಿಲ್ಲ. ಆದರೆ ಆ ಘಟನೆಯ ಬಳಿಕ ನನ್ನ ಅನುಭವಕ್ಕೆ ಬಂದಿತು. ಅಷ್ಟೇ ಅಲ್ಲ, ಅಷ್ಟರ ಮಟ್ಟಿಗೆ ನನ್ನ ಕೊರತೆಯಾಗಿ, ದೌರ್ಬಲ್ಯವಾಗಿ, ಪರಾಭವವಾಗಿ ಕಂಡಿತು. ಕೆಲವೊಮ್ಮೆ ಸೋಲಿನಲ್ಲೂ ನಮ್ಮ ಸಾಮರ್ಥ್ಯವೇನೆಂಬುದು ಗೊತ್ತಾಗುತ್ತದೆ. ನಮಗೆ ನಮ್ಮ ಪರಿಚಯವೇ ಆಗಿರುವುದಿಲ್ಲ. ನಮ್ಮೊಳಗೊಬ್ಬ ಪುಕ್ಕಲನಿದ್ದಾನೆಂಬುದು ಅಂಥ ಸೋಲಿನ ಸಂದರ್ಭದಲ್ಲಿ ಅನುಭವಕ್ಕೆ ಬರುತ್ತದೆ. ಹಗ್ಗ ತುಳಿದು ಧೈರ್ಯ ಮರೆಯುವವರು, ಹಾವನ್ನು ಕಂಡು ಬೆಚ್ಚಿ ಬೀಳುವಾಗ ತಮ್ಮೊಳಗೆ ಆಶ್ರಯಪಡೆದ ಆ ಪುಕ್ಕಲನ ದರ್ಶನ ಪಡೆದು ವಿಷಣ್ಣರಾಗುತ್ತಾರೆ. ಇದು ನಮಗೇ ಗೊತ್ತಿಲ್ಲದೇ ನಮ್ಮೊಳಗೆ ನಡೆಯುವ ಹಕೀಕತ್ತು. ನಮ್ಮೊಳಗೆ ನಾವೇ ಸಾಕಿಕೊಂಡು ಪೊರೆಯುವ ಸೋಲಿನ ಅಸಲಿಯತ್ತು.

ಅಷ್ಟಕ್ಕೂ ಅಂದು ಆಗಿದ್ದೇನೆಂದರೆ, ದಕ್ಷಿಣ ಆಫ್ರಿಕಾದಲ್ಲಿ ಗಾರ್ಡನ್ ರೂಟ್ ಎಂಬ ಮಾರ್ಗವಿದೆ. ಅದು ಹೆಸರೇ ಸೂಚಿಸುವಂತೆ, ಪ್ರಕೃತಿಯ ಸೊಬಗನ್ನೆಲ್ಲ ತನ್ನ ಮೇಲೆ ಬೋರಲು ಹಾಕಿಕೊಂಡ ನಯನ ಮನೋಹರ ಪ್ರದೇಶ. ಎಷ್ಟು ನೋಡಿದರೂ, ಎತ್ತ ನೋಡಿದರೂ ಮುಗಿಯದ ನಿಸರ್ಗ ಚಿತ್ರಶಾಲೆ. ಈಸ್ಟರ್ನ್ ಕೇಪ್ ಹಾಗೂ ವೆಸ್ಟರ್ನ್ ಕೇಪ್ ಪ್ರಾಂತಗಳು ಸೇರುವ ಜಾಗದಲ್ಲಿ ತ್ಸಿತ್ಸಿಕಾಮ ಎಂಬ ಪ್ರದೇಶವಿದೆ. ಅಲ್ಲಿ ಬ್ಲೋಕ್ರಾನ್ಸ್ ಎಂಬ ನದಿ ಊರಲ್ಲೆಲ್ಲ ವೈಯಾರ ಮಾಡಿ ಅಟ್ಲಾಂಟಿಕ್ ಮಹಾಸಾಗರ ಸೇರುತ್ತದೆ. ಈ ನದಿ ಆಳ ಕಣಿವೆಯನ್ನು ಬಳಸಿ ಹರಿದು ಹೋಗುತ್ತದೆ. ಈ ನದಿಗೆ ಅಡ್ಡವಾಗಿ ಒಂದು ಸುಂದರ ಸೇತುವೆ ಕಟ್ಟಿದ್ದಾರೆ. ಇದು ಜಗತ್ತಿನ ಸುಂದರ ಸೇತುವೆಗಳಲ್ಲೊಂದು. ಇದರ ಉದ್ದ ಸುಮಾರು ಎರಡೂಕಾಲು ಕಿಮಿ.

ಜಗತ್ತಿನಲ್ಲಿ ಇಂಥ ಅನೇಕ ಸೇತುವೆಗಳಿರಬಹುದು. ಆದರೆ ಅವು ಯಾವುವೂ ಪ್ರಸಿದ್ಧವಾಗಿಲ್ಲ. ಆದರೆ ಬ್ಲೋಕ್ರಾನ್ಸ್ ಬ್ರಿಡ್ಜ್ ಮಾತ್ರ ಸಾಹಸಿಗರ, ಎದೆಗಾರರ ಅಚ್ಚುಮೆಚ್ಚಿನ ತಾಣ. ಈ ಬ್ರಿಡ್ಜನ್ನು ಹುಡುಕಿಕೊಂಡು ಜಗತ್ತಿನ ಎಲ್ಲೆಡೆಗಳಿಂದಲೂ ಪ್ರತಿದಿನ ಜನ ಬರುತ್ತಾರೆ. ತಾವೆಷ್ಟು ಧೈರ್ಯವಂತರು, ಪುಕ್ಕಲರು ಎಂಬುದನ್ನು ಇಲ್ಲಿ ಸಾಕ್ಷಾತ್ ಪರೀಕ್ಷಿಸಿ, ಮನವರಿಕೆ ಮಾಡಿಕೊಂಡು ಹೋಗುತ್ತಾರೆ.

ಕಾರಣ ಇಷ್ಟೆ. ಈ ಸೇತುವೆಯ ಮಧ್ಯ ಭಾಗದಲ್ಲಿ ವಿಶೇಷವಾಗಿ ನಿರ್ಮಿಸಲಾದ ಅಟ್ಟಣಿಗೆಯಿಂದ ಸಾಹಸಿಗಳು ಬಂದು 'ಬಂಗೀ (ಬಂಜೀ) ಜಂಪ್' ಮಾಡುತ್ತಾರೆ. ಇದು ಜಗತ್ತಿನ ಅತಿ ಎತ್ತರದ ಕಮರ್ಷಿಯಲ್ ಬ್ರಿಡ್ಜ್ ಬಂಗೀ ಜಂಪ್ ತಾಣ. ಸುಮಾರು 709 ಅಡಿ ಎತ್ತರದಿಂದ ಕಾಲಿಗೆ ಹಗ್ಗ ಕಟ್ಟಿಕೊಂಡು ಮುಖ ಕೆಳಗೆ ಮಾಡಿ, ಜೀವದ ಹಂಗು ತೊರೆದು, ಸಾವಿನ ಬೆನ್ನು ಬಡಿದು ಬರಲು ಜಿಗಿಯಬೇಕು. ಸುಮಾರು ನಲವತ್ತಾರರಿಂದ ನಲವತ್ತೆಂಟು ಸೆಕೆಂಡುಗಳ ಫ್ರೀ ಫಾಲ್! ಆ ನಲವತ್ತೆಂಟು ಸೆಕೆಂಡುಗಳಲ್ಲಿ ಸಾವು-ಬದುಕಿನ ಸಮೀಪ ದರ್ಶನವಾಗುತ್ತದೆ. ಬದುಕಿರುವಾಗಲೇ ಸಾವಿನ ಸಾಂಗತ್ಯದೆಡೆಗೆ ಹೋಗಬೇಕೆನಿಸಿದರೆ, ಅಂಥದ್ದೊಂದು ಸೇತುವೆಯಿಂದ ಜಿಗಿಯಬೇಕು. ಸಾವು ಎಂಥ ಕ್ರೂರ, ಭಯಾನಕ, ಬೀಭತ್ಸ ಎಂಬುದನ್ನು ಸಾಕ್ಷಾತ್ ಅನುಭವಿಸಬೇಕೆಂದರೆ ಅಲ್ಲಿಂದ ಜಿಗಿಯಬೇಕು. ಸಾವಿನ ತುಟಿ ಚುಂಬಿಸಿ, ಬದುಕಿನ ಆನಂದ ಅತಿರೇಕದ ಏಳಿಗೆಗಳ ಮೆಟ್ಟಿಲುಗಳನ್ನೆಣಿಸಲು ಬಂಗೀ ಜಂಪ್ ಮಾಡಬೇಕು. ಒಂದು ರೀತಿಯಲ್ಲಿ ನೀವು ಫ್ರೀ ಪಾಲ್‌ನಲ್ಲಿದ್ದಾಗ ಜೀವಚ್ಛವ. ಸಾವಿನ ಕ್ಷಣಗಳನ್ನು ಆನಂದದ ಪರಮ ಅನುಭೂತಿಯಾಗಿ ಸಾಕ್ಷಾತ್ಕರಿಸಿಕೊಳ್ಳಲು ಬಂಗೀ ಜಂಪ್ ಮಾಡಬೇಕು. ಅಲ್ಲಿಂದ ಜಿಗಿಯುವಾಗ ಏನೂ ಆಗುವುದಿಲ್ಲವೆಂದು ನಮ್ಮನ್ನೇ ನಂಬಿಸಿಕೊಂಡು, ಆ ನಂಬಿಕೆ ನಮ್ಮನ್ನು ಬಿಟ್ಟು ಹೋಗದಂತೆ ಉಳಿಸಿಕೊಂಡು, ಎಲ್ಲವನ್ನೂ ಪರಮಾತ್ಮನ ಪಾದಕ್ಕೆ ಅರ್ಪಿಸಿ, 'ಜೈ' ಎಂದು ಜಿಗಿದುಬಿಡಬೇಕು.

ಕೆಳಗೆ ನೋಡಿದರೆ ಪ್ರಪಾತ, ಹರಿಯುವ ನೀರು! ನಿಮ್ಮನ್ನು ಬದುಕಿಸಲು, ರಕ್ಷಿಸಲು ಯಾರೂ ಬರಲೊಲ್ಲರು. ನೀವುಂಟು ಮತ್ತು ನೀವುಂಟು. ಎಷ್ಟೇ ಕಿರುಚಿಕೊಂಡರೂ ಸಹಾಯಕ್ಕೆ ಮತ್ತೊಬ್ಬ ಜೀವ ಪಿಳ್ಳೆ ಎಂಬುದು ಬರುವುದಿಲ್ಲ. ನುಣುಪಾದ ನೆಲದಲ್ಲಿ ಕಾಲು ಜಾರಿ ಬಿದ್ದರೆ ಆಘಾತವಾಗುತ್ತದೆ. ಜಾರಿದ ದೇಹ ಗಾಳಿಯಲ್ಲಿ ಒಂದು ಸೆಕೆಂಡ್ ಇದ್ದು, ನೆಲಕ್ಕೆ ಅಪ್ಪಳಿಸುವ ಹೊತ್ತಿಗೆ ಆ ಆಘಾತದ ತೀವ್ರತೆ ಎಷ್ಟಿರುತ್ತದೆಂದರೆ, ಸರಿಯಾಗಿ ಅಂಪಾಯಿಸಿಕೊಳ್ಳಲು ಕನಿಷ್ಠ ಅರ್ಧಗಂಟೆಯಾದರೂ ಬೇಕು. ಹೀಗಿರುವಾಗ ನಲವತ್ತೆಂಟು ಸೆಕೆಂಡುಗಳ ಕಾಲ 709 ಅಡಿ ಎತ್ತರದಿಂದ ಬೀಳುವಾಗ ಏನೇನೆಲ್ಲ ಆಗಬಹುದು...

ಅಬ್ಬಬ್ಬಾ... ಯೋಚಿಸಲೂ ಆಗದು. ಅಷ್ಟು ಕಡಿಮೆ ಅವಧಿಯಲ್ಲಿ ಸಾವು ಬದುಕಿನ ದರ್ಶನ ಪಡೆಯಲು ಸಾಧ್ಯವೇ ಇಲ್ಲವೇನೋ?

ಎರಡು ಮಹಡಿ ಕಟ್ಟಡದಿಂದ ಕೆಳಕ್ಕೆ ಗುದುಕಲು ಎಂಟೆದೆ ಬೇಕು. ಆದರೆ 709 ಅಡಿ ಎತ್ತರದಿಂದ ಕೆಳಗೆ ಮುಖ ಮಾಡಿ ಜಿಗಿಯಲು ಸಾವಿರದೆಂಟೆದೆಯೇ ಬೇಕು. ಅಷ್ಟು ಎತ್ತರದಿಂದ ಬೀಳ ಬೇಕು ಎನ್ನುವುದೇ ಮೈನಡುಕ ಹುಟ್ಟಿಸುವ ಸಂಗತಿ. ಯಾಕಾದರೂ ಜಿಗಿದೆನೋ, ನನಗ್ಯಾಕೆ ಬೇಕಿತ್ತು ಈ ಉಸಾಬರಿ, ಬದುಕಿದ್ದರೆ ಬೆಲ್ಲವೋ, ಗಂಜಿಯೋ ತಿಂದುಕೊಂಡು ಹಾಯಾಗಿರಬಹುದು, ನಾನ್ಯಾಕೆ ಈ ಹರಸಾಹಸಕ್ಕೆ ಕೈ ಹಾಕಿದೆ ಎಂದು ಎಂಥವರಿಗಾದರೂ ಅನಿಸದೇ ಹೋಗುವುದಿಲ್ಲ. ಕಾಲಿಗೆ ಇಲೆಸ್ಟಿಕ್ ಹಗ್ಗ ಕಟ್ಟಿಕೊಂಡು ಜಿಗಿದು, ಕೆಲಕ್ಷಣ ಫ್ರೀ ಫಾಲ್ ಆದ ಬಳಿಕ ಪುನಃ ಮೇಲಕ್ಕೆ ಹೋಗಿ ಕೆಳಕ್ಕೆ ಬರುತ್ತೇವೆ. ಎರಡು ಮೂರು ಸಲ ಹೀಗೆ ಆಗಿ ಕೊನೆಗೆ ತಲೆಕೆಳಗಾಗಿ ನೇತಾಡುತ್ತಿರುತ್ತೇವೆ. ಎಷ್ಟೇ ಎತ್ತರದಿಂದ ಬಂಗೀ ಜಂಪ್ ಮಾಡಿದರೂ, ನೆಲಕ್ಕಂತೂ ಬೀಳುವುದಿಲ್ಲ. ಪ್ರಾಣವಂತೂ ಹೋಗುವುದಿಲ್ಲ, ಆದರೆ ಎತ್ತರದಿಂದ ಜಿಗಿದು ಕೆಳಗೆ ಬೀಳುವಾಗಲೇ ಕೆಲವರಿಗೆ ಹಾರ್ಟ್ ಅಟ್ಯಾಕ್ ಆಗಿರುತ್ತದೆ. ಇಲ್ಲವೇ ಚಡ್ಡಿ ರಾಡಿಯಾಗಿರುತ್ತದೆ. ಆ ನಲವತ್ತೆಂಟು ಸೆಕೆಂಡ್‌ಗಳಲ್ಲಿ ಏನು ಬೇಕಾದರೂ ಆಗಬಹುದು. ಅಷ್ಟೆಲ್ಲ ಮಾಡಿ, ಧೈರ್ಯ ಮಾಡಿ ಜಿಗಿದರೆ, ರಾಷ್ಟ್ರಪತಿ ಪ್ರಶಸ್ತಿ ಕೊಡುವುದಿಲ್ಲವಲ್ಲ. ಅದಕ್ಕಿಂತ ಹೆಚ್ಚಾಗಿ, ಇದೊಂದು ದುಸ್ಸಾಹಸ. ಪ್ರಾಣವನ್ನು ಪಣಕ್ಕಿಟ್ಟು ಜಿಗಿಯಬೇಕು. ಹೀಗಿದ್ದರೂ ಇಲೆಸ್ಟಿಕ್ ಹಗ್ಗವನ್ನು ಕಾಲಿಗೆ ಕಟ್ಟಿರುವುದರಿಂದ ಏನೂ ಆಗುವುದಿಲ್ಲ, ಖರೆ. ಆದರೆ ನಮ್ಮ ಗ್ರಹಚಾರಕ್ಕೆ ನಾವು ಜಿಗಿದಾಗಲೇ ಹಗ್ಗ ಕಟ್ ಆದರೆ? ಮೇಲಿಂದ ಜಿಗಿಯುವಾಗ ಹಾರ್ಟ್ ಅಟ್ಯಾಕ್ ಆದರೆ? ದೇಹದ ಯಾವುದಾದರೂ ಭಾಗಕ್ಕೆ ಏಟು ಬಿದ್ದರೆ? ಇನ್ನೇನೋ ಆಗಿ ಆಘಾತಕ್ಕೊಳಗಾದರೆ? ಮತ್ತಿನ್ನೇನೋ ಆದರೆ?

ಅಂದು ನಾನು ಬ್ಲೋಕ್ರಾನ್ಸ್ ನದಿ ಸೇತುವೆಯಂಚಿನ ಬಂಗೀ ಜಂಪ್ ಬೇಸ್ ಕ್ಯಾಂಪ್‌ನಲ್ಲಿ ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಮನಸ್ಸಿನಲ್ಲಿ ಹತ್ತಾರು, ನೂರಾರು ಪ್ರಶ್ನೆಗಳು ಮುಕರಿಕೊಂಡಿದ್ದವು. ಇವೆಲ್ಲಕ್ಕಿಂತ ಮುಖ್ಯವಾಗಿ ಕಾಡಿದ ಪ್ರಶ್ನೆಯೆಂದರೆ, ಜಿಗಿಯಲು ಹೋದಾಗ ಏನೋ ಎಡವಟ್ಟಾದರೆ, ಈ ಭಟ್ಟರಿಗೆ ಇದೆಲ್ಲ ಯಾಕೆ ಬೇಕಿತ್ತು, ಅವರಿಗೆ ಸ್ವಲ್ಪವೂ ಬುದ್ಧಿ ಇಲ್ಲವಾ, ಎಲ್ಲ ಬಿಟ್ಟ ಬಂಗಿ ನೆಟ್ಟ ಎಂಬಂತೆ ಎಲ್ಲ ಬಿಟ್ಟು, ಬಂಗೀ ಜಂಪ್ ಮಾಡು ಅಂತ ಯಾರು ಹೇಳಿದ್ರು, ಅವರ ಪಾಡಿಗೆ ಅವರು ವಾರಕ್ಕೆ ನಾಲ್ಕು ಕಾಲಮ್ಮು ಬರಕೊಂಡು ಇರೋದನ್ನು ಬಿಟ್ಟು ಆಫ್ರಿಕಾದ ಕಾಡಿನಲ್ಲಿ ಮೇಲಿಂದ ಜಿಗಿಯಲು ಹೋಗಿ, ಏನೋ ಪರಾಮಶಿ ಮಾಡಿಕೊಂಡು ಪ್ರಾಣ ಕಳೆದುಕೊಂಡರೆ, 'ಬಂಗೀ ಜಂಪ್ ಮಾಡಲು ಹೋದ ಸಂಪಾದಕನ ದಾರುಣ ಸಾವು' ಎಂದು ಸುದ್ದಿ ಪ್ರಕಟವಾದರೆ, ನನ್ನ ಫೋಟೋಕ್ಕೆ 'ಜಂಪ್ ಮಾಡಲು ಹೋಗಿ ಪ್ರಾಣ ಕಳೆದುಕೊಂಡ ಸಂಪಾದಕರ ಭಂಗಿ' ಎಂಬ ಕ್ಯಾಪ್ಷನ್ ಕೊಟ್ಟರೆ, ಸಂಪಾದಕರಾದವರಿಗೆ ಇವೆಲ್ಲ ಶೋಭೆ ತರುವುದಾ ಎಂದು ಜನ ಆಡಿಕೊಳ್ಳದೇ ಬಿಡ್ತಾರಾ... ಈ ಪ್ರಶ್ನೆಗಳೆಲ್ಲ ಅಲೆಅಲೆಯಾಗಿ ತೇಲಿ ಮನಸ್ಸಿನ ಗೋಡೆಗೆ ಡಿಕ್ಕಿ ಹೊಡೆಯುತ್ತಿದ್ದರೆ, ನನ್ನ ಜಂಘಾಬಲವೇ ಉಡುಗಿ ಹೋಯಿತು.

'ಫೇಸ್ ಅಡ್ರನಲಿನ್' ಎಂಬ ಸಂಸ್ಥೆ ಆ ಜಾಗದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಬಂಗೀ ಜಂಪ್ ನಡೆಸಿಕೊಂಡೇ ಬರುತ್ತಿದೆ. ಪ್ರತಿದಿನ ಕನಿಷ್ಠ ಇನ್ನೂರು ಮಂದಿ ಬಂಗೀ ಜಂಪ್ ಮಾಡುತ್ತಾರೆ. ಸುಮಾರು ಆರು ನೂರು ಮಂದಿ ಜಿಗಿಯದೇ ವಾಪಸ್ ಹೋಗುತ್ತಾರೆ. ಇನ್ನು ಕೆಲವರು ಜಿಗಿಯುವ ಎಲ್ಲ ತಯಾರಿ ಮಾಡಿಕೊಂಡು ಕಾಲಿಗೆ ಹಗ್ಗವನ್ನೂ ಕಟ್ಟಿಕೊಂಡು, ಇಬ್ಬರು ಸಹಾಯಕರು ಇನ್ನೇನು ತಳ್ಳಬೇಕು ಎನ್ನುವಷ್ಟರೊಳಗೆ, ತಮ್ಮ ಮುಂದಿನ ಕಣಿವೆ, ಕೆಳಗಿನ ಪ್ರಪಾತ, ಹರಿವ ನದಿ, ಹರಡಿದ ಬಂಡೆ, ಆವರಿಸಿಕೊಂಡ ಕಾಡು, ನೀರವತೆ, ಸಾವಿನ ಭೀಕರತೆ, ಹೆದರಿಕೆಯ ಅಬ್ಬರ... ಎಲ್ಲವನ್ನೂ ನೆನೆದು, ಸಾಹಸಕ್ಕಿಂತ ಜೀವ ಉಳಿದುಕೊಂಡರೆ ಸಾಕು ಎಂದು ತಕ್ಷಣ ಹಿಂದಕ್ಕೇ ಸರಿದು ಬಿಡುತ್ತಾರೆ. ಯಾವುದೋ ಒಂದು ಶಕ್ತಿ ಅವರನ್ನು ಜಿಗಿಯದಂತೆ ಹಿಂದಕ್ಕೆ ಎಳೆದು ಬಿಡುತ್ತದೆ. ಮತ್ತೆ ಕೆಲವರು ತಮ್ಮನ್ನು ಜಿಗಿಯಲು ಅಣಿಗೊಳಿಸುವ ಸಹಾಯಕರನ್ನು ಸೇರಿಸಿಕೊಂಡೇ ಜಿಗಿಯುವ ಪ್ರಯತ್ನವನ್ನೂ ಮಾಡುತ್ತಾರೆ (ಆದರೆ ಸಹಾಯಕರು ಇಂಥ ಪ್ರಸಂಗವನ್ನು ಊಹಿಸಿಯೇ ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಬೀಳದಂತೆ ಎಚ್ಚರ ವಹಿಸುತ್ತಾರೆನ್ನಿ).

ಬೇಸ್ ಕ್ಯಾಂಪ್‌ನಲ್ಲಿ ಜಿಗಿಯಲು ಹೋಗುವವರ ಇಡೀ ದೇಹಕ್ಕೆ ಬೆಲ್ಟ್ ಕಟ್ಟಿ, ತೂಕ ನೋಡಿ, ಫೇಸ್ ಫಿಯರ್ ಎಂಬ ಸ್ಟಿಕ್ಕರ್ ಅಂಟಿಸಿ, ಮಾನಸಿಕವಾಗಿ ಅಣಿಗೊಳಿಸಿ ಸಿದ್ಧ ಮಾಡಿ ಕಳಿಸುತ್ತಾರೆ. ಅದಾದ ಬಳಿಕ ಒಬ್ಬ ಗೈಡ್ ಒಂದು ತಂಡವನ್ನು ಜಂಪ್ ಮಾಡುವಾಗ ಅನುಸರಿಸಬೇಕಾದ ಕ್ರಮ, ಎಚ್ಚರಿಕೆ, ವಿಧಾನ, ಸಂಭಾವ್ಯ ಪ್ರಸಂಗ, ಆಗಾಗ ಏಳುವ ಪ್ರಶ್ನೆಗಳಿಗೆಲ್ಲ ಸಮಾಧಾನಕರ ಉತ್ತರ ನೀಡುತ್ತಾನೆ. ಬಂಗೀ ಜಂಪ್‌ನ ರೋಮಾಂಚನಕಾರಿ ಅನುಭವ ಹೇಳಿ ಪ್ರೇರೇಪಿಸುತ್ತಾನೆ. ಆನಂತರ ಸೇತುವೆಯ ಒಂದು ಪಾರ್ಶ್ವದಲ್ಲಿ ಕಟ್ಟಿದ ಕಬ್ಬಿಣದ ಜಾಲರಿ (mesh) ಸೇತುವೆಯ ಮೇಲೆ ಕರೆದುಕೊಂಡು ಹೋಗುತ್ತಾನೆ. ಈ ಸೇತುವೆ ಮೇಲೆ ನಡೆಯುವಾಗ ಕೆಳಗೆ ನೋಡಿದರೆ, ಒಂದು ಹೆಜ್ಜೆಯನ್ನೂ ಇಡಲಾಗುವುದಿಲ್ಲ. ಮುಂದೆ ನೋಡುತ್ತಲೇ ನಡೆಯಬೇಕು. ಕೆಳಗೆ ನೋಡಿದರೆ ತಲೆ ಚಕ್ಕರ್ ಹೊಡೆಸುವ ಪ್ರಪಾತ. ಮುಂದೆ ನೋಡುತ್ತಾ ನಡೆಯುವಾಗ ಕಾಲಿಡುವಾಗ ಜಾಲರಿ ತೂತಾಗಿದ್ದರೆ, ಕೆಳಕ್ಕೆ ಬೀಳುತ್ತೇವೆವಲ್ಲ ಎಂಬ ಭಯದಿಂದ ಅಪ್ರಯತ್ನ ಪೂರ್ವಕವಾಗಿ ಲಕ್ಷ್ಯವೆಲ್ಲ ಕಾಲಬುಡಕ್ಕೇ ಹೋಗುತ್ತದೆ. ಕೆಳಗಿನ ಪ್ರಪಾತ ಕಂಡು ಹೆಜ್ಜೆ ಕಿತ್ತಿಡಲು ಆಗುವುದಿಲ್ಲ. ಈ ಸೇತುವೆ ಮೇಲೆ ನಡೆಯುವುದೇ ಒಂದು ದೊಡ್ಡ ಸಾಹಸ, ಬಂಗಿ ಜಂಪ್ ಮಾಡುವುದಿರಲಿ, ಕೆಲವರು ಜಂಪ್ ಮಾಡುವ ಸ್ಥಳಕ್ಕೆ ಹೋಗಬೇಕಾದ ಈ ಸೇತುವೆ ಮೇಲೆ ನಡೆಯಲಾಗದೇ ಹೆದರಿ ವಾಪಸ್ ಬಂದು ಬಿಡುತ್ತಾರೆ.

ಇಷ್ಟೆಲ್ಲ ಮಾಡಿ, ಬಂಗಿ ಜಂಪ್ ಮಾಡುವ ಸಾಹಸಕ್ಕೆ ಬಂದರೆ, ಅದಕ್ಕಿಂತ ಮುನ್ನ ಜಿಗಿದವರ ಕಿರುಚಾಟ, ರೌದ್ರ ನರ್ತನ, ಆಕ್ರಂದನಗಳನ್ನು ಅಲ್ಲಿ ಇಟ್ಟಿರುವ ಟಿವಿ ಪರದೆಯಲ್ಲಿ ನೋಡಿದರೆ, ಕರುಳೆಲ್ಲ ಕೈಗೆ ಬಂದಂತಾಗುತ್ತದೆ. ನಾಲಗೆ ಒಣಗಿ, ಮಾತು ಮರೆತು ಹೋದಂತೆನಿಸುತ್ತದೆ. ಇನ್ನೇನು ಜಂಪ್ ಮಾಡಬೇಕು ಎನ್ನುವ ತಾಣದಲ್ಲಿ ನಿಂತು ಸುತ್ತಲ ದಿಗಂತ ದಿಟ್ಟಿಸಿ, ಮುಂದಿನ ನಲವತ್ತೆಂಟು ಸೆಕೆಂಡುಗಳನ್ನು ಮನಸ್ಸಿನಲ್ಲಿ ಊಹಿಸಿದೆ. ನಿಂತ ಅಟ್ಟಣಿಗೆಯೇ ಕುಸಿದು ಹೋದಂತಾಯಿತು. ಬದುಕಿದರೆ ಬೇಡಿಕೊಂಡಾದರೂ ಬದುಕಬಹುದು, ಇಂಥ ದುಸ್ಸಾಹಸಕ್ಕೆ ಹೋಗಬೇಡ ಎಂದು ಒಳಮನಸ್ಸು ಕೈ ಜಗ್ಗಿ ಹಿಂದಕ್ಕೆ ಎಳೆದಂತಾಯಿತು.

ಆ ಕ್ಷಣದಲ್ಲಿಯೇ ಹಿಂದೆ ಹೆಜ್ಜೆ ಹಾಕಿದೆ !

ಅದು ನನ್ನ ವೈಯಕ್ತಿಕ ಸೋಲು. ಈಗಲೂ ಆ ಸೋಲು ನನ್ನನ್ನು ವಿಪರೀತ ಕಾಡುತ್ತಿದೆ. ಏನೇ ಆದರೂ ಕೈಚೆಲ್ಲಬಾರದಿತ್ತು. ಜಿಗಿಯಬೇಕಿತ್ತು. ಸಾವಿನ ದವಡೆಯೊಳಗೆ ಹೊಕ್ಕಿ, ಆನಂದದ ಅತಿರೇಕದ ಅಬ್ಬರದ ಅಲೆಯಲ್ಲಿ ತೇಲುವ ಒಂದು ಅನೂಹ್ಯ ಅನುಭವ ತಪ್ಪಿಸಿಕೊಂಡ ಒಂದು ದಿವ್ಯನೋವು ಈಗಲೂ ವಿಪರೀತ ಬಾಧಿಸುತ್ತಿದೆ. Those who don't jump will never fly ಎಂಬ ಮಾತಿದೆ. ಈ ಮಾತು ನನ್ನಂಥವರಿಗಾಗಿಯೇ ಹೇಳಿರಬೇಕು.

'ಜೀವನದಲ್ಲಿ ತಾನು ಏನೇ ಆದರೂ ಸೋಲಲಾರೆ ಎಂಬ ಪಾಠದ ನೀತಿ ಅರ್ಥವಾಗಬೇಕಾದರೆ ನೀವು ಬಂಗೀ ಜಂಪ್ ಮಾಡಬೇಕು. ಆದರೆ ಬಹುತೇಕ ಮಂದಿ (ಸೋಲುತ್ತೇನೆಂಬ) ಹೆದರಿಕೆಯಿಂದ ಜಂಪ್ ಮಾಡುವುದೇ ಇಲ್ಲ. ಅಂಥವರಿಗೆ ಬದುಕಿರುವಾಗ ಸಾವನ್ನು ನೋಡುವ ಅನುಭವವೇ ಆಗುವುದಿಲ್ಲ' ಎಂದ ನಮ್ಮ ಜತೆಗಿದ್ದ ಬಂಗೀ ಜಂಪ್ ಗೈಡ್. ನನ್ನನ್ನು ಅಣಕಿಸಲೆಂದೇ ಆ ಮಾತುಗಳನ್ನು ಹೇಳಿದ ಎಂದು ಭಾವಿಸಿದೆ. If it scares you, it might be a good thing to try ಎಂದ. ನನಗೆ ತೀವ್ರ ವಿಷಾದವೆನಿಸಿತು.

ನಾವು ಯಾವುದನ್ನು ಎಲ್ಲಿ ಕಳೆದುಕೊಂಡಿದ್ದೇವೋ, ಅಲ್ಲಿಯೇ ಹುಡುಕಬೇಕಂತೆ. ಅದನ್ನು ಅಲ್ಲಿಯೇ ಪಡೆಯಲು ಸಾಧ್ಯ. ದಕ್ಷಿಣ ಆಫ್ರಿಕಾದ ಬ್ಲೋಕ್ರಾನ್ಸ್ ಕಣಿವೆಯಲ್ಲಿ ಕಳೆದು ಹೋದ ನನ್ನನ್ನು ಹಾಗೂ ನನ್ನ ಧೈರ್ಯವನ್ನು ಅಲ್ಲಿಯೇ ಪಡೆಯಬೇಕೆಂದು ನಿರ್ಧರಿಸಿದೆ. ಈ ಕಿಚ್ಚಿನಲ್ಲೇ ಕೆಳಗೆ ಕಣಿವೆ, ದುರ್ಗಮ ಪ್ರಪಾತ, ತಂತಿಯ ಮೇಲೆ ಜಾರುವ ಜಿಪ್ ಲೈನಿಂಗ್ ಮಾಡಲೇಬೇಕೆಂದು ನಿರ್ಧರಿಸಿ ತಂತಿಯ ಮೇಲೆ ಜಾರಿದೆ. ಏಕೋ ಬಂಗೀ ಜಂಪ್‌ನ ಕ್ರೂರ ಅಣಕ ಎಂದೆನಿಸಿಬಿಟ್ಟಿತು.

If you want something you never had, you have to do something you have never done ಎಂಬ ಮಾತು ಎಷ್ಟೊಂದು ಸತ್ಯ !

I do. Certainly!

ದಿ ಬೆಂಗಾಲ್ ಫೈಲ್ಸ್ - ಬಂಗಾಳದ ಕರಾಳ ಇತಿಹಾಸದ ಮರುದರ್ಶನ

ರಾಜ್‌ಗುರು ಕೆ ಆರ್ (ಹೋರ್ತಿ)
ಸಕಾಲಿಕ
vveditoped@gmail.com

ವಿವೇಕ್ ಅಗ್ನಿಹೋತ್ರಿ ನಿರ್ದೇಶನದ ದಿ ಬೆಂಗಾಲ್ ಫೈಲ್ಸ್ ಇದೇ ಸೆಪ್ಟೆಂಬರ್ 5ರಿಂದ ತೆರೆಗೆ ಬರಲು ಸಜ್ಜಾಗಿದೆ. ಮಾರ್ಚ್ ಎಪ್ರಿಲ್ 2026ರಲ್ಲಿ ಪಶ್ಚಿಮ ಬಂಗಾಳದಲ್ಲಿ ಚುನಾವಣೆಗಳಿವೆ. 'ದಿ ಬೆಂಗಾಲ್ ಫೈಲ್ಸ್' ಚಿತ್ರದ ಬಿಡುಗಡೆಯು, ಕೇವಲ ಒಂದು ಚಲನಚಿತ್ರ ಬಿಡುಗಡೆಗಿಂತ ಹೆಚ್ಚು ಮಹತ್ವವನ್ನು ಪಡೆದಿದೆ. ಇದು ಇತಿಹಾಸ, ರಾಜಕೀಯ, ಮತ್ತು ಕೋಮು ಸೌಹಾರ್ದತೆಯ ಕುರಿತ ಚರ್ಚೆಗಳನ್ನು ಮತ್ತೆ ಮುನ್ನಲೆಗೆ ತಂದಿದೆ. ಬಂಗಾಳದ ಇತಿಹಾಸದ ಒಂದು ಕರಾಳ ಅಧ್ಯಾಯವನ್ನು ತೆರೆದಿಡಲು ಹೊರಟಿರುವ ಈ ಸಿನಿಮಾ ಬಿಡುಗಡೆಯಾಗುತ್ತಿರುವ ಸಮಯದ ಬಗ್ಗೆ ಕೆಲವರು ಅಪಸ್ವರ ಎತ್ತಿರುವುದು ಹಾಗೂ ಇದು ಅಜೆಂಡಾ ಇಟ್ಟುಕೊಂಡು ತಯಾರಿಸಲಾದ ಚಿತ್ರ ಎಂದು ಹೇಳುತ್ತಿರುವುದು ಒಂದೆಡೆಯಾದರೆ, ಪ್ರಸ್ತುತ ಆ ರಾಜ್ಯದಲ್ಲಿ ನಡೆಯುತ್ತಿರುವ ಸಾಂಪ್ರದಾಯಿಕ ಹಿಂಸಾಚಾರ ,ದಂಗೆ, ವೋಟ್ ಬ್ಯಾಂಕ್ ಭದ್ರಗೊಳಿಸುವಿಕೆಗೆ ಪೂರಕವಾಗಿ ನಡೆಯುತ್ತಿರುವ ಅಕ್ರಮ ನುಸುಳುವಿಕೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈ ಚಿತ್ರವನ್ನು ಅಜೆಂಡಾ ಇಟ್ಟುಕೊಂಡು ತಯಾರಿಸಲಾಗಿದೆ ಎಂದು ನಿರ್ಲಕ್ಷ್ಯ ಮಾಡುವವರು ಕೂಡ ಇಷ್ಟು ದಿವಸಗಳ ವರೆಗೆ ಈ ಸಂಕೀರ್ಣ ವಿಷಯದ ಕುರಿತು ವ್ಯಕ್ತಪಡಿಸಿರುವ ದಿವ್ಯಮೌನ ಕೂಡ ಅಜೆಂಡಾದ ಭಾಗವೇ ಅಲ್ಲವೇ ?

'ದಿ ಬೆಂಗಾಲ್ ಫೈಲ್ಸ್' ಚಿತ್ರವು, 1940ರ ದಶಕದ ಪೂರ್ವಾರ್ಧದಲ್ಲಿ ಬಂಗಾಳದಲ್ಲಿ ನಡೆದ ಭೀಕರ ಕೋಮು ಗಲಭೆಗಳ ಮೇಲೆ ಕೇಂದ್ರೀಕರಿಸಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, 1946ರ 'ನೇರ ಕಾರ್ಯಾಚರಣೆಯ ದಿನ' (Direct Action Day) ಮತ್ತು ನೌಖಾಲಿ ಗಲಭೆಗಳ ಕುರಿತು ಈ ಚಿತ್ರ ಬೆಳಕು ಚೆಲ್ಲಲಿದೆ ಎಂದು ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ತಿಳಿಸಿದ್ದಾರೆ. ಈ ಘಟನೆಗಳು ಬಂಗಾಳದ ಹಿಂದೂ ಸಮುದಾಯದ ಮೇಲೆ ನಡೆದ ಭೀಕರ ಹತ್ಯಾಕಾಂಡ, ಬಲವಂತದ ಮತಾಂತರ ಮತ್ತು ಹಿಂಸಾಚಾರಗಳನ್ನು ವಿವರಿಸಲಿದೆ. ಈ ಹಿಂದೆ ಕಾಶ್ಮೀರ ಫೈಲ್ಸ್ ಮೂಲಕ ಕಾಶ್ಮೀರಿ ಪಂಡಿತರ ಹತ್ಯಾಕಾಂಡದ ಬಗ್ಗೆ ವಿವರಿಸಿ, ನೋಡುಗರ ಕಣ್ಣಂಚಿನಲ್ಲಿ ಭಾವನಾತ್ಮಕ ಸ್ಪಂದನೆ ಕಂಡಿದ್ದ ನಿರ್ದೇಶಕರು, ನೂತನ ಚಿತ್ರದ ಮೂಲಕ ಬಂಗಾಲದಲ್ಲಿ ನಡೆದ ನರಮೇಧಗಳ ಕುರಿತಾಗಿ ಚಿತ್ರ ಮಾಡಿದ್ದು ಸಹಜವಾಗಿ ಎಲ್ಲರಲ್ಲೂ ಕುತೂಹಲ ಮೂಡಿಸಿದೆ.

1905ರ ಬಂಗಾಳ ವಿಭಜನೆಯ ನಂತರ, ಬಂಗಾಳವು ಕೇವಲ ರಾಜಕೀಯ ಹೋರಾಟದ ಕೇಂದ್ರವಾಗದೆ, ಭಾರತೀಯ ರಾಷ್ಟ್ರೀಯತೆಯ ದಾರಿದೀಪವಾಯಿತು. 'ಸ್ವದೇಶಿ' ಚಳುವಳಿ ಇಲ್ಲಿಂದಲೇ ಪ್ರಾರಂಭಗೊಂಡು ದೇಶಾದ್ಯಂತ ಹರಡಿತು. ಬಂಗಾಳದ ಕವಿಗಳು, ಬರಹಗಾರರು ಮತ್ತು ಬುದ್ಧಿಜೀವಿಗಳು ತಮ್ಮ ಕೃತಿಗಳ ಮೂಲಕ ಜನರಲ್ಲಿ ದೇಶಭಕ್ತಿಯನ್ನು ತುಂಬಿದರು. ಇತ್ತೀಚಿನ ಪಶ್ಚಿಮ ಬಂಗಾಳದ ರಾಜಕೀಯ ಹಿಂಸಾಚಾರ ಮತ್ತು ಘರ್ಷಣೆಗಳು ರಾಷ್ಟ್ರಮಟ್ಟದಲ್ಲಿ ಹೆಚ್ಚು ಚರ್ಚೆಯಾಗುತ್ತಿರುವ ವಿಷಯವಾಗಿದೆ. ಹೆಚ್ಚಾಗಿ ಇವೆಲ್ಲವನ್ನೂ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳ ನಡುವಿನ ರಾಜಕೀಯ ದ್ವೇಷದ ಪರಿಣಾಮವೆಂದು ಮಾತ್ರ ನೋಡಲಾಗುತ್ತಿದೆ. ಆದರೆ, ಈ ರೀತಿಯ ಒಂದು ಸಿದ್ಧ ತೀರ್ಮಾನಕ್ಕೆ ಬರುವ ಮುನ್ನ, ಪಶ್ಚಿಮ ಬಂಗಾಳದಲ್ಲಿನ ಹಿಂಸಾತ್ಮಕ ರಾಜಕೀಯದ ಬೇರುಗಳು ಶತಮಾನಗಳಷ್ಟು ಹಳೆಯದಾಗಿವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ಸ್ವಾತಂತ್ರ್ಯ ಪೂರ್ವದ ಬಂಗಾಳ ವಿಭಜನೆಯಿಂದ ತೊಡಗಿ, ಈ ಪ್ರದೇಶವು ನಿರಂತರವಾಗಿ ಹಿಂಸಾಚಾರಕ್ಕೆ ಸಾಕ್ಷಿಯಾಗಿದೆ. ವಿಭಜನೆಯ ಪೂರ್ವ ಮತ್ತು ನಂತರದ ಘಟನೆಗಳನ್ನು ನೋಡಿದಾಗ ಪಂಜಾಬ್‌ನಲ್ಲಿ ನಡೆದ ದಂಗೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಇದರ ಹಿಂದಿನ ಕಾರಣಗಳು ಏನೇ ಇರಲಿ, ಪಶ್ಚಿಮ ಬಂಗಾಳದಲ್ಲಿ ನಡೆದ ಹಿಂಸಾಚಾರ ಮತ್ತು ಲಕ್ಷಾಂತರ ಜನರ ಸ್ಥಳಾಂತರದ ದುರಂತಗಳು ಸಾರ್ವಜನಿಕ ಚರ್ಚೆಯ ಭಾಗವಾಗಲೇ ಇಲ್ಲ. ಇದು ಒಂದು ದುರಂತವೇ ಸರಿ. ಮಾಧ್ಯಮಗಳು ಮತ್ತು ಇತಿಹಾಸಕಾರರು ಕೂಡ ಹೆಚ್ಚಾಗಿ ಪಂಜಾಬ್‌ನತ್ತ ಗಮನ ಹರಿಸಿದ ಕಾರಣ, ಬಂಗಾಳದ ನೋವು ಹೆಚ್ಚು ಜನರ ಗಮನಕ್ಕೆ ಬರಲಿಲ್ಲ.

ಭಾರತದ ವಿಭಜನೆ ಸಂದರ್ಭ, ಅದರ ಹಿನ್ನೆಲೆಗಳ ಬಗ್ಗೆ ವಿವಿಧ ಅಭಿಪ್ರಾಯಗಳಿದ್ದರೂ ಪಶ್ಚಿಮ ಬಂಗಾಳ ಭಾರತದ ಇತಿಹಾಸದಲ್ಲಿ ಡೈರೆಕ್ಟ್ ಆ್ಯಕ್ಶನ್ ಡೇ (ನೇರ ಕಾರ್ಯಾಚರಣೆ ದಿನ) ಪ್ರಮುಖ ಭಾಗವಾಗಿತ್ತು ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. 1946ರಲ್ಲಿ ನಡೆದ ಚುನಾವಣೆಗಳು ಮುಸ್ಲಿಂ ಲೀಗ್‌ಗೆ ದಿನೇ ದಿನೇ ಹೆಚ್ಚುತ್ತಿದ್ದ ವರ್ಚಸ್ಸು, ದ್ವಿರಾಷ್ಟ್ರ ಸಿದ್ಧಾಂತಕ್ಕೆ ಒಂದು ವೇದಿಕೆ ಸೃಷ್ಟಿಸುವ ಉಮೇದು ಹೆಚ್ಚಿಸಿತ್ತು. ಅದಕ್ಕೆ ಪೂರಕವಾಗಿ ಪಶ್ಚಿಮ ಬಂಗಾಲದಲ್ಲಿ ದಂಗೆ ಸೃಷ್ಟಿಸಿ, ಗಮನವನ್ನು ಸೆಳೆಯಲು ನಿರ್ಧರಿಸಿದ್ದು ಗಮನಾರ್ಹ.

1946ರ ಆಗಸ್ಟ್ 16ರಂದು, ಮುಸ್ಲಿಂ ಲೀಗ್ ಘೋಷಿಸಿದ ನೇರ ಕಾರ್ಯಾಚರಣೆಯ ದಿನವು ಭಾರತದ ಇತಿಹಾಸದಲ್ಲಿ ಒಂದು ನಿರ್ಣಾಯಕ ಮತ್ತು ದುರಂತದ ಘಟನೆಯಾಗಿದೆ. 1946ರ ಚುನಾವಣೆಯಲ್ಲಿ ಮುಸ್ಲಿಂ ಲೀಗ್ ಸಾಧಿಸಿದ ಭರ್ಜರಿ ಗೆಲುವು ಈ ನಿರ್ಧಾರಕ್ಕೆ ಪ್ರಮುಖ ಕಾರಣವಾಯಿತು. ಒಟ್ಟು 429 ಮುಸ್ಲಿಂ ಸ್ಥಾನಗಳ ಪೈಕಿ 425 ಸ್ಥಾನಗಳನ್ನು ಗೆಲ್ಲುವ ಮೂಲಕ ಮುಸ್ಲಿಂ ಸಮುದಾಯದ ಏಕೈಕ ಪ್ರತಿನಿಧಿ ತಾವೇ ಎಂದು ಅದು ಸಾಬೀತುಪಡಿಸಿತು. ವಿಶೇಷವಾಗಿ ಬಂಗಾಳದಲ್ಲಿ 119ರಲ್ಲಿ 113 ಸ್ಥಾನಗಳನ್ನು ಗಳಿಸಿದ್ದು ಮುಸ್ಲಿಂ ಲೀಗ್‌ನ ಪ್ರಭಾವಕ್ಕೆ ಸಾಕ್ಷಿಯಾಗಿತ್ತು.

ನೇರ ಕಾರ್ಯಾಚರಣೆಯ ಘೋಷಣೆ: ಚುನಾವಣೆಯಲ್ಲಿ ಮುಸ್ಲಿಂ ಲೀಗ್‌ನ ಭರ್ಜರಿ ಜಯದ ಹೊರತಾಗಿಯೂ, ಬ್ರಿಟಿಷ್ ಸರ್ಕಾರವು ಸಂವಿಧಾನ ರಚನಾ ಸಭೆಯಲ್ಲಿ ಅಧಿಕಾರ ಹಂಚಿಕೊಳ್ಳುವ ಯೋಜನೆಯನ್ನು ತಂದಾಗ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಿನ ಭಿನ್ನಾಭಿಪ್ರಾಯಗಳು ಹೆಚ್ಚಾದವು. ಈ ಪರಿಸ್ಥಿತಿಯಲ್ಲಿ, ಮುಸ್ಲಿಂ ಲೀಗ್ ತನ್ನ ಪ್ರತ್ಯೇಕ ದೇಶದ ಬೇಡಿಕೆಯನ್ನು ಬಲವಾಗಿ ಪ್ರತಿಪಾದಿಸಲು ನೇರ ಕಾರ್ಯಾಚರಣೆ ಘೋಷಿಸಿತು. ಈ ಘೋಷಣೆಯ ಹಿಂದಿನ ಉದ್ದೇಶವೆಂದರೆ, ಬ್ರಿಟಿಷ್ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ಒತ್ತಡ ಹೇರಿ ಪಾಕಿಸ್ತಾನದ ಬೇಡಿಕೆಯನ್ನು ಒಪ್ಪಿಸುವುದು. ಆಗಸ್ಟ್ 16, 1946 ರಂದು, ದೇಶಾದ್ಯಂತ ಈ ಕಾರ್ಯಾಚರಣೆಯನ್ನು ಆಚರಿಸಲು ನಿರ್ಧರಿಸಲಾಯಿತು.

ಕಲ್ಕತ್ತಾದಲ್ಲಿ ಭೀಕರ ಹಿಂಸಾಚಾರ: ನೇರ ಕಾರ್ಯಾಚರಣೆಯ ದಿನಕ್ಕಾಗಿ ಬಂಗಾಳವನ್ನು ಆಯ್ಕೆ ಮಾಡಿದ್ದು, ಕೋಲ್ಕತ್ತಾ ಒಂದು ಕೈಗಾರಿಕಾ ಪ್ರದೇಶವಾಗಿದ್ದ ಕಾರಣದಿಂದಾಗಿ ಅದನ್ನು ಪೂರ್ವ ಪಾಕಿಸ್ತಾನದ ಭಾಗವನ್ನಾಗಿ ಮಾಡಲು ಬಯಸಿದ್ದರು. ಅದಕ್ಕಾಗಿ ಹಿಂದೂಗಳನ್ನು ಬಂಗಾಳದಿಂದ ಹೊರಗೆ ಕಳುಹಿಸುವುದು ಅವರ ಉದ್ದೇಶವಾಗಿತ್ತು.

ಮೊದಲಿಗೆ ಕೇವಲ ಮುಷ್ಕರದಂತೆ ಕಂಡರೂ, ವಾಸ್ತವವಾಗಿ ಇದು ಹಿಂದೂಗಳ ವಿರುದ್ಧದ ಒಂದು ಪೂರ್ವನಿಯೋಜಿತ ಕಾರ್ಯಾಚರಣೆಯಾಗಿತ್ತು. ಮುಸ್ಲಿಂ ಲೀಗ್ ಬೆಂಬಲಿಗರು ಸಾರ್ವಜನಿಕವಾಗಿ ಘೋಷಣೆಗಳನ್ನು ಕೂಗುತ್ತಾ, ಹಿಂದೂ ಸಮುದಾಯದವರ ಮೇಲೆ ದಾಳಿ ಮಾಡಿದರು. ಅಂಗಡಿಗಳು, ಮನೆಗಳು ಮತ್ತು ದೇವಾಲಯಗಳನ್ನು ಸುಟ್ಟು ಹಾಕಿ, ಸಾಮೂಹಿಕ ಹತ್ಯೆಗಳನ್ನು ನಡೆಸಲಾಯಿತು. ಒಂದು ಅಂದಾಜಿನ ಪ್ರಕಾರ, ಕೇವಲ 72 ಗಂಟೆಗಳಲ್ಲಿ 40 ಸಾವಿರಕ್ಕೂ ಅಧಿಕ ಜನರು ಪ್ರಾಣ ಕಳೆದುಕೊಂಡರು. ಲಕ್ಷಾಂತರ ಜನರು ಗಾಯಗೊಂಡರು. 1946ರ ಆಗಸ್ಟ್ 16, ಶುಕ್ರವಾರದಂದು, ಕೇಸೋರಾಮ್ ಕಾಟನ್ ಮಿಲ್ಸ್‌ನಲ್ಲಿ 600 ಹಿಂದೂಗಳನ್ನು ಬರ್ಬರವಾಗಿ ಹತ್ಯೆ ಮಾಡಲಾಯಿತು ಈ ಘಟನೆಯನ್ನು ಇತಿಹಾಸದಲ್ಲಿ 'ಗ್ರೇಟ್ ಕಲ್ಕತ್ತಾ ಕಿಲ್ಲಿಂಗ್ ಎಂದೇ ಕರೆಯಲಾಗುತ್ತದೆ. ಗೋಪಾಲ್ ಪಾಠಾ ನೇತೃತ್ವದಲ್ಲಿ ಹಿಂದೂಗಳು ಕೂಡ ಪ್ರತಿರೋಧ ಒಡ್ಡಿ, ನಂತರ ಸುಹ್ರಾವರ್ದಿಯ ಪ್ರತಿನಿಧಿಯಾಗಿ ಶೇಖ್ ಮುಜಿಬುರ್ ರಹಮಾನ್ ಶಾಂತಿದೂತರಾಗಿ ಕಾರ್ಯನಿರ್ವಹಿಸಿ ದಂಗೆ ಶಾಂತಗೊಂಡಿದ್ದು ಗಮನಾರ್ಹ. (ಮುಂದೆ ಇದೇ ಶೇಕ್ ಮುಜಿಬುರ್ ರಹಮಾನ್ ಇದೇ ಪಾಕಿಸ್ತಾನಿಗಳಿಂದ ವಿಮೋಚನೆ ಬಯಸಿ, ಭಾರತದ ಸಹಾಯದಿಂದ ಬಾಂಗ್ಲಾ ವಿಮೋಚನೆಗೆ ಕಾರಣವಾಗಿದ್ದು ಸ್ಮರಣಾರ್ಹ)

ನೇರ ಕಾರ್ಯಾಚರಣೆಯ ದಿನದಂದು ನಡೆದ ಹಿಂಸಾಚಾರವು ದೇಶದ ವಿಭಜನೆಯ ಪ್ರಕ್ರಿಯೆಗೆ ವೇಗವನ್ನು ನೀಡಿತು. ಕಲ್ಕತ್ತಾದಲ್ಲಿ ನಡೆದ ಹತ್ಯಾಕಾಂಡವು ದೇಶಾದ್ಯಂತ ಕೋಮು ಗಲಭೆಗಳನ್ನು ಪ್ರಚೋದಿಸಿತು. ಬಿಹಾರ, ನೌಖಾಲಿ, ಮತ್ತು ಇತರ ಭಾಗಗಳಲ್ಲಿಯೂ ಹಿಂಸಾಚಾರ ಭುಗಿಲೆದ್ದಿತು. ಹಿಂದೂ-ಮುಸ್ಲಿಂ ಸಂಬಂಧಗಳು ತೀರಾ ಹದಗೆಟ್ಟವು, ಮತ್ತು ಶಾಂತಿಯುತ ಸಹಬಾಳ್ವೆ ಅಸಾಧ್ಯ ಎಂಬ ಭಾವನೆ ಬಲಗೊಂಡಿತು. ಈ ಘಟನೆಗಳು ಭಾರತದ ಸ್ವಾತಂತ್ರ್ಯಕ್ಕೆ ಅನಿವಾರ್ಯವಾಗಿತ್ತು, ಆದರೆ ದೇಶದ ವಿಭಜನೆ ಅನಿವಾರ್ಯ ಎಂಬುದನ್ನು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟವು.

ಕೋಲ್ಕತ್ತಾದ ಆಯ್ಕೆಗೆ ಕಾರಣ: ಕೋಲ್ಕತ್ತಾ ಬ್ರಿಟಿಷ್ ಭಾರತದ ರಾಜಧಾನಿಯಾಗಿದ್ದ ಕಾರಣ, ಅದು ವಾಣಿಜ್ಯ ಮತ್ತು ರಾಜಕೀಯವಾಗಿ ಒಂದು ಪ್ರಮುಖ ಕೇಂದ್ರವಾಗಿತ್ತು. ಯಾವುದೇ ಬೃಹತ್ ಪ್ರತಿಭಟನೆಯು ಈ ನಗರದಲ್ಲಿ ಸಂಭವಿಸಿದರೆ ಅದು ಇಡೀ ಬ್ರಿಟಿಷ್ ಆಡಳಿತವನ್ನು ಮತ್ತು ಅಂತರರಾಷ್ಟ್ರೀಯ ಸಮುದಾಯವನ್ನು ಆಕರ್ಷಿಸುತ್ತದೆ ಎಂದು ಲೀಗ್ ನಾಯಕರು ತಿಳಿದಿದ್ದರು. ಒಂದು ವೇಳೆ ಇಲ್ಲಿ ಹಿಂಸಾಚಾರ ನಡೆದರೆ, ಅದು ದೇಶದ ಉಳಿದ ಭಾಗಗಳ ಮೇಲೂ ಪರಿಣಾಮ ಬೀರುತ್ತದೆ ಎಂಬುದು ಅವರ ಲೆಕ್ಕಾಚಾರವಾಗಿತ್ತು.

ವಿಭಜನೆ ಪೂರ್ವದ ಯುಗ: ಬಂಗಾಳದಲ್ಲಿ ಕೋಮು ಉದ್ವಿಗ್ನತೆಗಳು ಆಳವಾದ ಬೇರುಗಳನ್ನು ಹೊಂದಿವೆ, ಇದು ಬ್ರಿಟಿಷ್ ವಸಾಹತುಶಾಹಿ ನೀತಿಗಳಿಂದ ಗಣನೀಯವಾಗಿ ಉಲ್ಬಣಗೊಂಡಿದೆ. 1905 ರಲ್ಲಿ ಬಂಗಾಳದ ವಿಭಜನೆಯು, ಪ್ರಾಂತ್ಯವನ್ನು ಧಾರ್ಮಿಕ ಮಾರ್ಗಗಳಲ್ಲಿ ವಿಂಗಡಿಸಿತು, ಇದು ವಿಭಜಿಸಿ ಮತ್ತು ಆಳುವ ತಂತ್ರಕ್ಕೆ ಪ್ರಮುಖ ಉದಾಹರಣೆಯಾಗಿದೆ. ವ್ಯಾಪಕ ಪ್ರತಿಭಟನೆಗಳಿಂದಾಗಿ 1911 ರಲ್ಲಿ ವಿಭಜನೆಯನ್ನು ರದ್ದುಗೊಳಿಸಲಾಗಿದ್ದರೂ, ಇದು ಹಿಂದೂಗಳು ಮತ್ತು ಮುಸ್ಲಿಮರ ನಡುವೆ ದೀರ್ಘಕಾಲದ ಅಪನಂಬಿಕೆ ಮತ್ತು ದ್ವೇಷದ ಪರಂಪರೆಯನ್ನು ಉಳಿಸಿತು.

ಕಮ್ಯುನಿಸ್ಟ್ ಆಡಳಿತದಲ್ಲಿ: ಪ.ಬಂಗಾಳದ ಇತಿಹಾಸದಲ್ಲಿ ಕಮ್ಯೂನಿಸ್ಟ್ ಆಡಳಿತದಲ್ಲಿ ಹಿಂದೂಗಳ ವಿರುದ್ಧ 'ಬಿಜೋನ್ ಸೇತು ಹತ್ಯಾಕಾಂಡ' ಎಂದು ಕರೆಯಲ್ಪಡುವ ಆನಂದ ಮಾರ್ಗ ಸನ್ಯಾಸಿಗಳ ಕೊಲೆಯು ಕಮ್ಯೂನಿಸ್ಟ್ ಆಡಳಿತದಲ್ಲಿ ಹಿಂದೂಗಳನ್ನು ದಮನಿಸಲು ನಡೆದಿದ್ದು, 1982ರ ಏಪ್ರಿಲ್ 30 ರಂದು ಕೋಲ್ಕತ್ತಾದಲ್ಲಿ ಆನಂದ ಮಾರ್ಗ ಧಾರ್ಮಿಕ ಸಂಸ್ಥೆಗೆ ಸೇರಿದ 17 ಸನ್ಯಾಸಿಗಳು ಮತ್ತು ಸನ್ಯಾಸಿನಿಯರನ್ನು ಸಾಮೂಹಿಕವಾಗಿ ಕೊಲೆ ಮಾಡಲಾದ ಘಟನೆಯಾಗಿದೆ. ಕಮ್ಯೂನಿಸ್ಟ್ ಗೂಂಡಾಗಳ ಗುಂಪುಗಳು, ಸನ್ಯಾಸಿಗಳನ್ನು ಅಮಾನವೀಯವಾಗಿ ಥಳಿಸಿ, ಅವರ ಮೇಲೆ ಸೀಮೆಎಣ್ಣೆ ಸುರಿದು ಜೀವಂತವಾಗಿ ಬೆಂಕಿ ಹಚ್ಚಿದ್ದು ಘಟನೆಯ ಕ್ರೂರತೆಗೆ ಸಾಕ್ಷಿ. ಘಟನೆಯು ಸಾವಿರಾರು ಜನರ ಸಮ್ಮುಖದಲ್ಲಿ ನಡೆದರೂ, ಯಾವುದೇ ಪ್ರಮುಖ ವ್ಯಕ್ತಿಗಳನ್ನು ಬಂಧಿಸಲಿಲ್ಲ ಅಥವಾ ತಕ್ಷಣದ ಕ್ರಮ ತೆಗೆದುಕೊಳ್ಳಲಿಲ್ಲ. ಈ ಘಟನೆಯನ್ನು ಕೇವಲ ರಾಜಕೀಯ ಪ್ರೇರಿತ ಹಿಂಸಾಚಾರವೆಂದು, ಕಮ್ಯುನಿಸ್ಟ್ ಆಡಳಿತದ ಕ್ರೂರತೆಯನ್ನು ಹೊರಜಗತ್ತು ಹೀಗೆ ವ್ಯಾಖ್ಯಾನಿಸಿತೇ ಹೊರತು ಅಲ್ಲಿನ ಹಿಂಸಾಚಾರವನ್ನು ಪ್ರಮುಖವಾಗಿ ಪರಿಗಣಿಸಲೇ ಇಲ್ಲ.'.

ಇತ್ತೀಚಿನ ಘಟನೆಗಳು: 2011 ರಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಅಧಿಕಾರಕ್ಕೆ ಬಂದಾಗಿನಿಂದ, ಹಿಂದೂಗಳ ಮೇಲಿನ ದೌರ್ಜನ್ಯದ ಆರೋಪಗಳು ಪ್ರಮುಖ ರಾಜಕೀಯ ಸಂಘರ್ಷದ ಕೇಂದ್ರಬಿಂದುವಾಗಿವೆ. ಬಿಜೆಪಿ ಟಿಎಂಸಿ ನಡುವಿನ ರಾಜಕೀಯ ವಿರೋಧ ಎಂದು ಹೊರಜಗತ್ತಿಗೆ ಕಂಡರೂ ಬಂಗಾಲದಲ್ಲಿ ಇಂದಿಗೂ ಮುಸ್ಲಿಂ ಲೀಗ್ ನ ಮನಸ್ಥಿತಿಯೇ ಇನ್ನೂ ಕೂಡ ಇದೆ ಎಂಬುದು ಸ್ಪಷ್ಟ.

2021 ರ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗಳ ನಂತರ, ವ್ಯಾಪಕ ಹಿಂಸಾಚಾರ ವರದಿಯಾಗಿದೆ. ಮುರ್ಷಿದಾಬಾದ್‌ನಂತಹ ಜಿಲ್ಲೆಗಳಲ್ಲಿ ಹಲವಾರು ಕೋಮು ಹಿಂಸಾಚಾರದ ಘಟನೆಗಳು ವರದಿಯಾಗಿವೆ. ಇತ್ತೀಚಿನ ಘಟನೆಯಲ್ಲಿ ಕೋಲ್ಕತ್ತಾ ಹೈಕೋರ್ಟ್ ನೇಮಿಸಿದ ಸತ್ಯಶೋಧನಾ ಸಮಿತಿಯು ಹಿಂದೂಗಳು ಮತ್ತು ಅವರ ದೇವಾಲಯಗಳನ್ನು ಗುರಿಯಾಗಿಸಲಾಗಿತ್ತು ಎಂಬುದಾಗಿ ತಿಳಿಸಿದೆ. ಸಂದೇಶ್‌ಖಾಲಿ ಪ್ರಕರಣದಲ್ಲಿ ಮಹಿಳೆಯರನ್ನು ಧರ್ಮದ ಆಧಾರದ ಮೇಲೆ ಹಿಂಸಿಸಲಾಗಿದ್ದು ಟಿಎಂಸಿ ಬರ್ಬರತೆಗೆ ಸಾಕ್ಷಿ.

ಸ್ವಾತಂತ್ರ ಪೂರ್ವದಿಂದ ಇಲ್ಲಿಯವರೆಗೆ, ಕಮ್ಯೂನಿಸ್ಟ್ ಸರ್ಕಾರದಿಂದ, ಟಿಎಂಸಿವರೆಗೆ, ಜ್ಯೋತಿ ಬಸು ಅವರಿಂದ ಹಿಡಿದು ಮಮತಾ ದೀದಿ ವರೆಗೆ, ಬಂಗಾಲದಲ್ಲಿ ನಡೆದಿದ್ದು ಇತಿಹಾಸ, ಮಾನವೀಯತೆ ಕ್ಷಮಿಸದ ಘಟನೆಗಳು. ಈ ಘಟನೆಗಳು ಯಾವುದೇ ಮಾನವಹಕ್ಕು ಹೋರಾಟಗಾರರ ಹೋರಾಟಗಳಲ್ಲಿ, ಮಾಧ್ಯಮಗಳ ಚರ್ಚೆಗಳಲ್ಲಿ, ಅಂತರಾಷ್ಟ್ರೀಯ ವೇದಿಕೆಗಳಲ್ಲಿನ ಸಂವಾದಗಳಲ್ಲಿ ಗಮನಕ್ಕೆ ಬರುವುದಿಲ್ಲ.

ಒಂದು ಕಾಲದಲ್ಲಿ ಭಾರತದ ರಾಜಧಾನಿ ಮತ್ತು ಬೌದ್ಧಿಕ ಚಳುವಳಿಗಳ ಕೇಂದ್ರವಾಗಿದ್ದ ಕೋಲ್ಕತ್ತಾ (ಕಲ್ಕತ್ತಾ), ಬರೀ ಒಂದು ನಗರವಲ್ಲ, ಇದು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯನ್ನು ರೂಪಿಸಿದ ಶಕ್ತಿ ಕೇಂದ್ರ. ವೇದಾಂತದ ಪುನರುಜ್ಜೀವನ, ಹಿಂದೂ ನವೋದಯ ಮತ್ತು ರಾಷ್ಟ್ರೀಯತೆಯ ಮಹಾಕಾವ್ಯಗಳಿಗೆ ಬಂಗಾಳವೇ ಜನ್ಮ ನೀಡಿದ ಸ್ಥಳ. ಇಲ್ಲಿಂದಲೇ ಮಹಾತ್ಮರಾದ ಶ್ರೀ ರಾಮಕೃಷ್ಣ ಪರಮಹಂಸರು ಆಧ್ಯಾತ್ಮಿಕ ಜಾಗೃತಿಯನ್ನು ಮೂಡಿಸಿದರು, ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರು ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದರು. ಅರವಿಂದೋ ಘೋಷ್ ಅವರಂತಹ ತತ್ವಜ್ಞಾನಿಗಳು ಮತ್ತು ರಾಷ್ಟ್ರೀಯವಾದಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕನ್ನು ನೀಡಿದರು. ಸುಭಾಷ್ ಚಂದ್ರ ಬೋಸ್ ಅವರ 'ಆಜಾದ್ ಹಿಂದ್ ಫೌಜ್' ಭಾರತೀಯರಿಗೆ ಹೊಸ ಭರವಸೆ ಮೂಡಿಸಿತು. ಇಲ್ಲಿಂದಲೇ, ಭಾರತದ ರಾಷ್ಟ್ರಗೀತೆ 'ಜನ ಗಣ ಮನ' ಮತ್ತು ರಾಷ್ಟ್ರೀಯ ಗೀತೆ 'ವಂದೇ ಮಾತರಂ' ಎರಡೂ ಸೃಷ್ಟಿಯಾದವು. ಇದರ ಜೊತೆಗೆ, ಬಾಂಗ್ಲಾದೇಶದ ರಾಷ್ಟ್ರಗೀತೆ ಕೂಡ ಬಂಗಾಳದ ನೆಲದಲ್ಲೇ ರಚನೆಯಾಯಿತು. ಈ ವಿಶಿಷ್ಟ ಹೆಗ್ಗಳಿಕೆ ಬೇರೆ ಯಾವುದೇ ಪ್ರದೇಶಕ್ಕಿಲ್ಲ.

ಆದರೆ, ಇತ್ತೀಚಿನ ದಿನಗಳಲ್ಲಿ ರಾಜ್ಯದ ಸಾಂಸ್ಕೃತಿಕ ಪರಂಪರೆ ಮಸುಕಾಗುತ್ತಿದೆ. ದಿ ಬೆಂಗಾಲ್ ಫೈಲ್ಸ್ ಚಿತ್ರವು ಈ ಎಲ್ಲ ಘಟನೆಗಳಿಗೆ ಕನ್ನಡಿ ಹಿಡಿಯಲಿದೆ. ಚಿತ್ರದಲ್ಲಿ ಒಂದು ಡೈಲಾಗ್‌ಗೆ ತಕ್ಕಂತೆ ವ್ಯಾಖ್ಯಾನಿಸುವುದಾದರೆ, ಬಂಗಾಲ, ಭಾರತದ ಲೈಟ್ ಹೌಸ್ ಇದ್ದಂತೆ. ಹೌದು, ನಿಜ. ಬಂಗಾಲವು ಭಾರತಕ್ಕೆ ಬೆಳಕು ನೀಡಿದ ಪ್ರದೇಶ. ಅಲ್ಲಿನ ಘಟನೆಗಳು ಭಾರತದ ಭವಿಷ್ಯತ್ತಿಗೆ ದಿಕ್ಸೂಚಿ.

ಭಟ್ಟರ್ ಸ್ಕಾಚ್

- ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಕಷ್ಟವಾದರೂ ಕೆಲವೊಂದನ್ನು ಬಿಡುವುದೇ ಲೇಸು ಅಲ್ಲವೇ?
– ಹೂಂ.. ನಾಲ್ಕು ಪೆಗ್ ಕುಡಿದ ನಂತರ ಲಾಸ್ಟ್ ಡ್ರಾಪ್ ಬಿಡುವುದು ಲೇಸು!

- ಎಲ್.ವಿ.ಸತೀಶ್, ಮೈಸೂರು
ಭಟ್ರೇ, ಮದುವೆಯಾದ ಗಂಡಸರು ಕೋಪ ಬಂದಾಗ ಹೆಂಡತಿಗೆ ಚಚ್ಚುತ್ತಾರೆ. ಮದುವೆಯಾಗದವರು?
– ತಲೆ ಚಚ್ಚಿಕೊಳ್ತಾರೆ!

- ವೇಣುಗೋಪಾಲ ಕಂಚಿತೋಟ, ಕಡೂರು
ಭಟ್ರೇ, ಮಾವನ ಮನೆಯಲ್ಲಿ ಅಳಿಯನಿಗೆ ಉಪಚಾರ ಜಾಸ್ತಿ ಆದ್ರೆ?
– ಗಂಡನಮನೆಯಲ್ಲಿ ಸೊಸೆಗೆ ಉಪದ್ರ ಜಾಸ್ತಿ!

- ಸುನಿಲ್ ಕುಮಾರ, ಚನ್ನಪಟ್ಟಣ
ಭಟ್ರೆ, ಹೆಂಡತಿಗೆ ವಿಚಿತ್ರವಾಗಿ ಸರ್‌ಪ್ರೈಸ್ ಕೊಡುವುದು ಹೇಗೆ?
– ಗರ್ಲ್ ಫ್ರೆಂಡ್ ತೋರಿಸಿ, ನಿನ್ನ ಸ್ಥಾನ ತುಂಬಲು ಸೋತ ನತದೃಷ್ಟೆ ಎಂದು ಪರಿಚಯಿಸುವುದು!

- ಶಾರದಾ ವಿಜಯನಾಥ, ಮೈಸೂರು
ಭಟ್ರೇ, ಎಲ್ಲದಕ್ಕೂ ಯೋಗ್ಯತೆ ಬೇಕು ಅಂತಾರಲ್ಲ?
– ಸಾಲ ಮಾಡೋದಕ್ಕೂ ಅದು ಬೇಕು!

- ಸಂತೋಷ ಕುಮಾರ ಕೆ.,ಕೊಳ್ಳೇಗಾಲ
ಭಟ್ರೇ, ನಮ್ಮ ಸಂಸದರು ಸಂಸತ್ತಿನಲ್ಲಿ ಮಾತಾಡುವುದಿಲ್ಲವಲ್ಲ?
– 'ಮೌನ ಬಂಗಾರ' ಎಂಬುದನ್ನು ಪ್ರೂವ್ ಮಾಡಬೇಡವೇ?!

- ನಾರಾಯಣ ಶೇಟ್, ಶಿವಮೊಗ್ಗ
ಭಟ್ರೇ, ಹೆಂಡ ಮತ್ತು ಹೆಂಡತಿಯನ್ನು ಬಿಟ್ಟಿರಲು ಆಗುತ್ತಿಲ್ಲ, ಏನು ಮಾಡಲಿ?
– ಮೊದಲನೆಯದು ಇದ್ದರೆ ಎರಡನೆಯದು ಬೇಕಾಗಿಲ್ಲ ಎಂದು ಸದ್ಯ ಹೇಳಲಿಲ್ಲವಲ್ಲ?!

- ಮಧ್ವರಾಯ, ಉಡುಪಿ ರಥಬೀದಿ
ಈ ಲೋಕದಲ್ಲಿ ಮರೆಮಾಚೋದು ಅಂತ ಏನಾದರೂ ಇದೆಯಾ ಭಟ್ರೇ?
– ಯಾಕಿಲ್ಲ? ಹೆಣ್ಣಿನ ವಯಸ್ಸು, ರಾಜಕಾರಣಿಯ ಸಂಪತ್ತು!

- ರಾಜೇಶ ಹೆಗಡೆ, ಶಿರಸಿ
ಭಟ್ರೇ, ಈ ರೀತಿ ಮಳೆ ಹುಯ್ದರೆ ಏನಾಗಬಹುದು?
– ಮುಂದಿನ ವರ್ಷದ ಕೋಟಾ ಖಾಲಿಯಾಗಿ, ಮಳೆ ಬರದೇ ಹೋಗಬಹುದು!

- ದಿನಕರ ವಿ.ದೇಸಾಯಿ, ರಾಯಚೂರು
ಭಟ್ರೇ, ಮನುಷ್ಯನ ಸುಖನಿದ್ದೆಗೆ ತಲೆದಿಂಬೇ ಕಾರಣವಂತೆ?
– ಈ ಕಾರಣದಿಂದಲೇ ನಾನು ಮೊಯಿಲಿ ಮಹಾಕಾವ್ಯವನ್ನು ತಲೆದಿಂಬಾಗಿ ಬಳಸೋದು!

ನಮ್ಮ ಮೆದುಳನ್ನು ಆಳುವ ಬಿಂಬಗಳು

ಕಾಡುದಾರಿ

ಹರೀಶ್ ಕೇರ
vveditoped@gmail.com

ಮನುಷ್ಯನಿಗೆ ಎಷ್ಟು ಭೂಮಿ ಬೇಕು?' ಎಂಬುದು ರಷ್ಯನ್ ಸಾಹಿತಿ ಲಿಯೋ ಟಾಲ್‌ಸ್ಟಾಯ್ ಬರೆದ ಒಂದು ಕತೆಯ ಹೆಸರು. ಅದರಲ್ಲಿ, ಪಹೋಮ್ ಎಂಬ ವ್ಯಕ್ತಿ, ಇನ್ನಷ್ಟು ಮತ್ತಷ್ಟು ಜಮೀನು ಇದ್ದರೆ ತಾನು ಸುಖವಾಗಿರುತ್ತೇನೆ ಎಂದು ಕೊಳ್ಳುತ್ತಾನೆ. ಅವನ ಅದೃಷ್ಟಕ್ಕೆ ಬಷ್ಕಿರರು ಸಿಗುತ್ತಾರೆ. ಅವರು ಅವನಿಗೊಂದು ವಿಚಿತ್ರ ಆಫರ್ ಕೊಡುತ್ತಾರೆ: ಮುಂಜಾನೆ ಇಲ್ಲಿಂದ ಹೊರಟು, ನೆಲದಲ್ಲಿ ಗೀರೆಳೆಯುತ್ತಾ, ಸೂರ್ಯ ಕಂತುವ ಮುನ್ನ ಹೊರಟ ಸ್ಥಳವನ್ನು ಬಂದು ಸೇರಬೇಕು. ಆತ ಗೀರೆಳೆದ ವ್ಯಾಪ್ತಿಯೊಳಗಿನ ಜಮೀನೆಲ್ಲ ಅವನದಾಗುತ್ತದೆ. ಪಹೋಮ್ ಖುಷಿಯಿಂದ ಗೀರೆಳೆಯುತ್ತಾ ಹೊರಟುಬಿಡುತ್ತಾನೆ. ಉರಿವ ಸೂರ್ಯನನ್ನೂ ಲೆಕ್ಕಿಸದೆ ಇನ್ನಷ್ಟು ಮತ್ತಷ್ಟು ಭೂಮಿಯ ಯಜಮಾನ ಆಗುವ ಆಸೆಯಿಂದ ದೂರ ದೂರ ಹೋಗಿಬಿಡುತ್ತಾನೆ. ಸಂಜೆಯಾಗುತ್ತಿದೆ. ಎಷ್ಟು ದೂರ ಹೋಗಿದ್ದಾನೆ ಎಂದರೆ, ಹೊರಟ ಜಾಗಕ್ಕೆ ಮರಳಲು ಸಾಧ್ಯವಾಗುವಂತಿಲ್ಲ. ಏದುಸಿರು ಬಿಡುತ್ತಾ ಓಡಿ ಓಡಿ ಬರುತ್ತಾನೆ. ಸೂರ್ಯ ಇನ್ನೇನು ಕಂತಿದ ಅನ್ನುವಷ್ಟರಲ್ಲಿ ಹೊರಟಲ್ಲಿಗೆ ಬಂದು ತಲುಪಿ, ನಾಲಿಗೆ ಚಾಚಿ ಬಿದ್ದು ಸತ್ತೆ ಹೋಗುತ್ತಾನೆ. ಕೊನೆಗೂ ಆತನಿಗೆ ಬೇಕಾಗುವ ಜಾಗ– ಆರಡಿ ಮೂರಡಿ ಮಾತ್ರ.

ನಾವೆಲ್ಲರೂ ಇಂಥದೇ ಒಂದು ಆಸೆಯಿಂದ ಓಡುತ್ತಿದ್ದೇವೆ. ಈಗ ನಾವು ಬಾಚಿಕೊಳ್ಳಲು ಹೊರಟಿರುವುದು ಮನರಂಜನೆಯನ್ನು. ನಮಗೆ ಎಷ್ಟು ಮನರಂಜನೆ ಬೇಕು ಎನ್ನುವುದು ನಮಗೇ ಗೊತ್ತಿಲ್ಲ, ನಮ್ಮ ಕೈಯಲ್ಲಿ ಆರಿಂಚಿನ ಮೊಬೈಲಿದೆ, ಲ್ಯಾಪ್ಟಾಪಿದೆ, ಟ್ಯಾಬ್ ಇದೆ. ಮೊಗೆದಷ್ಟೂ ಮುಗಿಯದ ಯುಟ್ಯೂಬಿದೆ. ಎಲ್ಲದರಲ್ಲೂ ನೆಟ್‌ಫ್ಲಿಕ್ಸ್‌ನಿಂದ ಎರೋಸ್ ನೌವರೆಗೆ, ಅಮೆಜಾನ್ ಪ್ರೈಮ್‌ನಿಂದ ಡಿಸ್ನಿ ಹಾಟ್‌ಸ್ಟಾರ್‌ವರೆಗೆ ನೂರೆಂಟು ಒಟಿಟಿಗಳಿವೆ. ಸಾವಿರಾರು ಎಂಬಿಪಿಎಸ್ ಸ್ಪೀಡ್ ನೀಡುವ ಬ್ರಾಡ್‌ಬ್ಯಾಂಡ್ ಪ್ಲಾನುಗಳಿವೆ. ಮನರಂಜನೆಗಾಗಿ ಸದಾಕಾಲ ಹಸಿದಿರುವವರಿಗಾಗಿ ಹೊಸೆದು ಬಿಡುತ್ತಿರುವ ವೆಬ್ ಸೀರೀಸ್‌ಗಳಿವೆ. ಜೊತೆಗೇ ಟಿವಿ ಶೋಗಳು. ಒಂದರಿಂದ ಒಂದು ಶೋಗೆ ಜಿಗಿಯುತ್ತಾ ಜೀವಮಾನವೆಲ್ಲ ಕಳೆದು ಬಿಡಬಹುದು. ಇದೇ ತಾಣಗಳಲ್ಲಿ ಅತ್ಯುತ್ತಮ ಡಾಕ್ಯುಮೆಂಟರಿಗಳೂ ಇವೆ. ಜಗತ್ತಿನೆಲ್ಲ ಜ್ಞಾನವನ್ನೂ ಮನರಂಜನೆಯನ್ನೂ ಜೊತೆಜೊತೆಗೇ ನಿಮಗಾಗಿ ಮೊಗೆದುಕೊಡಲು ಇವು ಸಜ್ಜಾಗಿ ನಡುಬಗ್ಗಿಸಿ ನಿಂತಿದೆ ಎಂದು ನೀವೆಂದುಕೊಳ್ಳಬೇಕು.

ಇದೇನೂ ದೂರುವ ಸಂಗತಿಯಲ್ಲ. ಮನರಂಜನೆ ತಾಣಗಳು ಹೆಚ್ಚಾಗಲಿ; ಪರವಾಗಿಲ್ಲ. ನಮಗೆ ಬೇಕಿದ್ದುದನ್ನು ನಾವು ನೋಡಿಕೊಳ್ಳೋಣ. ಮನರಂಜನೆಯೇ ಮನುಷ್ಯ ಚೈತನ್ಯದ ಮೂಲ ಸೆಲೆ. ಮನರಂಜನೆಯೇ ಇನ್ನೊಬ್ಬನ ಮನಸ್ಸನ್ನು ಗೆಲ್ಲುವ ಉಪಾಯ. ಆದಿಮಾನವ ತನ್ನ ಆ ದಿನದ ಊಟಕ್ಕೆ ತಕ್ಕಷ್ಟೆ ಬೇಟೆಯಾಡುತ್ತಿದ್ದ; ಉಳಿದ ಸಮಯವನ್ನು ಗವಿಯಲ್ಲಿ ಚಿತ್ರ ಕೆತ್ತುವುದು, ಬೆಂಕಿಯ ಮುಂದೆ ಕುಣಿಯುವುದು ಮುಂತಾದ ಮನರಂಜನೆಯಲ್ಲೇ ಕಳೆಯುತ್ತಿದ್ದ. ಮನರಂಜನೆಯಲ್ಲೇ ಮಕ್ಕಳ ಮನಸ್ಸಿನ ವಿಕಾಸ. ಪಾಠ ಮಾಡಿದರೆ ಕೇಳದ ಮಕ್ಕಳು ಕತೆ ಹೇಳಿದರೆ ಆಲಿಸುತ್ತಾರೆ. ಟಿವಿಯಲ್ಲಿ ನಾವು ನೋಡುವುದೆಲ್ಲವೂ ಒಂದು ರೀತಿಯಲ್ಲಿ ಎಂಟರ್‌ಟೇನ್‌ಮೆಂಟೇ. ಸುದ್ದಿ ವಾಹಿನಿಗಳೆಂದು ನಾವು ನೋಡುವುದರಲ್ಲಿ ಬರುವುದೆಲ್ಲವೂ ಮನರಂಜನೆ ಅಲ್ಲದೆ ಬೇರೇನಲ್ಲ. ರಾಜಕೀಯಕ್ಕಿಂತ ಬೇರೆ ಮನರಂಜನೆ ಇನ್ನೇನು ಬೇಕಿದೆ. ರಾಜಕಾರಣಿಗಳು ಜಾತಿ ದಾಳ ಉರುಳಿಸುವುದೂ, ಇವರ ದಾಳವನ್ನು ಅವರು ಇನ್ನೇನೋ ಮಾಡಿ ಮಗುಚಿಹಾಕುವುದೂ ನೋಡುಗರಿಗೆ ಮನರಂಜನೆ ಅಲ್ಲದೆ ಇನ್ನೇನು. ಹಾಗೇ ಮೂರನೇ ಪತ್ನಿಯ ಮನೆಯಲ್ಲಿ ಸಿಕ್ಕಿಬಿದ್ದು ಎರಡನೇ ಪತ್ನಿಯಿಂದ ಏಟು ತಿನ್ನುವವನ ದೃಶ್ಯದ ಮುಂದೆ ಬೇರೇನು ಮನರಂಜನೆ ಬೇಕಿದೆ.

''ಎಂಟರ್‌ಟೇನ್‌ಮೆಂಟ್ ಏನೋ ಸರಿ. ಆದರೆ ಒಂದು ಐಡಿಯಾ ಹಿನ್ನೆಲೆಯಲ್ಲಿರುವ ಎಂಟರ್‌ಟೇನ್‌ಮೆಂಟ್ ಒಳ್ಳೆಯದು,'' ಎನ್ನುತ್ತಾನೆ ನಟ ಗ್ರೆಗರಿ ಪೆಕ್. ನಾವು ಪಡೆಯುತ್ತಿರುವ ಮನರಂಜನೆಯ ಹಿಂದೆ ಐಡಿಯಾ ಇಲ್ಲವೆಂದು ಯಾರು ಹೇಳಲು ಸಾಧ್ಯ. ನಮ್ಮ ಐಡಿಯಾ ಅಲ್ಲದೇ ಹೋದರೂ ಇನ್ಯಾರದೋ ಐಡಿಯಾ ಇದ್ದೆ ಇರುತ್ತದಲ್ಲ. ಕೆಲವೊಮ್ಮೆ ಸರಕಾರವೇ ನಾನಾ ಬಗೆಯ ಮನರಂಜನೆಯ ಐಡಿಯಾಗಳನ್ನು ಹುಟ್ಟುಹಾಕಿ ಮುಂದೆ ಬಿಡುತ್ತದೆ. ಕೋಟಿಗಟ್ಟಲೆ ಹಣ ಸುರಿದು ನಿರ್ಮಿಸುವ ಪ್ರತಿಮೆಗಳು, ಮನರಂಜನೆಯ ಪಾರ್ಕ್‌ಗಳು, ಉತ್ಸವಗಳು ತುಂಬಾ ಒಳ್ಳೆಯ ಮನರಂಜನೆ ತಾನೆ. ಗ್ಯಾಸ್ ವಿದ್ಯುತ್ ಬಿಲ್ ಹೆಚ್ಚಾಗಿದೆ, ಕೃಷಿ ಉತ್ಪನ್ನಗಳಿಗೆ ಬೆಲೆಯಿಲ್ಲ, ಅತ್ಯಾಚಾರ– ದೌರ್ಜನ್ಯ ಹೆಚ್ಚಾಗುತ್ತಿದೆ ಎಂದೆಲ್ಲ ತಲೆಕೆಡಿಸಿಕೊಳ್ಳುವ ಜನರನ್ನು ಆ ಚಿಂತೆಗಳಿಂದ ದೂರವಿಡಲು ಇದು ಒಳ್ಳೆಯ ಐಡಿಯಾ ಅಲ್ಲವೇ.

ಆಲ್ಡಸ್ ಹಕ್ಸ್ಲೀ ಎಂಬವನು ಬ್ರಿಟಿಷ್ ಕಾದಂಬರಿಕಾರ, ಫಿಲಾಸಫರ್. ಇವನು ಬರೆದ ಸುಮಾರು ಕೃತಿಗಳಲ್ಲಿ 'ಬ್ರೇವ್ ನ್ಯೂ ವರ್ಲ್ಡ್' ಎಂಬುದು ಜನಪ್ರಿಯ. ಅದರಲ್ಲೊಂದು ಡಿಸ್ಟೋಪಿಯನ್ ಜಗತ್ತಿನ ಚಿತ್ರಣ ಇದೆ. ಅಲ್ಲಿನ ಜನತೆಗೆ 'ಸೋಮ' ಎಂಬ ಒಂದು ದ್ರವವನ್ನು ಅಲ್ಲಿನ ಆಡಳಿತವೇ ಶಿಫಾರಸು ಮಾಡುತ್ತದೆ. ಎಲ್ಲ ಸಮಸ್ಯೆಗಳಿಂದ ಪಾರಾಗಲು, ಯಾವುದೇ ಚಿಂತೆಯಿಂದ ದೂರವಾಗಲು, ಇದನ್ನು ಸೇವಿಸಿ. ಯಾವುದೇ ದುಃಖ, ನೋವು ಅಥವಾ ತೊಂದರೆಯನ್ನು ಅದು ತಕ್ಷಣ ಮರೆಸುತ್ತದೆ. ಪ್ರಜೆಗಳನ್ನು ಸದಾ ಶಾಂತವಾಗಿಡಲು, ಸಮಾಜದಲ್ಲಿ ತಾನು ಬಯಸುವ ಶಿಸ್ತು ಮತ್ತು ಸ್ಥಿರತೆಯನ್ನು ಸ್ಥಾಪಿಸಲು ಸರಕಾರ ತಂದಿರುವ ಮದ್ದು ಅದು. ಜನ ಈ ಸೋಮವನ್ನು ಸದಾ ಸೇವಿಸುತ್ತಾ 'ಖುಷಿ'ಯಾಗಿರುತ್ತಾರೆ. ಆ ಮೂಲಕ ಪ್ರಜೆಗಳನ್ನು ನಿಜವಾದ ಸಮಸ್ಯೆಗಳಿಂದ ಮರೆಮಾಡಲಾಗುತ್ತದೆ. ಸಂಭಾವ್ಯ ಬಂಡಾಯವನ್ನು ತಡೆಯಲಾಗುತ್ತದೆ.

ಆದರೆ ಇದರಿಂದ ಏನಾಗುತ್ತದೆ? ಸೋಮ ತಾತ್ಕಾಲಿಕ ಆನಂದ ಕೊಡುತ್ತದೆ, ಆದರೆ ನಿಜವಾದ ಭಾವನೆಗಳನ್ನು ಅನುಭವಿಸಲು ಅವಕಾಶ ಕೊಡುವುದಿಲ್ಲ. ಜನರು ಸ್ವತಃ ಯೋಚಿಸುವ ಅಗತ್ಯವಿಲ್ಲದಂತೆ ಮಾಡುತ್ತದೆ. ನಿಮ್ಮ ಯೋಚನೆಗಳ ಮೇಲೆ ಸರಕಾರ ಅಥವಾ ಉಳ್ಳವರು ಅಧಿಪತ್ಯ ಸ್ಥಾಪಿಸುತ್ತಾರೆ. ವ್ಯಕ್ತಿಯ ಸ್ವಂತ ಭಾವನೆಗಳು, ನೋವುಗಳು ಮತ್ತು ಅನುಭವಗಳನ್ನು ನಿರಾಕರಿಸುವುದರಿಂದ ಮಾನವೀಯತೆಯ ಸ್ಪರ್ಶ ಕುಂದುತ್ತದೆ. ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಸುಖ, ಆರಾಮ ಮುಖ್ಯವಾಗುತ್ತದೆ. ಆಧುನಿಕ ಸಮಾಜದಲ್ಲಿ ಉಪಭೋಗ ಮತ್ತು ಮನರಂಜನೆ ಗೀಳು ಆಗಿರುವುದು ಹೀಗೆ. ಇನ್ನೊಬ್ಬ ಮನುಷ್ಯನಿಗೆ ಸ್ಪಂದಿಸುವ, ಪಕ್ಕದ ಮನೆಯವನ ಜೊತೆ ಮಾತನಾಡುವ ಸ್ಪಂದನವನ್ನು ಅಂದರೆ ಜೀವನದ ನಿಜವಾದ ಅರ್ಥವನ್ನು ಕಳೆದುಕೊಳ್ಳುವುದಕ್ಕೆ ಈ ಸೋಮ ಸಂಕೇತ.

ಆದರೆ ಟಾಲ್‌ಸ್ಟಾಯ್ ಕೇಳಿಕೊಂಡ ಹಾಗೆ, ಮನುಷ್ಯನಿಗೆ ಎಷ್ಟು ಮನರಂಜನೆ ಬೇಕು?' ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ ಏನಾಗುತ್ತದೆ? ಸದ್ಯ ಏನೂ ಆಗುವುದಿಲ್ಲ. ನಾವು ಮನರಂಜನೆಯನ್ನು ಪಡೆಯುತ್ತಿದ್ದೇವೆ ಎಂದುಕೊಳ್ಳುತ್ತಿದ್ದೇವೆ. ಆದರೆ ಮನರಂಜನೆಯೇ ನಮ್ಮನ್ನು ಕೊಂಡುಕೊಳ್ಳುತ್ತಿದೆ ಅನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಉಪನಿಷತ್ತಿನಲ್ಲಿ ಅನ್ನ' ಎಂಬುದಕ್ಕೆ ಸುಂದರವಾದ ವಿವರಣೆಯಿದೆ– ಅನ್ನ ಎಂದರೆ ನಾವು ತಿನ್ನುವಂಥದು; ಆದರೆ ನಾವು ಯಾವುದನ್ನು ತಿನ್ನುತ್ತೇವೆಯೋ, ಅದೂ ನಮ್ಮನ್ನು ತಿನ್ನುತ್ತಿರುತ್ತದೆ. ನಾವು ಒಂದೊಂದು ಅಗುಳು ಹೆಚ್ಚಿಸುತ್ತ ಹೋದಂತೆ, ಸಾವಿಗೆ ಮತ್ತಷ್ಟು ಸಮೀಪವಾಗುತ್ತ ಹೋಗುತ್ತೇವೆ. ರುಚಿಯನ್ನು ಹೆಚ್ಚಿಸುತ್ತ ಹೋದಂತೆ ರುಚಿಯು ನಮ್ಮನ್ನು ಪಡೆಯುತ್ತ ಹೋಗುತ್ತದೆ. ಜಾಹೀರಾತುಗಳನ್ನು ನೋಡಿ ನಮಗೆ ಬೇಕಾದ್ದನ್ನು ನಾವು ಕೊಂಡುಕೊಳ್ಳುತ್ತಿದ್ದೇವೆ ಅಂದುಕೊಳ್ಳುತ್ತೇವೆ; ಆದರೆ ನಿಜಕ್ಕೂ ಜಾಹೀರಾತುಗಳು ನಮ್ಮನ್ನು ಕೊಂಡುಕೊಳ್ಳುತ್ತಿವೆ. ನಾವಿಲ್ಲಿ ಗ್ರಾಹಕರಲ್ಲ; ನಾವೇ ಸರಕು. ಡೇಟಾ ಪ್ಯಾಕ್‌ಗಳು, ಇಂಟರ್‌ನೆಟ್ ಒದಗಿಸುವವರು, ನಾನಾ ಬ್ರಾಂಡ್‌ಗಳವರು, ನಾನಾ ಮನರಂಜನಾ ತಾಣಗಳು ನಮ್ಮನ್ನು ಕೊಂಡುಕೊಳ್ಳುತ್ತಿದ್ದಾರೆ. ಜಮೀನಿಗಾಗಿ ಓಡಿದವನು ನೆಲವನ್ನು ಪಡೆಯಲಿಲ್ಲ; ನೆಲ ಅವನನ್ನು ಪಡೆಯುತ್ತದೆ.

ಹೋಮರನ 'ಯೂಲಿಸಿಸ್' ಕೃತಿಯಲ್ಲಿ ಒಂದು ಸನ್ನಿವೇಶವಿದೆ. ಯೂಲಿಸಿಸ್ ನೌಕೆಯ ಮೇಲೆ ಕಡಲು ಪ್ರಯಾಣ ಹೋಗುತ್ತಾನೆ. ಕಡಲಿನ ನಿರ್ದಿಷ್ಟವಾದ ಒಂದು ಕಡೆ, ಸೈರೆನ್ ಎಂಬ ಕೇಡಿಗ ಮೋಹಿನಿಶಕ್ತಿಗಳು ಮನೋಹರವಾಗಿ ಹಾಡುತ್ತಾ ನರ್ತಿಸುತ್ತಾ ಇರುತ್ತವೆ. ಅದಕ್ಕೆ ಕಿವಿಗೊಡುತ್ತಾ ಇದ್ದರೆ ಅವು ತಮ್ಮೆಡೆಗೆ ಸೆಳೆದುಕೊಂಡು, ಹಾಡಾಡುತ್ತಲೇ ಮನುಷ್ಯರನ್ನು ಮುಗಿಸಿಬಿಡುತ್ತವೆ. ಯೂಲಿಸಿಸ್ ಇದು ಗೊತ್ತಿತ್ತು. ಅದಕ್ಕೆ ತನ್ನ ಕಿವಿಗೂ ಸಹಪ್ರಯಾಣಿಕರ ಕಿವಿಗೂ ಹತ್ತಿ ತುಂಬಿಸಿ, ಹಾಡನ್ನು ಕೇಳದಿರುವಂತೆ ನಿರ್ಬಂಧಿಸುತ್ತಾನೆ. ತನ್ನನ್ನು ಧ್ವಜದಂಡಕ್ಕೆ ಬಿಗಿದು ಕಟ್ಟಿಬಿಡಿ, ಸೈರೆನ್‌ಗಳನ್ನು ದಾಟುವವರೆಗೆ ತಾನು ಏನು ಆಜ್ಞೆ ಮಾಡಿದರೂ ಪಾಲಿಸಬೇಡಿ ಎಂದುಬಿಡುತ್ತಾನೆ. ಇದರಿಂದಾಗಿ ಅವರೆಲ್ಲ ಸುರಕ್ಷಿತವಾಗಿ ಸೈರೆನ್‌ಗಳ ಪ್ರದೇಶವನ್ನು ದಾಟುತ್ತಾರೆ. ಯೂಲಿಸಿಸ್‌ಗೆ ಗೊತ್ತಾದದ್ದು ನಮಗೆ ಗೊತ್ತಾಗಿಲ್ಲ. ನಮ್ಮ ಡಿಜಿಟಲ್ ಸಾಧನಗಳೆಂಬ ಸೈರೆನ್‌ಗಳ ಮೋಹದಲ್ಲಿ ನಾವು ಹುಗಿದುಹೋಗಿದ್ದೇವೆ. ಜೋಂಬಿಗಳಂತೆ ದಿನಚರಿ ನಡೆಸುತ್ತೇವೆ. ನಮ್ಮ ಗಮನವೆಲ್ಲ ಸುತ್ತಲಿನ ಜಗತ್ತಿನ ಬಗ್ಗೆ ಇರದೆ, ಸ್ಮಾರ್ಟ್‌ಫೋನ್‌ನ ತೆರೆಯ ಮೇಲೆ ಇರುತ್ತದೆ. ಪ್ರವಾಸಿ ತಾಣಗಳಿಗೆ ಹೋದರೂ ಫೋಟೋ ತೆಗೆಯುವುದರಲ್ಲಿ ಮಗ್ನರಾಗುತ್ತೇವೆ ಹೊರತು ಆಳವಾಗಿ ಗಮನಿಸುತ್ತಿರುವುದಿಲ್ಲ.

ಇದೆಲ್ಲವೂ ನಮನಿಮಗೆ ಗೊತ್ತಾಗಬೇಕಾದ ಕ್ಷಣ ಇದು. ನೀವೇನನ್ನು ಸರ್ಚ್ ಮಾಡುತ್ತೀರೋ ಅದೆಲ್ಲವೂ ಡೇಟಾ ಆಗಿ ರೂಪಾಂತರಗೊಂಡು ಮರಳಿ ನಿಮ್ಮನ್ನೆ ತಗುಲಿಕೊಳ್ಳುವುದು ನಿಮಗೆ ಈಗಾಗಲೇ ಗೊತ್ತಿರುತ್ತದೆ. ಹಾಗೇ ಮನರಂಜನೆಯ ಹೆಸರಿನಲ್ಲಿ ನೀವೇನನ್ನು ನೋಡುತ್ತಿರುತ್ತೀರೋ, ಮತ್ತೆ ಅಂಥದನ್ನೆ ನೋಡಲು ಹಾತೊರೆಯುತ್ತಿರಿ ಮತ್ತು ಅಂಥದನ್ನೆ ನಿಮಗೆ ಕೊಡಲು ಕಾಯುತ್ತಿರುವವರೂ ಇರುತ್ತಾರೆ. ಸುಮ್ಮನೇ ಫೋನ್ ಮುಂದಿಟ್ಟುಕೊಂಡು 'ಹೆಲ್ತ್ ಇನ್ಶೂರೆನ್ಸ್' ಎಂದು ನಾಲ್ಕು ಸಲ ಯಾರದಾದರೂ ಜೊತೆಗೆ ಮಾತನಾಡಿ. ಅರ್ಧ ಗಂಟೆಯಲ್ಲಿ ನಾಲ್ಕು ಆರೋಗ್ಯ ವಿಮೆ ಸಂಸ್ಥೆಗಳಿಂದ ನಿಮಗೆ ಕಾಲ್ ಬಂದಿರುತ್ತದೆ. ಜಗತ್ತಿನ ಮೆದುಳುಗಳನ್ನೆಲ್ಲ ತಮ್ಮ ಕೈವಶ ಮಾಡಿಕೊಳ್ಳಲು ಕಾದಿರುವ ಕಂಪನಿಗಳು ನಿಮ್ಮ ಪ್ರತಿ ಮಾತಿಗೂ ಕಿವಿಯಾಗಿವೆ; ನೀವು ಪ್ರತಿಕ್ಷಣ ಎಲ್ಲಿ ಹೋಗುತ್ತೀರಿ, ಏನು ಮಾತನಾಡುತ್ತೀರಿ, ನೀವು ಸೇವಿಸುವ ಆಹಾರ ಯಾವುದು, ನಿಮ್ಮ ತುರ್ತು ಔಷಧಗಳು ಯಾವುವು– ಎಲ್ಲವನ್ನೂ ನೀವು ಬಳಸುವ ಎಂಟರ್‌ಟೇನ್‌ಮೆಂಟ್, ಸೋಶಿಯಲ್ ಮೀಡಿಯಾ ಹಾಗೂ ಲೊಕೇಶನ್ ಟ್ರ್ಯಾಕಿಂಗ್ ಆಪ್‌ಗಳು ಈಗಾಗಲೇ ಗುರುತಿಸಿಟ್ಟುಕೊಂಡಿವೆ.

ನಿಮ್ಮ ಮೆದುಳನ್ನು ಹೊಕ್ಕಲು ಕಾಯುತ್ತಿರುವ ಬಿಂಬಗಳು ಮತ್ತು ವಿಚಾರಗಳ ಬಗ್ಗೆ ಎಚ್ಚರವಾಗಿರಿ. ಇದರಲ್ಲಿ ನೀವು ತಾರತಮ್ಯ ತೋರಿಸದಿದ್ದರೆ, ಇನ್ಯಾರೋ ನಿಮ್ಮ ಮೆದುಳನ್ನು ಹೊಕ್ಕು ನಿಮ್ಮನ್ನು ಆಳಲು ಶುರು ಮಾಡುತ್ತಾರೆ,'' ಎನ್ನುತ್ತಾನೆ ಎಪಿಕ್ಟಟೆಸ್ ಎನ್ನುವ ಗ್ರೀಕ್ ತತ್ತ್ವಜ್ಞಾನಿ. ನಿಮಗೆಷ್ಟು ಬೇಕು ಎಂದು ಕೇಳುವ ಟಾಲ್‌ಸ್ಟಾಯ್, ನಿಮಗೇನು ಬೇಕು ಎಂದು ಕೇಳುವ ಎಪಿಕ್ಟಟೆಸ್, ಇಬ್ಬರೂ ಒಂದೇ ಮಾತನ್ನು ಹೇಳುತ್ತಿದ್ದಾರೋ ಅನಿಸುತ್ತದೆ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೆಣ್ಣಿಗೆ ಗೌರವ ನೀಡಿ

ಇಂದಿನ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆ, ಕಿರುಕುಳ ಮತ್ತು ದೌರ್ಜನ್ಯವು ಗಂಭೀರ ಆತಂಕ ಹುಟ್ಟಿಸುವಂತಿದೆ. ಶಿಕ್ಷಣ, ಉದ್ಯೋಗ, ಸಮಾನತೆ ಎಂಬ ಮಾತುಗಳು ಜೋರಾಗಿ ಕೇಳಿಸಿಕೊಳ್ಳುತ್ತಿದ್ದರೂ, ಹೆಣ್ಣುಮಕ್ಕಳ ಸುರಕ್ಷತೆ ಇನ್ನೂ ಪ್ರಶ್ನಾರ್ಥಕವಾಗಿದೆ. ಅಂಕಿ–ಅಂಶಗಳ ಪ್ರಕಾರ, ನಮ್ಮ ರಾಜ್ಯದಲ್ಲೇ ಲಕ್ಷಾಂತರ ಪ್ರಕರಣಗಳು ದಾಖಲಾಗಿವೆ. ಇದು ಕೇವಲ ಕಾನೂನು ವ್ಯವಸ್ಥೆಯ ವೈಫಲ್ಯವಲ್ಲ, ಬದಲಾಗಿ ಮಾನವೀಯ ಮೌಲ್ಯಗಳ ಕುಸಿತವೂ ಹೌದು.

ಮಹಿಳೆಯರ ಮೇಲೆ ನಡೆಯುವ ಹಿಂಸೆಯ ಮೂಲಕಾರಣ ಮನೋಭಾವ. ಹೆಣ್ಣನ್ನು ಇಂದಿಗೂ ಅಸಹಾಯಕಳಂತೆ ನೋಡುವ ದೃಷ್ಟಿ ಬೇರೂರಿರುವುದೇ ದೊಡ್ಡ ಸಮಸ್ಯೆ. ಕಾನೂನು ಎಷ್ಟೇ ಕಠಿಣವಾದರೂ, ಸಮಾಜದ ಮನಸ್ಸು ಬದಲಾಗದಿದ್ದರೆ ಮಹಿಳೆಯ ಭದ್ರತೆ ಖಚಿತವಾಗುವುದಿಲ್ಲ. ಅದಕ್ಕಾಗಿ ಶಿಕ್ಷಣ ಸಂಸ್ಥೆಗಳಿಂದಲೇ ಸಮಾನತೆ, ಗೌರವ ಮತ್ತು ಸಹಜೀವನದ ಪಾಠಗಳನ್ನು ಮಕ್ಕಳಿಗೆ ಬೋಧಿಸುವುದು ಅಗತ್ಯ. ಮಹಿಳಾ ಭದ್ರತೆಯ ಪ್ರಶ್ನೆಯನ್ನು ಕೇವಲ ಸರಕಾರ ಅಥವಾ ಪೊಲೀಸರ ಹೊಣೆಗಾರಿಕೆಯಾಗಿಯೇ ನೋಡುವುದು ತಪ್ಪು. ಪ್ರತಿಯೊಬ್ಬ ನಾಗರಿಕನೂ ತನ್ನ ಸುತ್ತಮುತ್ತಲಿನ ಮಹಿಳೆಯರ ಗೌರವ ಕಾಪಾಡುವ ಜವಾಬ್ದಾರಿ ಹೊಂದಿದ್ದಾನೆ. ಬೀದಿಯಲ್ಲಿ ಕಿರುಕುಳ ಕಂಡಾಗ ಮೌನವಾಗಿ ದೂರಕ್ಕೆ ಹೋಗುವುದು ಸಹಾನುಭೂತಿಯ ಕೊರತೆಯಷ್ಟೇ ಅಲ್ಲ, ಅದು ಅಪರಾಧಕ್ಕೆ ಮೌನ ಸಮರ್ಥನೆ ನೀಡಿದಂತಾಗಿದೆ. ಸಮಾಜವೇ ಧೈರ್ಯದಿಂದ ನಿಂತಾಗ ಮಾತ್ರ ದೌರ್ಜನ್ಯಕ್ಕೆ ಕಡಿವಾಣ ಬೀಳಬಹುದು. ಮಹಿಳೆ ದುರ್ಬಲಳಲ್ಲ, ಆಕೆ ಜೀವನದ ಶಕ್ತಿ, ಕುಟುಂಬದ ಅಡಿಗಲ್ಲು, ಸಮಾಜದ ನಿಜವಾದ ಬಲ. ಆದರೆ ಆಕೆಯ ಹೃದಯವನ್ನು ಮುರಿಯುವ ಬದಲು, ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ಕಠಿಣ ಕಾನೂನುಗಳ ಜತೆಗೆ ಮನಸ್ಸಿನ ಬದಲಾವಣೆಯೂ ಇಂದಿನ ಅವಶ್ಯಕತೆ ಎನಿಸಿದೆ,

–ಶಿವಯೋಗಿ.ಎಂ.ವಿ ರಾಂಪುರ

'ಗ್ರೇಟರ್'ಗೆ ಬದಲಿಯಾಗಿ ಒಂದು ಕನ್ನಡ ಪದ ಸಿಗಲಿಲ್ಲವೇ?

ಅಂತೂ ಕೆಂಪೇಗೌಡರು ನಿರ್ಮಿಸಿದ ಬೆಂಗಳೂರು ಐದು ಹೋಳುಗಳ 'ಪಂಚನೂರಾಗಿ' ವಿಭಜಿಸಿ ಸರ್ಕಾರ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ದ ಫಲಕ ತೊಡಿಸಿ ಬೀಗಿದೆ. ಜತೆಗೆ 'ಕನ್ನಡವೇ ಉಸಿರು ಕನ್ನಡವೇ ಹಸಿರು' ಎಂಬ ಘೋಷವಾಕ್ಯ! 'ವಿಕಸಿತ ಬೆಂಗಳೂರು ಪ್ರಾಧಿಕಾರಕ್ಕೆ ಬದಲಾಗಿ, ಜ್ವಚಿಲಿಟ್ಟಿ ಪದ ಬಳಸಿ ಕನ್ನಡದ ಉಸಿರು ಹಸಿರನ್ನು ಕೆಸರು ಮಾಡಲಾಗಿದೆ. ನನ್ನ ಲಿಖಿತ ವಿನಂತಿಯ ಮೇರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಿಳಿಮಲೆಯವರು 'ಗ್ರೇಟರ್' ಪದದ ಬದಲು ಸೂಕ್ತ ಕನ್ನಡ ಪದ ಬಳಕೆ ಮಾಡುವಂತೆ ಕೋರಿ ರಾಜ್ಯದ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರಿಗೆ ಪ್ರತ್ಯೇಕ ಪತ್ರಗಳನ್ನು ಬರೆದು ಪತ್ರಿಕೆಗಳಿಗೂ ಬಿಡುಗಡೆ ಮಾಡಿದ್ದರೂ ಅದನ್ನು ಪರಿಗಣಿಸದಿರುವುದು ಕನ್ನಡಕ್ಕಾದ ಅಪಮಾನವೇ ಸರಿ. ಕರ್ನಾಟಕ ರಾಜಧಾನಿಯಲ್ಲೇ ಕನ್ನಡ ಮುಸುರೆಯಾದರೆ ಬೇರೆಡೆ ಮಸಿ ಬಳಿಯುವುದನ್ನು ವಿರೋಧಿಸುವುದಾದರೂ ಹೇಗೆ? ದೀಪದ ಕೆಳಗೆ ಇಷ್ಟೊಂದು ಕತ್ತಲೆಯೇ? ಅಂದಹಾಗೆ ನಮ್ಮ ಕನ್ನಡ ಸಂಘ ಸಂಸ್ಥೆಗಳು, ಪರಿಷತ್, ವೇದಿಕೆಗಳು ಗ್ರೇಟರ್ ಬಗ್ಗೆ ವಿರೋಧಿಸಿ ಉಸಿರೆತ್ತದಿರುವವರನ್ನೇ ಸತ್ತಂತಿರುವರನ್ನು ಹೊಡೆದೆಬ್ಬಿಸು ಎಂಬುದು ರಾಷ್ಟ್ರಕವಿ ಕುವೆಂಪುರವರ ಕವಿವಾಣಿಯೂ ಹೌದಲ್ಲವೇ?

–ಬೆಳ್ಳಿ ಚಂದ್ರಶೇಖರಶೆಟ್ಟಿ, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು
vveditoped@gmail.comಗೆ ಮೇಲ್ ಮಾಡಬಹುದು
ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಬೆನ್ನುಮೂಳೆ ಮುರಿದರೂ ಸಮಾಜಕ್ಕೆ ಬೆನ್ನೆಲುಬಾದ ವಿನಾಯಕ ರಾವ್

ಉಡುಪಿ ಜಿಲ್ಲೆ ಕನ್ಯಾಡಿಯ ವಿನಾಯಕರಾವ್ ಅವರು ಸ್ವತಃ ಬೆನ್ನುಮೂಳೆ ಮುರಿತದ ದೈಹಿಕ ಸಂಕಷ್ಟಗಳ ಸಮಸ್ಯೆಗಳಿಂದ ಬಳಲುತ್ತಿದ್ದರೂ, ಬೇರೆಯವರು ಇಂತಹ ಸಮಸ್ಯೆಗಳಿಂದ ತೊದರೆ ಅನುಭವಿಸಬಾರದೆಂದು ತಮ್ಮ ಸೇವಾಧಾಮ ಸಂಸ್ಥೆಯ ಮೂಲಕ ಕೈಲಾದ ಸೇವೆಯನ್ನು ಮಾಡುತ್ತ ಬರುತ್ತಿದ್ದಾರೆ. ವಿನಾಯಕರಾವ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನರ್ವಸತಿ ಕೇಂದ್ರ ಲೋಕಾರ್ಪಣೆಯಾಗುತ್ತಿದೆ.

ಭೂಮಿಯ ಮೇಲೆ ಉಳಿದೆಲ್ಲ ಚರಾಚರಗಳಿಗಿಂತ ಮಾನವಜೀವಿ ಇವತ್ತಿನ ಅತ್ಯಾಧುನಿಕ ಜೀವನದವರೆಗೆ ಸಾಗಿಬರಲು ಪ್ರಮುಖ ಕಾರಣ ಬೆನ್ನುಮೂಳೆ ಎಂದರೆ ನೀವು ನಂಬಲೇಬೇಕು!

ಹೌದು, ಕೆಲವು ಅಧ್ಯಯನಗಳ ಪ್ರಕಾರ, ಮಾನವನ ಬೆನ್ನುಮೂಳೆಯ ರಚನೆ ನೆಲಕ್ಕೆ ಲಂಬಕೋನ ಅಥವಾ ನೇರವಾಗಿದ್ದು ಉಳಿದೆಲ್ಲ ಜೀವಿಗಳ ದೇಹರಚನೆಗಿಂತ ಭಿನ್ನವಾಗಿರುವುದೇ ಮಾನವ ಉಳಿದ ಪ್ರಾಣಿಗಳಿಗಿಂತ ವಿಶಿಷ್ಟವಾಗಿ ಬೆಳೆಯುತ್ತ ಬರಲು ಕಾರಣವೆಂತಲೂ ಹೇಳುತ್ತಾರೆ. ಬಹುತೇಕ ಜೀವಿಗಳ ಬೆನ್ನುಮೂಳೆಯು ಭೂಮಿಗೆ ಸಮನಾಂತರವಾಗಿ ರಚನೆಯಾಗಿದೆ. ಬೆನ್ನುಮೂಳೆಯ ವಿಷಯ ಬಂದಾಗ, ವಿನಾಯಕ ರಾವ್ ಅವರ ಬದುಕು ಆಶ್ಚರ್ಯ ಮತ್ತು ಪ್ರೇರಣಾದಾಯಕವಾದದ್ದು. ತಮಗೆ ಬಂದ ಅಪಾಯವನ್ನು ಮೆಟ್ಟಿ ನಿಂತು, ಬದುಕಿ ತೋರಿಸಿ ಇನ್ನೊಬ್ಬರ ಬದುಕಿಗೆ ಆಧಾರವಾಗುತ್ತಿದ್ದಾರೆ.

ಕಾರ್ಯಕ್ರಮ ನಿಮಿತ್ತ 'ಸೇವಾಧಾಮ' ಎಂಬ ಸರಕಾರೇತರ ಸಂಸ್ಥೆಯ ಬೆನ್ನೆಲುಬಾಗಿರುವ ವಿನಾಯಕ ರಾವ್ ಕನ್ಯಾಡಿ ಅವರನ್ನು ಭೇಟಿಯಾಗಬೇಕಾಯಿತು. ನಮ್ಮದು ದಶಕಗಳ ಒಡನಾಟ, ಸರಳ ಸ್ನೇಹಜೀವಿಯಾಗಿರುವ ಇವರನ್ನು ಪರಿಚಯವಾದ ಬಳಿಕ ಯಾರಾದರೂ ಮರೆಯುವುದು ಕಷ್ಟ, ಅಂತಹ ವ್ಯಕ್ತಿತ್ವ. ಆಕಸ್ಮಿಕ ಅಪಘಾತದಿಂದ ತಮ್ಮ ಬೆನ್ನುಮೂಳೆ ಮುರಿದುಕೊಂಡು ಬಹಳ ಪರಿತಪಿಸಿದರು. ತಾವು ಅನುಭವಿಸಿದ ಕಷ್ಟ ಮತ್ತೊಬ್ಬರಿಗೆ ಬರಬಾರದು ಎಂಬ ಪರೋಪಕಾರಿ ವಿಚಾರದಿಂದ ತಮ್ಮ ದೈಹಿಕ ವ್ಯತ್ಯಯಗಳ ನಡುವೆಯೂ ನಿರಂತರವಾಗಿ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇವರ ನೇತೃತ್ವದ ಸೇವಾಧಾಮ ಸಂಸ್ಥೆಯು ತನ್ನ ಏಳು ವರ್ಷದ ಸೇವೆಯನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ಬೆನ್ನುಮೂಳೆ ಮುರಿತದ ತೊಂದರೆಗೊಳಗಾದ ಜನರ ಆರೈಕೆ, ಅವರಿಗೆ ಮಾರ್ಗದರ್ಶನ ಇತ್ಯಾದಿ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಬೆನ್ನುಮೂಳೆ ಮುರಿತದಂತಹ ಸಮಸ್ಯೆಗಳು ಹುಟ್ಟಿನಿಂದ ಬರುವುದು ಬಹಳ ಕಡಿಮೆ. ಗೋಡೆ, ಕಟ್ಟಡ, ಬೆಟ್ಟಗುಡ್ಡಗಳಿಂದ ಜಾರಿ ಎತ್ತರದಿಂದ ಬೀಳುವುದು, ಕಾರು, ಬೈಕ್ ಸೇರಿದಂತೆ ಇತರೆ ರಸ್ತೆ ಅಪಘಾತಗಳಿಂದಾಗುವುದು ಮತ್ತು ಸ್ಪೈನ್ ಸೋಂಕು,, ಸ್ಪೈನ್ ಟಿಬಿ, ಟ್ಯೂಮರ್ ತೆಗೆಯುವಾಗ ಸಮಸ್ಯೆಗಳು ಉಂಟಾಗುತ್ತವೆ. ಸ್ವತಃ ಬೆನ್ನುಮೂಳೆ ಮುರಿತದಿಂದ ತೊಂದರೆ ಅನುಭವಿಸಿದ ವಿನಾಯಕರಾವ್ ಕನ್ಯಾಡಿ ಈ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಅವರ ನೋವನ್ನು ಅವರ ಮಾತಿನಲ್ಲೇ ಕೇಳೋಣ...

30 ವರ್ಷಗಳ ಹಿಂದೆ ಡಿಪ್ಲೊಮಾ ಮಾಡಿ, ಕಾಂಟ್ರಾಕ್ಟರ್ ಆಗಿ ಹತ್ತಾರು ಜನಕ್ಕೆ ಕೆಲಸ ಕೊಟ್ಟು ಸಾಮಾಜಿಕ ಸಂಘಟನೆಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದೆ. ಆಗಿನ ಕಾಲದಲ್ಲಿ, ಲೋ ವೋಲ್ಟೇಜ್, ಸಿಂಗಲ್ ಫೇಸ್ ಸಮಯದ ಮಿತಿಯಿಲ್ಲದೆ ಬೇಕಾಬಿಟ್ಟಿಯಾಗಿ ಬಂದು ಹೋಗುತ್ತಿದ್ದ ವಿದ್ಯುತ್ ಸಂಪರ್ಕ ವ್ಯವಸ್ಥೆಯಲ್ಲಿ ನಾವೆಲ್ಲ ಕೆಲಸ ಮಾಡಬೇಕಿತ್ತು. ಕೆರೆಯ ಮಣ್ಣು ತೆಗೆಯುವ ಸಂದರ್ಭದಲ್ಲಿ, ಕಂಬದ ಮೇಲೇರಿ ಕೆಲಸ ಮಾಡುವಾಗ, Input & line ಮುಟ್ಟಿ, ಮೇಲಿಂದ ಸೊಂಟದ ಭಾಗ ನೆಲಕ್ಕೂರಿ ಬಿದ್ದು, ಬೆನ್ನುಮೂಳೆ ಮುರಿತಕ್ಕೊಳಗಾಯಿತು.

ನಿಜವಾದ ಸಮಸ್ಯೆಗಳು ನಮ್ಮ ಸುತ್ತಮುತ್ತ ಆರಂಭವಾಗುವುದೇ ಹೀಗೆ. ಇಂತಹ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಜನರಿಗೆ, ಇಂದಿನ ಯುವಜನತೆಗೆ ಅಪಘಾತಕ್ಕೀಡಾದವರನ್ನು ಹೇಗೆ ನಿರ್ವಹಣೆ ಮಾಡಬೇಕೆಂಬ ಅರಿವು ಇಲ್ಲದಿರುವುದು ನೋವಿನ ಸಂಗತಿ. ವಿದ್ಯುತ್ ಶಾಕ್ ತಗುಲಿ ಮೇಲಿಂದ ಬಿದ್ದ ನಂತರ, ನನ್ನನ್ನು ಪ್ರಾಣಾಪಾಯದಿಂದ ಉಳಿಸಲು ಅಲ್ಲಿದ್ದ ವ್ಯಕ್ತಿಯೊಬ್ಬ ಮಗುವಿನಂತೆ ಹೊಟ್ಟೆಯ ಭಾಗವನ್ನು ಭುಜದ ಮೇಲೆ ಹಾಕಿಕೊಂಡು ಪಕ್ಕದ ಮನೆಗೆ ಕರೆದು ತಂದು ಕೂರಿಸಿದ. ಹೆಗಲಭಾರಕ್ಕೆ ಬೆನ್ನುಮೂಳೆಯ ಭಾಗ ಹೊರಕ್ಕೆ ಬರಲು ಯತ್ನಿಸಿದಂತೆ ಕಾಣುತ್ತಿತ್ತು. ಆನಂತರ, ಅಂಬಾಸಿಡರ್ ಕಾರಿನಲ್ಲಿ ನನ್ನ ಎರಡು ಕಾಲುಗಳನ್ನು ಹೊರಗೆ ಚಾಚಿ, ಮಂಗಳೂರಿನವರೆಗೆ ಚಿಕಿತ್ಸೆಗೆಂದು ಕರೆದುಕೊಂಡು ಹೋಗಲಾಯಿತು. ಅವರಿಗೆ ನನ್ನನ್ನು ಉಳಿಸುವುದೇ ಮೊದಲ ಕರ್ತವ್ಯವೆನಿಸಿತ್ತು.

ಇಂತಹ ಸನ್ನಿವೇಶಗಳಲ್ಲಿ ಮುಂಜಾಗ್ರತೆ, ಅಪಘಾತಕ್ಕೀಡಾದವರನ್ನು ನಿರ್ವಹಿಸುವ ಜಾಗ್ರತೆಯನ್ನು (Awareness) ನಮ್ಮ ಸಮಾಜ ಅರಿತುಕೊಳ್ಳಬೇಕಿದೆ. ಇಲ್ಲದಿದ್ದರೆ, ವಾಸಿಯಾಗುವ ವಿಚಾರಗಳು ಮತ್ತಷ್ಟು ಜಾಸ್ತಿಯಾಗುವ ಸಂಭವವೇ ಹೆಚ್ಚು. ಇದು ವ್ಯಕ್ತಿಯೊಬ್ಬ ಅಪಘಾತಕ್ಕೀಡಾದಾಗ, ಅನುಭವಿಸುವ ಮೊದಲನೇ ಹಂತ.

ಆಸ್ಪತ್ರೆಗೆ ದಾಖಲಾದ ಬಳಿಕ ಇದರ ಮುಂದಿನ ಹಂತವೇ ಶಸ್ತ್ರಚಿಕಿತ್ಸೆ. ಬೆನ್ನುಮೂಳೆಯು ಸದೃಢವಾಗಿರಲು, ಸ್ಕ್ರೂ, ಪ್ಲೇಟ್, ರಾಡುಗಳಂತಹ ಉಪಕರಣ ಬಳಸಿ ಸ್ಟೆಬಿಲೈಜೇಷನ್ ಹಂತದ ಚಿಕಿತ್ಸೆ ಮಾಡಿ ಮನೆಗೆ ಕಳಿಸುತ್ತಾರೆ. ವ್ಯಕ್ತಿಯು ಬಿದ್ದು, ಬೆನ್ನುಮೂಳೆಗೆ ಪೆಟ್ಟು ಮಾಡಿಕೊಂಡು ಬಂದ ಮೇಲೆ ಈ ಚಿಕಿತ್ಸೆ ಆಗುವವರೆಗೆ ನಡೆಯುವ ಪ್ರಕ್ರಿಯೆಯನ್ನು ಪ್ರಾಥಮಿಕ ಹಂತ ಎನ್ನಬಹುದು. ಮನೆಗೆ ಬಂದನಂತರ, Secondary Complications ಆರಂಭವಾಗುತ್ತವೆ. ಫಿಜಿಯೋತೆರಪಿ ಮಾಡುವುದು ಹೇಗೆ ಎಂದೆಲ್ಲ ಮಾಹಿತಿ ಕೊಟ್ಟು ಕಳುಹಿಸಿರುತ್ತಾರೆ. ಮನೆಯಲ್ಲಿ ಹೆಚ್ಚಿಗೆ ತಿಳಿದವರು ಇರುವುದಿಲ್ಲ. ಸರಿಯಾಗಿ ತೆರಪಿ ನಡೆಯದೆ ಕಾಲುಗಳು ಸ್ಟಿಫ್ ಆಗುತ್ತವೆ. ಕುಳಿತ ಜಾಗದಲ್ಲೇ ಕುಳಿತು, ಒತ್ತಡಗಳುಂಟಾಗಿ ಪ್ರೆಷರ್ ಇಂಜುರಿಗಳು ಉಂಟಾಗುತ್ತವೆ. ದೈಹಿಕ ಚಟುವಟಿಕೆ ಇತ್ಯಾದಿಗಳನ್ನು ಮಾಡಲು ಆಚೀಚೆ ಹೋಗಲು ಅಸಾಧ್ಯವಾಗುತ್ತದೆ. ಕುಳಿತಲ್ಲೇ ಟಿವಿ, ಮೊಬೈಲ್ ಮೇಲೆ ಅವಲಂಬಿತರಾಗಿ ದೀರ್ಘಕಾಲದ ಮಾನಸಿಕ ಖಿನ್ನತೆಯೂ ಆರಂಭಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಮನೆ ಸದಸ್ಯರು ಆತನಿಗೆ ಕಷ್ಟವಾಗದಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಲೇ ಬೇಕಾದ ಆಹಾರೋಪಚಾರಗಳನ್ನು ಮಾಡುವುದರಿಂದ ದೇಹದ ಬೊಜ್ಜು (Obesity) ಬರಲು ಕಾರಣವಾಗುತ್ತದೆ. ಇದರಿಂದ ಬೆಡ್ ಸೋರ್ಸ್ ಹೆಚ್ಚುತ್ತ, ಚರ್ಮದ ಗಾಯಗಳಾಗಲು ಶುರುವಾಗುತ್ತವೆ.

ಉದಾಹರಣೆಗೆ 3 ಗಂಟೆಗೊಮ್ಮೆ ಟ್ಯೂಬ್ ಹಾಕಿ ಮೂತ್ರ ತೆಗೆಯಬೇಕು ಇಲ್ಲವೇ ಬ್ಲಾಡರ್‌ಗೆ ಜೋಡಿಸಿದ ಕೆಥೆಡ್ರಲ್ ಮತ್ತು ಯೂರಿನ್ ಬ್ಯಾಗ್ ಗಮನಿಸುತ್ತ ಆಗಾಗ ಅದನ್ನು ಖಾಲಿ ಮಾಡುತ್ತಿರಬೇಕು ಮತ್ತು ತಿಂಗಳಿಗೊಮ್ಮೆ ಈ ಬ್ಯಾಗ್ ಹೊಸದಾಗಿ ಬದಲಾಯಿಸುತ್ತಿರಬೇಕು. ಈ ಹಂತದಲ್ಲಿ UTI (Urinary Track Infection) ಆಗುವ ಸಾಧ್ಯತೆಗಳು ಅತಿ ಹೆಚ್ಚು. ಇದಾಗದಂತೆ ನೋಡಿಕೊಳ್ಳುವುದು ಅತಿ ಅವಶ್ಯ.

ಗಂಟಾಘೋಷ

ಗುರುರಾಜ್ ಗಂಟಿಹೊಳೆ
vveditoped@gmail.com

ಇದರಂತೆಯೇ, ಮಲವಿಸರ್ಜನೆ ಸಮಸ್ಯೆ. ಎಷ್ಟು ತಿಂದುಂಡರೂ ಮೋಷನ್ ಹೋಗುವುದು ಗೊತ್ತಾಗುವುದಿಲ್ಲ. ಕೆಲವೊಮ್ಮೆ ಮೂರು ನಾಲ್ಕು ದಿನವಾದರೂ ಮೋಷನ್ ಆಗುವುದಿಲ್ಲ. ಬೇರೆ ಬೇರೆ ವಿಧಾನಗಳಿಂದ ಕೃತಕ ಮಲವಿಸರ್ಜನೆ ಮಾಡಿಸುವುದನ್ನು ತಿಳಿದುಕೊಂಡಿರಬೇಕು. ಇದನ್ನು ಮನೆಯವರೂ ಅರಿತಿರುವುದಿಲ್ಲ. ಇದಕ್ಕೆಂದೇ ಅಗತ್ಯವಿರುವಂಥಾದ್ದು ಪುನಶ್ಚೇತನ ಕೇಂದ್ರಗಳು.

ಭಾರತದಲ್ಲಿ Rights of Persons with Disabilities (RPwD) Act&- 2016 ಪ್ರಕಾರ, ದೈಹಿಕ ನ್ಯೂನತೆಯಲ್ಲಿ ಆರು ನ್ಯೂನತೆಗಳು, ದೃಷ್ಟಿ ದೋಷ ಸಂಬಂಧಿಯಲ್ಲಿ ಎರಡು, ಶ್ರವಣದೋಷದಲ್ಲಿ ಎರಡು ನ್ಯೂನ್ಯತೆ ಸೇರಿದಂತೆ ಹತ್ತು ವಿಭಾಗಗಳಲ್ಲಿ ಒಟ್ಟು 21 ಅಂಗವೈಕಲ್ಯಗಳನ್ನು ಗುರುತಿಸಲಾಗಿದೆ. ಸಾಮಾನ್ಯದಿಂದ ಹಿಡಿದು, ಗಂಭೀರ ನ್ಯೂನ್ಯತೆಗಳನ್ನು ಈ ಕಾಯಿದೆಯೊಳಗೆ ಪರಿಗಣಿಸಿದ್ದು ಉತ್ತಮವಾಗಿದ್ದರೂ, ಯಾವುದೋ ಕಾರಣದಿಂದ ಬೆನ್ನುಮೂಳೆ ತೊಂದರೆಗೊಳಗಾಗಿ ಹಾಸಿಗೆ ಹಿಡಿದರೆ, ಆತನನ್ನು ನಂಬಿ ಬದುಕು ಕಟ್ಟಿಕೊಳ್ಳುತ್ತಿದ್ದ ಇಡೀ ಕುಟುಂಬವೇ ಬೀದಿಪಾಲಾಗಿ ಬಿಡುತ್ತದೆ. ಆದಾಯ ನಿಂತು, ಮಕ್ಕಳ ವಿದ್ಯಾಭ್ಯಾಸ ಕುಂಠಿತಗೊಳ್ಳುವುದಲ್ಲದೇ ಅವರು ಬೆಳೆಯುವ ವಯಸ್ಸಿನಲ್ಲಿ ಮನಸ್ಸಿಗಾಗುವ ಪರಿಣಾಮಗಳು ಅವರ ಭವಿಷ್ಯಕ್ಕೆ ಮಾರಕವಾಗಬಲ್ಲವು. ಆ ಕುಟುಂಬದಲ್ಲಿ ಇತರೆ ಸದಸ್ಯರೇನಾದರೂ ದೀರ್ಘಾವಧಿ ಕಾಯಿಲೆ ಹೊಂದಿದ್ದರಂತೂ ಬದುಕು ಕಟ್ಟಿಕೊಳ್ಳುವುದೇ ದುಸ್ತರವಾಗಿಬಿಡುತ್ತದೆ. ಇಂತಹ ಗಂಭೀರತೆ ಹೊಂದಿರುವ Spinal cord ಸಮಸ್ಯೆಯನ್ನು ತಾತ್ಕಾಲಿಕ ಸಮಸ್ಯೆ ಎಂಬಂತೆ Physical Disability ಯಲ್ಲಿ ಬರುವ Locomotor Disability ವಿಭಾಗಕ್ಕೆ ಸೇರಿಸಿ ಪರಿಗಣಿಸುತ್ತಿರುವುದು ಅತಿದೊಡ್ಡ ತಾರತಮ್ಯವೆಂದೇ ಹೇಳಬಹುದಾಗಿದೆ.

ಸರಕಾರಿ ಮತ್ತು ಖಾಸಗಿ ವಲಯದಲ್ಲೂ ಸ್ಪೈನಲ್ ಕಾರ್ಡ್ ವಿಚಾರವಾಗಿ ಪ್ರತ್ಯೇಕ ಚಿಕಿತ್ಸಾ ವ್ಯವಸ್ಥೆ ಮತ್ತು ಜಾಗೃತಿ ಕೈಗೊಳ್ಳುವಂತಹ ಯಾವುದೇ ಯೋಜನೆಗಳಿಲ್ಲದಿರುವುದು ಅತ್ಯಂತ ಶೋಚನೀಯ. ಏಳು ಕೋಟಿಯಷ್ಟಿರುವ ಕರ್ನಾಟಕದ ಜನಸಂಖ್ಯೆಯಲ್ಲಿ ಒಟ್ಟು ಬೆನ್ನುಮೂಳೆ ಸಮಸ್ಯೆಗಳಿಂದ ನರಳುತ್ತಿರುವ ರೋಗಿಗಳ ಸಂಖ್ಯೆ ಬಗ್ಗೆ ಸ್ಪಷ್ಟ ಹಾಗೂ ನಿಖರ ಮಾಹಿತಿ ಇಲ್ಲವೇ ಇಲ್ಲ. ಕೆಲವೆಡೆ DHO ಬಳಿ, ಅವರಿವರು ಕೊಟ್ಟ ಮಾಹಿತಿ ಪ್ರಕಾರ ಕೆಲ ಜಿಲ್ಲೆಗಳಲ್ಲಿ ಗುರುತಿಸಿರಬಹುದು ಎಂಬುದನ್ನು ಬಿಟ್ಟರೆ, ಇಡೀ ರಾಜ್ಯದಲ್ಲಿ ನಿಖರ ಅಂಕಿಸಂಖ್ಯೆಗಳಿಲ್ಲ. ಆದಾಗ್ಯೂ, ರಾಜ್ಯಾದ್ಯಂತ 20 ಸಾವಿರ ಸ್ಪೈನಲ್‌ಕಾರ್ಡ್ ರೋಗಿಗಳಿದ್ದಾರೆಂದು ಖಾಸಗಿಯಾಗಿ ಅಂದಾಜಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯಿಂದ 1400 ರೂ.ಗಳನ್ನು ತಿಂಗಳಿಗೆ ಅಂಗವಿಕಲರು ಎಂಬ ಲೆಕ್ಕದಲ್ಲಿ ಇವರಿಗೆ ಚಿಕಿತ್ಸಾ ವೆಚ್ಚಕ್ಕೆ ಕೊಡಲಾಗುತ್ತಿದೆ. ಕೇವಲ ಯೂರಿನ್ ಬ್ಯಾಗ್ ಇತರೆ ಕಿಟ್ ಖರೀದಿ ಮಾಡುವುದಕ್ಕೇ ಇವರಿಗೆ ತಿಂಗಳಿಗೆ ಐದಾರು ಸಾವಿರ ರು. ಬೇಕಾಗುತ್ತದೆ. ಆಸ್ಪತ್ರೆಗೆ ಭೇಟಿ ಕೊಡಲು ಪ್ರಯಾಣದ ವೆಚ್ಚಕ್ಕೂ ಸಾಲ ಮಾಡಿ ಹೊಂದಿಸಬೇಕಾಗಿರುವುದು ಬೆನ್ನುಮೂಳೆ ಮುರಿತಕ್ಕೊಳಗಾದವರ ಸದ್ಯದ ಪರಿಸ್ಥಿತಿ.

ಬೆನ್ನುಮೂಳೆಗೆ ಒಂದು ಪ್ರತ್ಯೇಕ ಚಿಕಿತ್ಸಾ ವಿಭಾಗ, ಉಪಕರಣಗಳ ಖರೀದಿ, ನಿತ್ಯ ನಿರ್ವಹಣೆಗೆ ಆಗುವ ವೆಚ್ಚದ ಕುರಿತು ಮರುಮೌಲ್ಯ ಇತ್ಯಾದಿ ಆರೋಗ್ಯ ಇಲಾಖೆ ಮೂಲಕ ಸೂಕ್ತವಾಗಿ ಮರುವಿಮರ್ಶೆಗೆ ಒಳಪಡಬೇಕಿದೆ. ರಾಜ್ಯಾದ್ಯಂತ ಬೆನ್ನುಮೂಳೆ ಕುರಿತಂತೆ ಆರೋಗ್ಯ ಇಲಾಖೆ ಮೂಲಕ ಜಾಗೃತಿ ವಿಚಾರ ಸಂಕಿರಣಗಳು ನಡೆಯಬೇಕು. ಬೆನ್ನುಮೂಳೆ ಮುರಿತಕ್ಕೊಳಗಾದವರನ್ನು ವಿಶೇಷ ವರ್ಗಕ್ಕೆ ಸೇರಿಸಿ, ಅವರಿಗೆ ಕೊಡುತ್ತಿರುವ ಮಾಸಿಕ ಚಿಕಿತ್ಸಾ ವೆಚ್ಚವನ್ನು ತಜ್ಞ ವೈದ್ಯರಿಂದ ಸದ್ಯದ ಕಾಲಕ್ಕೆ ಹೊಂದುವಂತೆ ನಿಗದಿಪಡಿಸಿ, ಸಕಾಲದಲ್ಲಿ ತಲುಪಿಸುವ ವ್ಯವಸ್ಥೆಯಾಗಬೇಕು. ಈ ಸಮಸ್ಯೆಯಾದವರು ಮಕ್ಕಳನ್ನು ಹೊಂದಿದ್ದರೆ, ಅವರ ವಿದ್ಯಾಭ್ಯಾಸದ ಖರ್ಚುವೆಚ್ಚವನ್ನು ಸರ್ಕಾರವೇ ಭರಿಸುವಂತಾಗಬೇಕು. ಉದ್ಯೋಗದಲ್ಲಿದ್ದಾಗ, ಇಂತಹ ಅಪಘಾತಕ್ಕೊಳಗಾದರೆ, ಆಯಾ ಸಂಸ್ಥೆಗಳೇ ಇದರ ಸಂಪೂರ್ಣ ಜವಾಬ್ದಾರಿ ಹೊತ್ತು, ಚಿಕಿತ್ಸೆ, ಔಷಧಿ, ಉಪಚಾರ ಕೇಂದ್ರದ ಖರ್ಚುವೆಚ್ಚವನ್ನು ಭರಿಸಬೇಕು. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಬೆನ್ನುಮೂಳೆ ಮುರಿತಕ್ಕೊಳಗಾದವರ ಕುಟುಂಬ ಸದಸ್ಯರಿಗೆ ಉದ್ಯೋಗ ಖಾತ್ರಿಯನ್ನು ಒದಗಿಸುವಂತಹ ನಿಯಮಗಳನ್ನು ಜಾರಿಗೆ ತರಬೇಕು.

ಮೇಲಿನ ಸಂಕಷ್ಟಗಳನ್ನು ಹೊಂದಿರುವವರಿಗೆ ಕಿಂಚಿತ್ತು ಆಸರೆಯಾದರೂ ಸಾಕೆಂಬ ಉದ್ದೇಶದಿಂದ ಸೇವಾಧಾಮ ಎಂಬ ಸರಕಾರೇತರ ಸಂಸ್ಥೆ ಬೆನ್ನುಮೂಳೆ ಸಂಬಂಧಿತ ರೋಗಿಗಳ ವಿಚಾರದಲ್ಲಿ ಒಂದು ಮಹತ್ತರ ಸೇವೆಯನ್ನು ಕೈಗೊಂಡಿದೆ. ಸುಮಾರು 800ಕ್ಕೂ ಹೆಚ್ಚು ರೋಗಿಗಳನ್ನು ಗುರುತಿಸಿದ್ದು, ಇದರಲ್ಲಿ ಶೇ.10ರಷ್ಟು ಮಹಿಳೆಯರೂ ಇದ್ದಾರೆ. ಸೌದೆ ತರಲು ಬೆಟ್ಟಕ್ಕೆ ಹೋದಾಗ, ಕೆಲಸದಲ್ಲಿದ್ದಾಗ, ಮನೆಯ ಬಾತ್‌ರೂಮಿನಲ್ಲಿ ಕಾಲಜಾರಿ ಬಿದ್ದು ಮುರಿತಕ್ಕೊಳಗಾದವರೂ ಇದರಲ್ಲಿ ಸೇರಿದ್ದಾರೆ.

ಸೇವಾಧಾಮದಲ್ಲಿ ಶೇ.20ರಷ್ಟು ಬೆಡ್ ಸೋರ್ಸ್ ಪ್ರೆಷರ್‌ನಿಂದ ನರಳುತ್ತಿರುವವರಿದ್ದಾರೆ. ಇವರನ್ನು ಸಹ ವಿಶೇಷ ಹಾಸಿಗೆಗಳ ಸೌಕರ್ಯವುಳ್ಳ ಸ್ಥಳದಲ್ಲಿ ಆರೈಕೆಯ ಅಗತ್ಯವಿರುವ ಕಾರಣ, ಬೈಂದೂರು ಕ್ಷೇತ್ರದ ಪಡುವರಿ ಬಳಿ ಒಂದು ಆರೈಕೆ ಕೇಂದ್ರವನ್ನು ತೆರೆಯಲಾಗುತ್ತಿದೆ. ಈ ಮೂಲಕ ಬಡತನದ ಸಂಕಷ್ಟದಲ್ಲಿರುವ, ಆರೈಕೆ ಮಾಡುವವರಿಲ್ಲದೆ ಬೆನ್ನುಮೂಳೆ ಸಂಬಂಧಿತ ರೋಗಿಗಳಿಗೆ ಕೈಲಾದ ಸಹಾಯವನ್ನು, ಸತತ 21 ವರ್ಷಗಳಿಂದ ವಿವಿಧ ಸೇವೆಗಳ ಮೂಲಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತ ಬರುತ್ತಿರುವ 'ಸೇವಾಭಾರತಿ' ಸಂಸ್ಥೆಯ ಅಡಿಯಲ್ಲಿ ಕಳೆದ 7 ವರ್ಷಗಳಿಂದ ಸೇವಾಧಾಮ ಎಂಬ ಕಾರ್ಯಯೋಜನೆಯಲ್ಲಿ ಬೆನ್ನುಮೂಳೆ ಸಂಬಂಧಿತ ಚಿಕಿತ್ಸಾ, ಸೇವಾ ಸೌಕರ್ಯಗಳನ್ನು ಮಾಡುತ್ತ ಬರುತ್ತಿದೆ. ಇದರೊಂದಿಗೆ APD (Association with People of Disability) ಸಂಸ್ಥೆಯು ಸೇವಾಧಾಮದೊಂದಿಗೆ ಕೈಜೋಡಿಸಿದೆ. ಸಾಮರ್ಥ್ಯದಂತಹ ಇತರೆ ಸೇವಾ ಸಂಸ್ಥೆಗಳೂ ನೊಂದವರ ಸೇವೆಗೆ ಬದ್ಧತೆ ತೋರಿಸಲು ಸದಾ ಪ್ರಯತ್ನಶೀಲವಾಗಿ ನಿಂತಿವೆ ಎನ್ನಬಹುದು.

ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಸುಮಾರು 200–250ರಷ್ಟು ಜನರು ಮಾಸಿಕ ಲೆಕ್ಕದಲ್ಲಿ (ಪ್ರತಿದಿನಕ್ಕೆ 8–10 ಜನರು) ಬೆನ್ನುಮೂಳೆ ಸಂಬಂಧಿತ ಅಪಘಾತಕ್ಕೆ ಒಳಗಾಗುತ್ತಿದ್ದಾರೆ. ಇದರ ಅಂದಾಜಿನಲ್ಲಿ ವರ್ಷಕ್ಕೆ 3 ಸಾವಿರದಷ್ಟು ಜನರು ಈ ಸಮಸ್ಯೆಗೀಡಾಗುತ್ತಿದ್ದಾರೆ. ಇದಕ್ಕೆ ಚಿಕಿತ್ಸೆ ಮತ್ತು ಆರೈಕೆ ಕೇಂದ್ರಗಳು ರಾಜ್ಯದಲ್ಲಿ ಇರುವುದು ಬೆರಳೆಣಿಕೆಯಷ್ಟು ಮಾತ್ರ ಎಂಬುದು ಬೇಸರದ ಮಾಹಿತಿ. ಅಷ್ಟೇನೂ ಅನುದಾನ ಸಿಗದಿದ್ದರೂ, ಸೇವಾ ಮನೋಭಾವನೆಯಿಂದ ನಡೆಸುತ್ತಿರುವಂತಹ ಕೆಲವು ಸರ್ಕಾರೇತರ (NGO) ಸಂಸ್ಥೆಗಳು ಇಂಥವರ ಶುಶ್ರೂಷೆಯಲ್ಲಿ ತೊಡಗಿವೆ. ಇನ್ನಾದರೂ, ಇಂತಹ ಗಂಭೀರ ಸಮಸ್ಯೆಗಳ ಕುರಿತಂತೆ ಸ್ಥಳೀಯ ಆಡಳಿತ, ಸಂಬಂಧಿತ ಇಲಾಖೆಗಳು ಪ್ರತ್ಯೇಕ ವ್ಯವಸ್ಥೆ ಒದಗಿಸಲು ಕ್ರಮಕೈಗೊಂಡಲ್ಲಿ ನೊಂದವರ ಬಾಳಲ್ಲಿ ಹೊಸಬೆಳಕಾದರೂ ಮೂಡೀತು ಎಂದು ವಿನಾಯಕರಾವ್ ತಮ್ಮ ಸಾರ್ವಜನಿಕ ಕಳಕಳಿ ತೋರ್ಪಡಿಸುತ್ತಾರೆ.

ಕನ್ಯಾಡಿಯ ವಿನಾಯಕರಾವ್ ಅವರು ಸ್ವತಃ ಬೆನ್ನುಮೂಳೆ ಮುರಿತದ ದೈಹಿಕ ಸಂಕಷ್ಟಗಳ ಸಮಸ್ಯೆಗಳಿಂದ ಬಳಲುತ್ತಿದ್ದರೂ, ಬೇರೆಯವರು ಇಂತಹ ಸಮಸ್ಯೆಗಳಿಂದ ತೊದರೆ ಅನುಭವಿಸಬಾರದೆಂದು ತಮ್ಮ ಸೇವಾಧಾಮ ಸಂಸ್ಥೆಯ ಮೂಲಕ ಕೈಲಾದ ಸೇವೆಯನ್ನು ಮಾಡುತ್ತ ಬರುತ್ತಿದ್ದಾರೆ.

ಹಲವು ದಾನಿಗಳ ಸಹಕಾರದಿಂದ, ಸೇವಾಧಾಮದ ನೇತೃತ್ವದ ಮೂಲಕ, ಬೈಂದೂರು ಕ್ಷೇತ್ರದಲ್ಲಿ ಬೆನ್ನುಮೂಳೆ ಮುರಿತ ಮತ್ತು ಇದಕ್ಕೆ ಸಂಬಂಧಿಸಿದ ಸಮಸ್ಯೆಯಿಂದ ಬಳಲುತ್ತಿರುವ ಒಟ್ಟು 37 ಜನರ ಮುಂದಿನ ಚಿಕಿತ್ಸೆ ಮತ್ತು ಆರೈಕೆಗೆ ಅನುಕೂಲವಾಗಲೆಂದು ಜೊತೆಗೆ ಭವಿಷ್ಯದಲ್ಲಿ ಇಂತಹ ತೊಂದರೆ ಅನುಭವಿಸುವವರು ಸೂಕ್ತ ಆರೈಕೆಯಿಲ್ಲದೆ ಮತ್ತಷ್ಟು ಗಂಭೀರ ಸಮಸ್ಯೆಗಳನ್ನು ತಂದುಕೊಳ್ಳಬಾರದೆಂಬ ಉದ್ದೇಶದಿಂದ, ಬೆನ್ನುಮೂಳೆ ಸಮಸ್ಯೆಗಳಿಗೆ ಪರಿಹಾರ ಕೊಡುವ ಸಂಕಲ್ಪಕ್ಕೆ ಕೈಹಾಕಿದ ವಿನಾಯಕರಾವ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನರ್ವಸತಿ ಕೇಂದ್ರವನ್ನು (Rehabilitation Centre) ಆರಂಭಿಸುವ ಮೂಲಕ ನನ್ನ ಬೈಂದೂರು ಕ್ಷೇತ್ರದ ಜನತೆಯ ಪರವಾಗಿ ಅವರಿಗೆ ಧನ್ಯವಾದ ಅರ್ಪಿಸ ಬಯಸುತ್ತೇನೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:10, Issue:240

ಸಮಾಚಾರ ಸಣ್ಣದಲ್ಲ

ರಷ್ಯಾ-ಪಾಕ್ ನಂಟು: ಶೆಹಬಾಜ್ ಮನವಿ

ಬೀಜಿಂಗ್: ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮೀರ್ ಪುಟಿನ್ ಅವರ ಜತೆ ದ್ವಿಪಕ್ಷೀಯ ಸಭೆ ನಡೆಸಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, ರಷ್ಯಾ-ಪಾಕ್ ಸಂಬಂಧ ಗಟ್ಟಿಗೊಳಿಸುವ ಕುರಿತು ಮಾತನಾಡಿದ್ದಾರೆ. ಕಷ್ಟದ ಸಮಯದಲ್ಲಿ ಪಾಕಿಸ್ತಾನದ ಬೆಂಬಲಕ್ಕೆ ನಿಂತ ರಷ್ಯಾಗೆ ನಮ್ಮ ಧನ್ಯವಾದ. ನಾವು ರಷ್ಯಾ ಹಾಗೂ ಭಾರತದ ನಡುವಿನ ಸಂಬಂಧಗಳನ್ನು ಗೌರವಿಸುತ್ತೇವೆ. ಆ ಬಗ್ಗೆ ನಮ್ಮ ತಕರಾರು ಏನೂ ಇಲ್ಲ. ಅದು ಒಳ್ಳೆಯದೇ. ಆದರೆ, ನಾವು ಕೂಡ ರಷ್ಯಾದೊಂದಿಗೆ ಅದೇ ರೀತಿಯ ಉತ್ತಮ ಬಾಂಧವ್ಯ ಹೊಂದಲು, ಸಂಬಂಧವನ್ನು ಗಟ್ಟಿಗೊಳಿಸಿಕೊಳ್ಳಲು ಬಯಸುತ್ತೇವೆಂದು ತಿಳಿಸಿದ್ದಾರೆ. ಈ ಸಭೆಯ ದೃಶ್ಯ ಮತ್ತು ಮಾತುಗಳ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ಟಿಯಾಂಜಿನ್‌ನಲ್ಲಿ ನಡೆದ 'ಎಸ್‌ಸಿಒ' ಶೃಂಗಸಭೆಯಲ್ಲಿ ಭಾಗವಹಿಸಿದ್ದ ಪಾಕ್ ಪ್ರಧಾನಿ ಶೆಹಬಾಜ್, ತಾವೇ ಮುಂದಾಗಿ ಪುಟಿನ್ ಕೈಕುಲುಕಿದ್ದರು. ರಷ್ಯಾ ಜತೆಗೆ ದ್ವಿಪಕ್ಷೀಯ ಮಾತುಕತೆಗೆ ಮನವಿ ಮಾಡಿದ್ದರು. ಬಳಿಕ ಪುಟಿನ್ ಜತೆಗಿನ ಸಭೆ ಆರಂಭಕ್ಕೂ ಮುನ್ನ ಪಾಕ್ ಪ್ರಧಾನಿ ಷರೀಫ್ ಇಯರ್ ಫೋನ್ ಅನ್ನು ಕಿವಿಗೆ ಸರಿಯಾಗಿ ಹಾಕಿಕೊಳ್ಳಲಾಗದೇ ಪರದಾಡಿದರು. ಇದರಿಂದ ಪಾಕ್ ಪ್ರಧಾನಿ ಮುಜುಗರಕ್ಕೆ ಒಳಗಾಗುವಂತಾಯಿತು. ಈ ಸಂದರ್ಭದ ವಿಡಿಯೋ ವೈರಲ್ ಆಗಿದೆ.

ಬಿಆರ್‌ಎಸ್, ಎಂಎಲ್ಸಿ ಸ್ಥಾನ ತೊರೆದ ಕವಿತಾ

ಹೈದರಾಬಾದ್: ತೆಲಂಗಾಣದ ಭಾರತ ರಾಷ್ಟ್ರ ಸಮಿತಿ(ಬಿಆರ್‌ಎಸ್) ಪಕ್ಷದಿಂದ ಅಮಾನತುಗೊಂಡ ಬಳಿಕ ಕೆ.ಕವಿತಾ, ಪಕ್ಷ ತೊರೆದಿದ್ದಾರೆ. ಜತೆಗೆ ಪಕ್ಷದಿಂದ ಆಯ್ಕೆಯಾಗಿದ್ದ

ವಿಧಾನ ಪರಿಷತ್ ಸದಸ್ಯತ್ವಕ್ಕೂ ಬುಧವಾರ ರಾಜೀನಾಮೆ ಸಲ್ಲಿಸಿದ್ದಾರೆ. ಪುತ್ರಿ ಕವಿತಾ ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದಾರೆಂಬ ಆರೋಪ ಹಿನ್ನೆಲೆ ಬಿಆರ್‌ಎಸ್ ಪಕ್ಷದ ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ ಮಂಗಳವಾರ ಅಮಾನತು ಆದೇಶ ಹೊರಡಿಸಿದ್ದರು. ಪಕ್ಷ ತ್ಯಾಗ ಮತ್ತು ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಪತ್ರ ಸಲ್ಲಿಸಿದ ಬಳಿಕ ಬೆಂಬಲಿಗರ ಜತೆಗೂಡಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಕವಿತಾ, ಸಿಎಂ ರೇವಂತ್ ರೆಡ್ಡಿ ಜತೆ ಕೈಜೋಡಿಸಿರುವ ಹರೀಶ್ ರಾವ್, ಕೆಸಿಆರ್ ಕುಟುಂಬದ ವಿರುದ್ಧ ಸಂಚು ನಡೆಸುತ್ತಿದ್ದಾರೆ. ಈ ವಿಚಾರದಲ್ಲಿ ಸೋದರ, ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್ ಎಚ್ಚರಿದಿಂದಿರಬೇಕು ಎಂದು ಸಲಹೆ ನೀಡಿದ್ದಾರೆ. ಕಾಳೇಶ್ವರಂ ನೀರಾವರಿ ಯೋಜನೆಯಲ್ಲಿನ ಅಕ್ರಮ ಕೂಡ ಹರೀಶ್ ರಾವ್ ಮತ್ತು ಸಂತೋಷ್ ರಾವ್ ನಡೆಸಿದ್ದಾರೆ ಎಂದೂ ಕವಿತಾ ಆರೋಪಿಸಿದ್ದಾರೆ.

ಪುಟಿನ್ ವರ್ತನೆಯಿಂದ ನಿರಾಶೆಯಾಗಿದೆ: ಟ್ರಂಪ್

ವಾಷಿಂಗ್ಟನ್: ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ವರ್ತನೆಯಿಂದ ಬಹಳ ನಿರಾಶೆಯಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ

ರೇಡಿಯೋ ಸಂದರ್ಶನದಲ್ಲಿ ಹೇಳಿದ್ದಾರೆ. ಅಲಾಸ್ಕಾ ಶೃಂಗಸಭೆ ನಂತರ ಉಕ್ರೇನ್ ಜತೆ ಶಾಂತಿ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಪುಟಿನ್ ಯಾವುದೇ ನಿರ್ಧಾರ ತೆಗೆದುಕೊಳ್ಳದೇ ಇರುವುದು ಬೇಸರ ಉಂಟು ಮಾಡಿದೆ. ಅಮೆರಿಕ-ರಷ್ಯಾ ನಡುವೆ ಉತ್ತಮ ಸಂಬಂಧ ಇತ್ತು. ಈಗದು ಮಸುಕಾದಂತಾಗಿದೆ. ನಾನು ಬಹಳ ನಿರಾಶೆಗೊಂಡಿದ್ದೇನೆ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಉಕ್ರೇನ್ ಜತೆ ಶಾಂತಿ ಒಪ್ಪಂದ ಮಾಡಿಕೊಳ್ಳುವುದಕ್ಕೆ 2 ವಾರಗಳ ಗಡುವು ನಿಗದಿಪಡಿಸಲಾಗಿತ್ತು. ಆದರೆ, ಈವರೆಗೂ ರಷ್ಯಾ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದಿದ್ದಾರೆ. ಇದರಿಂದ ರಷ್ಯಾ ಮುಂದೆ ಯಾವ ರೀತಿಯ ಪರಿಣಾಮ ಎದುರಿಸಲಿದೆ ಎಂಬ ಬಗ್ಗೆ ಟ್ರಂಪ್ ಯಾವುದೇ ವಿಚಾರ ಬಾಯಿಬಿಟ್ಟಿಲ್ಲ. ರಷ್ಯಾ-ಚೀನಾ ನಡುವೆ ಸಂಬಂಧ ದೃಢವಾಗಿರುವ ಬಗ್ಗೆ ನಾನು ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಏಕೆಂದರೆ ವಿಶ್ವದಲ್ಲೇ ಅತ್ಯಂತ ಬಲಿಷ್ಠ ಸೇನೆ ನಮ್ಮಲ್ಲಿದೆ. ನಮ್ಮ ಮೇಲೆ ಯಾರೂ ದಾಳಿ ಮಾಡಲು ಸಾಧ್ಯವಿಲ್ಲ. ಆ ರೀತಿ ಮಾಡಿದರೆ ಅದೊಂದು ಅತಿಕೆಟ್ಟ ನಿರ್ಧಾರವಾಗಲಿದೆ ಎಂದು ಪ್ರಶ್ನೆಯೊಂದಕ್ಕೆ ಟ್ರಂಪ್ ಉತ್ತರಿಸಿದ್ದಾರೆ.

2026 ವೇಳೆ 10 ಗ್ರಾಂ ಚಿನ್ನ 1.25 ಲಕ್ಷ ರು?

ದೆಹಲಿ: ಚಿನ್ನದ ಬೆಲೆ ಏರಿಕೆ ಆಗುತ್ತಿರುವ ಪರಿ ನೋಡಿದರೆ 2026ರ ವೇಳೆಗೆ 10 ಗ್ರಾಂ 24 ಕ್ಯಾರಟ್ ಬಂಗಾರದ ಧಾರಣೆ 1.25 ಲಕ್ಷ ರು.ಗೆ ಮುಟ್ಟುವ ಸಾಧ್ಯತೆ ಇದೆ ಎಂದು ಐಸಿಐಸಿಐ ಬ್ಯಾಂಕ್‌ನ ಸಂಶೋಧನಾ ತಂಡ ಬುಧವಾರ ಭವಿಷ್ಯ ನುಡಿದಿದೆ. 2025ರಲ್ಲಿ ಈವರೆಗೆ ಚಿನ್ನದ ಬೆಲೆ ಜಾಗತಿಕ ಮಾರುಕಟ್ಟೆಯಲ್ಲಿ ಶೇ.33 ರಷ್ಟು ಏರಿಕೆ ಕಂಡಿದೆ. ವರ್ಷಾಂತ್ಯಕ್ಕೆ ಶೇ.99.9ರಷ್ಟು ಪರಿಶುದ್ಧ ಚಿನ್ನದ(24 ಕ್ಯಾರಟ್) ಬೆಲೆ 10 ಗ್ರಾಂಗೆ 99,500 ರು.ಗಳಿಂದ 1.10 ಲಕ್ಷ ರು. ನಡುವೆ ವಹಿವಾಟು ನಡೆಸುವ ಸಾಧ್ಯತೆ ಇದೆ. ಆದರೆ, ಭೌಗೋಳಿಕ- ರಾಜಕೀಯ ಉದ್ವಿಗ್ನತೆ ತೀವ್ರಗೊಂಡರೆ ಚಿನಿವಾರ ಪೇಟೆ ವಹಿವಾಟಿನಲ್ಲಿಯೂ ಭಾರೀ ಬದಲಾವಣೆಯಾಗುವ ಸಂಭವವಿದೆ ಎಂದು ಐಸಿಐಸಿಐ ಬ್ಯಾಂಕ್‌ನ ಎಕನಾಮಿಕ್ ರಿಸರ್ಚ್ ಗ್ರೂಪ್ ವಿಶ್ಲೇಷಣೆ ಮಾಡಿದೆ.

2024ರ ಡಿ.31ಕ್ಕೂ ಮುನ್ನ ವಲಸೆ ಬಂದವರಿಗೂ ಪೌರತ್ವ

ಪಾಕಿಸ್ತಾನ, ಅಫ್ಘಾನ್, ಬಾಂಗ್ಲಾದೇಶದಿಂದ ವಲಸೆ ಬಂದವರು | ಹಿಂದೂ, ಜೈನ್, ಸಿಖ್, ಬೌದ್ಧ, ಕ್ರೈಸ್ತ, ಪಾರ್ಸಿಗಳಿಗೆ | ಧಾರ್ಮಿಕ ದೌರ್ಜನ್ಯಕ್ಕೆ ಅಂಜಿ ಬಂದವರಿಗೆ ಆಶ್ರಯ | ಯಾವುದೇ ದಾಖಲೆ ಪತ್ರ ಇಲ್ಲದಿದ್ದರೂ ಸ್ಥಳಾವಕಾಶ

ದೆಹಲಿ: 2024ರ ಡಿ.31ಕ್ಕೂ ಮುನ್ನ ದಾಖಲೆಗಳಿಲ್ಲದೇ ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶದಿಂದ ವಲಸೆ ಬಂದ ಮುಸ್ಲಿಮೇತರ ಸಮುದಾಯದವರಿಗೆ ಭಾರತದಲ್ಲಿ ಉಳಿಯಲು 'ವಲಸೆ ಮತ್ತು ವಿದೇಶಿಯರು-2025' ಕಾಯಿದೆಯಡಿ ಅವಕಾಶ ನೀಡಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ಬುಧವಾರ ತಿಳಿಸಿದೆ.

2024ರ ಮಾ.11ರಂದು ದೇಶದಲ್ಲಿ ಜಾರಿಗೊಂಡ 'ಪೌರತ್ವ ತಿದ್ದುಪಡಿ ಕಾಯಿದೆ'(ಸಿಎಎ) 2014ರ ಡಿ.31ಕ್ಕೆ ಮುಂಚೆ ಭಾರತಕ್ಕೆ ವಲಸೆ ಬಂದ ಪಾಕಿಸ್ತಾನ, ಅಫ್ಘಾನಿಸ್ತಾನ ಹಾಗೂ ಬಾಂಗ್ಲಾದೇಶದ ಹಿಂದೂ, ಜೈನ, ಸಿಖ್, ಬೌದ್ಧ, ಕ್ರೈಸ್ತ, ಪಾರ್ಸಿಗಳಿಗಷ್ಟೇ ಭಾರತದ ಪೌರತ್ವ ದೊರಕಿಸಿಕೊಡಲಿತ್ತು. ಹಾಗಾಗಿ, ಧಾರ್ಮಿಕ ಕಿರುಕುಳದಿಂದ ತಪ್ಪಿಸಿಕೊಳ್ಳುವ ಸಲುವಾಗಿ 2014ರ ಡಿ.31ರ ನಂತರ ಭಾರತಕ್ಕೆ ವಲಸೆ ಬಂದವರ ಸ್ಥಿತಿ ಅತಂತ್ರವಾಗಿತ್ತು. ಈಗ ಹೊಸದಾಗಿ ಜಾರಿಗೊಳಿಸಲಾಗಿರುವ 'ವಲಸೆ ಮತ್ತು ವಿದೇಶಿಯರು-2025'ರ ಕಾಯಿದೆ 'ಸಿಎಎ'ಗೂ ಹೆಚ್ಚಿನ ಅನುಕೂಲ ಮಾಡಿಕೊಡಲಿದೆ ಎಂದು ಸಚಿವಾಲಯ ತಿಳಿಸಿದೆ.

ದಾಖಲೆ ಬೇಕಿಲ್ಲ: ಪಾಸ್‌ಪೋರ್ಟ್, ಪ್ರಯಾಣದ ದಾಖಲೆ ಪತ್ರಗಳಿಲ್ಲದ ಹಿಂದೂ, ಸಿಖ್, ಬೌದ್ಧ, ಜೈನ, ಕ್ರೈಸ್ತ ಹಾಗೂ ಪಾರ್ಸಿಗಳಿಗೆ ಭಾರತದಲ್ಲಿ ಉಳಿಯಲು 'ವಲಸೆ ಮತ್ತು ವಿದೇಶಿಯರು-2025'ರ ಕಾಯಿದೆಯ ಹೊಸ ಆದೇಶದಡಿ ಅವಕಾಶ ದೊರೆಯುತ್ತಿದೆ. ಇದರಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಪಾಕ್, ಬಾಂಗ್ಲಾ, ಅಫ್ಘಾನ್‌ನಿಂದ ಆಶ್ರಯ ಅರಸಿ ಬಂದಿರುವ ವಲಸಿಗ ಸಮುದಾಯಕ್ಕೆ ದೊಡ್ಡ ಮಟ್ಟದಲ್ಲಿ ಪರಿಹಾರ ದೊರೆಕಿದಂತಾಗಿದೆ.

ಅಲ್ಲದೇ, ಸಕ್ರಮವಾಗಿಯೇ ಭಾರತ ಪ್ರವೇಶಿಸಿರುವ, ಆದರೆ, ವೀಸಾ ಅವಧಿ ಮೀರಿದ ಆರೂ ಸಮುದಾಯದವರಿಗೆ ಭಾರತದಲ್ಲಿ ವಾಸ ಮುಂದುವರಿಸಲು 'ವಲಸೆ ಮತ್ತು ವಿದೇಶಿಗರ ಕಾಯಿದೆ-2025'ರಡಿ ಅವಕಾಶವಾಗಲಿದೆ ಎಂದು ಗೃಹ ಸಚಿವಾಲಯ ತಿಳಿಸಿದೆ.

ಅಪಹರಣ, ಬಲವಂತ ಮತಾಂತರ ಮೊದಲಾದ ಧಾರ್ಮಿಕ ದೌರ್ಜನ್ಯದಿಂದ ಪಾರಾಗಲು 2014ರ ನಂತರವೂ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದವರಿಗೆ, ವಿಶೇಷವಾಗಿ ಹಿಂದೂಗಳಿಗೆ ಈ ನಿಯಮದಿಂದ ಅನುಕೂಲವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

ಸಿಎಎ ಮೀರಿದ ಅನುಕೂಲ

ಧಾರ್ಮಿಕ ಕಾರಣಕ್ಕೆ ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಘಾನಿಸ್ಥಾನದಲ್ಲಿ ಕಿರುಕುಳಕ್ಕೆ ಒಳಗಾದ ಮುಸ್ಲಿಮೇತರರಿಗೆ ಭಾರತದ ಪೌರತ್ವ ದೊರಕಿಸಿಕೊಡಲೆಂದೇ ಸಿಎಎ ಜಾರಿಗೊಳಿಸಲಾಗಿತ್ತು. ಆದರೆ, ಅದು 2014ರ ಡಿ.31ರ ಗಡುವು ವಿಧಿಸಿತ್ತು. ಹೊಸ ಕಾಯಿದೆ ಆ ಗಡುವಿನ ನಂತರ ವಲಸೆ ಬಂದವರಿಗೂ ಅವಕಾಶ ಮಾಡಿ ಕೊಟ್ಟಿರುವುದು ಉಲ್ಲೇಖಾರ್ಹ.

ಟಿಎಂಸಿ ವಿರೋಧ

ಆದರೆ, ಈ ಗೃಹ ಸಚಿವಾಲಯದ ಹೊಸ ಕ್ರಮ 'ಮುಸ್ಲಿಮರನ್ನು ಹೊರಗಿಟ್ಟಿರುವುದು ಸರಿಯಲ್ಲ' ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಸಂಸದ ಶುಕಂತಾ ಮಜುಂದಾರ್ ವಿರೋಧ ವ್ಯಕ್ತಪಡಿಸಿದ್ದಾರೆ. ಅಕ್ರಮವಾಗಿ ವಲಸೆ ಬಂದಿರುವ ಮುಸ್ಲಿಮರಿಗೂ ಪೌರತ್ವ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಈ ಹಿಂದೆ ಭಾರತದ ಪೌರತ್ವ ದೊರಕದ ಕಾರಣಕ್ಕೆ ಅಳುತ್ತಾ ದೇಶ ತೊರೆದಿದ್ದ ಪಾಕ್ ಹಿಂದೂಗಳು.

ವಲಸೆ ಬಂದ ಹಿಂದೂಗಳಿಂದ 'ಪಾಕಿಸ್ತಾನದಲ್ಲಿನ ಮಾನವ ಹಕ್ಕು ಉಲ್ಲಂಘನೆ' ಬಗ್ಗೆ ಭಿತ್ತಿಪತ್ರ ಪ್ರದರ್ಶನ

ಪಾಕ್‌ನಿಂದ ವಾರ್ಷಿಕ 5000 ಹಿಂದೂ ವಲಸೆ

ಪಾಕಿಸ್ತಾನದಲ್ಲಿನ ಧಾರ್ಮಿಕ ಹಿಂಸೆ, ಸ್ತ್ರೀಯರ ಅಪಹರಣ, ಬಲವಂತ ವಿವಾಹ, ಮತಾಂತರ ಹಿಂಸೆಗೆ ಹೆದರಿಕೊಂಡು ವಾರ್ಷಿಕ ಐದು ಸಾವಿರಕ್ಕೂ ಅಧಿಕ ಹಿಂದೂಗಳು ಭಾರತಕ್ಕೆ ವಲಸೆ ಬರುತ್ತಿದ್ದಾರೆ. 1950ರಿಂದ 2020ರವರೆಗಿನ ಅವಧಿಯಲ್ಲಿ 3.50 ಲಕ್ಷ ಹಿಂದೂಗಳು ಪಾಕಿಸ್ತಾನವೊಂದರಿಂದಲೇ ಭಾರತಕ್ಕೆ ವಲಸೆ ಬಂದಿದ್ದಾರೆ. ಅವರಲ್ಲಿ ಹೆಚ್ಚಿನವರು ಉತ್ತರ ಭಾರತದಲ್ಲಿ(ದೆಹಲಿ, ಪಂಜಾಬ್, ರಾಜಸ್ಥಾನ, ಗುಜರಾತ್, ಹರಿಯಾಣ) ನೆಲೆಸಿದ್ದಾರೆ ಎಂಬ ಮಾಹಿತಿ ಇದೆ.

ಬಾಂಗ್ಲಾ ಹಿಂದೂ ಅತ್ಯಧಿಕ ವಲಸೆ

ಬಾಂಗ್ಲಾದೇಶದಿಂದಲೂ ಅತ್ಯಧಿಕ ಸಂಖ್ಯೆಯ ಹಿಂದೂಗಳು ಭಾರತಕ್ಕೆ ವಲಸೆ ಹೋಗಿದ್ದಾರೆ. 1964ರಿಂದ 2013ರವರೆಗಿನ ಅವಧಿಯಲ್ಲಿ 1.13 ಕೋಟಿ ಹಿಂದೂಗಳು ಬಾಂಗ್ಲಾದೇಶದಿಂದ ಭಾರತಕ್ಕೆ ವಲಸೆ ಹೋಗಿದ್ದು, ಮುಖ್ಯವಾಗಿ ಪಶ್ಚಿಮ ಬಂಗಾಳ, ತ್ರಿಪುರಾ, ಅಸ್ಸಾಂ, ಮೇಘಾಲಯ ರಾಜ್ಯಗಳಲ್ಲಿ ನೆಲೆ ಕಂಡುಕೊಂಡಿದ್ದಾರೆ ಎಂದು ಢಾಕಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞ ಅಬುಲ್ ಬರ್ಕಾತ್ ಎಂಬವರು ಅಂಕಿ ಅಂಶ ನೀಡಿದ್ದಾರೆ ಎಂದು ವರದಿಯಾಗಿದೆ.

ಆಪರೇಷನ್ ಸಿಂದೂರ್ ವೇಳೆ ಪಾಕ್‌ಗೆ ನೆರವು ನೀಡಿದ್ದಕ್ಕೆ ಶಿಕ್ಷೆ

ಅಜರ್‌ಬೈಜಾನ್ ಎಸ್‌ಸಿಒ ಸದಸ್ಯತ್ವಕ್ಕೆ ಭಾರತದ ತಡೆ

ಬಾಕು: 'ಶಾಂಘೈ ಸಹಕಾರ ಸಂಸ್ಥೆ'(ಎಸ್‌ಸಿಒ) ಪೂರ್ಣ ಸದಸ್ಯತ್ವಕ್ಕಾಗಿ ಅಜರ್‌ಬೈಜಾನ್ ಸಲ್ಲಿಸಿದ್ದ ಅರ್ಜಿಗೆ ಭಾರತ ಮತ್ತೆ ತಡೆ ಹಾಕಿದೆ. ಆ ಮೂಲಕ 'ಎಸ್‌ಸಿಒ' ಪೂರ್ಣ ಸದಸ್ಯತ್ವದ ಕನಸು ಕಾಣುತ್ತಿದ್ದ ಅಜರ್‌ಬೈಜಾನ್‌ಗೆ ಭಾರತ ಆಘಾತ ಉಂಟು ಮಾಡಿದೆ.

ಈ ಸುದ್ದಿಯನ್ನು ಬುಧವಾರ ಪ್ರಮುಖವಾಗಿ ಪ್ರಸಾರ ಮಾಡಿರುವ ಅಜರ್‌ಬೈಜಾನ್ ಸುದ್ದಿವಾಹಿನಿಗಳು, ಭಾರತದ ವಿರುದ್ಧ ಕಿಡಿಕಾರಿವೆ. 'ಎಸ್‌ಸಿಒ'ದಲ್ಲಿ ಪೂರ್ಣ ಪ್ರಮಾಣದ ಸದಸ್ಯತ್ವ ಪಡೆಯುವುದು ಅಜರ್‌ಬೈಜಾನ್ ಮಹತ್ವಾಕಾಂಕ್ಷೆಯಾಗಿತ್ತು. ಆದರೆ, ಭಾರತ ಅದಕ್ಕೆ ತಡೆಗೋಡೆಯಾಗಿದೆ. ಭಾರತದ ಈ ನಡೆಗೆ ಆಪರೇಷನ್ ಸಿಂದೂರ್ ವೇಳೆ ಪಾಕ್‌ಗೆ ಅಜರ್‌ಬೈಜಾನ್ ನೆರವು ನೀಡಿದ್ದೇ ಕಾರಣ, ಭಾರತ ಬಹುಪಕ್ಷೀಯ ರಾಜತಾಂತ್ರಿಕ ತತ್ವಗಳನ್ನೇ ಮರೆತಿದೆ ಎಂದು ಅಜರ್‌ಬೈಜಾನ್ ಮಾಧ್ಯಮಗಳು ಟೀಕಿಸಿವೆ.

'ಪಾಕಿಸ್ತಾನದೊಂದಿಗೆ ಅಜರ್‌ಬೈಜಾನ್‌ಗಿರುವ ನಿಕಟ ಸಂಬಂಧ ಕಂಡು ಭಾರತ ಹೀಗೆ ಸೇಡು ತೀರಿಸಿಕೊಳ್ಳಲು ಯತ್ನಿಸುತ್ತಿದೆ' ಎಂದು ಅಜರ್‌ಬೈಜಾನ್‌ನ ಕೆಲವು ನಾಯಕರು ಟೀಕಿಸಿದ್ದಾರೆ.

ಭಾರತದ ಇಂಥ ಕ್ರಮಗಳು ಏನೇ ಇದ್ದರೂ ಅಜರ್‌ಬೈಜಾನ್ ಪಾಕ್ ಜತೆಗಿನ ಸೋದರ ಸಂಬಂಧಕ್ಕೇ ಆದ್ಯತೆ ನೀಡುತ್ತದೆ ಎಂದು ಟರ್ಕಿಶ್ ದಿನಪತ್ರಿಕೆ 'ಡೈಲಿ ಸಬಾ' ಕೂಡಾ ವರದಿ ಮಾಡಿದೆ.

'ಪಾಕ್ ನಿಕಟ ಸಂಬಂಧ'

'ಪಾಕ್ ಜತೆಗಿನ ಅಜರ್‌ಬೈಜಾನ್ ಸಂಬಂಧ ಬಹಳ ನಿಕಟವಾಗಿದೆ. ರಾಜಕೀಯ, ಸಾಂಸ್ಕೃತಿಕ ಮತ್ತು ಕಾರ್ಯತಂತ್ರ ಸಂಬಂಧಗಳಲ್ಲಿ ಬೇರೂರಿದೆ' ಎಂದು ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಅಲಿಯೆವ್ ಹೇಳಿದ್ದಾರೆ. ಪಾಕ್ ಪ್ರಧಾನಿ ಶಹಬಾಜ್ ಷರೀಫ್ ಜತೆಗಿನ ಚರ್ಚೆ ವೇಳೆ ಎರಡೂ ದೇಶಗಳ ವ್ಯಾಪಾರ ಮತ್ತು ಆರ್ಥಿಕ ಸಹಕಾರ ವಿಸ್ತರಿಸುವ ಕುರಿತು ಚರ್ಚಿಸಿದ್ದಾರೆ ಎಂದು ವರದಿಯಾಗಿದೆ.

ವರ್ಷಾರಂಭದಲ್ಲಿ ಚೀನಾದ ಟಿಯಾಂಜಿನ್ ನಗರದಲ್ಲಿ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಜತೆ ಅಜರ್‌ಬೈಜಾನ್ ಅಧ್ಯಕ್ಷ ಇಲ್ಹಾಮ್ ಅಲಿಯೆವ್ ಸಭೆ ನಡೆಸಿದ್ದರು. ಆಪರೇಷನ್ ಸಿಂದೂರ್ ವೇಳೆ ಭಾರತದ ವಿರುದ್ಧ ಪಾಕ್ ವಿಜಯ ಸಾಧಿಸಿದೆ ಎಂದು ಅಭಿನಂದಿಸಿದ್ದರು.

ಬಲೂಚಿಸ್ತಾನ್ ಬಾಂಬ್ ದಾಳಿಗೆ 14 ಜೀವ ಬಲಿ

ಕ್ವೆಟ್ಟಾ: ಪಾಕಿಸ್ತಾನದ ಬಲೂಚಿಸ್ತಾನದಲ್ಲಿನ ಕ್ವೆಟ್ಟಾದಲ್ಲಿ 'ಬಲೂಚಿಸ್ತಾನ್ ರಾಷ್ಟ್ರೀಯ ಪಕ್ಷ'(ಬಿಎನ್‌ಪಿ) ರ‍್ಯಾಲಿ ನಡೆದಿದ್ದಾಗ ಬಾಂಬ್ ಸ್ಫೋಟವಾಗಿದ್ದು, 14 ಜನರು ಸಾವನ್ನಪ್ಪಿದ್ದಾರೆ. 35 ಜನರು ಗಾಯಗೊಂಡಿದ್ದು, ಹಲವರ ಸ್ಥಿತಿ ಗಂಭೀರವಾಗಿದೆ.

ಶಹವಾನಿ ಕ್ರೀಡಾಂಗಣ ಬಳಿ ಮಂಗಳವಾರ ಸಂಜೆ ಬಲೂಚ್ ನಾಯಕ ಸರ್ದಾರ್ ಅತಾವುಲ್ಲಾ ಮೆಂಗಲ್ 4ನೇ ಪುಣ್ಯತಿಥಿ ಸ್ಮರಣಾ ಕಾರ್ಯಕ್ರಮ ಮುಗಿದ ಕೆಲ ಕ್ಷಣಗಳಲ್ಲೇ ಸ್ಫೋಟವಾಗಿದೆ. ಬಲೂಚಿಸ್ತಾನ ಆರೋಗ್ಯ ಸಚಿವ ಬಖ್ತ್ ಮುಹಮ್ಮದ್ ಕಾಕರ್ 14 ಜನರ ಸಾವು ದೃಢಪಡಿಸಿದ್ದಾರೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಬಿಎನ್‌ಪಿ ಮುಖ್ಯಸ್ಥ ಅಖ್ತರ್ ಮೆಂಗಲ್ ಮತ್ತು ಅವರ ಬೆಂಗಾವಲು ಪಡೆ ಬಾಂಬ್ ದಾಳಿಯ ಗುರಿಯಾಗಿತ್ತು. ಆದರೆ, ಮೆಂಗಲ್ ಯಾವುದೇ ಗಾಯಗಳಿಲ್ಲದೇ ಪಾರಾಗಿದ್ದಾರೆ. ಪಕ್ಷದ 13 ಸದಸ್ಯರು ಸಾವನ್ನಪ್ಪಿದ್ದಾರೆ ಎಂದು ಬಿಎನ್‌ಪಿ ವಕ್ತಾರ ಸಾಜಿದ್ ತರೀನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬಾಂಬ್ ದಾಳಿ ಖಂಡಿಸಿರುವ ಬಲೂಚಿಸ್ತಾನ ಮುಖ್ಯಮಂತ್ರಿ ಮೀರ್ ಸರ್ಫ್ರಾಜ್ ಬುಗ್ತಿ, ಸಮಗ್ರ ತನಿಖೆಗೆ ಆದೇಶಿಸಿರುವುದಾಗಿ ಹೇಳಿದರು.

ಕ್ವೆಟ್ಟಾದಲ್ಲಿ ಬಾಂಬ್ ದಾಳಿ ಬಳಿಕ ಪೊಲೀಸರಿಂದ ಸ್ಥಳ ಪರಿಶೀಲನೆ.

ಭಾರತ-ಜರ್ಮನಿ ವ್ಯಾಪಾರ ಒಪ್ಪಂದ

ದೆಹಲಿ: ಜರ್ಮನಿಯಲ್ಲಿ ಹೊಸ ಸರಕಾರ ರಚನೆ ನಂತರ ವಿದೇಶಾಂಗ ಸಚಿವ ಜೋಹಾನ್ ವೇಡ್ಫುಲ್ ಭಾರತಕ್ಕೆ ಮೊದಲ ಭೇಟಿ ನೀಡಿದ್ದಾರೆ. ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಜತೆ ದ್ವಿಪಕ್ಷೀಯ ಸಭೆ ನಡೆಸಿದ್ದಾರೆ.



ಜೋಹಾನ್, ಭಾರತ-ಜರ್ಮನಿ ರಾಜತಾಂತ್ರಿಕ ಸಂಬಂಧ ಬಹಳ ಉತ್ತಮವಾಗಿವೆ. ರಕ್ಷಣೆಯಿಂದ ತಂತ್ರಜ್ಞಾನದವರೆಗೆ ಎರಡೂ ದೇಶಗಳ ನಡುವೆ ಹಲವು ಒಪ್ಪಂದಗಳು ಈ ಮೊದಲೇ ಆಗಿವೆ. ಸದ್ಯ ಇಬ್ಬರೂ ವಿದೇಶಾಂಗ ಸಚಿವ ಭಾರತ-ಜರ್ಮನಿ ನಡುವೆ ಮುಕ್ತ ವ್ಯಾಪಾರ ನಡೆಸುವ ಕುರಿತು ಒಪ್ಪಂದ ಮಾಡಿಕೊಳ್ಳುವ ಸಂಬಂಧ ಮಾತುಕತೆ ನಡೆಸಿದ್ದಾರೆ.

ಬೆಂಗಳೂರಿಗೂ ಭೇಟಿ ನೀಡಿದ್ದ ಜೋಹಾನ್, ಭಾರತದ ವೈಜ್ಞಾನಿಕ ಪ್ರಗತಿಯ ಚಿತ್ರಣವನ್ನು ಕಂಡು ಪ್ರಶಂಸೆ ವ್ಯಕ್ತಪಡಿಸಿದರು. ಸದ್ಯ ದೆಹಲಿಯಲ್ಲಿರುವ ಜೋಹಾನ್, ಸಚಿವ ಜೈಶಂಕರ್ ಜತೆ ಸಭೆ ನಡೆಸಿ ಜಂಟಿ ಹೇಳಿಕೆಗೆ ಸಹಿ ಹಾಕಿದರು.

ಭಾರತ-ಜರ್ಮನಿ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಶೀಘ್ರದಲ್ಲೇ ಅಂತಿಮಗೊಳ್ಳಲಿದೆ ಎಂದು ಜೈಶಂಕರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಎದುರಾದ ಅಮೆರಿಕದ ಪ್ರತಿಸುಂಕ ಕುರಿತ ಪ್ರಶ್ನೆಗೆ ಜೋಹಾನ್ ಉತ್ತರಿಸಲು ಹಿಂಜರಿದರು. ಜರ್ಮನಿ ಯುರೋಪಿಯನ್ ಒಕ್ಕೂಟದ ಭಾಗವಾಗಿರುವುದರಿಂದ ಅವರು ವಿವಾದದಲ್ಲಿ ಸಿಲುಕಿಕೊಳ್ಳಲು ಬಯಸಲಿಲ್ಲ. ಜೋಹಾನ್ ಪರಿಸ್ಥಿತಿಗೆ ಜೈಶಂಕರ್ ಮುಗುಳ್ನಕ್ಕರು.

ಭಾರತ ಶೇ.200 ಸುಂಕ, ವಿಶ್ವದಲ್ಲೇ ಅತ್ಯಧಿಕ

ಅಮೆರಿಕ ಸುಂಕಾಸ್ತ್ರಕ್ಕೆ ಟ್ರಂಪ್ ಸಮರ್ಥನೆ | ಹೆಚ್ಚುವರಿ ಸುಂಕ ರದ್ದುಗೊಳಿಸುವ ಚಿಂತನೆ ಇಲ್ಲ

ವಾಷಿಂಗ್ಟನ್: ಅಮೆರಿಕ ಸರಕುಗಳ ವಿರುದ್ಧ ಭಾರತ ವಿಶ್ವದಲ್ಲೇ ಅತ್ಯಧಿಕ ಪ್ರಮಾಣದ ಸುಂಕ ವಿಧಿಸುತ್ತಿದೆ. ಹಾಗಾಗಿಯೇ ಅಮೆರಿಕ ಕೂಡಾ ಶೇ.50ರಷ್ಟು ಪ್ರತಿಸುಂಕ ವಿಧಿಸಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಸರಕಾರದ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಶ್ವೇತಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಟ್ರಂಪ್, ಭಾರತದ ಮೇಲೆ ಸದ್ಯ ವಿಧಿಸಲಾಗಿರುವ ಹೆಚ್ಚುವರಿ ಸುಂಕವನ್ನು ರದ್ದುಗೊಳಿಸುವ ಚಿಂತನೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತದ ಜತೆ ಅಮೆರಿಕ ಉತ್ತಮ ಸಂಬಂಧ ಹೊಂದಿದೆ. ಆದರೆ, ಕೆಲವು ವರ್ಷಗಳಿಂದ ವ್ಯಾಪಾರ ಸಂಬಂಧ ಏಕಪಕ್ಷೀಯವಾಗಿದೆ. ನಾನು ಅಧಿಕಾರಕ್ಕೆ ಬಂದ ಬಳಿಕ ಎಲ್ಲವೂ ಬದಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಟ್ರಂಪ್ ಉತ್ತರಿಸಿದ್ದಾರೆ.

ಭಾರತ ನಮಗೆ ಅಪಾರ ಪ್ರಮಾಣದ ಸುಂಕಗಳನ್ನು ವಿಧಿಸುತ್ತಿರುವುದರಿಂದ ಭಾರತದೊಂದಿಗೆ ಅಮೆರಿಕ ಹೆಚ್ಚು ವಹಿವಾಟು ನಡೆಸುತ್ತಿಲ್ಲ. ಭಾರತದ ಜತೆ ನಮ್ಮ ವ್ಯಾಪಾರ-ವ್ಯವಹಾರ ಬಹಳ ಕಡಿಮೆ ಇದೆ. ಆದರೆ, ಭಾರತ ಮಾತ್ರ ಅಮೆರಿಕ ಮಾರುಕಟ್ಟೆಯಲ್ಲಿ ಅಪಾರ ಪ್ರಮಾಣದ ವ್ಯಾಪಾರ ಮಾಡುತ್ತಿದೆ. ಈ ಏಕಪಕ್ಷೀಯ ವ್ಯಾಪಾರ ನೀತಿ ಸರಿದೂಗಿಸಲು ಹೆಚ್ಚುವರಿ ಸುಂಕ ವಿಧಿಸಲಾಗಿದೆ. ನಮ್ಮ ನಿರ್ಧಾರ ಮೂರ್ಖತನದ್ದೇನಲ್ಲ. ಈಗ ನಾವೂ ಹೆಚ್ಚಿನ ತೆರಿಗೆ ವಿಧಿಸುತ್ತಿರುವುದರಿಂದ ಪರಿಸ್ಥಿತಿ ಬದಲಾಗಿದೆ ಎಂದು ಹೇಳಿದ್ದಾರೆ.

> ಅಮೆರಿಕದ ಹಾರ್ಲೆ ಡೇವಿಡ್ಸನ್ ಮೋಟಾರ್ ಬೈಕ್‌ಗಳಿಗೆ ಭಾರತ ಶೇ.200 ಸುಂಕ ವಿಧಿಸಿರುವುದರಿಂದ ಕಂಪನಿಗೆ ತನ್ನ ಮೋಟಾರ್ ಬೈಕ್‌ಗಳನ್ನು ಭಾರತದಲ್ಲಿ ಮಾರಾಟ ಮಾಡಲು ಸಾಧ್ಯವಿಲ್ಲದಂತಾಗಿದೆ. ಈಗ ಹಾರ್ಲೆ ಡೇವಿಡ್ಸನ್ ಕಂಪನಿ ಭಾರತದಲ್ಲಿಯೇ ತಯಾರಿಕಾ ಘಟಕ ಸ್ಥಾಪಿಸಿದೆ. ಹಾಗಾಗಿ ಸುಂಕದ ಹೊರೆ ತಗ್ಗಿದೆ.
>
> **-ಡೊನಾಲ್ಡ್ ಟ್ರಂಪ್** ಅಮೆರಿಕ ಅಧ್ಯಕ್ಷ

ಛತ್ತೀಸಗಢ: 9 ಮಹಿಳೆ ಸೇರಿ 20 ನಕ್ಸಲರ ಶರಣು

ಸುಕ್ಮಾ: ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ 9 ಮಹಿಳೆಯರೂ ಸೇರಿದಂತೆ 20 ನಕ್ಸಲರು ಪೊಲೀಸರಿಗೆ ಬುಧವಾರ ಶರಣಾಗಿದ್ದಾರೆ. ಅವರಲ್ಲಿ 11 ಮಂದಿ ವಿರುದ್ಧ ಒಟ್ಟು 33 ಲಕ್ಷ ರು.ಗಳ ಇನಾಮು ಘೋಷಿಸಲಾಗಿತ್ತು. 11 ನಕ್ಸಲರ ಬಂಧನಕ್ಕೆ ನೆರವಾದವರಿಗೆ 33 ಲಕ್ಷ ರು. ಬಹುಮಾನ ನೀಡುವುದಾಗಿ ಘೋಷಿಸಲಾಗಿತ್ತು.

ಶರಣಾದವರಲ್ಲಿ ಪೀಪಲ್ ಲಿಬರೇಶನ್ ಗೆರಿಲ್ಲಾ ಆರ್ಮಿ(ಪಿಎಲ್‌ಜಿಎ) ಬೆಟಾಲಿಯನ್ ನಂ.1ರ ತೀವ್ರಗಾಮಿ ನಕ್ಸಲರ ತಂಡಕ್ಕೆ ಸೇರಿದವರಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಗ್ಧ ಬುಡಕಟ್ಟು ಜನರ ಮೇಲೆ ನಕ್ಸಲ್ ತಂಡದವರು ನಡೆಸಿದ ದೌರ್ಜನ್ಯ ಕಂಡು ಇದೆಲ್ಲಾ 'ಟೊಳ್ಳು' ಮಾವೋವಾದಿ ಸಿದ್ಧಾಂತ ಎಂದು ಬೇಸರಗೊಂಡು 20 ನಕ್ಸಲರು ಶರಣಾಗಿದ್ದಾರೆ. ಅಲ್ಲದೇ, ನಿಷೇಧಿತ ಮಾವೋವಾದಿ ಸಂಘಟನೆಯಲ್ಲಿ ಹೆಚ್ಚುತ್ತಿರುವ ಆಂತರಿಕ ಭಿನ್ನಾಭಿಪ್ರಾಯಗಳೂ ಇವರನ್ನು ನಿರಾಶೆಗೊಳಿಸಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ.

ಹಳ್ಳಿಗಳಲ್ಲಿ ಅಭಿವೃದ್ಧಿ ಕಾಮಗಾರಿ ಸುಗಮಗೊಳಿಸುವ ಗುರಿ ಹೊಂದಿರುವ ರಾಜ್ಯ ಸರಕಾರದ 'ನಿಯದ್ ನೆಲ್ಲನಾರ್'(ನಿಮ್ಮ ಒಳ್ಳೆಯ ಗ್ರಾಮ) ಯೋಜನೆಯಿಂದ ಪ್ರಭಾವಿತರಾಗಿದ್ದಾರೆ. ಅಲ್ಲದೇ ಶರಣಾದವರಿಗೆ ಸರಕಾರ ಒದಗಿಸುವ ಪುನರ್ವಸತಿ ಸೌಲಭ್ಯಗಳೂ ಅವರನ್ನು ಆಕರ್ಷಿಸಿವೆ ಎಂದು ಚವಾಣ್ ಹೇಳಿದ್ದಾರೆ.

50 ಸಾವಿರ ರು. ಆರ್ಥಿಕ ನೆರವು: ಮಾವೋವಾದಿ ಪಿಎಲ್‌ಜಿಎ ಬೆಟಾಲಿಯನ್ ನಂ.1ರ ಸದಸ್ಯೆ ಶರ್ಮಿಳಾ ಅಲಿಯಾಸ್ ಉಯಿಕಾ ಭೀಮೆ(25) ಮತ್ತು ಮಾವೋವಾದಿಗಳ ಪಶ್ಚಿಮ ಬಸ್ತಾರ್ ವಿಭಾಗ ಸದಸ್ಯೆ ತಾತಿ ಕೋಸಿ ಅಲಿಯಾಸ್ ಪರ್ಮಿಳಾ (20) ವಿರುದ್ಧ ತಲಾ 8 ಲಕ್ಷ ರು. ಹಾಗೂ ವಲಯ ಸಮಿತಿ ಸದಸ್ಯೆ ಮುಚಕಿ ಹಿಡ್ಮಾ(54) ಎಂಬಾಕೆ ವಿರುದ್ಧ 5 ಲಕ್ಷ ರು., ಇತರೆ ನಾಲ್ವರು ನಕ್ಸಲರ ವಿರುದ್ಧ ತಲಾ 4 ಲಕ್ಷ ರು. ಮತ್ತು ನಾಲ್ವರಿಗೆ ತಲಾ 1 ಲಕ್ಷ ರು. ಇನಾಮು ಘೋಷಿಸಲಾಗಿತ್ತು. ಶರಣಾದ ಎಲ್ಲಾ 20 ನಕ್ಸಲರಿಗೂ ಸರಕಾರದಿಂದ ತಲಾ 50,000 ರು. ಆರ್ಥಿಕ ನೆರವು ನೀಡಲಾಗುತ್ತಿದೆ. ಸರಕಾರದ ನೀತಿಯಂತೆ ಪುನರ್ವಸತಿ ಕಲ್ಪಿಸಲಾಗುವುದು ಎಂದು ಎಸ್‌ಪಿ ಕಿರಣ್ ಚವಾಣ್ ವಿವರ ನೀಡಿದ್ದಾರೆ.

ಸಿಆರ್‌ಪಿಎಫ್ ಯೋಧರಿಗೆ ಸಚಿವ ಅಮಿತ್ ಶಾ ಸನ್ಮಾನ: ಛತ್ತೀಸಗಢದ ಕರೆರ್‌ಗುಟ್ಟ ಬೆಟ್ಟದಲ್ಲಿ 'ಆಪರೇಷನ್ ಬ್ಲಾಕ್ ಫಾರೆಸ್ಟ್' ಯಶಸ್ವಿಯಾಗಿ ನಡೆಸಿದ ಸಿಆರ್‌ಪಿಎಫ್ ಮತ್ತು ಛತ್ತೀಸ್‌ಗಢ ಪೊಲೀಸ್, ಜಿಲ್ಲಾ ಮೀಸಲು ಗಾರ್ಡ್(ಡಿಆರ್‌ಜಿ) ಮತ್ತು ಕೋಬ್ರಾ ಯೋಧರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಅಭಿನಂದಿಸಿದರು. ಮೇ ತಿಂಗಳಲ್ಲಿ ಕಠಿಣ ಕಾರ್ಯಾಚರಣೆ ನಡೆಸಿ 21 ನಕ್ಸಲರನ್ನು ಇಲ್ಲವಾಗಿಸಿದ ನಕ್ಸಲ್ ನಿಗ್ರಹ ಪಡೆಯ ಎಲ್ಲಾ ಯೋಧರಿಗೂ ಶಾಲು ಹೊದಿಸಿ, ಬಹುಮಾನ ವಿತರಿಸಿ ಸನ್ಮಾನಿಸಿದರು. ಯೋಧರ ಶೌರ್ಯವನ್ನು ನಕ್ಸಲ್ ವಿರೋಧಿ ಕಾರ್ಯಾಚರಣೆಗಳ ಇತಿಹಾಸದಲ್ಲಿ ಸುವರ್ಣ ಅಧ್ಯಾಯವಾಗಿ ಸ್ಮರಿಸಲಾಗುವುದು ಎಂದರು.

ಎಲ್ಲ ನಕ್ಸಲರು ಶರಣಾಗುವವರೆಗೆ, ಹಿಡಿಯುವವರೆಗೆ ಅಥವಾ ನಿರ್ಮೂಲನೆ ಮಾಡುವವರೆಗೆ ಸರಕಾರ ವಿರಮಿಸುವುದಿಲ್ಲ. ಪ್ರಧಾನಿ ಮೋದಿ ಅವರ ನೇತೃತ್ವದ ಸರಕಾರ ಭಾರತವನ್ನು ನಕ್ಸಲ್ ಮುಕ್ತಗೊಳಿಸಲು ಬದ್ಧವಾಗಿದೆ ಎಂದು ಘೋಷಿಸಿದರು.

ಸಿಆರ್‌ಪಿಎಫ್ ಯೋಧರಿಗೆ ಅಮಿತ್ ಶಾ ಸನ್ಮಾನ.

ಟಿಆರ್‌ಎಫ್‌ಗೆ 9 ಲಕ್ಷ ರು. ಮಲೇಷ್ಯಾ ಹವಾಲ ಹಣ

ಪಹಲ್ಗಾಮ್ ದಾಳಿ ಹೊಣೆ ಹೊತ್ತಿದ್ದ ಟಿಆರ್‌ಎಫ್ ಎನ್‌ಐಎ ತನಿಖೆಯಲ್ಲಿ ಪ್ರಮುಖ ಸಾಕ್ಷ್ಯ ಲಭ್ಯ

ದೆಹಲಿ: ಪಹಲ್ಗಾಮ್ ದಾಳಿ ಹೊಣೆ ಹೊತ್ತುಕೊಂಡಿದ್ದ ಪಾಕಿಸ್ತಾನ ಮೂಲದ 'ದಿ ರೆಸಿಸ್ಟೆನ್ಸ್ ಫ್ರಂಟ್' (ಟಿಆರ್‌ಎಸ್) ಉಗ್ರ ಸಂಘಟನೆಗೆ ಮಲೇಷ್ಯಾದಿಂದ ಹವಾಲ ಮೂಲಕ ಹಣ ಬಂದಿದೆ ಎಂಬುದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತನಿಖೆ ವೇಳೆ ತಿಳಿದುಬಂದಿದೆ. ಈ ಸಂಬಂಧ ಪ್ರಮುಖ ಸಾಕ್ಷ್ಯಾಧಾರ ಸಿಕ್ಕಿವೆ ಎನ್ನಲಾಗಿದೆ.

ಟಿಆರ್‌ಎಫ್ ಮೂಲತಃ ಪಾಕ್‌ನ ಮತ್ತೊಂದು ಪ್ರಮುಖ ಉಗ್ರ ಸಂಘಟನೆಯಾಗಿದ್ದ, ನಿಷೇಧಿತ 'ಲಷ್ಕರ್ ಎ ತಯ್ಯಬಾ' (ಎಲ್‌ಇಟಿ)ದ ಮತ್ತೊಂದು ಮುಖವಾಗಿದೆ ಎನ್ನಲಾಗಿದೆ.

ಏ.22ರಂದು ಪಹಲ್ಗಾಮ್‌ನ ಬೈಸರನ್ ಹುಲ್ಲುಗಾವಲಿನಲ್ಲಿ 25 ಪ್ರವಾಸಿಗರು ಮತ್ತು ಒಬ್ಬ ಸ್ಥಳೀಯನನ್ನು ಬರ್ಬರವಾಗಿ ಕೊಂದು ಹಾಕಿದ ಕೃತ್ಯದ ಹೊಣೆಯನ್ನು ಟಿಆರ್‌ಎಸ್ ಹೊತ್ತುಕೊಂಡಿದೆ. ಸದ್ಯ ಎನ್‌ಐಎ, ಟಿಆರ್‌ಎಫ್‌ನ ಜಾಲದ ತನಿಖೆ ನಡೆಸುತ್ತಿದೆ.

ಟಿಆರ್‌ಎಫ್ ಜತೆ ಶಾಮೀಲಾಗಿದ್ದ ಶ್ರೀನಗರದ ವ್ಯಕ್ತಿಯ ಮೊಬೈಲ್ ಫೋನ್‌ನಲ್ಲಿ 450ಕ್ಕೂ ಹೆಚ್ಚು ಸಂಪರ್ಕಗಳ ಜಾಡು ತನಿಖಾಧಿಕಾರಿಗಳಿಗೆ ಸಿಕ್ಕಿದೆ. ಕೆಲವು ಫೋನ್ ಸಂಖ್ಯೆಗಳು ಈ ಹಿಂದೆ ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾದವರದ್ದಾಗಿವೆ.

ಪಹಲ್ಗಾಮ್ ದಾಳಿಕೋರ ಟಿಆರ್‌ಎಫ್ ಉಗ್ರರು.

ಹಾಗೆಯೇ, ಮಲೇಷ್ಯಾ ಮೂಲಕ ಹವಾಲ ರೂಪದಲ್ಲಿ ಹಣ ಹರಿದುಬಂದಿರುವುದು ಮತ್ತು ಈ ಹಣವನ್ನು ಟಿಆರ್‌ಎಫ್‌ನ ಉಗ್ರ ಕೃತ್ಯಗಳಿಗೆ ಬಳಸುತ್ತಿರುವುದಕ್ಕೆ ಸಾಕ್ಷ್ಯಗಳು ಎನ್‌ಐಎ ತನಿಖೆ ವೇಳೆ ಪತ್ತೆಯಾಗಿವೆ ಎನ್ನಲಾಗಿದೆ. ಈ ಹವಾಲಾ ಜಾಲದಲ್ಲಿ ಮಲೇಷ್ಯಾ ನಿವಾಸಿ ಸಾಜದ್ ಅಹ್ಮದ್ ಮಿರ್, ಯಾಸಿರ್ ಹಯಾತ್ ಹೆಸರು ಪ್ರಧಾನವಾಗಿ ಕೇಳಿಬಂದಿವೆ. ಶ್ರೀನಗರದ ಹಯಾತ್ ಮಲೇಷ್ಯಾಗೆ ಹಲವು ಬಾರಿ ಭೇಟಿ ನೀಡಿದ್ದಾನೆ. ಮಲೇಷ್ಯಾ ನಿವಾಸಿ ಮಿರ್ ನೆರವು ಪಡೆದು ಹಯಾತ್ ಟಿಆರ್‌ಎಫ್‌ಗೆ ಶಫತ್ ವಾನಿ ಎಂಬಾತನ ಮೂಲಕ 9 ಲಕ್ಷ ರು. ರವಾನಿಸಿದ್ದಾನೆ. ಟಿಆರ್‌ಎಫ್ ಪ್ರಮುಖ ಆಪರೇಟಿವ್ ಆಗಿರುವ ಶಫತ್ ವಾನಿ ವಿಶ್ವವಿದ್ಯಾಲಯ ಕಾನ್ಫರೆನ್ಸ್‌ನಲ್ಲಿ ಭಾಗಿಯಾಗಲು ಮಲೇಷ್ಯಾಗೆ ಭೇಟಿ ನೀಡಿದ್ದ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

205 ಮೀ. ಎತ್ತರದಲ್ಲಿ ಹರಿದ ಯಮುನೆ

ದೆಹಲಿ: ದೆಹಲಿಯಲ್ಲಿ ಮಂಗಳವಾರ ರಾತ್ರಿಯಿಡೀ ಭಾರೀ ಮಳೆಯಾಗಿದ್ದು, ಯಮುನಾ ನದಿ ಅಪಾಯದ ಮಟ್ಟ ಮೀರಿ (205.81 ಮೀ.) ಹರಿಯುತ್ತಿದೆ. ನದಿ ಪ್ರದೇಶದ ಕೆಲವು ಭಾಗದ ಮನೆಗಳಿಗೆ ನೀರು ನುಗ್ಗಿದೆ. ಇನ್ನೊಂದೆಡೆ ಓಕ್ಲಾ, ವಝಿರಾಬಾದ್, ಅಥಿನಿಕುಂಡ ಬ್ಯಾರೇಜ್‌ಗಳಿಂದ 3 ಲಕ್ಷಕ್ಕೂ ಅಧಿಕ ಕ್ಯೂಸೆಕ್ ನೀರು ಹರಿಬಿಡಲಾಗುತ್ತಿದೆ. ರಾತ್ರಿ ವೇಳೆಗೆ 206.41 ಮೀ. ತಲುಪುವ ಭೀತಿ ಇದೆ. ಹಾಗಾಗಿ ನದಿ ಪಾತ್ರದ ಪ್ರದೇಶಗಳಿಂದ 10 ಸಾವಿರ ಜನರನ್ನು ಸ್ಥಳಾಂತರ ಮಾಡಲಾಗಿದೆ. ಶಾಲೆಗಳಿಗೂ ರಜೆ ನೀಡಲಾಗಿದೆ.

ಕೇರಳದಲ್ಲಿ ಹಿರಿಯ ನಾಗರಿಕರ ಆಯೋಗ

ತಿರುವನಂತಪುರಂ: ಕೇರಳ ಸರಕಾರ ದೇಶದಲ್ಲೇ ಮೊದಲ ಬಾರಿಗೆ 'ಹಿರಿಯ ನಾಗರಿಕರ ಆಯೋಗ' ಆರಂಭಿಸಿದೆ. ಆಯೋಗದ ಅಧ್ಯಕ್ಷರಾಗಿ ತಿರುವನಂತಪುರಂನ ಕೆ. ಸೋಮಪ್ರಸಾದ್ ಅವರನ್ನು ನೇಮಿಸಲಾಗಿದೆ. 'ಕೇರಳ ರಾಜ್ಯ ಹಿರಿಯ ನಾಗರಿಕರ ಆಯೋಗ'ವನ್ನು ಕೇರಳ ಹಿರಿಯ ನಾಗರಿಕರ ಆಯೋಗ ಕಾಯಿದೆ-2025ರಡಿ ರಚಿಸಲಾಗಿದೆ. ಹಿರಿಯ ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಹಾಗೂ ಕುಟುಂಬದವರಿಂದ ನಿರ್ಲಕ್ಷ್ಯಕ್ಕೆ ಒಳಗಾಗುವುದನ್ನು ತಪ್ಪಿಸುವುದಕ್ಕಾಗಿ, ಅಲ್ಲದೇ, ಸಮಾಜದಿಂದ ನಿಂದನೆಗೆ, ಕಡೆಗಣನೆಗೆ ಒಳಗಾಗುವುದನ್ನು ತಡೆಯಲು ಆಯೋಗ ಕೆಲಸ ಮಾಡಲಿದೆ ಎಂದು ಉನ್ನತ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಚಿವೆ ಆರ್.ಬಿಂದು ಬುಧವಾರ ಜಾಲತಾಣದಲ್ಲಿ ಪ್ರಕಟಿಸಿದ್ದಾರೆ.

ಬಿಎಸ್‌ಎಫ್‌ನಿಂದ ಡ್ರೋನ್ ತರಬೇತಿ

ದೆಹಲಿ: ಪಾಕಿಸ್ತಾನ ಮತ್ತು ಬಾಂಗ್ಲಾದೇಶಕ್ಕೆ ಹೊಂದಿಕೊಂಡಿರುವ ಭಾರತದ ಗಡಿಗಳನ್ನು ಕಾಯುತ್ತಿರುವ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಡ್ರೋನ್ ಸೇರಿದಂತೆ ದೂರ ನಿಯಂತ್ರಿತ ವೈಮಾನಿಕ ಸಾಧನಗಳನ್ನು ಒಳಗೊಂಡ ಆಧುನಿಕ ಯುದ್ಧಾಸ್ತ್ರಗಳ ಬಳಕೆ ಸಂಬಂಧ 'ಡ್ರೋನ್ ಕಮಾಂಡೊ' ಮತ್ತು 'ಡ್ರೋನ್ ಯೋಧರು' ಎಂಬ ವಿಶೇಷ ಘಟಕಗಳನ್ನು ರಚಿಸಿ ತರಬೇತಿ ನೀಡುತ್ತಿದೆ. ತರಬೇತಿ ಬಳಿಕ 'ಆಪರೇಷನ್ ಸಿಂದೂರ್'ನಂತಹ ಸೇನಾ ಕಾರ್ಯಾಚರಣೆಗಳಲ್ಲಿ ಈ ವಿಶೇಷ ಯೋಧರ ತಂಡವನ್ನು ನಿಯೋಜಿಸಲು ಬಿಎಸ್‌ಎಫ್‌ನ ಉನ್ನತ ಅಧಿಕಾರಿಗಳು ಯೋಜಿಸಿದ್ದಾರೆ. ಮಧ್ಯಪ್ರದೇಶದಲ್ಲಿರುವ ಅಧಿಕಾರಿಗಳ ತರಬೇತಿ ಅಕಾಡೆಮಿಯಲ್ಲಿ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಮಹಾನಿರ್ದೇಶಕ ದಲ್ಜಿತ್ ಸಿಂಗ್ ಚೌಧರಿ ನೂತನ 'ಡ್ರೋನ್ ಯುದ್ಧ ತರಬೇತಿ ಶಾಲೆ'ಯನ್ನು ಮಂಗಳವಾರ ಉದ್ಘಾಟಿಸಿದರು. ಮಾನವರಹಿತ ವೈಮಾನಿಕ ವಾಹನ(ಯುಎವಿ) ಕಾರ್ಯಾಚರಣೆ, ಡ್ರೋನ್ ವಿರೋಧಿ ಯುದ್ಧ ಮತ್ತು ಕಣ್ಗಾವಲು ಹಾಗೂ ಗುಪ್ತಚರ ಮಾಹಿತಿ ಸಂಗ್ರಹಣೆ ಒಳಗೊಂಡ 5 ವಿಶೇಷ ಕೋರ್ಸ್‌ಗಳನ್ನು ಈ ಶಾಲೆ ಒಳಗೊಂಡಿದೆ.

ಭಾರತ-ಜರ್ಮನಿ ಮಧ್ಯೆ ಸಹಕಾರ ವೃದ್ಧಿ ಅನಿವಾರ್ಯ

ದೆಹಲಿ: ಜಾಗತಿಕ ಆರ್ಥಿಕತೆ ಹಾಗೂ ಭೌಗೋಳಿಕ ರಾಜಕೀಯ ಸನ್ನಿವೇಶಗಳಲ್ಲಿನ ಅನಿರೀಕ್ಷಿತ ಬೆಳವಣಿಗೆಗಳು ಭಾರತ ಮತ್ತು ಜರ್ಮನಿಯು ತಮ್ಮ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಿಕೊಂಡು ಕಾರ್ಯಪ್ರವೃತ್ತವಾಗಬೇಕಾದ ಅನಿವಾರ್ಯವನ್ನು ಸೃಷ್ಟಿಸಿವೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಜರ್ಮನಿ ವಿದೇಶಾಂಗ ಸಚಿವ ಜೋಹನ್ ವಡೆಫುಲ್ ಅವರೊಂದಿಗಿನ ಮಾತುಕತೆ ಬಳಿಕ ಜೈಶಂಕರ್ ಈ ಹೇಳಿಕೆ ನೀಡಿದ್ದಾರೆ. 'ವ್ಯಾಪಾರ, ರಕ್ಷಣೆ, ಸೆಮಿಕಂಡಕ್ಟರ್ ಉತ್ಪಾದನೆ, ತಂತ್ರಜ್ಞಾನ ಹಾಗೂ ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳಲ್ಲಿ ಉಭಯ ರಾಷ್ಟ್ರಗಳ ನಡುವಿನ ಸಹಕಾರ ವೃದ್ಧಿಗೆ ಸಂಬಂಧಿಸಿದ ವಿಚಾರಗಳ ಕುರಿತು ಚರ್ಚೆ ನಡೆಸಿದ್ದೇವೆ. ಶೀಘ್ರದಲ್ಲೇ ಈ ನಿಟ್ಟಿನಲ್ಲಿ ಮತ್ತೊಂದು ಸುತ್ತಿನ ಮಾತುಕತೆ ನಡೆದು ಅಂತಿಮ ನಿರ್ಣಯ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

ಒಡನಾಡಿಗೆ ನೋಟಿಸ್ ಬಂದಿಲ್ಲ: ಪರಶುರಾಮ್

ಮೈಸೂರು: ಒಡನಾಡಿ ಸಂಸ್ಥೆಗೆ ಯಾರೂ ನೋಟಿಸ್ ಕೂಡ ನೀಡಿಲ್ಲ ಎಂದು ಒಡನಾಡಿ ಸಂಸ್ಥೆಯ ಪರಶುರಾಮ್ ಸ್ಪಷ್ಟಪಡಿಸಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳವನ್ನು ನಾನು ಅಗಾಧವಾಗಿ ಪ್ರೀತಿಸುತ್ತೇನೆ. ಆ ಕ್ಷೇತ್ರಕ್ಕೆ ಅಪಪ್ರಚಾರ ಮಾಡಲು ನಾನು ಬಿಡಲ್ಲ. ಇಡಿ ಬಂದರೆ ನಾವು ಸಂಭ್ರಮದಿಂದ ಬರಮಾಡಿಕೊಳ್ಳುತ್ತೇವೆ. ನಾವು ನೊಂದವರ ಪರವಾಗಿ ಸಂಸ್ಥೆ ಕಟ್ಟುತ್ತಿದ್ದೇವೆ. ದುರ್ಬಲ ಸಂಸ್ಥೆಯಾಗಿದ್ದರೆ ಅದನ್ನು ಯಾಕೆ ಬೆಳೆಯಲು ಬಿಡುತ್ತಿದ್ದರು. ಒಡನಾಡಿ ಸಂಸ್ಥೆ ಮಹಿಳೆಗೆ ಸಹಾಯ ಮಾಡಲು ಮುಂದಾಗಿದೆ. ಪ್ರತ್ಯಕ್ಷದರ್ಶಿ ಏನೋ ಹೇಳುತ್ತಿದ್ದಾಳೆ, ಕೇಳಿಸಿಕೊಳ್ಳುವ ತಾಳ್ಮೆ ಯಾರಿಗೂ ಇಲ್ಲ. ಸಾಕ್ಷಿಯನ್ನು ಕುಗ್ಗಿಸುವ ಕೆಲಸ ಎಂದು ದೂರಿದರು.

ದೆಹಲಿಯಲ್ಲಿ ತುಂಬಿ ಹರಿದ ಯಮುನೆ | ನದಿಯಂತಾದ ರಸ್ತೆ, ಚರಂಡಿಗಳು

ಹಿಮಾಚಲ, ಹರ್ಯಾಣ, ರಾಜಸ್ಥಾನ, ಉತ್ತರಪ್ರದೇಶಗಳಲ್ಲಿ ರೆಡ್ ಅಲರ್ಟ್

ಮಳೆಯಬ್ಬರಕ್ಕೆ ಉತ್ತರದಲ್ಲಿ ಜನರ ಬದುಕು ಅಸ್ತವ್ಯಸ್ಥ

ದೆಹಲಿ: ಕಳೆದ ಹಲವಾರು ದಿನಗಳಿಂದ ಉತ್ತರ ಭಾರತದಲ್ಲಿ ಸುರಿಯುತ್ತಿರುವ ಭಾರೀ ಮಳೆಯ ಪರಿಣಾಮವಾಗಿ, ರಾಷ್ಟ್ರ ರಾಜಧಾನಿ ದೆಹಲಿ ಮಾತ್ರವಲ್ಲದೆ, ಪಂಜಾಬ್, ಹರ್ಯಾಣ, ಬಿಹಾರ, ರಾಜಸ್ಥಾನ, ಉತ್ತರಪ್ರದೇಶದ ಕೆಲಭಾಗಳಲ್ಲಿ ಭಾರೀ ಪ್ರವಾಹ ಸೃಷ್ಟಿಯಾಗಿದೆ. ಈಗಾಗಲೇ ಪಂಜಾಬ್‌ನಲ್ಲಿ 30ಕ್ಕೂ ಅಧಿಕ ಸಾವುಗಳು ಸಂಭವಿಸಿದ್ದು, ಭಾರೀ ಮಳೆಯ ಪರಿಣಾಮ ಯಮುನಾ ನದಿಯಲ್ಲಿನ ನೀರಿನ ಪ್ರಮಾಣ ಅಪಾಯದ ಮಟ್ಟ ಮೀರಿ 203.03 ಮೀಟರ್‌ಗೇರಿದೆ. ಯಮುನಾ ನದಿ ಪಾತ್ರದಲ್ಲಿರುವ ದೆಹಲಿ ಜನರ ಬದುಕು ಅಸ್ತವ್ಯಸ್ಥವಾಗಿದೆ. ರಸ್ತೆಗಳು ತುಂಬಿ ಹರಿಯುತ್ತಿವೆ, ಚರಂಡಿ, ಕೆಳ ಸೇತುವೆ ಮಾರ್ಗಗಳಲ್ಲಿ ನೀರು ತುಂಬಿಕೊಂಡಿರುವುದರಿಂದ ಹತ್ತಿರ ಹೋಗಲು ಸಾಧ್ಯವಾಗುತ್ತಿಲ್ಲ.

ಹೆಚ್ಚಿನ ಮನೆಯೊಳಗೆ ತುಂಬಿಕೊಂಡಿರುವ ನೀರಿನ ನಡುವೆ ಜನ ನಿತ್ಯಕರ್ಮಗಳನ್ನೂ ಮುಗಿಸಲು ಪರದಾಡಿದ ದಾರುಣ ದೃಶ್ಯಗಳು ದೆಹಲಿಯಲ್ಲಿ ಕಂಡುಬಂದಿವೆ. ಇನ್ನೊಂದೆಡೆ ಓಕ್ಲಾ, ವಝಿರಾಬಾದ್, ಅಥಿನಿಕುಂಡ ಬ್ಯಾರೇಜ್‌ಗಳಿಂದ 3 ಲಕ್ಷಕ್ಕೂ ಅಧಿಕ ಕ್ಯೂಸೆಕ್ ನೀರು ಹರಿಬಿಡಲಾಗುತ್ತಿದೆ. ಕೆಲ ರೈಲು ಸಂಚಾರಗಳ ಕಾರ್ಯಾಚರಣೆ ಸ್ಥಗಿತವಾಗಿದೆ. ನದಿ ಪಾತ್ರದ ಪ್ರದೇಶಗಳಿಂದ 10 ಸಾವಿರ ಜನರನ್ನು ಸ್ಥಳಾಂತರ ಮಾಡಲಾಗಿದೆ. ಸತತ ಭಾರೀ ಮಳೆ ಇರುವ ಕಾರಣ ಶಾಲೆಗಳಿಗೂ ರಜೆ ನೀಡಲಾಗಿದೆ.

ಹಲವು ರಾಜ್ಯಗಳಿಗೆ ರೆಡ್ ಅಲರ್ಟ್: ಜಮ್ಮುಕಾಶ್ಮೀರ, ಲಡಾಖ್, ಹಿಮಾಚಲ ಪ್ರದೇಶ, ಉತ್ತರ ಪಂಜಾಬ್, ಉತ್ತರ ಹರ್ಯಾಣ, ಪೂರ್ವ ರಾಜಸ್ಥಾನ, ವಾಯವ್ಯ ಉತ್ತರಪ್ರದೇಶ, ಮಧ್ಯಪ್ರದೇಶ, ಒಡಿಶಾದ ಹಲವು ಭಾಗಗಳಲ್ಲಿ ಭಾರತೀಯ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

ಹರ್ಯಾಣದ ಹಲವೆಡೆ ಪರಿಸ್ಥಿತಿ ವಿಕೋಪಕ್ಕೆ: ಹರ್ಯಾಣದ ಯಮುನಾ ನಗರ, ಅಂಬಾಲ, ಕುರುಕ್ಷೇತ್ರ, ಪಂಚಕುಲ, ಎಸ್‌ಎಎಸ್ ನಗರದಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಪಂಜಾಬ್‌ನಲ್ಲಿ ತೀವ್ರ ಮಳೆ ಮುಂದುವರಿದಿದ್ದು 16000 ಮಂದಿಯನ್ನು ಸ್ಥಳಾಂತರಿಸಲಾಗಿದೆ. ಹಿಮಾಚಲಪ್ರದೇಶದಲ್ಲಿ ಮಳೆಯ ಪರಿಣಾಮ ಜೂ.20ರಿಂದ 340 ಮಂದಿಯ ಜೀವಹಾನಿಯಾಗಿದೆ. ಇಲ್ಲಿ 1337 ರಸ್ತೆಗಳು ಮುಚ್ಚಿಯೇ ಹೋಗಿವೆ. ಜಮ್ಮುಕಾಶ್ಮೀರದಲ್ಲೂ ತೀವ್ರ ಮಳೆ ಮುಂದುವರಿದಿದೆ. ರಜೌರಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಉತ್ತರಾಖಂಡದ ಡೆಹ್ರಾಡೂನ್, ಇತರೆ ಜಿಲ್ಲೆಗಳಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಮರುಭೂಮಿ ನಾಡು ರಾಜಸ್ಥಾನದಲ್ಲೂ ವಿಪರೀತ ಮಳೆಯಾಗಿ ರಾಜಧಾನಿ ಜೈಪುರ, ಕೋಟಾ ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತವಾಗಿದೆ. ರಸ್ತೆಗಳು, ರೈಲು ಟ್ರ್ಯಾಕ್‌ಗಳು ನೀರಿನಲ್ಲಿ ಮುಳುಗಿಹೋಗಿವೆ. ಒಡಿಶಾ, ಬಂಗಾಳ, ಈಶಾನ್ಯ ರಾಜ್ಯಗಳಲ್ಲಿ ತೀವ್ರ ಮಳೆಯಾಗಿದೆ.

ಛತ್ತೀಸ್‌ಗಢ: ನಾಲ್ಕು ಬಲಿ

ರಾಯಪುರ: ಛತ್ತೀಸ್‌ಗಢದ ಬಲರಾಂಪುರ ಜಿಲ್ಲೆಯ ಲೂಟಿ ಕಿರುಜಲಾಶಯದ ಭಾಗವೊಂದು ಮಂಗಳವಾರ ರಾತ್ರಿ ಕುಸಿದಿದ್ದು, ದಿಢೀರ್ ಪ್ರವಾಹ ಉಂಟಾಗಿ ನಾಲ್ವರು ಸಾವನ್ನಪ್ಪಿದ್ದಾರೆ. ಕೊರ್ಕೊಮಾ ಗ್ರಾಮದ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿದ್ದಾರೆ. ಮೂವರು ನಾಪತ್ತೆಯಾಗಿದ್ದಾರೆ. ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಮತ್ತು ಸ್ಥಳೀಯ ಪೊಲೀಸರು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದು, ಕಾಣೆಯಾದ ಮೂವರಿಗಾಗಿ ಶೋಧ ನಡೆಸಿದ್ದಾರೆ.

ಅಮೆರಿಕದ ಸುಂಕ ನೀತಿ ಅವಿವೇಕ ಮತ್ತು ಅನ್ಯಾಯ

ಮೋದಿಗೆ ಹೆಚ್.ಡಿ. ದೇವೇಗೌಡರ ಪತ್ರ | ಅಮೆರಿಕ ಸುಂಕ ಸಮರದ ನಡುವೆ ಮೋದಿ ನಡೆ ಬಗ್ಗೆ ಮಾಜಿ ಪ್ರಧಾನಿ ಮೆಚ್ಚುಗೆ

ಬೆಂಗಳೂರು: ಅಮೆರಿಕ ಸುಂಕ ಸಮರದ ನಡುವೆಯೂ ಭಾರತವು ಜಾಗತಿಕ ಮಟ್ಟದಲ್ಲಿ ಬಹುಪಕ್ಷೀಯ ಪಾಲುದಾರಿಕೆ ಹೊಂದುವ ನಿಟ್ಟಿನಲ್ಲಿ ಪ್ರಧಾನಿ ಮೋದಿ ಅವರ ಜಪಾನ್ ಮತ್ತು ಚೀನಾ ದೇಶಗಳ ಪ್ರವಾಸದ ಬಗ್ಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಸಂತಸ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಅಮೆರಿಕ ಸುಂಕ ನೀತಿಯ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರಧಾನಿ ಮೋದಿಗೆ ಪತ್ರ ಬರೆದಿರುವ ಅವರು, 'ಜಪಾನ್ ಮತ್ತು ಚೀನಾಕ್ಕೆ ನಿಮ್ಮ ಭೇಟಿ ಸುದ್ದಿ ನಾನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ಅಮೆರಿಕವು ಅವಿವೇಕದ ಮತ್ತು ಅನ್ಯಾಯದ ಸುಂಕಯುದ್ಧ ಪ್ರಾರಂಭಿಸಿದ ನಂತರ ನೀವು ಪರ್ಯಾಯ ಮಾರ್ಗೋಪಾಯ ಗಳನ್ನು ಕಂಡುಕೊಳ್ಳಲು ಹೊರಟಿರು ವುದು ಎಲ್ಲ ಭಾರತೀಯರಂತೆ ನನಗೆ ಸಮಾಧಾನ ತಂದಿದೆ.

'ಎರಡೂ ದೇಶಗಳ ನಿಮ್ಮ ಭೇಟಿ ಅತ್ಯಂತ ಯಶಸ್ವಿಯಾಯಿತು. ನೀವು ನಡೆಸಿದ ಮಾತುಕತೆ ಮತ್ತು ಅನುಸರಿಸಿದ ಹೊಸ ಉಪಕ್ರಮಗಳ ಲಾಭ ಭಾರತವು ಪಡೆಯುತ್ತದೆ ಎಂದು ನಾನು ಭಾವಿಸುತ್ತೇನೆ. ಧರ್ಮವು ನಮ್ಮ ಕಡೆಗಿದೆ ಮತ್ತು ನಮ್ಮ ರಾಷ್ಟ್ರವು ಜಗತ್ತಿನಲ್ಲಿ ಬೇರೆ ಯಾವುದೇ ರಾಷ್ಟ್ರಕ್ಕಿಂತ ಆರ್ಥಿಕ, ಜನಸಂಖ್ಯೆಯಲ್ಲಿ ಭಾರತವು ಅಗಾಧತೆ ಹೊಂದಿದೆ ಹಾಗೂ ಪ್ರಜಾಪ್ರಭುತ್ವದ ಪ್ರಯೋಜನಗಳ ಸಂಯೋಜನೆ ಎಲ್ಲೆಡೆಗೂ ವಿಸ್ತರಿಸುತ್ತಿರುವುದರಿಂದ ಅಮೆರಿಕ ಕೂಡ ತ್ವರಿತವಾಗಿ ಅಥವಾ ತಡವಾಗಿಯಾದರೂ ನಮ್ಮ ಬಳಿಗೆ ಬರಬೇಕಾಗುತ್ತದೆ' ಎಂದಿದ್ದಾರೆ.

'ರಷ್ಯಾ ಅಧ್ಯಕ್ಷ ವ್ಲಾದಿಮೀರ್ ಪುಟಿನ್ ಮತ್ತು ಚೀನ ಅಧ್ಯಕ್ಷ ಕ್ಸಿ ಜಿನ್ಪಿಂಗ್ ಅವರೊಂದಿಗಿನ ನಿಮ್ಮ ಛಾಯಾಚಿತ್ರಗಳು ಮತ್ತು ವೀಡಿಯೊಗಳು ಜಗತ್ತಿನಾದ್ಯಂತ ಮಾಧ್ಯಮಗಳಲ್ಲಿ ಪ್ರವಾಹದಂತೆ ತುಂಬಿವೆ. ಅವು ರಾಷ್ಟ್ರಗಳ ಮುಖ್ಯಸ್ಥರ ನಡುವಿನ ದಿನನಿತ್ಯದ ಸ್ನೇಹ ಮತ್ತು ಸಂಬಂಧ ಮೀರಿದವು. ಇದು ಜಾಗತಿಕ ಮಟ್ಟದಲ್ಲಿ ಹೊಸ ಜಾಗೃತಿ ಪ್ರತಿಬಿಂಬಿಸುತ್ತದೆ ಮತ್ತು ಭಾರತವನ್ನು ಜಾಗತಿಕ ಸಮೃದ್ಧಿ ಮತ್ತು ಶಾಂತಿಯ ಮಧ್ಯದಲ್ಲಿ ಇರಿಸುವ ಹೊಸವಿಶ್ವದ ಆರಂಭವನ್ನು ಸಂಕೇತಿಸುತ್ತದೆ ಎಂದಿದ್ದಾರೆ.

ಉಕ್ರೇನ್ ಯುದ್ಧ ಅಂತ್ಯ ಪ್ರಯತ್ನಕ್ಕೆ ಸಂತಸ

'ಉಕ್ರೇನ್‌ನಲ್ಲಿ ಯುದ್ಧ ಕೊನೆಗೊಳಿಸುವ ಬಗ್ಗೆ ಅಧ್ಯಕ್ಷ ಪುಟಿನ್ ಅವರೊಂದಿಗೆ ಮಾತನಾಡಿದ್ದೀರಿ. ಇದು ಅತ್ಯಂತ ನನಗೆ ಸಂತೋಷ ತಂದಿದೆ. ನೀವು ಈ ವಿಷಯದ ಬಗ್ಗೆ ಸ್ಥಿರವಾಗಿದ್ದೀರಿ. ನೀವು ಅನುಸರಿಸುತ್ತಿರುವ 'ಬಹು ಜೋಡಣೆ' ನೀತಿಯು ಮುಂದಿನ ದಿನಗಳಲ್ಲಿ ಸಮೃದ್ಧ ಲಾಭಾಂಶ ನೀಡುವುದು ಖಚಿತ. ಜಗತ್ತು ಅದರ ಪ್ರಾಮುಖ್ಯತೆ ಮತ್ತು ವಾಸ್ತವಿಕತೆ ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದೆ. ಅಲಿಪ್ತತೆಯ ನಮ್ಮ ಹಿಂದಿನ ಪ್ರತಿಪಾದನೆಗೆ ಹೋಲಿಸಿದರೆ ಇದು ಬಹಳ ರಚನಾತ್ಮಕ ಮತ್ತು ಸಕಾರಾತ್ಮಕ ಸೂತ್ರೀಕರಣವಾಗಿದೆ. ಕಾಲ ಬದಲಾಗಿದೆ ಮತ್ತು ನಮ್ಮ ನ್ಯಾಯಯುತ ಕನಸುಗಳನ್ನು ಅನುಸರಿಸಲು ನಮಗೆ ಹೊಸ ಭಾಷೆಯ ಅಗತ್ಯವಿತ್ತು. ನಮ್ಮ ಅಗತ್ಯಗಳಿಗೆ ಅನುಗುಣವಾಗಿ, ನಮ್ಮ ನಿಯಮಗಳಿಗೆ ಅನುಗುಣವಾಗಿ ಆದರೆ ನಾವು ಹೊಂದಿರುವ ಅಗಾಧವಾದ ನಾಗರಿಕತೆಯಿಂದಾಗಿ ನಾವು ಪ್ರಪಂಚದೊಂದಿಗೆ ಸಂವಹನ ನಡೆಸಬೇಕು. ಅದು ಭಾರತವನ್ನು ಎದ್ದು ಕಾಣುವಂತೆ ಮಾಡುತ್ತದೆ. ಪ್ರಸ್ತುತ, ಭಾರತದ ಮುಂದೆ ಇರುವ ಸವಾಲನ್ನು ಅವಕಾಶವಾಗಿ ಪರಿವರ್ತಿಸಲು ನೀವು ದೃಢ ನಿಶ್ಚಯ ಮಾಡಿದ್ದೀರಿ. ಆದರೆ, ಅದರ ಯಾವುದೇ ಪ್ರಮುಖ ಮೌಲ್ಯಗಳನ್ನು ತ್ಯಾಗ ಮಾಡದೆ. ನಮ್ಮ ರಾಷ್ಟ್ರವು ಪ್ರಸ್ತುತದಲ್ಲಿರುವ ವಕ್ರರೇಖೆಗಳನ್ನು ಹುಡುಕಿ ಕ್ರಮಿಸಲು ಅಪಾರ ತಾಳ್ಮೆ ಮತ್ತು ಆತ್ಮವಿಶ್ವಾಸದ ಅಗತ್ಯವಿದೆ. ದೇವರು ನಿಮಗೆ ಹೆಚ್ಚಿನ ಶಕ್ತಿ ಮತ್ತು ಉತ್ತಮ ಆರೋಗ್ಯವನ್ನು ನೀಡಲಿ ಎಂದು ಹಾರೈಸುತ್ತೇನೆ' ಎಂದು ಪತ್ರದಲ್ಲಿ ಎಚ್‌ಡಿಡಿ ಹೇಳಿದ್ದಾರೆ.

ಕಸಾಪ ನಿಯೋಗದಿಂದ ಸಿಎಂ ಭೇಟಿ

ಮುಖ್ಯಮಂತ್ರಿಯನ್ನು ಕಸಾಪ ನಿಯೋಗವು ಭೇಟಿ ಮಾಡಿ ವಿಸ್ತೃತವಾಗಿ ಚರ್ಚಿಸಿತು.

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿಯವರ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರವಾಗಿ ಚರ್ಚೆ ನಡೆಸಿದರು.

ಈ ವೇಳೆ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ರೂಪುಗೊಂಡಿರುವ ಕನ್ನಡದ ಮಹಾಕವಿ ಪಂಪರ ಪ್ರತಿಮೆ ಅನಾವರಣಕ್ಕೆ ಆಗಮಿಸುವಂತೆ ಮುಖ್ಯಮಂತ್ರಿಯವರನ್ನು ವಿನಂತಿಸಲಾಯಿತು. ಗಡಿನಾಡು ಬಳ್ಳಾರಿಯಲ್ಲಿ ಈ ವರ್ಷಾಂತ್ಯದಲ್ಲಿ ನಡೆಯಬೇಕಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳದ ದಿನಾಂಕವನ್ನು ಶೀಘ್ರವಾಗಿ ಅಂತಿಮಗೊಳಿಸಿ ಪ್ರಕಟಿಸುವುದರ ಮೂಲಕ ನುಡಿಹಬ್ಬದ ಪೂರ್ವ ಸಿದ್ಧತೆಗೆ ಅನುವು ಮಾಡಿಕೊಡುವಂತೆ ಮುಖ್ಯಮಂತ್ರಿ ಅವರನ್ನು ಕೋರಲಾಯಿತು. ಪ್ರಮುಖವಾಗಿ ಪರಿಷತ್ತಿನ ಕಾರ್ಯ ಚಟುವಟಿಕೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಕೆಲವು ಪೂರ್ವಗ್ರಹ ಪೀಡಿತರು ಅನಗತ್ಯವಾಗಿ ಅಪಪ್ರಚಾರ, ಬೇಡವಾದ ವಿಚಾರ ಮುಂದಿಟ್ಟು ಗೊಂದಲ ಸೃಷ್ಟಿಸುತ್ತಿರುವ ಬಗ್ಗೆಯೂ ಮುಖ್ಯಮಂತ್ರಿಯ ಗಮನಕ್ಕೆ ತಂದು ಅನೇಕ ವಾಸ್ತವಿಕ ಸಂಗತಿಗಳನ್ನು ದಾಖಲೆಗಳ ಸಹಿತ ಅವರಿಗೆ ಮನವರಿಕೆ ಮಾಡಿಕೊಡಲಾಯಿತು.

ಕಸಾಪ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಅಭಿಪ್ರಾಯವನ್ನು ಸಮಾಧಾನ ಚಿತ್ತದಿಂದ ಆಲಿಸಿದ ಮುಖ್ಯಮಂತ್ರಿ, ಎಲ್ಲ ವಿಚಾರಗಳಿಗೂ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಅಖಿಲ ಭಾರತ ಸಾಹಿತ್ಯ ಸಮ್ಮೇಳನ ದಿನಾಂಕ ನಿಗದಿ ಸಂಬಂಧ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲಾಗುವುದು ಎಂದು ತಿಳಿಸಿದರು. ಈ ವೇಳೆ ಕಸಾಪ ಗೌರವ ಕಾರ್ಯದರ್ಶಿಗಳಾದ ಎಚ್.ಬಿ.ಮದನಗೌಡ ಮತ್ತು ಪಟೇಲ್ ಪಾಂಡು, ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ದಲಿಂಗಪ್ಪ, ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಇದ್ದರು.

ಅಂಜನಾದ್ರಿಗೆ ರೋಪ್‌ವೇ ಅನುದಾನಕ್ಕೆ ಸಿಎಂ ಒಪ್ಪಿಗೆ

ಬೆಂಗಳೂರು: ಹನುಮನ ಜನ್ಮಸ್ಥಳವಾಗಿರುವ ಅಂಜನಾದ್ರಿಯ ತುತ್ತತುದಿಗೆ ವಯಸ್ಕರು ಹೋಗುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಗತ್ಯ ಕ್ರಮ ವಹಿಸುವಂತೆ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅಂಜನಾದ್ರಿ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಹನುಮ ಜಯಂತಿ ಸಂದರ್ಭದಲ್ಲಿ ಲಕ್ಷಾಂತರ ಜನರು ಬೆಟ್ಟಕ್ಕೆ ಭೇಟಿ ನೀಡುತ್ತಾರೆ. ಉತ್ತರ ಭಾರತದ ಪ್ರವಾಸಿಗರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ. ಯಾತ್ರಿಕರು ಉಳಿದುಕೊಳ್ಳಲು ಡಾರ್ಮೆಟರಿ ವ್ಯವಸ್ಥೆ , ಹಿರಿಯ ಭಕ್ತಾದಿಗಳು ಬೆಟ್ಟವೇರಲು ಅನುಕೂಲವಾಗುವಂತೆ ಮೆಟ್ಟಿಲುಗಳ ವ್ಯವಸ್ಥೆ , ಸಮುದಾಯ ಭವನ ನಿರ್ಮಾಣ ಹಾಗೂ ಇತರ ಪ್ರವಾಸಿ ಸೌಲಭ್ಯಗಳು ಸೇರಿ ಕ್ಷೇತ್ರದಸುತ್ತ ಮುತ್ತ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಬೇಕಿದೆ ಎಂದು ಸೂಚನೆ ನೀಡಿದರು.

ಕ್ಷೇತ್ರಕ್ಕೆ ಹಂತ-1 ಮತ್ತು ಹಂತ-2ರಲ್ಲಿ 200 ಕೋಟಿ ರು.ಗಳ ಕಾಮಗಾರಿಗಳು ಮಂಜೂರಾಗಿದ್ದು, ಈವರೆಗೆ ಸದರಿ ಕಾಮಗಾರಿಗಳಿಗೆ 10 ಕೋಟಿ ರು.ಗಳನ್ನು ಇಲಾಖೆಯಿಂದ ಬಿಡುಗಡೆ ಮಾಡಲಾಗಿದ್ದು, ಬಾಕಿ ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಅನುದಾನ ಒದಗಿಸಬೇಕಿರುತ್ತದೆ. ಮಂಜೂರಾಗಿರುವ ಕಾಮಗಾರಿಗಳನ್ನು ಕೈಗೊಳ್ಳಲು ಸರಕಾರಿ ಜಮೀನಿನ ಕೊರತೆ ಇರುವುದರಿಂದ, ಪ್ರಸಾಪಿಸಿರುವ 77.28 ಖಾಸಗಿ ಜಮೀನನ್ನು ಅನುದಾನದ ಕೊರತೆಯಿರುವುದರಿಂದ ಈವರೆಗೂ ಭೂ-ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ಅಧಿಕಾರಿಗಳು ವಿವರಿಸಿದರು.

ಮಂಜೂರಾಗಿರುವ ಬಹುತೇಕ ಕಾಮಗಾರಿಗಳನ್ನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವ ಜಮೀನುಗಳಲ್ಲಿ ಕೈಗೊಳ್ಳಬೇಕಿರುವುದರಿಂದ, ಈ ಎಲ್ಲಾ ಕಾಮಗಾರಿಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆಯ ಎನ್‌ಒಸಿ ಪಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಿಎಂ ಸೂಚಿಸಿದರು.

ನಕಾರಾತ್ಮಕತೆ ವಿರುದ್ಧದ ಭಾರತ ಕಾರ್ಯಾಗಾರ

ರಾಷ್ಟ್ರ ನಿರ್ಮಾಣಕ್ಕಾಗಿ ನಡೆಯುವ ಅಭಿಯಾನ | ಭುವನೇಶ್ವರದಲ್ಲಿ 11 ನೇ ಆವೃತ್ತಿಯ ಸಮಾರಂಭ

ಭುವನೇಶ್ವರದಲ್ಲಿ ಇಂಡಿಯಾ ಎಗೈನ್ಸ್ಟ್ ನೆಗೆಟಿವಿಟಿ (ನಕರಾತ್ಮಕತೆ ವಿರುದ್ಧದ ಭಾರತ)ನ 11 ನೇ ಆವೃತ್ತಿ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಆರ್ಗನೈಸರ್ ಪತ್ರಿಕೆ ಸಂಪಾದಕ ಪ್ರಫುಲ್ಲ ಕೇತ್ಕರ್, ಅಚ್ಯುತ ಸಮಂತ ಸೇರಿದಂತೆ ಗಣ್ಯರು ಭಾಗವಹಿಸಿದ್ದರು.

ಬೆಂಗಳೂರು: ಇಂಡಿಯಾ ಎಗೈನ್ಸ್ಟ್ ನೆಗೆಟಿವಿಟಿ (ನಕರಾತ್ಮಕತೆ ವಿರುದ್ಧದ ಭಾರತ)ನ 11 ನೇ ಆವೃತ್ತಿ ಸಮಾರಂಭ ಭುವನೇಶ್ವರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕೆಐಐಟಿ, ಕೆಐಎಸ್‌ಎಸ್, ಕೆಐಎಂಎಸ್ ಮತ್ತು ಐಎಎನ್ ಸಂಸ್ಥಾಪಕರಾದ ಅಚ್ಯುತ ಸಮಂತ ಅವರು, ಆರಂಭಿಸಿದ ಈ ಅಭಿಯಾನದಲ್ಲಿ ಭಾಗವಹಿಸಿದ್ದ ಗಣ್ಯರು ಸಮಾಜದಲ್ಲಿ ನಕರಾತ್ಮಕತೆ ಹರಡುವುದನ್ನು ತಡೆಯಲು ಒಗ್ಗಟ್ಟಿನ ಪ್ರಯತ್ನ ಅಗತ್ಯವಿದೆ ಎಂದು ಪ್ರತಿಪಾದಿಸಿದರು. ಇಂಡಿಯಾ ಎಗೈನ್ಸ್ಟ್ ನೆಗೆಟಿವಿಟಿ ರಾಷ್ಟ್ರ ನಿರ್ಮಾಣಕ್ಕಾಗಿ ನಡೆಯುವ ಅಭಿಯಾನ. ಸಕಾರಾತ್ಮಕತೆಯನ್ನು ಉತ್ತೇಜಿಸಲು ನಾಗರಿಕ ಸಮಾಜದ ಚಳವಳಿಯಾಗಿದೆ ಎಂದರು.

ಸಂಸದ ಫಗ್ಗನ್ ಸಿಂಗ್ ಕುಲಸ್ತೆ ಅವರು ಮಾತನಾಡಿ, ಐಎಎನ್‌ನ 11ನೇ ಸಂಸ್ಥಾಪನಾ ದಿನಾಚರಣೆಯು ನಮ್ಮ ಸಮಾಜದಲ್ಲಿನ ನಕಾರಾತ್ಮಕತೆಯನ್ನು ಪ್ರಶ್ನಿಸಲು ಜನರನ್ನು, ವಿಶೇಷವಾಗಿ ಯುವಕರನ್ನು ಸಜ್ಜುಗೊಳಿಸುವ ಪ್ರಮುಖ ಧ್ಯೇಯ ಹೊಂದಿದೆ ಎಂದು ಹೇಳಿದರು. ಆರ್ಗನೈಸರ್ ಪತ್ರಿಕೆ ಸಂಪಾದಕ ಪ್ರಫುಲ್ಲ ಕೇತ್ಕರ್ ಅವರು ಮಾತನಾಡಿ, ಮಾತೃಭಾಷೆಯಲ್ಲಿ ಮಾತನಾಡಲು ಹಿಂಜರಿವುದೇ ದೊಡ್ಡ ನಕರಾತ್ಮಕತೆಯಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆಯು ಇನ್ನೂ ವಸಾಹತುಶಾಯಿ ಮನಸ್ಥಿತಿಯಿಂದ ಹೊರಬಂದಿಲ್ಲ. ನಾವು ನಮ್ಮ ಸಂಸ್ಥೆಗಳನ್ನೇ ಮರೆತಾಗ ನಕಾರಾತ್ಮಕತೆ ಹುಟ್ಟುತ್ತದೆ. ನಕಾರಾತ್ಮಕತೆಯ ವಿರುದ್ಧ ಭಾರತವು ಸಕಾರಾತ್ಮಕತೆಗಾಗಿ ಭಾರತವಾಗಿ ವಿಕಸನಗೊಳ್ಳಲು ಅದರ ವ್ಯಾಪ್ತಿಯನ್ನು ಮೀರಿ ಹೋಗಬೇಕು ಎಂದರು.

> ಡಾ.ಸಮಂತಾ ಅವರು ಆರಂಭಿಸಿರುವ ಇಂಡಿಯಾ ಎಗೈನ್ಸ್ಟ್ ನೆಗೆಟಿವಿಟಿ ಬಹುದೊಡ್ಡ ಆಯಾಮವನ್ನು ಹೊಂದಿದೆ. ಬುಡಕಟ್ಟು ಜನರನ್ನು ಸಬಲೀಕರಣ ಮಾಡುವಲ್ಲಿ ಅವಿಶ್ರಾಂತವಾಗಿ ದುಡಿಯುತ್ತಿರುವ ಸಮಂತಾ ಅವರು, ಸಕಾರಾತ್ಮಕತೆಯನ್ನು ಹರಡುತ್ತಿದ್ದಾರೆ.
>
> -ಎನ್.ಸಂತೋಷ್ ಹೆಗ್ಡೆ ನಿವೃತ್ತ ನ್ಯಾಯಮೂರ್ತಿ

ಭಾರತದಲ್ಲಿನ ರುವಾಂಡದ ಹೈಕಮಿಷನ್ ಜಾಕ್ವೆಲಿನ್ ಮುಕಂಗಿರಾ ಅವರು ಮಾತನಾಡಿ, ನಾವು ಮಹಾತ್ಮ ಗಾಂಧೀಜಿಯವರಿಂದ ಅಹಿಂಸೆಯನ್ನು ಆನುವಂಶಿಕವಾಗಿ ಪಡೆದಿದ್ದೇವೆ. ಅಹಿಂಸೆಯು ಮಾನವ ಘನತೆಯನ್ನು ರಕ್ಷಿಸುವ ಒಳ್ಳೆಯ ಮಾರ್ಗವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ದಕ್ಷಿಣ ಭಾರತ್‌ನ ಪ್ರಕಾಶಕ ದೇವೇಂದ್ರ ಶರ್ಮಾ, ಡಿಡಿ ನ್ಯೂಸ್‌ನ ಹಿರಿಯ ಸಲಹಾ ಸಂಪಾದಕ ಮತ್ತು ನಿರೂಪಕ ಅಶೋಕ್ ಶ್ರೀವಾಸ್ತವ, ಒಡಿಶಾ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಶತೃಘ್ನ ಪುಜಾಹರಿ, ಒಡಿಶಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ ಎಂ ದಾಸ್, ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅನಂಗಾ ಪಟ್ನಾಯಕ್, ಬಿ.ಆರ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ. ಘಂಟಾ ಚಕ್ರಪಾಣಿ ಮತ್ತಿತರರು ಇದ್ದರು.

1. ನಗರದ ಫ್ರೀಡಂ ಪಾರ್ಕ್‌ನಲ್ಲಿ ಒಳ ಮೀಸಲಾತಿ ಅನುಷ್ಠಾನದ ಸಮಯದಲ್ಲಿ ತಮ್ಮನ್ನು ಎಸ್‌ಸಿ ಸಮುದಾಯಕ್ಕೆ ಸೇರಿಸುವುದನ್ನು ವಿರೋಧಿಸಿ ಅಲೆಮಾರಿ ಸಮುದಾಯದ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು. 2. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬುಧವಾರ ಕ್ಯುರೇಟರ್‌ಗಳ ನೇಮಕಾತಿಯಲ್ಲಿ ವಿಳಂಬ ಮತ್ತು ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ವಿರೋಧಿಸಿ ಎಬಿವಿಪಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಚಿತ್ರ: ಸುಧಾಕರ್ ದೇವರಾಜ್

ಪಂಜಾಬ್-ಸಿಂಧ್ ಬ್ಯಾಂಕ್: 750 ಹುದ್ದೆಗಳ ನೇಮಕಾತಿ

ಸಾರ್ವಜನಿಕ ವಲಯದ ಪಂಜಾಬ್-ಸಿಂಧ್ ಬ್ಯಾಂಕ್ ಲೋಕಲ್ ಬ್ಯಾಂಕ್ ಅಧಿಕಾರಿಗಳ ಹುದ್ದೆಗೆ ಅರ್ಜಿ ಆಹ್ವಾನಿಸಿದೆ.

ಹುದ್ದೆಗಳು: ಒಟ್ಟು 750 ಹುದ್ದೆಗಳು ಖಾಲಿ ಇದ್ದು, ಇವುಗಳಲ್ಲಿ 65 ಹುದ್ದೆಗಳನ್ನು ಕರ್ನಾಟಕಕ್ಕೆ ಮೀಸಲಿಡಲಾಗಿದೆ.

ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಸೆ.4ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. (ಆಯಾ ರಾಜ್ಯಗಳ ಸ್ಥಳೀಯ ಭಾಷೆಯಲ್ಲಿ ಪರಿಣತಿ ಹೊಂದಿದವರಿಗೆ ಮಾತ್ರ ಈ ಉದ್ಯೋಗ ನೀಡಲಾಗುತ್ತದೆ)

ಅಗತ್ಯ ವಿದ್ಯಾರ್ಹತೆಗಳು: ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಲೆ, ವಿಜ್ಞಾನ, ವಾಣಿಜ್ಯ, ಇಂಜಿನಿಯರಿಂಗ್ ಅಥವಾ ಯಾವುದೇ ವಿಭಾಗದಲ್ಲಿ ಭಾರತ ಸರಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಿಂದ ನಿಗದಿತ ಪದವಿ ಹೊಂದಿರುವುದು ಕಡ್ಡಾಯ.

ಕೆಲಸದ ಅನುಭವ: ಯಾವುದೇ ಸಾರ್ವಜನಿಕ ವಲಯದ ಬ್ಯಾಂಕ್/ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ನಲ್ಲಿ ಅಧಿಕಾರಿ ವರ್ಗದಲ್ಲಿ 18 ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸದ ಅನುಭವ ಅಗತ್ಯ, ಅದರೆ NBFCಗಳು, ಸಹಕಾರಿ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು, ಪಾವತಿ ಬ್ಯಾಂಕುಗಳು, ಸಣ್ಣ ಹಣಕಾಸು ಬ್ಯಾಂಕುಗಳು ಅಥವಾ ಫಿನ್‌ಟೆಕ್‌ಗಳಲ್ಲಿ ಪಡೆದ ಅನುಭವವನ್ನು ಪರಿಗಣಿಸಲಾಗುವುದಿಲ್ಲ.

ಸಿಬಿಲ್ ಸ್ಕೋರ್ ಅಗತ್ಯ: ಸಾಲ ಮರುಪಾವತಿಯಲ್ಲಿ ಡೀಫಾಲ್ಟ್ ದಾಖಲೆ ಹೊಂದಿರುವ/ ಕ್ರೆಡಿಟ್ ಕಾರ್ಡ್ ಬಾಕಿ ಹೊಂದಿರುವ ಮತ್ತು/ ಅಥವಾ ಸಿಬಿಲ್ ಅಥವಾ ಇತರ ಬಾಹ್ಯ ರೇಟಿಂಗ್ ಏಜೆನ್ಸಿಗಳಿಂದ ವ್ಯತಿರಿಕ್ತ ವರದಿ ಲಭ್ಯವಿರುವ ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಲ್ಲ. ಕನಿಷ್ಠ ಸಿಬಿಲ್ ಸ್ಕೋರ್ 650 ಇರಬೇಕು.

ವಯೋಮಿತಿ: ಅಭ್ಯರ್ಥಿಗಳ ಕನಿಷ್ಠ ವಯಸ್ಸು 20 ಮತ್ತು ಗರಿಷ್ಠ 30 ವರ್ಷ. ನಿಗದಿಪಡಿಸಿದ ಗರಿಷ್ಠ ವಯೋಮಿತಿಯಲ್ಲಿ ಒಬಿಸಿ ಅಭ್ಯರ್ಥಿಗಳಿಗೆ ಮೂರು ವರ್ಷ, ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಐದು ವರ್ಷ ಮತ್ತು ವಿಶೇಷಚೇತನ ಅಭ್ಯರ್ಥಿಗಳಿಗೆ 10 ವರ್ಷಗಳ ವಯೋಮಿತಿ ಸಡಲಿಕೆ ನೀಡಲಾಗುತ್ತದೆ.

ಅರ್ಜಿ ಶುಲ್ಕ: ಎಸ್.ಸಿ, ಎಸ್.ಟಿ, ವಿಶೇಷಚೇತನ ಅಭ್ಯರ್ಥಿಗಳಿಗೆ ಇಂಟಿಮೇಷನ್ ಫೀ ಮತ್ತು ಜಿ.ಎಸ್.ಟಿ ಸೇರಿ 100 ರು. ಉಳಿದೆಲ್ಲಾ ವರ್ಗದ ಅಭ್ಯರ್ಥಿಗಳು 850 ರು. ಶುಲ್ಕ ಪಾವತಿಸಬೇಕು.

ವೇತನ ಶ್ರೇಣಿ: 48,480-85,920 ರು. ಆರಂಭಿಕ ವೇತನ ಇರಲಿದ್ದು ಹಾಗೂ ಇತರ ಭತ್ಯೆಗಳನ್ನು ನಿಯಮಾನುಸಾರ ನೀಡಲಾಗುತ್ತದೆ. ನೇಮಕಾತಿ ಪ್ರಕ್ರಿಯೆಯ ಸಮಯದಲ್ಲಿ ಅನ್ವಯ ವಾಗುವ ಜಂಟಿ ಟಿಪ್ಪಣಿಯ ಪ್ರಕಾರ, LBOA JMGS-Iಗಾಗಿ ಆರಂಭಿಕ ವೇತನ ಶ್ರೇಣಿಯಲ್ಲಿ +ವೇತನ ಶ್ರೇಣಿಯಲ್ಲಿ 3 ಹೆಚ್ಚಳದಲ್ಲಿ ಸೇರಿರುತ್ತವೆ.

ನಿರೀಕ್ಷಣಾ ಅವಧಿ: ನೇಮಕಗೊಂಡವರಿಗೆ ಆರು ತಿಂಗಳ ನಿರೀಕ್ಷಣಾ ಅವಧಿ ಇರುತ್ತದೆ ಹಾಗೂ ಆಯ್ಕೆಯಾದ ಅಭ್ಯರ್ಥಿಗಳು ಮೂರು ತಿಂಗಳ ಒಟ್ಟು ಸಂಬಳದ ಮೊತ್ತದಷ್ಟು ಸೇವಾಬಾಂಡ್ ಅನ್ನು ಮೂರು ವರ್ಷಗಳಿಗೆ ಕಡ್ಡಾಯವಾಗಿ ನೀಡಬೇಕು.

ಕರ್ನಾಟಕದಲ್ಲಿ ಪರೀಕ್ಷಾ ಕೇಂದ್ರಗಳು: ಕರ್ನಾಟಕದ ಬೆಂಗಳೂರು ಮತ್ತು ಮೈಸೂರು ಸೇರಿದಂತೆ ದೇಶದಾದ್ಯಂತ ಪರೀಕ್ಷೆಗಳು ನಡೆಯಲಿವೆ.

ನೆನಪಿಡಿ: ಪರೀಕ್ಷೆಗೆ ಸಂಬಂಧಿಸಿದ ಪ್ರವೇಶಪತ್ರವನ್ನು ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಮಾತ್ರವಲ್ಲ, ಇ-ಮೇಲ್ ಮೂಲಕವೂ ಅಭ್ಯರ್ಥಿಗಳಿಗೆ ಕಳಿಸಲಾಗುತ್ತದೆ. ಒಮ್ಮೆ ಪರೀಕ್ಷಾ ಕೇಂದ್ರ ಆಯ್ಕೆ ಮಾಡಿದ ಬಳಿಕ ಬದಲಾಯಿಸಲು ಸಾಧ್ಯವಿಲ್ಲ. ನೇಮಕಗೊಂಡವರು SMGS-IVA ಬಡ್ತಿ ಪಡೆಯಬೇಕಾದರೆ ಆಯಾ ರಾಜ್ಯದಲ್ಲಿ ಕನಿಷ್ಠ 12 ವರ್ಷ ಸೇವೆ ಸಲ್ಲಿಸಿರಬೇಕು.

ಹೆಚ್ಚಿನ ಮಾಹಿತಿಗೆ ಹಾಗೂ ಅರ್ಜಿ ಸಲ್ಲಿಸಬೇಕಾದ ಜಾಲತಾಣ: https://punjabandsindhbank.co.in/

ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ

ಅಭ್ಯರ್ಥಿಗಳ ಆಯ್ಕೆಗೆ ಅಕ್ಟೋಬರ್‌ನಲ್ಲಿ ಪರೀಕ್ಷೆ ನಡೆಸುವುದಾಗಿ ಬ್ಯಾಂಕ್ ತಿಳಿಸಿದೆ. ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅವರಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. ಲಿಖಿತ ಪರೀಕ್ಷೆಗೆ 120 ಅಂಕ ನಿಗದಿಯಾಗಿದೆ. ಪರೀಕ್ಷೆಯಲ್ಲಿ ಇಂಗ್ಲಿಷ್ ಲಾಂಗ್ವೇಜ್, ಬ್ಯಾಂಕಿಂಗ್ ನಾಲೆಡ್ಜ್, ಜನರಲ್ ಅವೇರ್ನೆಸ್, ಎಕಾನಮಿ ಮತ್ತು ಕಂಪ್ಯೂಟರ್ ಅಪ್ಟಿಟ್ಯೂಡ್‌ಗೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು (120ರಲ್ಲಿ) 70 ಅಂಕಗಳಿಗೆ ಮತ್ತು ಅಭ್ಯರ್ಥಿಗಳ ಸಂದರ್ಶನದ ಅಂಕಗಳನ್ನು (50ರಲ್ಲಿ) 30 ಅಂಕಗಳಿಗೆ ಪರಿವರ್ತಿಸಲಾಗುತ್ತದೆ.

ಎನ್‌ಎಚ್‌ಎಸ್‌ಆರ್‌ಸಿಎಲ್: ಅರ್ಜಿ ಅಹ್ವಾನ

ನ್ಯಾಷನಲ್ ಹೈಸ್ಪೀಡ್ ರೈಲ್ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ ಖಾಲಿ ಇರುವ ಅಸಿಸ್ಟೆಂಟ್ ಟೆಕ್ನಿಕಲ್ ಮ್ಯಾನೇಜರ್ ಮತ್ತು ಜೂನಿಯರ್ ಟೆಕ್ನಿಕಲ್ ಮ್ಯಾನೇಜರ್ ಹುದ್ದೆಗಳ ನೇಮಕಾತಿಗೆ ಅರ್ಜಿ ಅಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್-15 (ಆನ್‌ಲೈನ್ ಮೂಲಕ)

ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ಸೆ. 22ರೊಳಗೆ ಈ ವಿಳಾಸಕ್ಕೆ ಕಳುಹಿಸಬೇಕಿದೆ: General Manager/HR, National High Speed Rail Corporation Limited, World Trade Centre, 5th Floor, Tower ಈ, Nauroji Nagar, New Delhi -110029

ವಿದ್ಯಾರ್ಹತೆಗಳು: ಈ ಎರಡೂ ಹುದ್ದೆಗಳಿಗೂ ಬಿ.ಇ/ಬಿ.ಟೆಕ್ ವಿದ್ಯಾರ್ಹತೆ ಹೊಂದಿದವರು ಅರ್ಜಿ ಸಲ್ಲಿಸಬಹುದಾಗಿದೆ. ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಿಕಲ್-ಎಲೆಕ್ಟ್ರಾನಿಕ್ಸ್ ಅಥವಾ ಕಂಪ್ಯೂಟರ್ ಸೈನ್ಸ್ ಅಥವಾ ಇನ್‌ಫಾರ್ಮೆಶನ್ ಸೈನ್ಸ್ ವಿಷಯಗಳಲ್ಲಿ ನಿಗದಿತ ವಿದ್ಯಾರ್ಹತೆ ಹೊಂದಿರಬೇಕಾಗುತ್ತದೆ.

ಸೇವಾನುಭವ: ಅಸಿಸ್ಟೆಂಟ್ ಟೆಕ್ನಿಕಲ್ ಮ್ಯಾನೇಜರ್ ಹುದ್ದೆಗಳಿಗೆ 4 ವರ್ಷ ಮತ್ತು ಜೂನಿಯರ್ ಟೆಕ್ನಿಕಲ್ ಮ್ಯಾನೇಜರ್ ಹುದ್ದೆಗಳಿಗೆ ಎರಡು ವರ್ಷಗಳ ಸೇವಾನುಭವ ನಿಗದಿಪಡಿಸಲಾಗಿದೆ.

ವಯೋಮಿತಿ: ಗರಿಷ್ಠ ವಯೋಮಿತಿ 45 ವರ್ಷ.

ಅರ್ಜಿ ಶುಲ್ಕ: ಸಾಮಾನ್ಯ ವರ್ಗ, ಒ.ಬಿ.ಸಿ ಮತ್ತು ಆರ್ಥಿಕ ದುರ್ಬಲ ವರ್ಗದ ಅಭ್ಯರ್ಥಿಗಳಿಗೆ 400 ರು. ಹಾಗೂ ಮಹಿಳೆಯರೂ ಸೇರಿದಂತೆ ಉಳಿದೆಲ್ಲಾ ವರ್ಗದವರಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.

ಆಯ್ಕೆ ಪ್ರಕ್ರಿಯೆ: ಸಂದರ್ಶನದ ಮೂಲಕ ಆಯ್ಕೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: www.nhsrcl.in

ಐಒಸಿಎಲ್‌ನಲ್ಲಿ ಅಪ್ರೆಂಟಿಸ್‌ಶಿಪ್

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಉದ್ಯೋಗ ತರಬೇತಿ ನೀಡುತ್ತಿದೆ. ವಿವಿಧ ಟ್ರೇಡ್, ಡಿಪ್ಲೊಮಾ ಹಾಗೂ ಪದವೀಧರ ಅಭ್ಯರ್ಥಿಗಳು ಅಪ್ರೆಂಟಿಸ್‌ಶಿಪ್ ತರಬೇತಿಗಾಗಿ ಅರ್ಜಿ ಸಲ್ಲಿಸಬಹುದು.

ಒಟ್ಟು ಹುದ್ದೆಗಳ ಸಂಖ್ಯೆ: ಐಒಸಿಎಲ್‌ನ ದಕ್ಷಿಣ ಭಾರತದ ವಿವಿಧ ಘಟಕಗಳು ಹಾಗೂ ಕಚೇರಿಗಳಲ್ಲಿ ಒಟ್ಟು 537 ಅಭ್ಯರ್ಥಿ ಗಳಿಗೆ ಅವಕಾಶವಿದೆ ಎಂದು ಅಧಿಸೂಚನೆ ಯಲ್ಲಿ ತಿಳಿಸಲಾಗಿದೆ.

ವಯೋಮಿತಿ ವಿವರ: ಕನಿಷ್ಟ 18 ವರ್ಷ, ಗರಿಷ್ಠ 24 ವರ್ಷದ ಒಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ನಿಯಮಾನುಸಾರ ಮೀಸಲಾತಿ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುತ್ತದೆ.

ಅರ್ಹತಾ ಮಾನದಂಡಗಳು: ಟ್ರೇಡ್‌ವಾರು ಅರ್ಹತಾ ಮಾನದಂಡಗಳನ್ನು ಅಧಿಸೂಚನೆಯಲ್ಲಿ ನೀಡಲಾಗಿದೆ. ಐಟಿಐ, ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವವರು ಟೆಕ್ನೀಷಿಯನ್ ಅಪ್ರೆಂಟಿಸ್‌ಗೆ (ಮೆಕಾನಿಕ್), ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್, ಎಲೆಕ್ಟ್ರಾನಿಕ್ಸ್ ಆ್ಯಂಡ್ ರೇಡಿಯೋ ಕಮ್ಯುನಿಕೇಶನ್, ಇನ್‌ಸ್ಟ್ರುಮೆಂಟೇಶನ್ ಆ್ಯಂಡ್ ಕಂಟ್ರೋಲ್ ಇಂಜಿನಿಯರಿಂಗ್, ಇನ್‌ಸ್ಟುಮೆಂಟೇಶನ್ ಆ್ಯಂಡ್ ಪ್ರೋಸೆಸ್ ಕಂಟ್ರೋಲ್ ಇಂಜಿನಿಯರಿಂಗ್ ವಿದ್ಯಾರ್ಹತೆ ಹೊಂದಿರುವವರು ಟೆಕ್ನಿಕಲ್ ಅಪ್ರೆಂಟಿಸ್‌ಶಿಪ್‌ಗೆ ಅರ್ಜಿ ಸಲ್ಲಿಸಬಹುದು. ಯಾವುದೇ ವಿಷಯದಲ್ಲಿ ಪದವಿ ವಿದ್ಯಾರ್ಹತೆ ಹೊಂದಿರುವವರು ಟ್ರೇಡ್ ಅಪ್ರೆಂಟಿಸ್‌ಶಿಪ್‌ಗೆ, ಹನ್ನೆರಡನೇ ತರಗತಿ ಓದಿದವರು ಡೇಟಾ ಎಂಟ್ರಿ ಅಪರೇಟರ್ ತರಬೇತಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.

ತರಬೇತಿಯ ಅವಧಿ: ಒಂದು ವರ್ಷದ ಅವಧಿ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಹೀಗೆ?: ಟ್ರೇಡ್ ಅಪ್ರೆಂಟಿಸ್‌ಶಿಪ್‌ಗೆ ಅರ್ಜಿ ಸಲ್ಲಿಸಲು https://www.apprenticeshipindia.gov.in., ಟೆಕ್ನೀಷಿಯನ್ ಅಪ್ರೆಂಟಿಸ್ ಮತ್ತು ಟ್ರೇಡ್ ಅಪ್ರೆಂಟಿಸ್‌ಶಿಪ್‌ಗೆ (ಅಕೌಂಟೆಂಟ್ ವಿಭಾಗ) ಅರ್ಜಿ ಸಲ್ಲಿಸಲು https://nats.education.gov. in/student_register.php ಪೋರ್ಟಲ್‌ಗಳಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ.

ನಿಗದಿತ ಅರ್ಹತಾ ಮಾನದಂಡಗಳನ್ನು ಪೂರೈಸುವ ಅಭ್ಯರ್ಥಿಗಳು ತಮ್ಮ ಐ.ಡಿ ಬಳಸಿಕೊಂಡು ಎನ್‌ಎಟಿಎಸ್/ಎನ್‌ಎಪಿಎಸ್ ಪೋರ್ಟಲ್‌ನಲ್ಲಿ ಲಾಗಿನ್ ಆಗುವ ಮೂಲಕ ಐಒಸಿಎಲ್‌ನಲ್ಲಿ ಲಭ್ಯ ಇರುವ ಅಪ್ರೆಂಟಿಸ್‌ಶಿಪ್ ಸ್ಥಾನಗಳಿಗೆ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್ 18 ,2025

ಸ್ಟೈಪೆಂಡ್ ವಿವರ: ಅಪ್ರೆಂಟಿಸ್‌ಶಿಪ್ ಕಾಯ್ದೆ ಪ್ರಕಾರ ನಿಗದಿಪಡಿಸಿದ ಸ್ಟೈಪೆಂಡ್ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://iocl.com

ಎಲ್ಲೆಲ್ಲಿ ಅವಕಾಶಗಳು?

ಪೂರ್ವ ಪ್ರಾದೇಶಿಕ ವಲಯದಲ್ಲಿ 156, ಪಶ್ಚಿಮ ಪ್ರಾದೇಶಿಕ ವಲಯದಲ್ಲಿ 152, ಉತ್ತರ ಪ್ರಾದೇಶಿಕ ವಲಯದಲ್ಲಿ 97, ದಕ್ಷಿಣ ಪ್ರಾದೇಶಿಕ ವಲಯದಲ್ಲಿ 47, ಆಗ್ನೇಯ ಪ್ರಾದೇಶಿಕ ವಲಯದಲ್ಲಿ 85 ಅಭ್ಯರ್ಥಿಗಳೂ ಸೇರಿದಂತೆ ಒಟ್ಟು 537 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಬೆಂಗಳೂರಿನಲ್ಲಿಯೂ ತರಬೇತಿ ಕೇಂದ್ರ ಇರಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಗುಪ್ತಚರ ಇಲಾಖೆಯಲ್ಲಿ ನೇಮಕಾತಿ

ಕೇಂದ್ರ ಗುಪ್ತಚರ ಇಲಾಖೆಯಲ್ಲಿ ಜ್ಯೂನಿಯರ್ ಇಂಟಲಿಜೆನ್ಸ್ ಅಧಿಕಾರಿಗಳ (ಟೆಕ್) ಹುದ್ದೆಗಳ ನೇಮಕಾತಿಗೆ ಪ್ರಕಟಣೆ ಹೊರಡಿಸಿದೆ.

ಹುದ್ದೆಗಳು: ದೇಶಾದ್ಯಂತ ತನ್ನ ವಿವಿಧ ಘಟಕಗಳಲ್ಲಿ ಖಾಲಿ ಇರುವ ಒಟ್ಟು 394 ಜ್ಯೂನಿಯರ್ ಇಂಟೆ ಲಿಜೆನ್ಸ್ ಅಧಿಕಾರಿಗಳ ಹುದ್ದೆಗಳಿಗೆ ನೇಮಕ ನಡೆಸಲಿದೆ. ಒಟ್ಟು ಹುದ್ದೆಗಳಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿ ಗಳಿಗೆ 157, ಆರ್ಥಿಕ ದುರ್ಬಲ ವರ್ಗದವರಿಗೆ 32, ಒ.ಬಿ.ಸಿ ಅಭ್ಯರ್ಥಿಗಳಿಗೆ 117, ಎಸ್.ಸಿ ಅಭ್ಯರ್ಥಿಗಳಿಗೆ 60, ಎಸ್.ಟಿ ಅಭ್ಯರ್ಥಿಗಳಿಗೆ 28 ಹುದ್ದೆಗಳನ್ನು ಮೀಸಲಿರಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್-14

ವಿದ್ಯಾರ್ಹತೆಗಳು: ಅಭ್ಯರ್ಥಿಗಳು ಮಾನ್ಯತೆ ಪಡೆದ ವಿದ್ಯಾಲಯಗಳಿಂದ ಎಲೆಕ್ಟ್ರಾನಿಕ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಆ್ಯಂಡ್ ಟೆಲಿಕಮ್ಯುನಿಕೇಶನ್ ಅಥವಾ ಎಲೆಕ್ಟ್ರಾನಿಕ್ಸ್ ಆ್ಯಂಡ್ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್‌ನಲ್ಲಿ ಡಿಪ್ಲೊಮಾ, ಪದವಿ, ಬಿ.ಎಸ್.ಸಿ, ಬಿ.ಸಿ.ಎ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು.

ವಯೋಮಿತಿ: ಕನಿಷ್ಠ 18 ವರ್ಷ ಮತ್ತು ಗರಿಷ್ಠ 27 ವರ್ಷ ವಯೋಮಿತಿ ನಿಗದಿಪಡಿಸಲಾಗಿದ್ದು. ಮೀಸಲಾತಿ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳಿಗೆ ನಿಯಮಾನುಸಾರ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾ ಗುತ್ತದೆ.

ಅರ್ಜಿ ಶುಲ್ಕ: ಎಸ್.ಸಿ, ಎಸ್.ಟಿ, ಮಹಿಳೆಯರು, ಮಾಜಿ ಸೈನಿಕ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ವರ್ಗದ ಅಭ್ಯರ್ಥಿಗಳು 550 ರು. ಪ್ರೊಸೆಸಿಂಗ್ ಫೀ ಜತೆಗೆ 100 ರು. ಅರ್ಜಿ ಶುಲ್ಕ ಪಾವತಿಸಬೇಕು. ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಶುಲ್ಕ ಪಾವತಿಸಲು ಅವಕಾಶವಿದೆ.

ರಾಜ್ಯದಲ್ಲಿ ಪರೀಕ್ಷಾ ಕೇಂದ್ರಗಳು: ಬೆಳಗಾವಿ, ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಉಡುಪಿ ಯಲ್ಲಿ ಪರೀಕ್ಷಾ ಕೇಂದ್ರಗಳಿವೆ.

ಮಾಸಿಕ ವೇತನ: 25,500-81,100 ರು. ವರೆಗೆ

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: www.mha.gov.in

ಆಯ್ಕೆ ಪ್ರಕ್ರಿಯೆ

ಲಿಖಿತ ಪರೀಕ್ಷೆ, ಕೌಶಲ ಪರೀಕ್ಷೆ, ಸಂದರ್ಶನ ಅಥವಾ ಪರ್ಸನಾಲಿಟಿ ಟೆಸ್ಟ್, ದಾಖಲೆ ಪರಿಶೀಲನೆ, ವೈದ್ಯಕೀಯ ಪರೀಕ್ಷೆ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ಆನ್‌ಲೈನ್ ಮೂಲಕ 100 ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಯಲಿದ್ದು, 25 ಅಂಕಗಳಿಗೆ ಜನರಲ್ ಮೆಂಟಲ್ ಎಬಿಲಿಟಿ ಮತ್ತು 75 ಅಂಕಗಳಿಗೆ ಅರ್ಹತೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಪರೀಕ್ಷೆ ಬರೆಯಲು ಎರಡು ಗಂಟೆಗಳ ಕಾಲಾವಕಾಶವಿದ್ದು. ಪ್ರತಿಯೊಂದು ತಪ್ಪಾದ ಉತ್ತರಕ್ಕೆ 0. 25 ಅಂಕಗಳನ್ನು ಕಳೆಯಲಾಗುತ್ತದೆ. 30 ಅಂಕಗಳಿಗೆ ಕೌಶಲ ಪರೀಕ್ಷೆ ಮತ್ತು 20 ಅಂಕಗಳಿಗೆ ಸಂದರ್ಶನ ಇರಲಿದೆ.

ಇಸ್ರೊ: ಅಪ್ರೆಂಟಿಸ್‌ಶಿಪ್‌ಗೆ ಅವಕಾಶ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಪ್ರೆಂಟಿಸ್‌ಶಿಪ್‌ಗೆ ಅರ್ಜಿ ಆಹ್ವಾನಿಸಿದೆ. ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್‌ನಲ್ಲಿ ಈ ಉದ್ಯೋಗ ತರಬೇತಿ ನೀಡುತ್ತಿದೆ.

ಒಟ್ಟು ಹುದ್ದೆಗಳು: 96

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್-11

ವಿದ್ಯಾರ್ಹತೆಗಳು: ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಸಿವಿಲ್, ಮೆಕ್ಯಾನಿಕಲ್ ಇಂಜಿನಿಯರಿಂಗ್ ಹಾಗೂ ಲೈಬ್ರರಿ ಸೈನ್ಸ್ ವಿಷಯಗಳಲ್ಲಿ (ಪದವೀಧರರಿಗೆ) ಗ್ರಾಜುಯೇಟ್ ಅಪ್ರೆಂಟಿಸ್‌ಶಿಪ್‌ನಲ್ಲಿ ಅವಕಾಶ. ಹಾಗೆಯೇ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಮತ್ತು ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಡಿಪ್ಲೊಮಾ ಪಡೆದವರಿಗೂ ಅಪ್ರೆಂಟಿಸ್‌ಶಿಪ್ ನೀಡಲಾಗುತ್ತಿದೆ. ಇದರ ಹೊರತಾಗಿ ಬಿ.ಎ, ಬಿ.ಎಸ್ಸಿ ಮತ್ತು ಬಿ.ಕಾಂ ಪದವೀಧರರು ಇಂಜಿನಿಯರಿಂಗ್ ಹೊರತಾದ ವಿಭಾಗದಲ್ಲಿ ಅಪ್ರೆಂಟಿಸ್‌ಶಿಪ್ ಪಡೆಯಬಹುದಾಗಿದೆ.

ವಯೋಮಿತಿ: ಇಸ್ರೊ ನಿಯಮಾನುಸಾರ ವಯೋಮಿತಿ ನಿಗದಿಪಡಿಸಲಾಗಿದೆ. ಈಗಾಗಲೇ ತರಬೇತಿ ಪಡೆಯುತ್ತಿರುವವರು ಮತ್ತು ತರಬೇತಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.

ತರಬೇತಿಯ ಕಾಲಾವಧಿ: ಒಂದು ವರ್ಷದ ತರಬೇತಿಯಾಗಿದ್ದು, ಭವಿಷ್ಯದಲ್ಲಿ ಉದ್ಯೋಗ ಪಡೆಯಲು ಪೂರಕವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ತರಬೇತಿ ಕೇಂದ್ರಗಳು: ಬೆಂಗಳೂರು ಸೇರಿದಂತೆ ದೇಶದ ವಿವಿಧೆಡೆ.

ಸ್ಟೈಪೆಂಡ್ ವಿವರ: ಡಿಪ್ಲೊಮಾ ಅಪ್ರೆಂಟಿಸ್‌ಗಳಿಗೆ ತಿಂಗಳಿಗೆ 8,000 ರು. ಹಾಗೂ ಗ್ರಾಜುಯೇಟ್ ಅಪ್ರೆಂಟಿಸ್‌ಗಳಿಗೆ 9,000 ರು. ಸ್ಟೈಪೆಂಡ್ ಸೌಲಭ್ಯ ಸಿಗಲಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: http://nrsc.gov.in

ಗಮನಕ್ಕೆ: ಈ ಅಂಕಣದಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೇಖಕರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದಾಗ್ಯೂ, ವಿಷಯದ ಸಂಪೂರ್ಣತೆ, ನಿಖರತೆ ಅಥವಾ ಸಮಯೋಚಿತತೆ ಯನ್ನು ಖಾತರಿಪಡಿಸು ವುದಿಲ್ಲ. ಹಾಗಾಗಿ ಅರ್ಜಿ ಸಲ್ಲಿಸುವ ಮೊದಲು ಆಯಾಯ ವೈಬ್‌ಸೈಟ್ ನೋಡಿ ಖಚಿತಪಡಿಸು ವುದು ಉತ್ತಮ. ಯಾವುದೇ ಲೋಪದೋಷಗಳಿಗೆ ಪತ್ರಿಕೆ ಇಲ್ಲವೇ ಲೇಖಕರು ಜವಾಬ್ದಾರರಲ್ಲ.

ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

ಮಂಜಿನ ನಗರಿ ಮಡಿಕೇರಿಯ ಇರುಳ ದಸರಾ | ದಶ ಮಂಟಪಗಳ ವೈಭವದ ಶೋಭಾಯಾತ್ರೆ

ದಸರಾ ಆಚರಣೆಗೆ ಡಿಜೆ ಕಡಿವಾಣದ ಸಂಕಷ್ಟ!

ಜಿಲ್ಲಾ ನೋಟ

ಎಚ್.ಟಿ. ಅನಿಲ್ , ಮಡಿಕೇರಿ

ಮಡಿಕೇರಿಯಲ್ಲಿ ಜನೋತ್ಸವವಾಗಿ ಆಚರಿಸಲ್ಪಡುವ ನಾಡಹಬ್ಬ ದಸರಾಕ್ಕೆ ಪೂರ್ವಸಿದ್ಧತೆಗಳು ಪ್ರಾರಂಭವಾಗಿವೆ. ವಿಜಯದಶಮಿ ರಾತ್ರಿಯಂದು ನಗರದಲ್ಲಿ ತೆರಳುವ ದಶ ಮಂಟಪಗಳ ಶೋಭಾಯಾತ್ರೆಯಲ್ಲಿ ಈ ಬಾರಿಯೂ ಅಬ್ಬರದ ಡಿಜೆ ಇರುತ್ತದೆಯೇ ಇಲ್ಲವೇ ಎಂಬ ಪ್ರಶ್ನೆ ಸಾರ್ವಜನಿಕರ ವಲಯದಲ್ಲಿ ಚರ್ಚೆ ಶುರುವಾಗಿದೆ.

ಇರುಳ ದಸರಾ

ಮೈಸೂರು ದಸರಾ ಹಗಲಿನಲ್ಲಿ ನಡೆಯುವ ಜಂಬೂಸವಾರಿಗೆ ವಿಶ್ವಪ್ರಸಿದ್ಧಿಯಾಗಿದ್ದರೆ ಮಂಜಿನ ನಗರಿ ಮಡಿಕೇರಿಯಲ್ಲಿ ನಡೆಯುವ ದಸರಾ ಇರುಳಿನಲ್ಲಿ ಜರುಗುವ ಮೂಲಕ ವಿಭಿನ್ನವಾಗಿ ಕಂಗೊಳಿಸುತ್ತಿದೆ. ಮೈಸೂರು ದಸರಾ ಮುಗಿದ ನಂತರ ಅನೇಕ ಪ್ರವಾಸಿಗರು 120 ಕಿ.ಮೀ. ದೂರದ ಮಡಿಕೇರಿಗೆ ಆಗಮಿಸಿ ಇಲ್ಲಿ ರಾತ್ರಿ ಜರುಗುವ ದಶಮಂಟಪಗಳ ಶೋಭಾಯಾತ್ರೆಯನ್ನು ಬೆಳಗಿನ ಜಾವದವರೆಗೂ ವೀಕ್ಷಿಸಿ ಸಂಭ್ರಮಿಸುತ್ತಾರೆ.

ದಶ ದೇವಾಲಯಗಳು

ಮಡಿಕೇರಿಯ ವಿವಿಧೆಡೆಗಳಿಂದ ದಶ ದೇವಾಲಯಗಳು ದಸರಾ ಸಂದರ್ಭ ಶೋಭಾಯಾತ್ರೆಗಾಗಿ ದೇವಾನುದೇವತೆಗಳ ಮೂರ್ತಿ ಹೊಂದಿರುವ ವಿದ್ಯುದ್ದೀಪಾಲಂಕೃತ ಮಂಟಪವನ್ನು 15 ದಿನಗಳಿಗೆ ಮುನ್ನವೇ ರೂಪಿಸುತ್ತಾರೆ. ಈ ಮಂಟಪದಲ್ಲಿ ಅಸುರರನ್ನು ಸಂಹರಿಸುವ ದೇವಾನುದೇವತೆಗಳ ಕಲಾಕೃತಿಗಳು ಮನಸೆಳೆಯುವಂತಿರುತ್ತದೆ. 10 ಮಂಟಪಗಳಲ್ಲಿಯೂ ಪೌರಾಣಿಕ ಕಥಾಸನ್ನಿವೇಶದ ವಿವಿಧ ದೃಶ್ಯಗಳು ಆಯಾ ಮಂಟಪ ಸಮಿತಿಯ ಕ್ರಿಯಾಶೀಲತೆಗೆ ತಕ್ಕಂತೆ ರೂಪುಗೊಂಡಿರುತ್ತವೆ. ಇಂಥ ಮಂಟಪಗಳು ಕಳೆದ 10-12 ವರ್ಷಗಳಿಂದ ಬದಲಾದ ತಂತ್ರಜ್ಞಾನಕ್ಕೆ ಅನುಗುಣವಾಗಿ ಆಧುನಿಕ ರೂಪ ಪಡೆದವು. ಹೊಸ ತಂತ್ರಜ್ಞಾನದ ನೆರವಿನಿಂದ ಧ್ವನಿ ಬೆಳಕಿನ ವಿನ್ಯಾಸವೇ ಹೊಸ ರೂಪ ಪಡೆಯಿತು. ದೇವಾನುದೇವತೆಯರು ದುಷ್ಟರನ್ನು ವಧಿಸುವ ಸನ್ನಿವೇಶಗಳೇ ಹೆಚ್ಚು.

ಡಿಜೆ ಬಹುತೇಕರಿಗೆ ಕಿರಿಕಿರಿ

ಇಂಥ ಧ್ವನಿ ಬರುಬರುತ್ತಾ ಮಿತಿಯನ್ನೂ ಮೀರತೊಡಗಿತು. ಇದು ಎಷ್ಟರ ಮಟ್ಟಿಗೆ ಹೋಯಿತು ಎಂದರೆ ಮಡಿಕೇರಿಯ ನಾಗರಿಕರೇ ಈ ಧ್ವನಿಯನ್ನು ಸಹಿಸಲಾಗುತ್ತಿಲ್ಲ ಎಂದು ದೂರತೊಡಗಿದರು. ಮಂಟಪಗಳಲ್ಲಿ ಅಳವಡಿಸಿದ್ದ ಡಿಜೆ ಕೂಡ ಬಹುತೇಕರಿಗೆ ಕಿರಿಕಿರಿಯಾಗ' ತೊಡಗಿತ್ತು. ಯುವಪೀಳಿಗೆ ಮಾತ್ರ ಇಂಥ ಆರ್ಭಟಿಸುವ ಧ್ವನಿಯನ್ನು ಸಂಭ್ರಮಿ ಸುತ್ತಾ ರಾತ್ರಿಯಿಡೀ ಕುಣಿದು ಕುಪ್ಪಳಿಸುವುದು ಸಾಮಾನ್ಯ ನೋಟವಾಗಿತ್ತು.

ಸೆ.23 ರಿಂದ ದಸರಾ

ಇನ್ನೇನು ಸೆ.23 ರಿಂದ ಪ್ರಾರಂಭವಾಗುವ ದಸರಾ ಮತ್ತು ಅ. 2 ರಂದು ರಾತ್ರಿ ಆಯೋಜಿತ ದಸರಾ ದಶಮಂಟಪಗಳ ಶೋಭಾಯಾತ್ರೆಯಲ್ಲಿ ಡಿಜೆ ಅಬ್ಬರ ಕೇಳಿಬರಲಿದೆಯೇ? ಇಲ್ಲವೇ ಎಂಬುದೇ ಸದ್ಯದ ಕುತೂಹಲವಂತೂ ಹೌದು..!

» ಡಿಜೆ ಸೌಂಡಿಗೆ ಮನೆಗಳ ಕಿಟಕಿಗಳು ಪೀಸ್ ಪೀಸ್

» ಅನಗತ್ಯ ನಿಯಮ ಹೇರಿಕೆಗೆ ಸಮಿತಿಯ ವಿರೋಧ

ಎಸ್‌ಪಿ ಡಿಜೆಗೆ ಲಗಾಮು

ಕಳೆದ ಎರಡು ವರ್ಷಗಳ ಹಿಂದೆ ಕೆ.ರಾಮರಾಜನ್ ಕೊಡಗು ಪೊಲೀಸ್ ವರಿಷ್ಠಾಧಿಕಾರಿಯಾಗಿ ಬಂದ ಬಳಿಕ ದಸರಾದ ಡಿಜೆ ಧ್ವನಿ ವರ್ಧಕ ವ್ಯವಸ್ಥೆಗೂ ಕಡಿವಾಣ ಹಾಕಲು ಮುಂದಾದರು. ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ದಸರಾದಲ್ಲಿ ಜಾರಿಗೊಳಿಸಲು ರಾಮರಾಜನ್ ಮತ್ತವರ ತಂಡ ಮುಂದಾಯಿತು. ಕಳೆದ ವರ್ಷ ಕೂಡ ಮಂಟಪಗಳ ಶಬ್ದಕ್ಕೆ ಲಗಾಮು ಹಾಕಲು ಪೊಲೀಸ್ ಇಲಾಖೆ ಮುಂದಾಯಿತು. ಕೆಲವು ಮಂಟಪಗಳು ನಿಯಮ ಪಾಲಿಸಿದವಾದರೂ ಇನ್ನೂ ಕೆಲವು ನಿಯಮ ಗಾಳಿಗೆ ತೂರಿದ್ದವು.

ಹೈಕೋರ್ಟ್ ಮೊರೆ

ಮಂಟಪಗಳಿಂದ ಶಬ್ದ ಮಾಲಿನ್ಯದ ಬಗ್ಗೆ ವಕೀಲ ಅಮೃತೇಶ್ ಹೈಕೋರ್ಟ್ ಮೆಟ್ಟಿಲೇರಿದ ಪ್ರಕರಣವೂ ನಡೆಯಿತು. ನಿಯಮಗಳಂತೆ 90 ಡಿಸಬಲ್ ಮೀರದಂತೆ ಶಬ್ದ ಇರಬೇಕಾಗಿದ್ದರೂ ಪ್ರಸ್ತುತ ಮಂಟಪಗಳು 120 ಡಿಸಬಲ್ ಪ್ರಮಾಣ ಬಳಸುತ್ತಿವೆ. ಇದರಿಂದಾಗಿ ಶಬ್ಧ ಮಾಲಿನ್ಯ ಉಂಟಾಗುತ್ತಿದೆ.

ಈ ಬಾರಿ ಶಬ್ದಕ್ಕೆ ಬ್ರೇಕ್

ಇದೀಗ ಮತ್ತೊಂದು ದಸರಾ ಬಂದಿದೆ. ಈ ಬಾರಿಯೂ ಜಿಲ್ಲಾಡಳಿತ, ಪೊಲೀಸ್ ಇಲಾಖೆ ದಶಮಂಟಪಗಳಿಗೆ ಶಬ್ದ ನಿಯಂತ್ರಿಸಿ ಕೊಳ್ಳಲು ಸೂಚಿಸಿದೆ. ಜಿಲ್ಲಾ ಆಸ್ಪತ್ರೆ ಬಳಿಯಲ್ಲಿಯೇ ವಿಜಯದಶಮಿ ರಾತ್ರಿಯಂದು ದಶಮಂಟಪಗಳು ಹಾದು ಹೋಗುವುದರಿಂದಾಗಿ ಇವುಗಳಿಂದ ಹೊರಹೊಮ್ಮುವ ಡಿಜೆ ಶಬ್ದ ರೋಗಿಗಳಿಗೂ ಅಪಾಯ ತರಹುದು. ದಸರಾ ದಿನದಂದು ಮಡಿಕೇರಿಯ ಅನೇಕ ಹಿರಿಯರು ಈ ಶಬ್ದದ ಅಬ್ಬರಕ್ಕೆ ಹೆದರಿ ಮಡಿಕೇರಿಯಿಂದ ಬೇರೆ ಊರುಗಳಿಗೆ ಹೋಗುವ ಉದಾಹರಣೆ ಕೂಡ ಇದೆ. ಹೀಗಾಗಿ ಎಲ್ಲಾ ಮಂಟಪಗಳು ನಿಯಮ ಪಾಲಿಸಿ ನ್ಯಾಯಾಲಯದ ಆದೇಶ ಪಾಲಿಸಲೇಬೇಕು ಎಂದು ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ವೈಭವದ ಶೋಭಾಯಾತ್ರೆ

ಮಡಿಕೇರಿ ದಸರಾ ಎಂದರೆ ದಶಮಂಟಪಗಳ ವೈಭವದ ಶೋಭಾಯಾತ್ರೆ. ದಶಮಂಟಪಗಳಲ್ಲಿ ಶಬ್ದ ಹೊರಹೊಮ್ಮದೇ ಹೋದರೆ ಏನಿದೆ ಹಬ್ಬದ ಸಂಭ್ರಮ. ಹಿಂದೂ ಹಬ್ಬಗಳಿಗೆ ಮಾತ್ರ ಇಂಥ ನಿಯಮ ಜಾರಿಗ1ಳಿಸುತ್ತೀರಿ ಎಂಬುದು ದಶಮಂಟಪಗಳ ಕೆಲವರ ಅಸಮಧಾನದ ಅನಿಸಿಕೆ. ಪ್ರತೀ ಮಂಟಪವೂ ತಮ್ಮ ಟ್ರಾಕ್ಟರ್‌ಗಳಿಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯಿಂದ ಸುರಕ್ಷತಾ ಪತ್ರವನ್ನು ಕಡ್ಡಾಯವಾಗಿ ಪಡೆದಿರಬೇಕು ಎಂಬ ಸೂಚನೆ ನೀಡಿದೆ. ಇದಕ್ಕೆ ಸಮಿತಿಗಳು ವಿರೋಧಿಸಿವೆ.

ಹೆಚ್ಚು ಲಗಾಮು ಹಾಕಬೇಡಿ

ಎಲ್ಲದ್ದಕ್ಕೂ ಕಾನೂನು ಲಗಾಮು ಹಾಕಬೇಡಿ. ಮೊದಲಿಂದ ವ್ಯವಸ್ಥಿತವಾಗಿ ನಡೆಸಿಕೊಂಡು ಬಂದಿದ್ದೇವೆ. ಈ ಬಾರಿಯೂ ಅಚ್ಚುಕಟ್ಟಾಗಿ ನಾಡಹಬ್ಬ ಆಚರಿಸುತ್ತೇವೆ ಎಂದು ಸಮಿತಿ ಪ್ರಮುಖರು ಹೇಳಿದ್ದಾರೆ. ಇಂಥ ವಾದಕ್ಕೆ ಮಡಿಕೇರಿ ಶಾಸಕ ಡಾ.ಮಂಥರ್ ಗೌಡ ಕೂಡ ಸಮ್ಮತಿ ಸೂಚಿಸಿದ್ದು ಅನಗತ್ಯವಾಗಿ ನಿಯಮ ಜಾರಿಗೊಳಿಸಿ ಸಮಸ್ಯೆಯುಂಟು ಮಾಡದಿರಿ ಎಂದು ಅಧಿಕಾರಿಗಳಿಗೆ ಶಾಸಕರು ಹೇಳಿದ್ದಾರೆ.

ಗಣೇಶೋತ್ಸವಕ್ಕೆ ಡಿಜೆ ಅಬ್ಬರ

ಮಡಿಕೇರಿಯ ಗಣೇಶೋತ್ಸವ ವಿಸರ್ಜನೆಯ ವೇಳೆ ಡಿಜೆ ಅಬ್ಬರಕ್ಕೆ ಕಡಿವಾಣ ಹಾಕಿ ಎಂದು ಪೊಲೀಸ್ ಇಲಾಖೆ ಸೂಚನೆ ನೀಡಿ, ಪೊಲೀಸ್ ತಂಡವನ್ನೇ ಶಬ್ದಕ್ಕೆ ಕಡಿವಾಣ ಹಾಕಲು ನೇಮಕ ಮಾಡಿತ್ತಾದರೂ ಕೆಲವೊಂದು ಮಂಟಪಗಳು ಯಥಾಪ್ರಕಾರ ಡಿಜೆಯೊಂದಿಗೆ ಮೆರವಣಿಗೆ ಸಾಗಿದ್ದವು. ಕೆಲವು ಮನೆಗಳ ಕಿಟಕಿಗಳು ಈ ಶಬ್ಧಕ್ಕೆ ಅಲುಗಾಡಿ, ಚೂರಾದದ್ದು ಸಂಭವಿಸಿತ್ತು. ಈ ನಡುವೇ ಹಲವಾರು ಮಂಟಪಗಳು ಡಿಜೆ ರಹಿತವಾಗಿ ಸಾಗಿ ಜನರ ಪ್ರಶಂಸೆಗೆ ಪಾತ್ರವಾಗಿದೆ. ಕೆಲಕಡೆ ಸೌಂಡ್ ಸಿಸ್ಟಂನ್ನು ಪೊಲೀಸರು ವಶಪಡಿಸಿಕೊಂಡದ್ದೂ ಆಯಿತು. ಈಗಾಗಲೇ ಮೆರವಣಿಗೆಗೆ ಅಗತ್ಯವಿರುವ ಸೌಂಡ್, ಡಿಜೆ ಸಿಸ್ಟಂನ್ನು ಕಾಯ್ದಿರಿಸಲಾಗಿದೆ. ಹೀಗಿರುವಾಗ ಡಿಜೆಯಿಲ್ಲದೇ ಮಂಟಪಗಳ ಮೆರವಣಿಗೆ ಕಷ್ಟಸಾಧ್ಯ ಎಂಬ ಬಗ್ಗೆಯೂ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆದಿದೆ ಎಂದು ಮಡಿಕೇರಿ ನಗರ ದಸರಾ ದಶಮಂಟಪ ಸಮಿತಿ ಅಧ್ಯಕ್ಷ ಹರೀಶ್ ಅನ್ವೇಕರ್ ಮಾಹಿತಿ ನೀಡಿದ್ದಾರೆ.

ಜಿಲ್ಲಾದ್ಯಂತ ಅದ್ಧೂರಿ ಗೌರಿ - ಗಣೇಶೋತ್ಸವ | ಡಿಜೆ ಸದ್ದು, ಬೆಳಕಿಗೆ ಹೆಜ್ಜೆ ಹಾಕಿದ ಯುವಜನ

159 ಗಣೇಶ ಮೂರ್ತಿಗಳ ಸಾಮೂಹಿಕ ಮೆರವಣಿಗೆ

ಹೊಸಪೇಟೆ: ಗಣೇಶ ಚತುರ್ಥಿ ದಿನ ವಿಜಯನಗರ ಜಿಲ್ಲಾದ್ಯಂತ ಪ್ರತಿಷ್ಠಾಪನೆಯಾದ ಸಾವಿರಾರು ಗಣಪತಿಗಳ ಪೈಕಿ 5ನೇ ದಿನವಾದ ಭಾನುವಾರ ಸಂಜೆ ಅಂದರೆ ಒಂದೇ ದಿನ 1,250 ಕ್ಕೂ ಅಧಿಕ ಸಾರ್ವಜನಿಕ ಗಣಪತಿಗಳ ವಿಸರ್ಜನೆ ಅದ್ದೂರಿಯಾಗಿ ನಡೆಯಿತು..!

ಡಿ.ಜೆ. ಸೌಂಡ್ ಗೆ ಸ್ಟೆಪ್: ಹೌದು. ಹೊಸಪೇಟೆ ನಗರದಲ್ಲಿ ಭಾನುವಾರ ಇಡೀ ದಿನ ಕಿವಿಗಪ್ಪಳಿಸುವ, ಎದೆ ನಡುಕುವ, ಕಣ್ಣು ಕೋರೈಸುವ ಬೆಳಕು, ಡಿ.ಜೆ. ಸೌಂಡ್ ಸಿಸ್ಟಂ ಸದ್ದಿನ ಅಬ್ಬರ ಹರಡಿತ್ತು. ಯುವಜನತೆ ಡಿ.ಜೆ ಸದ್ದಿಗೆ ಕುಣಿದು ಕುಪ್ಪಳಿಸುತ್ತ ಗಣೇಶನನ್ನು ಭವ್ಯ ಮೆರವಣಿಗೆಯೊಂದಿಗೆ ಸಾಗಿಸಿ ಕೊನೆಗೆ ನಾಲೆಯಲ್ಲಿ ವಿಸರ್ಜನೆ ನೆರವೇರಿಸಿದರು. ಯುವಕರ ಜತೆ ಯುವತಿಯರು ಕೂಡ ಅತ್ಯುತ್ಸಾಹದಿಂದ ಡಿ.ಜೆ ಸದ್ದಿಗೆ ಭರ್ಜರಿಯಾಗಿಯೇ ಹೆಜ್ಜೆ ಹಾಕಿದರು. ಮಹಿಳೆಯರು ಸಹ ಸಾಥ್ ನೀಡಿದರು. ಈ ಕುಣಿತವನ್ನು ಅನೇಕರು ಮೊಬೈಲ್‌ಗಳಲ್ಲಿ ಸೆರೆ ಹಿಡಿದು ಜಾಲ ತಾಣಗಳಲ್ಲಿ ಹರಿಯ ಬಿಟ್ಟರು.

ವಿಜೃಂಭಣೆಯ ಶೋಭಾಯಾತ್ರೆ: ನಗರದಲ್ಲಿ ಸುಮಾರು 159 ಸಾರ್ವಜನಿಕ ಗಣೇಶ ಮೂರ್ತಿಗಳ ಸಾಮೂಹಿಕ ಮೆರವಣಿಗೆ ಜರುಗಿತು. ಶೇ 90ರಷ್ಟು ವಿನಾಯಕ ಮೂರ್ತಿಗಳನ್ನು ಸ್ಟೇಷನ್ ರಸ್ತೆಯ ಎಲ್ ಎಲ್‌ಸಿ ಕಾಲುವೆಯಲ್ಲಿ ವಿಸರ್ಜಿಸಲಾಯಿತು. ಕೆಲವೆಡೆ ಮಳೆಯಾಗಿತ್ತು, ಸಂಜೆ ಸಹ ಜಿಟಿ ಜಿಟಿ ಮಳೆ ಸುರಿದಿತ್ತು. ಆದರೆ ಕತ್ತಲಾಗುತ್ತಿದ್ದಂತೆ ದಟ್ಟ ಮೋಡ ಇದ್ದರೂ ಮಳೆ ಬಿಡುವು ನೀಡಿತು. ಹೀಗಾಗಿ ಶೋಭಾಯಾತ್ರೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ರಾತ್ರಿ 10 ಗಂಟೆಗೆ ಡಿ.ಜೆ ಬಂದ್ : ಮೂರನೇ ದಿನದಂತೆ ಐದನೇ ದಿನವೂ ಭಾರಿ ಸಂಖ್ಯೆಯಲ್ಲಿ ಜನ ಸೇರುವುದು, ಭರ್ಜರಿ ಶೋಭಾಯಾತ್ರೆ ನಡೆಯುವ ಕಾರಣ ನಗರದೆಲ್ಲೆಡೆ ಮಾತ್ರವಲ್ಲದೆ, ಜಿಲ್ಲೆಯ ಆಯಕಟ್ಟಿನ ಸ್ಥಳಗಳಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು. ರಾತ್ರಿ 10 ಗಂಟೆಗೆ ಕಟ್ಟುನಿಟ್ಟಾಗಿ ಡಿ.ಜೆ ಬಂದ್ ಮಾಡಿಸುತ್ತಿದ್ದುದು ಕಂಡುಬಂತು.

ಸ್ಪರ್ಧೆ-ಬಹುಮಾನ: ನಗರದ ಕೆಲವೊಂದು ಗಣೇಶೋತ್ಸವ ಪೆಂಡಾಲ್‌ಗಳಲ್ಲಿ ಸ್ಥಳೀಯರು, ಮಹಿಳೆಯರು, ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಂಡು ನಡೆಸಲಾಯಿತು. ವಡಕರಾಯ ದೇವಸ್ಥಾನದಲ್ಲಿ ಸಾಮೂಹಿಕ ಕುಂಕುಮಾರ್ಚನೆ ನಡೆಯಿತು. 400ಕ್ಕೂ ಅಧಿಕ ಮಂದಿ ಅದರಲ್ಲಿ ಪಾಲ್ಗೊಂಡರು. ದೇವಸ್ಥಾನದಲ್ಲಿ ರಂಗೋಲಿ, ಕೋಲಾಟ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಉಕ್ಕಡಕೇರಿ ಗರಡಿ ಮನೆ ಗಣೇಶ ಸಮಿತಿ ಸೇರಿಕನ್ನಡ ಯುವಕ ಸಂಘದವರು ಕೂಡ ಹಲವು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ವಿಕಾಸ ಯುವಕ ಮಂಡಳ ಸಾರ್ವಜನಿಕ ಗಣೇಶ ಉತ್ಸವ ಸಮಿತಿಗಳಿಗೆ ನೀಡುವ ತಿಲಕ ಪ್ರಶಸ್ತಿ ಘೋಷಣೆಯಾಗಿದ್ದು ಛಲವಾದಿ ಯುವಕರ ಬಳಗ ರಚಿಸಿದ್ದ ಹೆಣ್ಣು ಮಕ್ಕಳ ಅತ್ಯಾಚಾರ ನಿಲ್ಲಲಿ - ನ್ಯಾಯಸಿಗಲಿ ಎಂಬ ಸಂದೇಶ ಸಾರುವ ಉತ್ಸವ ಸಮಿತಿ ಮೊದಲ ಬಹುಮಾನ ಗಳಿಸಿತು.

ಸಾಮಾಜಿಕ ಸಂದೇಶದ ಗಣಪ: ಕದಂಬ ಯುವಕರ ಸಂಘ ಸ್ಥಾಪಿಸಿದ ತಂದೆ-ತಾಯಿಗೆ ಮಕ್ಕಳೇ ಆಸರೆ ವೃದ್ಧಾಶ್ರಮವಲ್ಲ ಸಂದೇಶ ಸಾರುವ ಗಣೇಶನಿಗೆ ದ್ವಿತೀಯ ಬಹುಮಾನ ಹಾಗೂ ಅನಂತಶಯನಗುಡಿ ಪಾಂಡುರಂಗ ಕಾಲೋನಿಯ ಗಜಾನನ ಸೇವಾಲಾಲ್ ಯುವಕರ ಸಂಘವರ ಆರೋಗ್ಯ ಗಣಪತಿಗೆ ತೃತೀಯ ಬಹುಮಾನ ಲಭಿಸಿತು. ಜನಾಕರ್ಷಣೆ ಸಾರ್ವಜನಿಕ ಗಣೇಶೋತ್ಸವ ಮಂಡಳಿ ಪ್ರಶಸ್ತಿಗೆ ಎಂ.ಜೆ.ನಗರದ ವಾಯುಪುತ್ರ ಯುವಕರ ಸಂಘ ಪಾತ್ರವಾಯಿತು. ವಿಜ್ಞಾನ ಕಾಲೇಜ್ ಯುವಕ ಸಂಘದವರು ವಿಶೇಷ ಕಲ್ಲಿನಿಂದ ಅಲಂಕೃತ ಗಣೇಶನಿಗೆ ವಿಶೇಷ ಪ್ರೋತ್ಸಾಹಕರ ಬಹುಮಾನ ಲಭಿಸಿತು. ವಡಕರಾಯಸ್ವಾಮಿ ದೇವಸ್ಥಾನ ತೇರಿನ ಮುಂದೆ ವಿಕಾಸ ಯುವಕ ಮಂಡಳ ಪ್ರತಿಷ್ಠಾಪಿಸಿದ್ದ ಗಜಾನನ ಸಮಿತಿ ಪೆಂಡಾಲ್ ಬಳಿ ಪ್ರಶಸ್ತಿ ಪ್ರದಾನ ಮಾಡಿದರು.

ಪೊಲೀಸ್ ಬಂದೋಬಸ್ತ್ : ಗಣೇಶ ವಿಸರ್ಜನೆ ಮೆರವಣಿಗೆ ಕಾರಣ ಎಲ್ಲೆಡೆ ಅಗತ್ಯ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ವಿಸರ್ಜನೆ ನಡೆಯುವ ಕೆರೆ, ಕಾಲುವೆಗಳ ಬಳಿ ವಿದ್ಯುತ್ ವ್ಯವಸ್ಥೆ ಮಾಡಲಾಗಿತ್ತು. ಪೊಲೀಸ್ ಹಾಗೂ ಗೃಹರಕ್ಷಕ ಸಿಬ್ಬಂದಿ ನಿಯೋಜಿಸಲಾಗಿತ್ತು. ಹಲವು ದೊಡ್ಡ ಸೈಜಿನ ಗಣೇಶ ಮೂರ್ತಿಗಳ ವಿಸರ್ಜನೆಗೆ ಕ್ರೇನ್ ವ್ಯವಸ್ಥೆ ಮಾಡಲಾಗಿತ್ತು. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಸಿಬ್ಬಂದಿ ಇದ್ದರು.

» ಸಾರ್ವಜನಿಕ ಗಣೇಶ ಪ್ರತಿಷ್ಠಾಪನೆಗಳ ಅಬ್ಬರ

» ಒಂದೇ ದಿನ 1,250 ಗಣಪತಿಗಳ ವಿಸರ್ಜನೆ

» ದೊಡ್ಡ ಸೈಜಿನ ಗಣಪನ ಮೂರ್ತಿಗೆ ಕ್ರೇನ್ ಬಳಕೆ

» ಎಲ್ಲ ಕಡೆ ಕಟ್ಟೆಚ್ಚರದ ಪೊಲೀಸ್ ಬಂದೋಬಸ್ತ್

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ ಬೆಂಗಳೂರು 04-09-2025 ಗುರುವಾರ

ಚಿತ್ತವಿಹಾರ

ಆಂತರ್ಯದಲ್ಲಿಯೇ ಇರುವ ಶಕ್ತಿ

● ಮಾಯಾ ಬಾಲಚಂದ್ರ

ಮನಸ್ಸಿನ ಶಕ್ತಿ ಅಪಾರ. ಏನನ್ನೇ ಆದರೂ ಸಾಧಿಸಬಹುದಾದಷ್ಟು ಸಾಮರ್ಥ್ಯ ಇದ್ದರೂ ಸಹ, ಏನನ್ನೂ ಸಾಧಿಸದಿರಲು ಕಾರಣ ಆ ಸಾಮರ್ಥ್ಯದ ಬಗ್ಗೆ ನಂಬಿಕೆ ಇಲ್ಲದಿರುವುದಾಗಿದೆ. ತನ್ನ ಸಾಮರ್ಥ್ಯದ ಬಗೆಗೆ ಒಂದು ಸಂಕುಚಿತ ಭಾವವನ್ನು ಹೊಂದಿ, ತನ್ನದೇ ಒಂದು ಪರಿಧಿಯನ್ನು ನಿರ್ಮಿಸಿಕೊಂಡು, ಅದರೊಳಗೆ ಮಾತ್ರ ತಾನು ಸುರಕ್ಷಿತವಾಗಿರಬಲ್ಲೆ ಎಂಬ ನಂಬಿಕೆಯಿಂದ ಸಾಗುವುದು ಅನೇಕರಿಗೆ ಸುಲಭ ಎನಿಸಿಬಿಡುತ್ತದೆ. ಕೆಲವೊಮ್ಮೆ ಪಾಠವಾಗಬೇಕಾದ ಅನುಭವಗಳೇ ಬಂಧಿಸಿ ಬಿಡುತ್ತವೆ. ಹಳೆಯ ಅನುಭವಗಳಿಂದ ಉಂಡ ಕಹಿ ಮತ್ತೆ ಮರುಕಳಿಸದಿರಲಿ ಎಂಬ ಕಾರಣಕ್ಕೆ, ತಮ್ಮ ಮಿತಿಯನ್ನು ಕಿರಿದಾಗಿಸಿಕೊಂಡು ಬಂಧೀಖಾನೆಯೊಳಗೆ ಬಂಧಿಗಳಾಗಿ ಬಿಡುತ್ತಾರೆ. ಹೊಸ ಕೆಲಸಗಳೆಡೆಗೆ ಪ್ರಯತ್ನವನ್ನೇ ನಿಲ್ಲಿಸಿ ಬಿಡುತ್ತಾರೆ. ಸಾಹಸ ಪ್ರವೃತ್ತಿಯಿಂದ ಮುಂದುವರಿದರೆ ಅಪೂರ್ವ ವಿಜಯ ಗಳಿಸುವ ಸಾಧ್ಯತೆಗಳಿದ್ದರೂ, ನಿಷ್ಕ್ರಿಯರಾಗಿ ಬಿಡುತ್ತಾರೆ.

ಯಾವುದೇ ಒಂದು ವಸ್ತುವಿನ ಒಂದು ಗ್ರಾಂನಷ್ಟು ಚೂರನ್ನು ತೆಗೆದುಕೊಂಡು, ಶಕ್ತಿಯಾಗಿ ಪರಿವರ್ತಿಸಿದರೆ ಆ ಶಕ್ತಿಯ ಪ್ರಮಾಣ 3 ಕೋಟಿ 30 ಲಕ್ಷ ಕುದುರೆಗಳು ಒಟ್ಟಿಗೆ ಒಂದು ಗಂಟೆ ಕಾಲ ಮಾಡುವ ಕೆಲಸಕ್ಕೆ ಸರಿಸಮಾನ ಎಂದ ವಿಜ್ಞಾನದ ಪ್ರಮಾಣಾಧಾರಿತ ಸತ್ಯವನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಇಂತಹ ಅಗಾಧ ಶಕ್ತಿ ಮಾನವನ ಮನಸ್ಸಿಗೂ ಇದೆ. ಆದರೆ ಅದರ ಅರಿವಿಲ್ಲದೆ ಬಾಹ್ಯದ ಹುಡುಕಾಟದಲ್ಲಿ ತನ್ನ ಸಮಯ, ಸಾಮರ್ಥ್ಯಗಳನ್ನೆಲ್ಲ ವ್ಯಯಿಸುತ್ತಿದ್ದಾನೆ. ವರ್ತಮಾನದಲ್ಲಿ ನಾವು ಕಾಣಬಹುದಾದ, ಲೆಕ್ಕಕ್ಕೆ ಸಿಗದಷ್ಟು ವಿಷಯಗಳನ್ನು ಕುರಿತಾದ, ಅಪರಿಮಿತ ಜ್ಞಾನ ಸಂಪತ್ತು ಬಂದದ್ದೇ ಮನುಷ್ಯನ ಮನಸ್ಸಿನಿಂದ. ಮನುಷ್ಯನ ಮನೋ ಬುದ್ಧಿಗಳಿಂದ ನಡೆದ, ಚಿಂತನ-ಮಂಥನ, ಸಂಶೋಧನೆ-ಪ್ರಯೋಗ, ವಿಚಾರ ವಿಮರ್ಶೆ, ಪರೀಕ್ಷಣೆ-ಆವಿಷ್ಕಾರಗಳಿಂದಲೇ ಜಗತ್ತಿನ ಜ್ಞಾನ ನಿಧಿಯ ಸಂಗ್ರಹವಾಗಿದೆ.

ಮಾನವ ತನ್ನ ನಿಜವಾದ ನೆಲೆಯನ್ನು ತಿಳಿದುಕೊಳ್ಳದೆ, ಬದುಕಿನ ಗುರಿಯೊಂದನ್ನು ಕಂಡುಕೊಳ್ಳದೆ, ತನ್ನ ಸಾಮರ್ಥ್ಯ ಕುಂದಿಸಿಕೊಳ್ಳುವ ಗೊಂದಲದ ಮನಸ್ಥಿತಿಯನ್ನು ದ.ರಾ. ಬೇಂದ್ರೆಯವರು ಹೀಗೆ ಬಣ್ಣಿಸುತ್ತಾರೆ:

'ಹೆರತನದ ಹೆದರಿಕೆಯು ಹೃದಯವನು ಹೊಕ್ಕಿಹುದು, ನರತನದ ಕುದುರೆಯೊಳಗೆ ಜೀವ ಸಿಕ್ಕಿಹುದು. ಹೊರತನದ ಬಯಲೊಳಗೆ ಬುದ್ಧಿ ಬಳಲಾಡುವುದು, ಪರೆ ನಿನ್ನ ಕಿಂಕರಗೆ ಅಭಯಕರ ನೀಡೌ..'

ಅಂತರ್ಮುಖಿಯಾಗಿ, ಸುಪ್ತ ಮನಸ್ಸಿನ ಶಕ್ತಿಯನ್ನು ಅರಿತುಕೊಂಡಾಗ, ಬದುಕಿಗೊಂದು ಗುರಿ ಸಿಗಬಹುದು. ನಡೆಯಬೇಕಾದ ದಾರಿ ನಿಚ್ಚಳವಾಗಬಹುದು. ನಡೆಗೆ ಬೇಕಾದ ಬಲ ಒದಗಿ, ನಡಿಗೆ ಸಲಿಲವಾಗಬಹುದು, ಗುರಿ ತಲುಪಲುಬಹುದು. ಆಗದಿದ್ದರೆ ಕಡೆಯ ಪಕ್ಷ ಗುರಿ ತಲುಪುವ ಹಂಬಲದಿಂದಾದರೂ ಒಂದಿಷ್ಟು ಪರಿಕ್ರಮ ಸಿದ್ಧಿಸಬಹುದು.

ಮನಸ್ಸಿನ ರೆಕ್ಕೆ ಬಿಚ್ಚಿ ದೂರ ದೂರಕ್ಕೆ ಹಾರಾಡಿ....

● ಲಕ್ಷ್ಮೀಕಾಂತ್.ಎಲ್. ವಿ ತುಮಕೂರು

ನಮ್ಮ ಬದುಕು ಒಂದು ಪ್ರಯಾಣ. ಅದರಲ್ಲಿ ನಾವು ಅನೇಕ ಪಾತ್ರಗಳನ್ನು ನಿರ್ವಹಿಸುತ್ತೇವೆ. ವಿದ್ಯಾರ್ಥಿಯಾಗಿ, ನೌಕರನಾಗಿ, ತಂದೆ-ತಾಯಿಯಾಗಿ, ಗೆಳೆಯ-ಗೆಳತಿಯಾಗಿ ಹೀಗೆ, ಹೀಗೆ..! ಈ ಎಲ್ಲಾ ಪಾತ್ರಗಳಲ್ಲಿ ನಾವು ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ನಡೆಯಲು ಪ್ರಯತ್ನಿಸುತ್ತೇವೆ. ಆದರೆ ಈ ಪ್ರಕ್ರಿಯೆಯಲ್ಲಿ ನಮ್ಮ ನಿಜವಾದ ನಾನು ಮತ್ತು ನಮ್ಮ ಮನಸ್ಸಿನ ಆಸೆ-ಕನಸುಗಳು ಎಷ್ಟೋ ಬಾರಿ ಮೂಲೆ ಸೇರುತ್ತವೆ. ನಾವು ನಮ್ಮನ್ನು, ನಮ್ಮ ಆಲೋಚನೆಗಳನ್ನು, ನಮ್ಮ ಆಸಕ್ತಿಗಳನ್ನು ನಿರ್ಬಂಧಿಸಿ ಒಂದೇ ಹಾದಿಯಲ್ಲಿ ನಡೆಯಲು ಯತ್ನಿಸುತ್ತೇವೆ. ಆದರೆ, ಮನಸ್ಸಿಗೆ ರೆಕ್ಕೆ ಕಟ್ಟಿ ಹಾರಲು ಬಿಡುವುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಇದು ಕೇವಲ ಭಾವನಾತ್ಮಕ ಮಾತಲ್ಲ, ಬದಲಿಗೆ ನಮ್ಮ ಸೃಜನಶೀಲತೆ, ಆವಿಷ್ಕಾರ ಮತ್ತು ವೈಯಕ್ತಿಕ ಬೆಳವಣಿಗೆಗೆ ಇರುವ ಒಂದು ಪ್ರಮುಖ ಸೂತ್ರ.

ಇಂದಿನ ತೀವ್ರಗತಿಯ ಸ್ಪರ್ಧಾತ್ಮಕ ಜಗತ್ತಿನಲ್ಲಿ ನಾವು ನಮ್ಮನ್ನು ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ಬಂಧಿಸಿಕೊಳ್ಳುತ್ತೇವೆ. ವೃತ್ತಿಜೀವನದಲ್ಲಿ ಯಶಸ್ಸು ಪಡೆಯಲು, ಒಳ್ಳೆಯ ಅಂಕಗಳನ್ನು ಗಳಿಸಲು ಅಥವಾ ಸಾಮಾಜಿಕವಾಗಿ ಅಂಗೀಕಾರ ಪಡೆಯಲು ನಾವು ನಮ್ಮ ಮನಸ್ಸಿನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೆ. ನಮ್ಮ ಆಲೋಚನೆಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು, ರೂಢಿಗತ ದಾರಿಗಳನ್ನು ಅನುಸರಿಸುತ್ತೇವೆ. ಈ ಪ್ರವೃತ್ತಿ ನಮ್ಮಲ್ಲಿನ ಸುಪ್ತ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಒಂದು ಕ್ಷಣ ಯೋಚಿಸಿ, ನಾವು ಏನಾದರೂ ಹೊಸತನ್ನು ಪ್ರಯತ್ನಿಸಲು ಬಯಸಿದಾಗ, ನಮ್ಮ ಮನಸ್ಸಿನಲ್ಲಿ ಮೂಡುವ ಮೊದಲ ಪ್ರಶ್ನೆ, 'ಬೇರೆಯವರು ಏನು ಅಂದುಕೊಳ್ಳಬಹುದು?' ಎಂದಿರುತ್ತದೆ. ಈ ಭಯವೇ ನಮ್ಮನ್ನು ಹಿಂದಕ್ಕೆ ಎಳೆಯುತ್ತದೆ. ಹೊಸದನ್ನು ಪ್ರಯತ್ನಿಸುವ, ಅನ್ವೇಷಿಸುವ ಹಂಬಲವನ್ನು ಇದು ಕೊಲ್ಲುತ್ತದೆ.

ಆದರೆ ಇಲ್ಲಿಯೇ ನಾವು ನಮ್ಮನ್ನು ಕಳೆದುಕೊಳ್ಳುತ್ತೇವೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಯಶಸ್ಸಿನ ವ್ಯಾಖ್ಯಾನವನ್ನು ನಾವು ನಮ್ಮ ಮನಸ್ಸಿಗೆ ರೆಕ್ಕೆ ಕಟ್ಟಿ ಹಾರಲು ಬಿಡುವ ಬದಲು, ಸಮಾಜಕ್ಕೆ ಬಿಟ್ಟುಕೊಡುತ್ತೇವೆ. ಮನಸ್ಸಿಗೆ ಇಷ್ಟವಾದ ಚಿತ್ರಕಲೆ, ಸಂಗೀತ, ಕವಿತೆ ಅಥವಾ ಯಾವುದೇ ಸೃಜನಾತ್ಮಕ ಚಟುವಟಿಕೆಗಳು ಲಾಭದಾಯಕವಲ್ಲ ಎಂದು ತಳ್ಳಿಹಾಕುತ್ತೇವೆ. ಈ ಚಿಂತನೆ ನಮ್ಮನ್ನು ಕೇವಲ ಒಬ್ಬ ಅನುಕರಣಕಾರನನ್ನಾಗಿ ಮಾಡುತ್ತದೆ ವಿನಃ ಆವಿಷ್ಕಾರಕನನ್ನಾಗಿ ಅಲ್ಲ. ಯಾರು ತಮ್ಮ ಮನಸ್ಸಿಗೆ ರೆಕ್ಕೆ ಕಟ್ಟಿ ಹಾರಲು ಬಿಟ್ಟಿದ್ದಾರೋ, ಅವರೇ ಹೊಸತನವನ್ನು ಸೃಷ್ಟಿಸಿದ್ದಾರೆ. ಐನ್‌ಸ್ಟಿನ್, ಅಬ್ದುಲ್ ಕಲಾಂ, ವಿಲಿಯಂ ಷೇಕ್ಸ್‌ಪಿಯರ್ ಇವರೆಲ್ಲರೂ ತಮ್ಮ ಮನಸ್ಸಿನ ಆಲೋಚನೆಗಳಿಗೆ ಸ್ವಾತಂತ್ರ್ಯ ನೀಡಿದವರು. ಅವರು ಸಮಾಜದ ನಿರೀಕ್ಷೆಗಳಿಗೆ ಹೊಂದಿಕೊಳ್ಳುವ ಬದಲು, ತಮ್ಮದೇ ದಾರಿಯನ್ನು ಕಂಡುಕೊಂಡರು.



ಮನಸ್ಸಿಗೆ ರೆಕ್ಕೆ ಕಟ್ಟಿ ಹರಿದಾಗ ಸಿಗುವ ಸ್ವಾತಂತ್ರ್ಯ

ಮನಸ್ಸಿಗೆ ರೆಕ್ಕೆ ಕಟ್ಟಿ ಹಾರಲು ಬಿಡುವುದು ಎಂದರೆ ನಾವು ಮನಬಂದಂತೆ ವರ್ತಿಸುವುದು ಎಂದಲ್ಲ. ಅದು ನಮ್ಮ ಆಂತರಿಕ ಸಾಮರ್ಥ್ಯವನ್ನು ಗುರುತಿಸಿ, ಅದಕ್ಕೆ ಸೂಕ್ತ ಅವಕಾಶ ನೀಡುವುದಾಗಿದೆ. ನಾವು ನಮ್ಮ ಮನಸ್ಸಿಗೆ ಸ್ವಲ್ಪ ಸ್ವಾತಂತ್ರ್ಯ ಕೊಟ್ಟಾಗ, ಹೊಸ ಆಲೋಚನೆಗಳು ಮೂಡುತ್ತವೆ, ಹೊಸ ದೃಷ್ಟಿಕೋನಗಳು ಹುಟ್ಟಿಕೊಳ್ಳುತ್ತವೆ. ಉದಾಹರಣೆಗೆ, ಒಂದು ದಿನ ನಾವು ನಮ್ಮ ಕಚೇರಿಯ ಕೆಲಸದ ಹೊರತಾಗಿ ನಮಗೆ ಇಷ್ಟವಾದ ಒಂದು ಹವ್ಯಾಸದಲ್ಲಿ ತೊಡಗಿಸಿಕೊಳ್ಳಬಹುದು. ಅದು ನಮ್ಮ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಮನಸ್ಸು ಮತ್ತು ದೇಹಕ್ಕೆ ಹೊಸ ಶಕ್ತಿ ನೀಡುತ್ತದೆ. ಅದಕ್ಕಿರುವ ಮಾರ್ಗಗಳಿವು:

ನಿಮ್ಮ ಆಸಕ್ತಿಗಳನ್ನು ಗುರುತಿಸಿ

ನೀವು ಬಾಲ್ಯದಲ್ಲಿ ಏನನ್ನು ಮಾಡಲು ಇಷ್ಟಪಡುತ್ತಿದ್ದಿರಿ? ನಿಮ್ಮನ್ನು ಸಂತೋಷಪಡಿಸುವ ವಿಷಯಗಳು ಯಾವುವು? ಅವುಗಳನ್ನು ಮತ್ತೆ ಅನ್ವೇಷಿಸಿ.

ಹೊಸತನ್ನು ಕಲಿಯಿರಿ

ನಿಮ್ಮ ವೃತ್ತಿಗೆ ಸಂಬಂಧಪಡದ ಒಂದು ಹೊಸ ಕೌಶಲ್ಯವನ್ನು ಕಲಿಯಿರಿ. ಅದು ಹೊಸ ಭಾಷೆಯಾಗಿರಬಹುದು, ಸಂಗೀತ ವಾದ್ಯವಾಗಿರಬಹುದು ಅಥವಾ ಅಡುಗೆಯಾಗಿರಬಹುದು, ಅದು ನಿಮ್ಮ ಮನಸ್ಸಿಗೆ ಹೊಸ ದಿಕ್ಕು ನೀಡುತ್ತದೆ.

ಪ್ರಕೃತಿಯೊಂದಿಗೆ ಸಮಯ ಕಳೆಯಿರಿ

ನಿತ್ಯದ ಒತ್ತಡದ ಬದುಕಿನಿಂದ ಹೊರಬಂದು ಸ್ವಲ್ಪ ಹೊತ್ತು ಪ್ರಕೃತಿಯೊಂದಿಗೆ ಕಳೆಯಿರಿ. ಅದು ನಿಮ್ಮ ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ ಮತ್ತು ಹೊಸ ಆಲೋಚನೆಗಳಿಗೆ ಸ್ಫೂರ್ತಿ ನೀಡುತ್ತದೆ.

ಸೃಜನಾತ್ಮಕವಾಗಿ ಯೋಚಿಸಿ

ಯಾವುದೇ ಸಮಸ್ಯೆಯನ್ನು ಬಗೆಹರಿಸುವಾಗ, ರೂಢಿಗತ ವಿಧಾನಗಳನ್ನು ಬಿಟ್ಟು ಬೇರೆ ರೀತಿಯಲ್ಲಿ ಯೋಚಿಸಲು ಪ್ರಯತ್ನಿಸಿ. ಇದನ್ನು ಬೇರೆ ಹೇಗೆ ಮಾಡಬಹುದು? ಎಂದು ನಿಮ್ಮನ್ನು ನೀವು ಕೇಳಿಕೊಳ್ಳಿ.

ಮನಸ್ಸಿಗೆ ರೆಕ್ಕೆ ಕಟ್ಟಿ ಹಾರಲು ಬಿಟ್ಟಾಗ ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳಬಹುದು. ಹೀಗಾದಾಗ ಮಾತ್ರ ನಮ್ಮ ದಾರಿಯಲ್ಲಿ ಬರುವ ಸವಾಲುಗಳನ್ನು ಹೊಸ ರೀತಿಯಲ್ಲಿ ಎದುರಿಸಲು ನಮಗೆ ಧೈರ್ಯ ಮತ್ತು ಶಕ್ತಿ ಸಿಗುತ್ತದೆ. ಅದು ನಮ್ಮ ಬದುಕಿಗೆ ಬಣ್ಣಗಳನ್ನು ತುಂಬುತ್ತದೆ. ನಮ್ಮ ಸೃಜನಶೀಲತೆ, ಸ್ವತಂತ್ರ ಚಿಂತನೆ ಮತ್ತು ವೈಯಕ್ತಿಕ ಬೆಳವಣಿಗೆಗೆ ಅದುವೇ ಮುಖ್ಯ ಆಧಾರ. ನಮ್ಮ ಮನಸ್ಸಿನ ಆಸೆ-ಕನಸುಗಳಿಗೆ ರೆಕ್ಕೆ ಕಟ್ಟಿ ಹಾರಲು ಬಿಟ್ಟಾಗ, ನಾವು ಕೇವಲ ಯಶಸ್ವಿ ವ್ಯಕ್ತಿಗಳಾಗುವುದಲ್ಲ, ಬದಲಾಗಿ ಸಂತೋಷದಿಂದ ಬದುಕುವ ಮನುಷ್ಯರಾಗುತ್ತೇವೆ. ನಮ್ಮ ಸಮಾಜದ ಪ್ರಗತಿಗೂ ಇದು ಅಗತ್ಯ, ಏಕೆಂದರೆ ಸೃಜನಶೀಲ ಮನಸ್ಸುಗಳೇ ಹೊಸ ಆವಿಷ್ಕಾರಗಳನ್ನು ಸೃಷ್ಟಿಸಿ ಸಮಾಜವನ್ನು ಮುನ್ನಡೆಸುತ್ತವೆ. ಆದ್ದರಿಂದ, ಇಂದಿನಿಂದಲೇ, ನಮ್ಮ ಮನಸ್ಸಿಗೆ ರೆಕ್ಕೆ ಕಟ್ಟಿ ಹಾರಲು ಬಿಡೋಣ..!

ಯಾರು ತಮ್ಮ ಮನಸ್ಸಿಗೆ ರೆಕ್ಕೆ ಕಟ್ಟಿ ಹಾರಲು ಬಿಟ್ಟಿದ್ದಾರೋ, ಅವರಲ್ಲಿ ಹೆಚ್ಚಿನವರು ಹೊಸತನವನ್ನು ಸೃಷ್ಟಿಸಿದ್ದಾರೆ. ಐನ್‌ಸ್ಟಿನ್, ಅಬ್ದುಲ್ ಕಲಾಂ, ವಿಲಿಯಂ ಶೇಕ್ಸ್‌ಪಿಯರ್ ಇವರೆಲ್ಲರೂ ತಮ್ಮ ಮನಸ್ಸಿನ ಆಲೋಚನೆಗಳಿಗೆ ಸ್ವಾತಂತ್ರ್ಯ ನೀಡಿದವರು. ಅವರು ಸಮಾಜದ ನಿರೀಕ್ಷೆಗಳಿಗೆ ಹೊಂದಿಕೊಳ್ಳುವ ಬದಲು, ತಮ್ಮದೇ ದಾರಿಯನ್ನು ಕಂಡುಕೊಂಡವರು.

ಸಾಮಾಜಿಕ ಜಾಲತಾಣದ ಪ್ರಭಾವ

ಇಂದು ನಾವು ಸಾಮಾಜಿಕ ಮಾಧ್ಯಮದ ಯುಗದಲ್ಲಿದ್ದೇವೆ. ನಮ್ಮ ದಿನನಿತ್ಯದ ಚಟುವಟಿಕೆಗಳು, ಸಂತೋಷದ ಕ್ಷಣಗಳು ಮತ್ತು ಯಶಸ್ಸನ್ನು ನಾವು ತಕ್ಷಣವೇ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತೇವೆ. ಇದು ನಮ್ಮನ್ನು ಮತ್ತಷ್ಟು ಒತ್ತಡಕ್ಕೆ ಸಿಲುಕಿಸುತ್ತದೆ. ನಾವು ನಮ್ಮ ಬದುಕನ್ನು ಬೇರೆಯವರ ಬದುಕಿನೊಂದಿಗೆ ಹೋಲಿಸಿಕೊಳ್ಳಲು ಪ್ರಾರಂಭಿಸುತ್ತೇವೆ. ಸಾಮಾಜಿಕ ಮಾಧ್ಯಮದಲ್ಲಿ ನೋಡಿದ ಯಶಸ್ವಿ ವ್ಯಕ್ತಿಗಳ ಬದುಕು ನಮ್ಮ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ಕನಸುಗಳು, ಆಸಕ್ತಿಗಳು ಮತ್ತು ವೈಯಕ್ತಿಕ ಆಯ್ಕೆಗಳನ್ನು ನಾವು ಸಾಮಾಜಿಕ ಒಪ್ಪಿಗೆಯ ದೃಷ್ಟಿಯಿಂದ ನೋಡಲು ಶುರು ಮಾಡುತ್ತೇವೆ. ಜನಪ್ರಿಯ ವಿಷಯಗಳನ್ನೇ ನಾವು ಆಯ್ಕೆ ಮಾಡಿಕೊಳ್ಳುತ್ತೇವೆ.



ಸಾಮರಸ್ಯದ ಮಹತ್ವ

● ಸುಮಂಗಳಾ ಅಡೂರ್, ಸುಳ್ಯ

ಸಾಮರಸ್ಯ ಎಂದರೆ ಪ್ರಮುಖವಾಗಿ ಒಬ್ಬರನ್ನೊಬ್ಬರು ಅರಿಯುವುದು ಎಂಬುದಾಗಿದೆ. ಹಿಂದಿನ ಕಾಲದಲ್ಲಿ ನಮ್ಮ ಹಿರಿಯರು ಇದೇ ರೀತಿ ಬಾಳಿದವರು. ಆಗ ಅವಿಭಕ್ತ ಕುಟುಂಬಗಳಿದ್ದು ಸದಸ್ಯರೆಲ್ಲರೂ ಪರಸ್ಪರ ಪ್ರೀತಿ-ವಿಶ್ವಾಸಗಳಿಂದ ಬಾಳುತ್ತಿದ್ದರು. ಮಕ್ಕಳು ಹಿರಿಯರ ಅಗಾಧ ಪ್ರೀತಿ ಹಾಗೂ ಬುದ್ಧಿವಾದಗಳಿಂದ ಸತ್ಪ್ರಜೆಗಳಾಗಲು ಮುಕ್ತ ವಾತಾವರಣವಿತ್ತು. ಆದರೆ ಇಂದು ಅಂತಹ ದೃಶ್ಯಗಳು ಕಾಣಸಿಗುವುದೇ ಇಲ್ಲ. ವಿಭಕ್ತ ಕುಟುಂಬದ ಕೆಲವೇ ಸದಸ್ಯರಲ್ಲಿ ಸಾಮರಸ್ಯ ಕಡಿಮೆಯಾಗಿ ದಾಂಪತ್ಯದಲ್ಲಿ ವಿಚ್ಛೇದನ, ಹಿರಿಯರಿಗೆ ವೃದ್ಧಾಶ್ರಮ ವಾಸ, ಮಕ್ಕಳಿಗೆ ಪ್ರೀತಿ-ವಾತ್ಸಲ್ಯಗಳ ಕೊರತೆ ಮುಂತಾದುವು ದಿನೇ ದಿನೇ ಹೆಚ್ಚಾಗುತ್ತಿವೆ. ಸಾಮರಸ್ಯವು ಎಷ್ಟೊಂದು ಒಳಿತು ಎಂಬುದನ್ನು ಯುವ ಕವಿಯೊಬ್ಬರು ಮನೋಜ್ಞವಾಗಿ ಹೀಗೆ ವರ್ಣಿಸಿದ್ದಾರೆ. 'ತನ್ನೊಳ್ ರಂಧ್ರಮನಿಟ್ಟ ಕೋಪಕನಿತುಂ ಸಾಧಿಪ್ಪೆಯೇಂ ಸೂಜಿಯೆ? ಭಿನ್ನಂಗೊಂಡಿಹ ಶಲ್ಯಮಂ ಬಿಡದೆ ನೀಂ ಚುಚ್ಚುತ್ತೆ ನೋಯಿಪ್ಪೆಯೇಂ? ಚೆನ್ನೊಳ್ ಸಂದಿಹ ದಾರದಾ ಗುಣಗಳಿಂ ನೀನಿನ್ನು ಬಾಳಿರ್ಪೆಯ್ಯೆಟ ಬೆನ್ನೊಳ್ ನಿಂತಭಿರಾಮಮಾದ ಪರಿಯೊಳ್ ಒಂದಾಗಿಪಳ್ ಬಟ್ಟೆಯಂ'- ಇಲ್ಲಿ ಸೂಜಿಯ ಒರಟುತನವನ್ನು ಕೂಡ ಅದರ ಸಹವರ್ತಿಯಾದ ನೂಲು ತಾಳಿಕೊಂಡು ಅದರ ಜತೆ ಬಿಡದೆ, ಹೇಗೆ ಕೆಡುಕನ್ನು ಒಳಿತನ್ನಾಗಿಸಿ ಬಾಳುತ್ತದೆ ಎಂಬುದನ್ನು ಹೃದಯಂಗಮವಾಗಿ ತಿಳಿಸಿದ್ದಾರೆ. ಹರಿದ ಬಟ್ಟೆಯನ್ನೂ ಬಿಡದ ಸೂಜಿಯು ಚುಚ್ಚಿ ನೋಯಿಸುವಾಗ ದಾರವು (ದಾರಕ್ಕೆ ಪತ್ನಿ ಮತ್ತು ಬಟ್ಟೆಗೆ ದಾರಿ ಎಂದೂ ಅರ್ಥಗಳಿವೆ) ಅದರ ಮೂಲಕ ಹಾದು ಹರಿದ ಭಾಗಗಳನ್ನು ಒಂದಾಗಿಸಿ ಅದರ ಕೆಡುಕನ್ನು ತೊಲಗಿಸುತ್ತದೆ ಎಂಬುದು ಇದರ ಅರ್ಥ. ಗಂಡ-ಹೆಂಡತಿಯರಲ್ಲಿ ಒಬ್ಬರು ಮಾಡಿದ ತಪ್ಪನ್ನು ಇನ್ನೊಬ್ಬರು ಸರಿಪಡಿಸಿಕೊಂಡು ಸಾಗಿದಲ್ಲಿ ಜೀವನ ಎಷ್ಟು ಮಧುರವಾಗಬ ಹುದಲ್ಲವೇ? ತಪ್ಪು ಕೆಲವೊಮ್ಮೆ ನಮ್ಮಿಂದಲೂ ಆಗಬಹುದು.

ಚಂದ್ರಗ್ರಹಣದ ಪೌರಾಣಿಕ ಹಿನ್ನೆಲೆ

ಚಂದ್ರಗ್ರಹಣದ ಪೌರಾಣಿಕ ಹಿನ್ನೆಲೆಯು ಅಮೃತ ಮಂಥನದ ಸಂದರ್ಭದಲ್ಲಿ ರಾಹು ಹಾಗೂ ಕೇತು ಗ್ರಹಗಳು ರೂಪುಗೊಂಡ ಪರಿಯನ್ನು ವಿಶದವಾಗಿ ವಿವರಿಸುತ್ತದೆ. ಸಮುದ್ರ ಮಥನ ಕಾಲದಲ್ಲಿ ಅಮೃತವು ಹೊರಬಂದಾಗ, ದೇವತೆಗಳೊಂದಿಗೆ ಸ್ವಭಾನು ಎಂಬ ರಾಕ್ಷಸನಿಗೂ ಅದು ಸಲ್ಲುತ್ತಿದೆ ಎಂಬುದು ಅರಿವಿಗೆ ಬಂದಾಗ ಮಹಾವಿಷ್ಣು ಸ್ವಭಾನುವನ್ನು ಚಕ್ರಾಯುಧದಿಂದ ಮರ್ದಿಸುವ ಕಥೆಯದು.

ಶ್ರೀಮನ್ನಾರಾಯಣನ ಆಯುಧವಾದ ಸುದರ್ಶನ ಚಕ್ರದ ಏಟಿಗೆ ಒಂದೇ ಕಾಯವಾಗಿದ್ದ ಸರ್ಪ ಸ್ವರೂಪಿ ದೇಹವು ಮಿಂಚಿನ ಕಾರ್ಯಾಚರಣೆ ನಡೆಯಿತೆಂಬಂತೆ ಎರಡು ಹೋಳುಗಳಾಗಿ ಛೇದಿಸಲ್ಪಡುತ್ತವೆ. ಸರ್ಪದ ಹೆಡೆಯ ಭಾಗವನ್ನು, ಅಂದರೆ ರುಂಡವನ್ನು ರಾಹು ಎಂಬ ಹೆಸರಿನಲ್ಲೂ, ಮುಂಡದ ಭಾಗವನ್ನು ಕೇತು ಎಂಬ ಹೆಸರಿನಲ್ಲಿಯೂ ಗುರುತಿಸುವ ಕ್ರಮ ನಮ್ಮ ಭಾರತೀಯ ಶಾಸ್ತ್ರದಲ್ಲಿದೆ.

ಹೀಗೆ ಅಮೃತದ ಅಂಶ ಸ್ವಭಾನು ಎಂಬ ರಾಕ್ಷಸನ ಮೋಸದ ತಂತ್ರದಿಂದಾಗಿ ಅಪವ್ಯಯವಾಗುತ್ತಿದೆ ಎಂಬ ಎಚ್ಚರವನ್ನು ಶ್ರೀಮನ್ನಾರಾಯಣನಿಗೆ ಒದಗಿಸಿದವರೇ ಸೂರ್ಯ ಹಾಗೂ ಚಂದ್ರರಾಗಿರುವುದರಿಂದ ಸಮಯ ಸಿಕ್ಕಾಗ ರಾಹು ಅಥವಾ ಕೇತುಗಳು ಸೂರ್ಯ, ಚಂದ್ರರನ್ನು ನುಂಗುವ ಅಥವಾ ಘಾಸಿಗೊಳಿಸುವ ಪ್ರಯತ್ನ ನಡೆಸಲು, ಸೇಡಿನ ವಿಷಜ್ವಾಲೆ ಹೊತ್ತವರಾಗಿ, ಆಗಾಗ ಮುಂದಾಗುತ್ತಲೇ ಇರುತ್ತಾರೆ ಎಂಬುದು ನಮ್ಮ ಆರ್ಷೇಯ ನಂಬಿಕೆ.

ಈ ರೀತಿಯ ಚಂದ್ರ-ಸೂರ್ಯರ ಮೇಲಿನ ರಾಹು ಕೇತುಗಳ ಆಕ್ರಮಣ, ಸಫಲವಾಗುವ ಕಾಲಘಟ್ಟವೇ ಗ್ರಹಣ ಎಂಬ ವಿಧದಲ್ಲಿ ನಾವು ಭಾರತೀಯರು ನಂಬಿಕೆಯನ್ನೂ ಹೊಂದಿದ್ದೇವೆ.

ದಿನಾಂಕ 7.9.2025ರ ಭಾನುವಾರ ಖಗ್ರಾಸ ಚಂದ್ರ ಗ್ರಹಣ. ಈ ಗ್ರಹಣ ಭಾರತದಾದ್ಯಂತ ಗೋಚರಿಸುವುದು. ಪೂರ್ವಭಾದ್ರ ನಕ್ಷತ್ರ ಕುಂಭ ರಾಶಿಯಲ್ಲಿ, ಚಂದ್ರಗ್ರಹಣ ಸಂಭವಿಸಲಿದೆ.

ಹಿಂದೂ ಧರ್ಮಕ್ಕೆ, ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಮ್ಮ ಪೂರ್ವಿಕರು ಅದೆಷ್ಟೋ ಬುದ್ಧಿವಂತಿಕೆಯಿಂದ ಅನೇಕ ವೈಜ್ಞಾನಿಕ ವಿಷಯಗಳನ್ನು ಪೌರಾಣಿಕ ಹಿನ್ನೆಲೆಯಲ್ಲಿ, ಕಥೆಗಳ ರೂಪದಲ್ಲಿ ನಮಗೆ ತಿಳಿಸಿ ಹೇಳಿದ್ದಾರೆ. ಪ್ರತಿಯೊಂದು ಕಥೆಗೂ ತನ್ನದೇ ಆದ ಪೌರಾಣಿಕ ಹಿನ್ನೆಲೆ ಇದೆ. ಅನೇಕ ಪುರಾಣದ ಕಥೆಗಳು ವೈಜ್ಞಾನಿಕ ತಳಹದಿಯಲ್ಲಿ ರೂಪುಗೊಂಡಿವೆ. ಇಂದಿಗೂ ಕೂಡ ಅವುಗಳಲ್ಲಿ ಬಹಳಷ್ಟು ಪ್ರಸ್ತುತವಾಗಿದೆ. ಆ ನಿಟ್ಟಿನಲ್ಲಿ ನಾವಿನ್ನೂ ನಮ್ಮ ಪುರಾಣಗಳನ್ನು ಅದರ ಹಿಂದಿನ ಸತ್ಯಾಸತ್ಯತೆಗಳನ್ನು ಇನ್ನು ಸಂಪೂರ್ಣವಾಗಿ ತಿಳಿದುಕೊಂಡೇ ಇಲ್ಲ ಎನ್ನಬಹುದು.

ಆದ್ದರಿಂದಲೇ ಭಾರತೀಯರಾದ ನಾವು ಮೊದಲು ನಮ್ಮ ಪುರಾಣ, ಇತಿಹಾಸವನ್ನು ಸರಿಯಾದ ರೀತಿಯಲ್ಲಿ ಅರಿಯುವ ಪ್ರಯತ್ನ ಮಾಡಬೇಕು. ಅದರಲ್ಲಿ ನಮಗೆ ಸಿಗುವ ಅನೇಕ ವಿಚಾರಗಳು ನಮಗೆ ಜೀವನದಲ್ಲಿ ಕೇವಲ ಮೌಲ್ಯಗಳನ್ನು ಮಾತ್ರ ಅಲ್ಲದೆ, ಪ್ರಸ್ತುತ ಪರಿಸ್ಥಿತಿಗೆ ಬೇಕಾದ ಅನೇಕ ವೈಜ್ಞಾನಿಕ ವಿಚಾರಗಳನ್ನ ಕೂಡ ಅರ್ಥ ಮಾಡಿಕೊಳ್ಳಲು ಪೂರಕವಾಗಿರುತ್ತದೆ.

ಉದಾಹರಣೆಗೆ ಮದುವೆಯಾದ ದಂಪತಿಗಳಿಗೆ ಅರುಂಧತಿ ನಕ್ಷತ್ರವನ್ನು ತೋರಿಸುವ ಒಂದು ಮದುವೆಯ ಪದ್ಧತಿ ಇದೆ. ವಿವಾಹ ಸಮಾರಂಭದಲ್ಲಿ, ವಿಶೇಷವಾಗಿ ಸಪ್ತಪದಿಯ ನಂತರ, ವರನು ವಧುವಿಗೆ ಅರುಂಧತಿ ನಕ್ಷತ್ರವನ್ನು ತೋರಿಸುತ್ತಾನೆ. ಇದು ದಾಂಪತ್ಯ ಜೀವನದಲ್ಲಿ ಅವರ ನಿಷ್ಠೆ ಮತ್ತು ಸಹಬಾಳ್ವೆಯನ್ನು ನೆನಪಿಸಲು ಮಾಡಲಾಗುತ್ತದೆ.

ಹಿಂದೂ ಪುರಾಣಗಳಲ್ಲಿ ವಶಿಷ್ಠ ಮುನಿ ಮತ್ತು ಅರುಂಧತಿ ಆದರ್ಶ ದಂಪತಿಗಳಾಗಿದ್ದರು, ಅವರು ಪರಸ್ಪರ ನಿಷ್ಠೆ ಮತ್ತು ಪ್ರೀತಿಗೆ ಹೆಸರುವಾಸಿಯಾಗಿದ್ದರು. ಅರುಂಧತಿ ನಕ್ಷತ್ರವನ್ನು ತೋರಿಸುವ ಆಚರಣೆ ಆದರ್ಶ ದಂಪತಿಗಳಾದ ವಶಿಷ್ಠ ಮತ್ತು ಅರುಂಧತಿಯನ್ನು ಪ್ರತಿನಿಧಿಸುತ್ತದೆ, ಇದು ವೈವಾಹಿಕ ನಿಷ್ಠೆ, ಪ್ರೀತಿ ಮತ್ತು ಪರಸ್ಪರ ಸಮನ್ವಯದ ಸಂಕೇತವಾಗಿದೆ. ಈ ಆಚರಣೆಯು ದಂಪತಿಗಳು ಜೀವನಪೂರ್ತಿ ಒಟ್ಟಾಗಿ ಪಯಣಿಸುವುದರ ಸಂಕೇತವಾಗಿದೆ.

ಅರುಂಧತಿ ಮತ್ತು ವಶಿಷ್ಠ ಇಬ್ಬರೂ ಸಮನ್ವಯವಾಗಿ ತಿರುಗುವ ನಕ್ಷತ್ರಗಳಾಗಿದ್ದು, ಪತಿ-ಪತ್ನಿಯರು ಪರಸ್ಪರ ಹೆಚ್ಚು ಕಡಿಮೆ ಇಲ್ಲದೆ, ಸಮಾನವಾಗಿ ಜೀವನದ ಹಾದಿಯಲ್ಲಿ ಸಾಗಬೇಕು ಎಂಬುದನ್ನು ಇದು ಸೂಚಿಸುತ್ತದೆ. ಇಂತಹ ಅನೇಕ ವಿಚಾರಗಳು ನಮ್ಮ ಪದ್ಧತಿಗಳಲ್ಲಿ ಆಚರಣೆಗಳಲ್ಲಿ ಹಾಸು ಹಕ್ಕಾಗಿವೆ . ಇನ್ನಾದರೂ ಇವುಗಳನ್ನು ಪ್ರಯತ್ನ ಪೂರ್ವಕವಾಗಿ ತಿಳಿದು ಆಚರಿಸೋಣ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನವಜೀವವನ್ನು ಸೃಷ್ಟಿಸುವ ಸಾವು ಜೀವನ್ಮುಖಿ!

● ವಾಣಿ ಹುಗ್ಗಿ, ಹುಬ್ಬಳ್ಳಿ

ಜಾತಸ್ಯ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ।
ತಸ್ಮಾದಪರಿಹಾರ್ಯೇ ರ್ಥೇ ನ ತ್ವಂ ಶೋಚಿತುಮರ್ಹಸಿ॥
(2.27)

ಆತ್ಮವು ಅವಿನಾಶಿ, ಹುಟ್ಟಿದವನು ಸಾಯಲೇಬೇಕು, ಸತ್ತವನು ಮತ್ತೇ ಹುಟ್ಟಲೇಬೇಕು... ಎಂದು ಭಗವದ್ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣ ಹೇಳಿದ್ದಾನೆ. ಈ ಜೀವನಚಕ್ರ, ಸತತವಾಗಿ ತಿರಗ್ತಾನೆ ಇರುತ್ತದೆ. ಎಷ್ಟೇ ಚೆನ್ನಾಗಿ ಬದುಕಿರಲಿ, ಗತಿ ಇಲ್ಲದಿರಲಿ, ಹೇಗೆ ಬದುಕಿದ್ದರೂ ಮೃತ್ಯುವಿನ ಮುಂದೆ ಎಲ್ಲರೂ ಸಮಾನರು. ಬಡವ, ಶ್ರೀಮಂತ, ಗಣ್ಯ, ಸಾಮಾನ್ಯ ಯಾವುದೇ ತಾರತಮ್ಯಲ್ಲದೆ ಕಾಲನ ಕರೆ ಬಂದಾಗ ಎಂತಹ ತುರ್ತಿನ ಕೆಲಸದ್ದರೂ ಬಿಟ್ಟು ಹೊರಡಲೇಬೇಕು. ಆದರೆ ಸಾವು ತರುವ ನೋವು ಎಲ್ಲರಿಗೂ ಸಮವೆ. ಅವರವರ ಪ್ರೀತಿಪಾತ್ರರನ್ನು ಕಳೆದುಕೊಂಡ ನೋವು ಅವರಿಗೇ ಗೊತ್ತು. ಈ ನೋವಿನಲ್ಲಿಯೂ ಯಾವುದೇ ಭೇದಭಾವವಿಲ್ಲ. ಸ್ವತಃ ಭಗವಂತನೇ ಹೇಳಿದರೂ ಯಾರೂ ಶೋಕವನ್ನು ಪಡದೆ ಇರರು. ಮೊದಲು ಅಳುವಿನ ರೂಪದಲ್ಲಿಯ ದುಃಖ ನಿಟ್ಟುಸಿರಿನ ಹಂತಕ್ಕೆ ತಲುಪಬಹುದು. ಮರಣ ಶೋಕ ಮತ್ತು ವೈರಾಗ್ಯವನ್ನುಂಟು ಮಾಡುತ್ತದೆ. ಜನನ ಕಾಲದಲ್ಲಿ ಪಡುವ ಸಂತೋಷ, ಮರಣ ಕಾಲದಲ್ಲಿ ದುಃಖ ನ್ಯಾಯೋಚಿತವೇ. ಸಾವಿನಲ್ಲಿ ಖುಷಿಪಟ್ಟರೆ ಅದು ಕ್ರೌರ್ಯವೆ. ದುಃಖವನ್ನು ಬದಿಗೊತ್ತಿ ನಿರ್ಲಿಪ್ತತೆಯನ್ನು ಸಾಧಿಸುವುದು ಸಾಹಸವೆ. ಹುಟ್ಟಿನೊಂದಿಗೆ ಬರುವ ಸಾವನ್ನು ಸ್ವಾಗತಿಸುವವರು ಕಡಿಮೆ. ಸಾವು ಕರೆಯದೆ ಬರುವ ಅತಿಥಿ! ಮರಣ ಯಾರಿಗೊದಗಿದೆಯೋ ಅವರಿಗೆ ಮಾತ್ರ ಗೊತ್ತು ಅದು ಬೇಕಾಗಿದೆಯೊ ಇಲ್ಲವೊ ಎಂದು. ಸಾವಿನ ದವಡೆಯಿಂದ ಪಾರಾಗಿ ಬರಬಹುದು, ಆದ್ರೆ ಸಾವನ್ನು ಜಯಿಸಲು ಯಾರಿಗೂ ಸಾಧ್ಯವಾಗಿಲ್ಲ. ಜೀವನದಲ್ಲಿ ಬಹಳ ನೊಂದವರು ಆ ಕ್ಷಣಕ್ಕೆ ಸಾವಾದ್ರೂ ಬರಬಾರ್ದೆ ಅಂದರೂ ಅದು ಮನದಿಂಗಿತವಾಗಿರುವುದಿಲ್ಲ. ಸುಖ ಜೀವನದ ನಿರೀಕ್ಷೆ ಇದ್ದೆ ಇರುತ್ತದೆ. ಸುರರು ಅಮೃತವನ್ನು ಕುಡಿದರೆ ಋಷಿಮುನಿಗಳು, ಅಸುರರು ದೀರ್ಘಾಯುಷ್ಯಕ್ಕಾಗಿ ತಪಸ್ಸು ಮಾಡಿದವರೆ!

ವಯಸ್ಸಾಗಿ, ಅನಾರೋಗ್ಯದಿಂದ ಬಳಲುವವರು, ತಮ್ಮ ಕೆಲಸ ತಾವೆ ಮಾಡಿಕೊಳ್ಳಲಾಗದವರು, ಒಂದಿಷ್ಟು ಜೀವಿಗಳಿಗೆ ಬದುಕು ದುಸ್ತರವೆನಿಸುತ್ತದೆ. ಜೀವನ್ಮರಣ ಹೋರಾಟ ನಡೆಸುತ್ತಿರುವವರು ದೈನ್ಯತೆಯಿಂದ ಮೃತ್ಯುವಿಗಾಗಿ ಹಾತೊರೆಯಲೂಬಹುದು. ಜಿಗುಪ್ಸೆ ಮೂಡಿ ಆತ್ಮಹತ್ಯೆ ಮಾಡಿಕೊಂಡರೆ ಅದು ಸಹಜ ಸಾವಾಗುವುದಿಲ್ಲ. ಹಾಗಾದರೆ ಆತ್ಮಹತ್ಯೆ ಇಚ್ಛಾಮರಣವೇ? 'ಉರ್ವಾರುಕಮಿವ ಬಂಧನಾತ್ ಮೃತ್ಯೋರ್ಮುಕ್ಷೀಯ ಮಾಮೃತಾತ್'.... ಮಾಗಿದ ಸೌತೆಕಾಯಿ ಎಷ್ಟು ಆರಾಮಾಗಿ ತಾನೇತಾನಾಗಿ ಉದುರುವುದೋ ಹಾಗೆಯೇ ದೇಹದಿಂದ ಜೀವವು ಅಪ್ರಯತ್ನವಾಗಿ, ಅಷ್ಟೆ ಸಲೀಸಾಗಿ ಹೊರಹೋಗಬೇಕು. ಆತ್ಮಹತ್ಯೆ, ಕೊಲೆ ಬಲವಂತದ ಪ್ರಯತ್ನವಾಗುತ್ತದೆ.

ಮರಣ ಮನುಷ್ಯನಿಗಿದ್ದ ಎಲ್ಲ ನೋವು, ಸಂಕಟಗಳನ್ನು ನಿವಾರಿಸುತ್ತದೆ. ಕೊರಗು, ಆಶೆ, ಜವಾಬ್ದಾರಿ, ಪಶ್ಚಾತ್ತಾಪ, ಅಹಂಕಾರ ಮನದಾಳದಲಿ ಹುದುಗಿದ ಯಾವುದೇ ಭಾವನೆಗಳಿಂದಲೂ ಮುಕ್ತ. ಜೀವನದುದ್ದಕ್ಕೂ ಆತ್ಮ ಮತ್ತು ದೇಹ ಒಂದಾಗಿ ಅನುಭವಿಸಿದ ಎಲ್ಲ ಸುಖ-ದುಃಖಗಳಿಂದ, ಸಂಬಂಧಗಳಿಂದ, ಸಿರಿತನ-ಬಡತನ, ಆರೋಗ್ಯ-ಅನಾರೋಗ್ಯಗಳಿಂದಲೂ ಮುಕ್ತ. ದೇಹವಂತೂ ಯಾವುದೇ ನೋವು, ಅನಾರೋಗ್ಯವಿಲ್ಲದೇ ಸ್ವತಂತ್ರವಾಗಿ, ಹಸನ್ಮುಖವಾಗಿರುತ್ತದೆ. ಹುಟ್ಟುವ-ಸಾಯುವ-ಮತ್ತೆ ಹುಟ್ಟುವ ಈ ಪ್ರಕ್ರಿಯೆಯಲ್ಲಿ ಸತ್ತರೆ ಹೊಸ ಹುಟ್ಟು! ಮತ್ತೆಮತ್ತೆ ಜನಿಸುವುದು ಬಂಧ ಬಂಧನವನ್ನು ತಂದರೆ, ಮರಣ ಎಲ್ಲ ಬಂಧ, ಬಾಧೆಗಳಿಂದ ಮುಕ್ತರನ್ನಾಗಿಸುತ್ತದೆ. ಅಜ್ಞಾನದಿಂದ ಜ್ಞಾನದ ಕಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಹಾಗೆಯೇ 'ಮೃತ್ಯೋರ್ಮಾ ಅಮೃತಂಗಮಯ' ಮೃತ್ಯುವಿನಿಂದ ಮುಕ್ತಿಯೆಡೆಗೆ ಪಯಣ ಸಾಗಬೇಕು ಅಲ್ವೇ. ಹಾಗಾದರೆ ಸಾವು ನಿಜಕ್ಕೂ ಜೀವನದ ಕೊನೆಯೇ? ಇಹಲೋಕದ ನೋವನ್ನು ಮರೆಸುವ, ನವಜೀವವನ್ನು ಸೃಷ್ಟಿಸುವ ಸಾವು ಜೀವನ್ಮುಖಿ!

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಮತ್ತೊಬ್ಬ ರಾಜ ಹುಡುಕು ಎನ್ನುತ್ತಿದ್ದಾನೆ (3)
4. ಮುಖಮೇಲಾಗಿ ಮಲಗಿರುವ ಸ್ಥಿತಿ (3)
5. ಗಡಿಬಿಡಿಗೆ ಮತ್ತೊಂದು ಹೆಸರು (3)
6. ಬಾಣಗಳಿಂದಲೇ ಆಗಿರುವ ಸಮುದ್ರ (3)
8. ಮತ್ತೊಬ್ಬರ ಬಗೆಗಿನ ಚುಚ್ಚುಮಾತು (3)
10. ರಾಕ್ಷಸನು ಅರದ ನಡುವೆ ಇದ್ದಾನೆ (3)
12. ಸುತ್ತಲೂ ಹರಡುವಿಕೆ (4)
13. ಹಬ್ಬದ ವಾತಾವರಣದ ಸಂಭ್ರಮ (4)
15. ಸಮರಕ್ಕೆ ಮತ್ತೊಂದು ಹೆಸರು (3)
17. ಏಳು ದಿನಗಳ ಅವಧಿಯಿದು (3)
19. ವಸ್ತ್ರಗಳನ್ನು ಒಗೆದು ಶುಚಿಮಾಡಿಕೊಡುವವನು (3)
21. ಗದ್ದಲ ಅಥವಾ ಗುಂಪು ಎನ್ನುವ ಅಪರಿಚಿತವಾದ ಪದ ತಿರುಗಿ ಬಂದಿದೆ (3)
22. ಈ ನೆಲ ಬಂಜರು (3)
23. ಚಿನ್ನಕ್ಕೆ ಮತ್ತೊಂದು ಹೆಸರು (3)

ಮೇಲಿಂದ ಕೆಳಕ್ಕೆ

1. ಬೇರೆಯವರ ಅಧೀನ ಎಂದರ್ಥ (3)
2. ಮೇರೆ ಅಥವಾ ಗಡುವು (3)
3. ತಿದ್ದು ಅಥವಾ ನಿಭಾಯಿಸು ಎಂದರ್ಥ (4)
4. ಯಮನಿಗೆ ಮತ್ತೊಂದು ಹೆಸರು (3)
7. ವೇಗವು ರಸದ ನಡುವೆ ಬಂದಿದೆ (3)
9. ದೇವತೆಗಳ ಒಂದು ವರ್ಗವಿದು (3)
10. ಅಪಹಾಸ್ಯಕ್ಕೆ ಇನ್ನೊಂದು ಹೆಸರು (3)
11. ಸ್ವಾದ ತಿಳಿಸುವ ನಾಲಗೆ (3)
12. ಇನ್ನೊಂದು ಊರಿಗೆ ಮಾಡುವ ಸಂಚಾರ (3)
14. ಶಕ್ತಿವಂತ ಅಥವಾ ಶೂರ (3)
16. ಹಸುಗಳನ್ನು ಮೇಯಿಸುವವನು (4)
18. ಸುತ್ತಮುತ್ತಲು ಪಸರಿಸು (3)
19. ಕಾಡು ಅಥವಾ ವನ (3)
20. ದೂರವೇನಲ್ಲ, ಹತ್ತಿರ (3)

ಉತ್ತರಗಳು

ಎಡದಿಂದ ಬಲಕ್ಕೆ

ಮೇಲಿಂದ ಕೆಳಕ್ಕೆ

ಸಮಾಚಾರ ಸಣ್ಣದಲ್ಲ

ಕರ್ನಾಟಕ ಇಲೆವನ್‌ಗೆ ಸ್ಮರಣ್ ನಾಯಕ

ಬೆಂಗಳೂರು: ಪ್ರತಿಭಾನ್ವಿತ ಯುವ ಬ್ಯಾಟರ್ ಆರ್. ಸ್ಮರಣ್ ಅವರನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ನಡೆಯಲಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ಇಲೆ ವನ್ ತಂಡದ ನಾಯಕರ

ನ್ನಾಗಿ ಆಯ್ಕೆ ಮಾಡಲಾಗಿದೆ. ಇದೇ ಬಳಗದಲ್ಲಿ ಭಾರತ ಟೆಸ್ಟ್ ತಂಡದ ವೇಗಿ ಪ್ರಸಿದ್ ಎಂ. ಕೃಷ್ಣ ಅವರೂ ಸ್ಥಾನ ಪಡೆದಿದ್ದಾರೆ. ಗುರುವಾರ ದಿಂದ ಬೆಂಗಳೂರಿನಲ್ಲಿ ಈ ಟೂರ್ನಿಯು ಆರಂಭವಾಗಲಿದೆ. ಕೆಎಸ್‌ಸಿಎ ಆಯ್ಕೆ ಸಮಿತಿಯು ಕೆಎಸ್‌ಸಿಎ ಇಲೆವನ್, ಕೆಎಸ್‌ಸಿಎ ಅಧ್ಯಕ್ಷರ ಇಲೆವನ್, ಸೆಕ್ರೆಟರಿಸ್ ಇಲೆವನ್ ಮತ್ತು ಕೋಲ್ಸ್ ಇಲೆವನ್ ತಂಡಗಳನ್ನು ಪ್ರಕಟಿಸಿದ್ದಾರೆ. ಯುವ ಆಟಗಾರರಿಗೆ ನಾಯಕತ್ವದ ಹೊಣೆ ವಹಿಸಲಾಗಿದೆ. ಅಧ್ಯಕ್ಷರ ಇಲೆವನ್‌ಗೆ ಕಿಶನ್.ಎಸ್.ಬೆದರೆ, ಸೆಕ್ರೆಟರಿಸ್ ಇಲೆವನ್‌ಗೆ ನಿಕಿನ್ ಜೋಸ್ ಮತ್ತು ಕೋಲ್ಸ್ ತಂಡಕ್ಕೆ ಅನೀಶ್ವರ್ ಗೌತಮ್ ನಾಯಕರಾಗಿದ್ದಾರೆ.

ಒಲಿಂಪಿಕ್ ಸಂಸ್ಥೆಗೆ ಅನುದಾನ: ಐಒಸಿ

ದೆಹಲಿ: ಒಲಿಂಪಿಕ್ ಐಕಮತ್ಯೆ ಕಾರ್ಯಕ್ರಮದಡಿ ಭಾರತ ಒಲಿಂಪಿಕ್ ಸಂಸ್ಥೆಗೆ ನೆರವು ನೀಡುವುದನ್ನು ಪುನರಾರಂಭಿಸಲು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ನಿರ್ಧರಿಸಿದೆ. ಭಾರತ ಒಲಿಂಪಿಕ್ ಸಂಸ್ಥೆಯು ತನ್ನ ಒಳಜಗಳ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಕ್ರಮಗಳನ್ನು ಕೈಗೊಂಡ ಕಾರಣ ಸುಮಾರು ಒಂದು ವರ್ಷದ ನಂತರ ನೆರವು ನೀಡುವುದನ್ನು ಮುಂದುವರಿಸಲು ಐಒಸಿ ನಿರ್ಧರಿಸಿದೆ. ಐಒಎ ಸಿಇಒ ರಘುರಾಮ ಅಯ್ಯರ್ ಅವರಿಗೆ ನಿಗದಿಪಡಿಸಿದ ಭಾರಿ ವೇತನ ವಿರೋಧಿಸಿ ಅವರ ನೇಮಕಕ್ಕೆ ಒಪ್ಪಿಗೆ ನೀಡಲು 12 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು ನಿರಾಕರಿಸಿದ್ದರು. ಹೀಗಾಗಿ ಸಂಸ್ಥೆಯಲ್ಲಿ ಬಿಕ್ಕಟ್ಟು ತಲೆದೋರಿತ್ತು. ಇದರಿಂದಾಗಿ ಐಒಸಿಯು ಸಂಸ್ಥೆಯ ಅಭಿವೃದ್ಧಿ ಯೋಜನೆಗೆ ನೀಡಲಾಗುವ ವಾರ್ಷಿಕ 215 ಕೋಟಿ ಅನುದಾನವನ್ನು ಕಳೆದ ವರ್ಷ ಸ್ಥಗಿತಗೊಳಿಸಿತ್ತು. ಆದರೆ ಜುಲೈ 24ರಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರು ಐಒಎ ಅಧ್ಯಕ್ಷೆ ಪಿ.ಟಿ. ಉಷಾ ಮತ್ತು ಅವರ ವಿರುದ್ಧ ಬಂಡೆದ್ದ ಕಾರ್ಯಕಾರಿ ಸಮಿತಿ ಸದಸ್ಯರ ನಡುವೆ ಸಭೆ ನಡೆಸಿ ರಾಜಿಸಂಧಾನ ನಡೆಸಿದ್ದರು.

ಯುಎಸ್ ಓಪನ್ ಟೆನಿಸ್ | ಸೆಮಿ ಫೈನಲ್‌ಗೆ ಲಗ್ಗೆ ಇಟ್ಟ ಜೊಕೊವಿಕ್

ಜೊಕೊಗೆ ಅಲ್ಕರಾಜ್ ಎದುರಾಳಿ

ನ್ಯೂಯಾರ್ಕ್: ಈ ಬಾರಿಯ ಯುಎಸ್ ಓಪನ್ ಟೆನಿಸ್ ಪಂದ್ಯಾವಳಿ ರೋಚಕ ಘಟ್ಟವನ್ನು ತಲುಪಿದೆ. ತನ್ನ ಬೆನ್ನುನೋವನ್ನು ಮೀರಿ ನಿಂತಿರುವ ಅನುಭವಿ ಆಟಗಾರ ನೊವಾಕ್ ಜೊಕೊವಿಕ್ ಅವರು 4 ಸೆಟ್‌ಗಳ ಸೆಣಸಾಟದಲ್ಲಿ ತನಗಿಂತ ಮೇಲಿನ ಶ್ರೇಯಾಂಕದ ಅಮೆರಿಕನ್ ಆಟಗಾರ ಟೇಲರ್ ಫ್ರಿಟ್ಜ್ ಅವರನ್ನು ಬುಧವಾರ ನಡೆದ ಪಂದ್ಯದಲ್ಲಿ 6-3, 7-5, 3-6, 6-4 ಅಂತರದಿಂದ ಮಣಿಸಿ, ಸೆಮಿಫೈನಲ್ ಪ್ರವೇಶಿಸಿದ್ದಾರೆ. ಸೆಮಿ ಫೈನಲ್‌ನಲ್ಲಿ 2ನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರ ಸವಾಲನ್ನು ಜೊಕೊವಿಕ್ ಎದುರಿಸಲಿದ್ದಾರೆ.

25ನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಜೊಕೊವಿಕ್ ತನ್ನ ವೃತ್ತಿಜೀವನದ ಅಪೂರ್ವ ಸಾಧನೆ ತಲುಪಲು ಇನ್ನೆರಡು ಹೆಜ್ಜೆಗಳ ದೂರದಲ್ಲಿದ್ದಾರೆ. ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜೋಕೊವಿಕ್ ಆರಂಭಿಕ ಎರಡು ಸೆಟ್ ನಿರಾಯಾಸವಾಗಿ ಗೆದ್ದು ಮುನ್ನಡೆ ಸಾಧಿಸಿದರು, ಆದರೆ ಮೂರನೇ ಸುತ್ತಿನಲ್ಲಿ ಫ್ರಿಟ್ಜ್ ಗೆದ್ದರು. ನಾಲ್ಕನೇ ಸೆಟ್‌ನಲ್ಲಿ ಆಕ್ರಮಣಕಾರಿ ಆಟವಾಡಿದ ಜೊಕೊ 6-4 ಅಂತರದಿಂದ ಗೆದ್ದು ಪಂದ್ಯದಲ್ಲಿ ಗೆಲುವನ್ನು ಪಡೆದರು. ಮೈದಾನದಲ್ಲಿ ಡ್ಯಾನ್ಸ್ ಮಾಡುವ ಮೂಲಕ ತಮ್ಮ ಗೆಲುವಿನ ಖುಷಿಯನ್ನು

ಸಂಭ್ರಮಿಸಿದರು.

ಎರಡನೇ ಶ್ರೇಯಾಂಕಿತ ಅಲ್ಕರಾಜ್, ತನ್ನ ಪಾಲಿನ ಎರಡನೇ ಅಮೆರಿಕನ್ ಓಪನ್ ಕಿರೀಟದ ಹುಡುಕಾಟದಲ್ಲಿದ್ದಾರೆ. ಅವರು ತಮ್ಮ ವೃತ್ತಿ ಜೀವನದಲ್ಲಿ ಈವರೆಗೆ ಐದು ಬಾರಿ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಅಲ್ಕರಾಜ್ ಕೊನೆಯದಾಗಿ 2022ರಲ್ಲಿ ಯುಎಸ್ ಓಪನ್ ಚಾಂಪಿಯನ್ ಆಗಿದ್ದರು.

ಸಬಲೆಂಕಾ ಸೆ. ಫೈನಲ್‌ಗೆ: ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಮಾರ್ಕೆಟಾ ವೊಂಡ್ರೌಸೋವಾ ಗಾಯದಿಂದಾಗಿ ಕ್ವಾರ್ಟರ್ ಫೈನಲ್ ಪಂದ್ಯದಿಂದ ಹಿಂದೆ ಸರಿದ ಕಾರಣ, ವಿಶ್ವದ ನಂ.1 ಆಟಗಾರ್ತಿ ಅರಿನಾ ಸಬಲೆಂಕಾ ವಾಕ್ ಓವರ್ ಮೂಲಕ ಯುಎಸ್ ಓಪನ್ ಮಹಿಳಾ ಸೆಮಿಫೈನಲ್ ಹಂತವನ್ನು ಪ್ರವೇಶಿಸಿದರು. ಸೆಮಿಫೈನಲ್ ಪಂದ್ಯದಲ್ಲಿ ಸಬಲೆಂಕಾ ಅವರು ವಿಶ್ವದ ಜೆಸ್ಸಿಕಾ ಪೆಗುಲಾ ಸವಾಲು ಎದುರಿಸಲಿದ್ದಾರೆ. ಪೆಗುಲಾ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬಾರ್ಬೋರಾ ಕ್ರೆಜಿಕೋವಾ ಅವರನ್ನು 6-3, 6-3 ನೇರ ಸೆಟ್‌ಗಳಿಂದ ಮಣಿಸಿದ್ದರು.

25ನೇ ಪ್ರಶಸ್ತಿ ಗೆಲ್ಲುವಾಸೆ: ಜೊಕೊ

ದೈಹಿಕ ಸವಾಲುಗಳ ಹೊರತಾಗಿಯೂ ಜೊಕೊವಿಕ್ ಕ್ವಾರ್ಟರ್ ಫೈನಲ್ ಪಂದ್ಯದ ಬಳಿಕ, ತಾನು ಮೊದಲಿನಂತೆ ಬಲಿಷ್ಠನಾಗಿದ್ದೇನೆ ಎಂದಿದ್ದಾರೆ 'ನಾನು ನನ್ನ ಗುರಿಯನ್ನು ಕಂಡುಕೊಳ್ಳಲು ಸತತವಾಗಿ ಪ್ರಯತ್ನಿಸುತ್ತಿದ್ದೇನೆ. ಈ ಟೂರ್ನಮೆಂಟ್‌ನಲ್ಲಿ ನಿರೀಕ್ಷೆಗೂ ಮೀರಿ ಅತ್ಯುತ್ತಮವಾಗಿ ನಾನು ಆಟವಾಡಿದ್ದೇನೆ. 25ನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯನ್ನು ಈ ಟೂರ್ನಮೆಂಟ್ ಮೂಲಕ ಗೆಲ್ಲಬೇಕೆಂಬುದೇ ನನ್ನ ಮಹದಾಸೆ' ಎಂದು ಜೊಕೊವಿಕ್ ಹೇಳಿದ್ದಾರೆ.

ಹಿಂದೆ ಸರಿದ ಪಾಕಿಸ್ತಾನ

ಜೂನಿಯರ್ ವಿಶ್ವಕಪ್ ಹಾಕಿ ಪಂದ್ಯಾವಳಿ

ದೆಹಲಿ: ನವೆಂಬರ್ 28ರಿಂದ ಡಿಸೆಂಬರ್ 10ರ ವರೆಗೆ ಚೆನ್ನೈ ಮತ್ತು ಮಧುರೈನಲ್ಲಿ ನಡೆಯಲಿರುವ ಎಫ್‌ಐಎಚ್ ಪುರುಷರ ಜೂನಿಯರ್ ಹಾಕಿ ವಿಶ್ವಕಪ್‌ನಿಂದ ಪಾಕಿಸ್ತಾನ ಹಿಂದೆ ಸರಿದಿದೆ. ಭದ್ರತಾ ಕಾಳಜಿಯನ್ನು ಉಲ್ಲೇಖಿಸಿ ಪಾಕಿಸ್ತಾನ ಬಿಹಾರದಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಹಾಕಿ ಟೂರ್ನಿಯಿಂದ ಹಿಂದೆ ಸರಿದಿತ್ತು. ಇದೀಗ ಪುರುಷರ ಜೂನಿಯರ್ ಹಾಕಿ ವಿಶ್ವಕಪ್‌ಗೂ ಇದೇ ಕಾರಣ ನೀಡಿ ಬಹಿಷ್ಕರಿಸಲು ಪಾಕಿಸ್ತಾನ ಹಾಕಿ ಫೆಡರೇಶನ್ (ಪಿಎಚ್‌ಎಫ್) ನಿರ್ಧರಿಸಿದೆ

ಎನ್ನಲಾಗಿದೆ.

'ಪಾಕಿಸ್ತಾನ ಜೂನಿಯರ್ ಹಾಕಿ ತಂಡವು ಹಾಕಿ ವಿಶ್ವಕಪ್‌ನಲ್ಲಿ ಭಾಗವಹಿಸುವುದಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ, ನಾವು ಭಾರತಕ್ಕೆ ಪ್ರಯಾಣಿಸಲು ಸಾಧ್ಯವಿಲ್ಲ' ಎಂದು ಪಿಎಚ್‌ಎಫ್ ಅಧ್ಯಕ್ಷ ತಾರಿಕ್ ಬುಗ್ತಿ ಲಾಹೋರ್‌ನಲ್ಲಿರುವ ಪಿಎಚ್‌ಎಫ್ ಪ್ರಧಾನ ಕಚೇರಿಯಲ್ಲಿ ಪಾಕಿಸ್ತಾನದ ಮಾಧ್ಯಮ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

'ಭಾರತದೊಂದಿಗೆ ನಾವು ಹೊಂದಿದ್ದ ಉದ್ವಿಗ್ನತೆಯನ್ನು ಪರಿಗಣಿಸಿ, ನಾವು ಏಷ್ಯಾ ಕಪ್‌ಗಾಗಿ ಭಾರತಕ್ಕೆ ತೆರಳುವುದು ಸಂಪೂರ್ಣವಾಗಿ ಅಸಾಧ್ಯವಾಗಿತ್ತು. ಎರಡೂ ಕಡೆಗಳಲ್ಲಿ ಯುದ್ಧದಂತಹ ಪರಿಸ್ಥಿತಿ ಇತ್ತು. ಆದ್ದರಿಂದ ಪ್ರಸ್ತುತ ಸನ್ನಿವೇಶದಲ್ಲಿ ನಾವು ಈಗ ಅಥವಾ ಭವಿಷ್ಯದಲ್ಲಿ ಭಾರತಕ್ಕೆ ಪ್ರಯಾಣಿಸಲು ಸಾಧ್ಯವಿಲ್ಲ. ಪರಿಸ್ಥಿತಿ ಅದೇ ರೀತಿ ಇದೆ. ಭಾರತೀಯ ಕ್ರಿಕೆಟ್ ತಂಡ ಇಲ್ಲಿಗೆ ಬರಲು ಸಾಧ್ಯವಾಗದಿದ್ದರೆ, ಪಾಕಿಸ್ತಾನ ಹಾಕಿ ತಂಡ ಕೂಡ ಭಾರತಕ್ಕೆ ಹೋಗುವುದಿಲ್ಲ' ಎಂದಿದ್ದಾರೆ. ಈ ವರ್ಷದ ಆರಂಭದಲ್ಲಿ, ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ, 'ಪಾಕಿಸ್ತಾನವು ವರ್ಷದ ಕೊನೆಯಲ್ಲಿ ಜೂನಿಯರ್ ವಿಶ್ವಕಪ್‌ನಲ್ಲಿ ಭಾಗವಹಿಸುವುದು ಸ್ವಾಗತಾರ್ಹ' ಎಂದು ಹೇಳಿದ್ದರು. ಆದರೆ ಪಹಲ್ಗಾಮ್ ದಾಳಿ ಮತ್ತು ಆಪರೇಷನ್ ಸಿಂಧೂರ್‌ನ ಪರಿಣಾಮಗಳ ನಂತರ, ಉಭಯ ದೇಶಗಳ ಮಧ್ಯೆ ಉದ್ವಿಗ್ನತೆ ಉಂಟಾಗಿರುವ ಕಾರಣ ಪಾಕ್ ಮತ್ತು ಭಾರತ ಇಂತಹ ನಿರ್ಧಾರಗಳನ್ನು ಕೈಗೊಂಡಿದೆ.

ಬೆಂಗಳೂರಿನಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರ

ಸಿಒಇ ಮುಖ್ಯಸ್ಥರಾಗಿ ದ್ರಾವಿಡ್ ನೇಮಕ?

ಬೆಂಗಳೂರು: ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ಹುದ್ದೆಗೆ ರಾಜೀನಾಮೆ ನೀಡಿರುವ ರಾಹುಲ್ ದ್ರಾವಿಡ್ ಅವರು

ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ (ಸಿಒಇ) ಹೊಸ ಮುಖ್ಯಸ್ಥರಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಹಿಂದೆ ದ್ರಾವಿಡ್ ಅವರು 2019ರಿಂದ 2021ರವರೆಗೆ ಎರಡು ವರ್ಷಗಳ ಕಾಲ ಎನ್‌ಸಿಎ ಮುಖ್ಯಸ್ಥರಾಗಿದ್ದರು. ನಂತರ ದ್ರಾವಿಡ್ ಭಾರತ ತಂಡದ ಕೋಚ್ ಹುದ್ದೆಗೇರಿದಾಗ, ವಿವಿಎಸ್ ಲಕ್ಷ್ಮಣ್ ಮುಖ್ಯಸ್ಥರಾಗಿದ್ದರು.

ಹಾಲಿ ಮುಖ್ಯಸ್ಥರಾಗಿರುವ ವಿವಿಎಸ್ ಲಕ್ಷ್ಮಣ್ ಅವರು ಐಪಿಎಲ್‌ನಲ್ಲಿ ಕೋಚಿಂಗ್ ನಡೆಸುವತ್ತ ಗಮನಹರಿಸಿದ್ದಾರೆ. ಹೀಗಾಗಿ ಲಕ್ಷ್ಮಣ್ ಸ್ಥಾನಕ್ಕೆ ದ್ರಾವಿಡ್ ಅವರನ್ನು ನೇಮಕ ಮಾಡಿಕೊಳ್ಳಲು ಬಿಸಿಸಿಐ ಚರ್ಚೆ ನಡೆಸಿದೆ ಎನ್ನಲಾಗಿದೆ. ರಾಜಸ್ತಾನ ರಾಯಲ್ಸ್ ತಂಡಕ್ಕೆ ದ್ರಾವಿಡ್ ಅವರ ದಿಢೀರ್ ರಾಜೀನಾಮೆ ಹಿನ್ನೆಲೆಯಲ್ಲಿ, ಅವರು ಸಿಒಇಗೆ ಮುಖ್ಯಸ್ಥರಾಗುವುದು ಬಹುತೇಕ ಖಚಿತವಾದಂತಿದೆ.

ಲಕ್ಷ್ಮಣ್ ಈ ಹಿಂದೆ 2014ರಿಂದ 2018ರ ತನಕ ಸನ್‌ರೈಸರ್ಸ್ ಹೈದರಾಬಾದ್ ತಂಡದ ಮೆಂಟರ್ ಆಗಿ ಕಾರ್ಯನಿರ್ವಹಿಸಿದ್ದರು. ಕಳೆದ ವರ್ಷವೇ ಲಕ್ಷ್ಮಣ್ ಅವರು ಎನ್‌ಸಿಎ ಹುದ್ದೆ ತ್ಯಜಿಸಲು ನಿರ್ಧರಿಸಿದ್ದರು, ಆದರೆ ಬಿಸಿಸಿಐ ಒತ್ತಾಯದ ಮೇರೆಗೆ ಅವರು ಮುಂದುವರಿದಿದ್ದರು.

ಭಾರತ ಕ್ರಿಕೆಟ್‌ನ ಮುಖ್ಯ ಕೋಚ್ ಆಗಿ ರಾಹುಲ್ ದ್ರಾವಿಡ್ ಅವರ ಒಪ್ಪಂದ ಮುಗಿದಿದ್ದ ವೇಳೆ ಹೊಸ ಕೋಚ್ ಸ್ಥಾನಕ್ಕೆ ವಿವಿಎಸ್ ಲಕ್ಷ್ಮಣ್ ಅವರ ಹೆಸರು ಮುಂಚೂಣಿಯಲ್ಲಿ ಕೇಳಿ ಬಂದಿತ್ತು, ಆದರೆ ಲಕ್ಷ್ಮಣ್ ಅವರು ಆ ಹುದ್ದೆಯನ್ನು ತಿರಸ್ಕರಿಸಿದ್ದರು

ಕುಟುಂಬದೊಂದಿಗೆ ನೆಲೆಸಿರುವ ಭಾರತದ ಮಾಜಿ ನಾಯಕ

ಲಂಡನ್‌ನಲ್ಲಿ ವಿರಾಟ್ ಕೊಹ್ಲಿ ಅರ್ಹತಾ ಪರೀಕ್ಷೆ

ಲಂಡನ್: ಭಾರತೀಯ ಏಕದಿನ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಸೇರಿದಂತೆ ಇತರ ಎಲ್ಲ ಭಾರತೀಯ ಆಟಗಾರರು ಕೆಳ ದಿನಗಳ ಹಿಂದಷ್ಟೇ ಬೆಂಗಳೂರಿನಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ (ಸಿಒಇ) ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಫಿಟ್ನೆಸ್ ಪರೀಕ್ಷೆಗೆ ಒಳಗಾಗಿದ್ದರು. ಇದೀಗ ವಿರಾಟ್ ಕೊಹ್ಲಿ ಅವರು ಲಂಡನ್‌ನಲ್ಲಿಯೇ ತಮ್ಮ ಫಿಟ್‌ನೆಸ್ ಪರೀಕ್ಷೆಯನ್ನು ಪೂರ್ಣಗೊಳಿಸಿದ್ದಾರೆ ಎಂದು ವರದಿಯಾಗಿದೆ. ಈ ಮೂಲಕ ವಿದೇಶಿ ನೆಲದಲ್ಲಿ ಈ ಪರೀಕ್ಷೆಗೆ ಒಳಗಾದ ಮೊದಲ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೂ ಕೊಹ್ಲಿ ಪಾತ್ರರಾಗಿದ್ದಾರೆ.

ವಿರಾಟ್ ಕೊಹ್ಲಿ ಪ್ರಸ್ತುತ ಲಂಡನ್‌ನಲ್ಲಿ ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿರುವ ಕಾರಣ ಅವರು ಯಾವಾಗ ಫಿಟ್ನೆಸ್ ಪರೀಕ್ಷೆಗೆ ಒಳಗಾಗಲಿದ್ದಾರೆ ಎಂಬುದರ ಕುರಿತು ಗೊಂದಲ ಉಂಟಾಗಿತ್ತು. ವರದಿಯ ಪ್ರಕಾರ, ಕೊಹ್ಲಿ ಇಂಗ್ಲೆಂಡ್‌ನಲ್ಲಿ ತಮ್ಮ ಫಿಟ್ನೆಸ್ ಪರೀಕ್ಷೆಗೆ ಒಳಗಾಗಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯಿಂದ (ಬಿಸಿಸಿಐ) ವಿಶೇಷ ಅನುಮತಿ ಕೋರಿದ್ದರು, ಹಾಗಾಗಿ ಅದಕ್ಕೆ ಬಿಸಿಸಿಐ ಅನುಮೋದನೆ ನೀಡಿತ್ತು. ಕೊಹ್ಲಿ ಲಂಡನ್‌ನಲ್ಲಿಯೇ ಫಿಟ್‌ನೆಸ್ ಪರೀಕ್ಷೆಗೆ ಒಳಗಾಗಿ

ತೇರ್ಗಡೆಯಾಗಿದ್ದಾರೆ ಎನ್ನಲಾಗಿದೆ. ಐಪಿಎಲ್ ಕೊನೆಗೊಂಡ ನಂತರ ಮತ್ತು ಮರುದಿನ ಬೆಂಗಳೂರಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿಜಯೋತ್ಸವ ಆಚರಿಸಿದಾಗಿನಿಂದ, ಕೊಹ್ಲಿ ಲಂಡನ್‌ಗೆ ತೆರಳಿದ್ದರು ಮತ್ತು ಅಂದಿನಿಂದ ಅಲ್ಲಿ ವಾಸಿಸುತ್ತಿದ್ದಾರೆ.

ಕೊಹ್ಲಿ ಆಸೀಸ್ ಸರಣಿಗೂ ಮುನ್ನ ನಡೆಯಲಿರುವ ಆಸ್ಟ್ರೇಲಿಯಾ-ಎ ತಂಡದ ವಿರುದ್ಧ ಸರಣಿಯಲ್ಲಿ ಭಾರತ-ಎ ಪರ ಆಡಲಿದ್ದಾರೆ ಎಂದು ಹೇಳಲಾಗುತ್ತಿದೆ, ರೋಹಿತ್ ಕೂಡ ಆಡುವ ಸಾಧ್ಯತೆ ಇದೆ. ಆಸೀಸ್‌ನಲ್ಲಿ ಭಾರತ ತಂಡ ಅಕ್ಟೋಬರ್ 19ರಿಂದ 3 ಏಕದಿನ ಪಂದ್ಯಗಳ ಸರಣಿ ಆಡಲಿದೆ. ಆ ಬಳಿಕ ತಂಡವು ಅಲ್ಲಿ ಟಿ20 ಸರಣಿಯನ್ನಾಡಲಿದೆ.

ಏಷ್ಯಾಕಪ್ ಹಾಕಿ: ಭಾರತದ ಸೂಪರ್-4ರ ಪಂದ್ಯ ಡ್ರಾ

ರಾಜ್‌ಗಿರ್: ಏಷ್ಯಾ ಕಪ್ ಹಾಕಿ ಟೂರ್ನಿಯ ಸೂಪರ್ 4ರ ತನ್ನ ಮೊದಲ ಪಂದ್ಯದಲ್ಲಿ ಆತಿಥೇಯ ಭಾರತ ತಂಡ, ಹಾಲಿ ಚಾಂಪಿಯನ್ ಕೊರಿಯಾ ವಿರುದ್ಧ 2-2 ಗೋಲುಗಳಿಂದ ಡ್ರಾ ಸಾಧಿಸುವ ಮೂಲಕ ತನ್ನ ಅಜೇಯ ಅಭಿಯಾನವನ್ನು ಮುಂದುವರಿಸಿದೆ. ಹಾರ್ದಿಕ್ ಸಿಂಗ್ (8ನೇ ನಿಮಿಷ) ಭಾರತಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು, ನಂತರ ಯಾಂಗ್ ಜಿಹುನ್ (12 ನೇ ನಿಮಿಷ) ಮತ್ತು ಹ್ಯೊನ್‌ಹಾಂಗ್ ಕಿಮ್ (14 ನೇ ನಿಮಿಷ) ಸತತ ಗೋಲುಗಳನ್ನು ಗಳಿಸಿ ಕೊರಿಯಾವನ್ನು ಮುನ್ನಡೆಸಿದರು. ಕೊನೆಯ ಕ್ವಾರ್ಟರ್‌ನಲ್ಲಿ ಮಂದೀಪ್ ಸಿಂಗ್ (52 ನೇ ನಿಮಿಷ) ಸಮಬಲ ಸಾಧಿಸಿ ಭಾರತಕ್ಕೆ ಒಂದು ಪಾಯಿಂಟ್ ಗಳಿಸಿಕೊಟ್ಟರು. ಭಾರತ ತಂಡ, ಪೂಲ್ ಎ ನ ಎಲ್ಲಾ ಪಂದ್ಯಗಳನ್ನು ಗೆದ್ದು, ಚೀನಾವನ್ನು 4-3, ಜಪಾನ್ ಅನ್ನು 3-2 ಮತ್ತು ನಂತರ ಕಜಕಿಸ್ತಾನ್ ಅನ್ನು 15-0 ಅಂತರದಿಂದ ಸೋಲಿಸಿತ್ತು.

ಪಂದ್ಯದ ಎರಡನೇ ಕ್ವಾರ್ಟರ್‌ನಲ್ಲಿ ಭಾರತ ಮತ್ತು ದಕ್ಷಿಣ ಕೊರಿಯಾ ನಡುವೆ ಕಠಿಣ ಹೋರಾಟ ನಡೆದಿತ್ತು ಹಾಗೂ ಈ ವೇಳೆ ಎರಡೂ ತಂಡಗಳಿಂದ ಒಂದೇ ಒಂದು ಗೋಲು ಕೂಡ ಮೂಡಿಬರಲಿಲ್ಲ. ನಂತರ ಮೂರನೇ ಕ್ವಾರ್ಟರ್ ಕೂಡ ಗೋಲು ರಹಿತವಾಗಿ ಮುಗಿಯಿತು. ಆದಾಗ್ಯೂ, ಮೂರನೇ ಕ್ವಾರ್ಟರ್‌ನ ಕೊನೆಯ ನಿಮಿಷದಲ್ಲಿ ಭಾರತ ತಂಡಕ್ಕೆ ಸಮಬಲ ಸಾಧಿಸಲು ಉತ್ತಮ ಅವಕಾಶ ಸಿಕ್ಕಿತು, ಆದರೆ ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ

ವಿಟಾಕೀಸ್

✍ ಪ್ರಶಾಂತ್ .ಟಿ.ಆರ್

ಹಿರಿಯ ನಿರ್ದೇಶಕ ಸಾಯಿ ಪ್ರಕಾಶ್ ನೂರಕ್ಕೂ ಹೆಚ್ಚು ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ, ಈಗ ನೂರ ಐದನೇ ಸಿನಿಮಾವಾಗಿ ಸೆಪ್ಟೆಂಬರ್ 10 ಚಿತ್ರವನ್ನು ನಿರ್ದೇಶಿಸಿದ್ದಾರೆ. ಮನರಂಜನೆಯ ಜತೆಗೆ ಸಾಮಾಜಿಕ ಕಳಕಳಿಯನ್ನು ಸಾರುವ ಈ ಸಿನಿಮಾ ಎಲ್ಲರಿಗೂ ಕನೆಕ್ಟ್ ಆಗಲಿದೆ. ತಮ್ಮ ಸಿನಿಮಾದ ಕುರಿತಂತೆ ನಿರ್ದೇಶಕ ಸಾಯಿ ಪ್ರಕಾಶ್, ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಸೆಪ್ಟೆಂಬರ್ 10ರ ವಿಶೇಷತೆ ಏನು ?

ಸಾಯಿ ಪ್ರಕಾಶ್ : ಸೆಪ್ಟೆಂಬರ್ 10ನ್ನು ವಿಶ್ವ ಆತ್ಮಹತ್ಯೆ ನಿವಾರಣಾ ದಿನವನ್ನಾಗಿ ಆಚರಿಸಲಾಗುತ್ತದೆ. ಜೀವನವೇ ಮುಖ್ಯ, ಅದನ್ನು ಕಳೆದುಕೊಳ್ಳುವುದಲ್ಲ ಎಂಬುದು ಈ ದಿನದ ವಿಶೇಷವಾಗಿದೆ. ಅಂದರೆ ಜೀವನೇ ಎಲ್ಲರಿಗೂ ಮುಖ್ಯ ನಮಗೆ ಸಿಕ್ಕಿರುವ ಜೀವನವನ್ನು ಅರ್ಥಪೂರ್ಣವಾಗಿ ಸಂಭ್ರಮಿಸಬೇಕು ಎಂಬುದೇ ಈ ಸಿನಿಮಾದ ಸಾರ.

ವಿ.ಸಿ: ಕಮರ್ಷಿಯಲ್ ಸಿನಿಮಾದ ನಡುವೆ ಈ ಕಥೆ ಆಯ್ದುಕೊಂಡಿದ್ದು?

ಸಾಯಿ ಪ್ರಕಾಶ್ : ಇಲ್ಲಿ ನೈಜತೆ ಇದೆ, ಎಲ್ಲರೂ ಅರಿತುಕೊಳ್ಳಬೇಕಾದ ಕಂಟೆಂಟ್ ಇದೆ. ಇಲ್ಲಿಯವರೆಗೂ ನಾನು ಕಮರ್ಷಿಯಲ್ ಸಿನಿಮಾಗಳನ್ನೇ ನಿರ್ದೇಶಿಸಿದ್ದೇನೆ. ಲವ್, ಆ್ಯಕ್ಷನ್, ಕಾಮಿಡಿ ಬೆರೆತ ಸಿನಿಮಾಗಳನ್ನು ತೆರೆಗೆ ತಂದಿದ್ದೇನೆ. ಹಾಗಾಗಿ ಈ ಬಾರಿ ಜೀವನ ದರ್ಶನದ ಈ ಚಿತ್ರವನ್ನು ನಿರ್ದೇಶಿಸಿದ್ದು, ಜೀವನ ಎಂದರೇನು ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ. ನಮ್ಮ ಸಿನಿಮಾದಲ್ಲಿ ಬರುವ ಪ್ರತಿ ಪಾತ್ರಗಳೂ ಕೂಡ ಜೀವನದ ಆಯಾಮವನ್ನು ತಿಳಿಸಿಕೊಡಲಿದೆ.

ಸೆಪ್ಟೆಂಬರ್ 10ಕನ್ನಡದ ಜತೆಗೆ ತೆಲುಗಿನಲ್ಲಿಯೂ ತೆರೆಗೆ ಬರಲಿದೆ. ಮೊದಲು ಕನ್ನಡ ಬಳಿಕ ತೆಲುಗಿನಲ್ಲಿ ಸಿನಿಮಾ ತೆರೆ ಕಾಣಲಿದೆ. ಆಂಧ್ರದಲ್ಲಿ ಆತ್ಮಹತ್ಯಾ ನಿವಾರಣಾ ದಿನವನ್ನು ಪರಿಣಾಮಕಾರಿಯಾಗಿ ಆಚರಿಸಲಾಗುತ್ತಿದೆ. ಅಲ್ಲಿ ನಮ್ಮ ಸಿನಿಮಾದ ಪ್ರದರ್ಶನ ಕಾಣಲಿದೆ.

ವಿ.ಸಿ: ಇಲ್ಲಿ ಮನರಂಜನೆಯೂ ಬೆರೆತಿದಿಯೆ ?

ಸಾಯಿ ಪ್ರಕಾಶ್ : ಖಂಡಿತವಾಗಿಯೂ ಸಿನಿಮಾ ಮನರಂಜನಾತ್ಮಕವಾಗಿಯೇ ಮೂಡಿಬಂದಿದೆ. ಇಲ್ಲಿ ಲವ್ ಸ್ಟೋರಿ ಇದೆ, ಮೆಚ್ಚಿದ ಹುಡುಗಿಯನ್ನು ಮದುವೆಯಾಗುವ ಕಥೆಯೂ ಇದೆ. ಜೀವನದಲ್ಲಿ ಬಯಸಿದೆಲ್ಲವೂ ಸಿಕ್ಕಿತು ಎಂದುಕೊಂಡಾಗ ಸುಳಿವಿಲ್ಲದೆ ಬರುವ ಸಂಕಷ್ಟವ ಕಂಡು ಜೀವನವನ್ನೆ ಕೊನೆಗಾಣಿಸಲು ಆತ್ಮಹತ್ಯೆಗೆ ಯತ್ನಿಸುವ ಸ್ಟೋರಿಯೂ ಇದೆ. ಅಷ್ಟಕ್ಕೂ ಕಷ್ಟ ಬಂದಾಕ್ಷಣ ಜೀವನವೇ ಮುಗಿಯಿತೆ, ಕಷ್ಟವನ್ನು ಎದುರಿಸುವುದು ಹೇಗೆ, ನಮ್ಮ ಜೀವನ ನಮಗೆ ಎಷ್ಟು ಮುಖ್ಯ ಇದೆಲ್ಲವನ್ನೂ ಸಿನಿಮಾದಲ್ಲಿ ಹೇಳಲಾಗಿದೆ. ಅದೆಲ್ಲವನ್ನೂ ಸಿನಿಮಾದಲ್ಲಿಯೇ ನೋಡಬೇಕು.

ವಿ.ಸಿ : ತಾರಾಗಣದ ಬಗ್ಗೆ ಹೇಳುವುದಾದರೆ?

ಸಾಯಿ ಪ್ರಕಾಶ್ : ಈ ಚಿತ್ರದಲ್ಲಿ ಶ್ರೀನಿವಾಸ ಮೂರ್ತಿ, ಮೀಸೆ ಅಂಜನಪ್ಪ ರೈತರಾಗಿ ಕಾಣಿಸಿಕೊಂಡಿದ್ದಾರೆ. ಶಶಿಕುಮಾರ್ ವೈದ್ಯರಾಗಿ ಕಾಣಿಸಿಕೊಂಡಿದ್ದಾರೆ. ನಮ್ಮ ಸುತ್ತಮುತ್ತ ಸಾಗುವ ಎಲ್ಲಾ ಪಾತ್ರಗಳು ಸಿನಿಮಾದಲ್ಲಿವೆ. ಅದೆಲ್ಲವನ್ನು ತೆರೆಯಲ್ಲಿಯೇ ನೋಡಿ ತಿಳಿಯಬೇಕು.

ಎಲ್ಲರಿಗೂ ಜೀವನವಿದೆ, ಸಂಕಷ್ಟ ಬಂದಾಕ್ಷಣ ಜೀವನವೇ ಮುಗಿಯಿತು ಎಂದಲ್ಲ. ಒದಗಿಬಂದ ಸಂಕಷ್ಟಗಳನ್ನು ಧೈರ್ಯವಾಗಿ ಎದಿರಿಸುವುದೇ ಜೀವನ, ಅದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ಹೇಳಲಾಗಿದೆ. ಹಾಗಾಗಿ ಸೆಪ್ಟೆಂಬರ್ 10 ಪ್ರತಿಯೊಬ್ಬರಿಗೂ ಕನೆಕ್ಟ್ ಆಗುವ ಸಿನಿಮಾವಾಗಿದೆ.

ಮಹಾನ್‌ನಲ್ಲಿ ನಮ್ರತಾ

ನಾಗಿಣಿ ಧಾರಾವಾಹಿಯ ಮೂಲಕ ಪ್ರೇಕ್ಷಕರ ಮನ ಗೆದ್ದ ಬಿಗ್‌ಬಾಸ್ ಖ್ಯಾತಿಯ ನಟಿ ನಮ್ರತಾ ಗೌಡ ಸಿನಿಮಾರಂಗದಲ್ಲಿಯೂ ಬ್ಯುಸಿಯಾಗಿದ್ದಾರೆ. ನಿರ್ದೇಶಕ ಪಿ.ಸಿ.ಶೇಖರ್ ನಿರ್ದೇಶನದ, ಮಹಾನ್ ಚಿತ್ರದಲ್ಲಿ ನಟಿಸುತ್ತಿದ್ದಾರೆ. ವಿಜಯ ರಾಘವೇಂದ್ರ, ನಾಯಕನಾಗಿ ನಟಿಸುತ್ತಿರುವ ಈ ಸಿನಿಮಾದಲ್ಲಿ ನಮ್ರತಾ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬಹದ್ದೂರ್ ಈ ಸಿನಿಮಾದ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ನಾನು ಸಿನಿಮಾದಲ್ಲಿ ನಟಿಸುವಂತೆ ಅನೇಕ ಸ್ನೇಹಿತರು ಬಹಳ ದಿನಗಳಿಂದ ಒತ್ತಾಯಿಸುತ್ತಿದ್ದರು. ನಾನು ಒಳ್ಳೆಯ ಕಥೆಗಾಗಿ ಕಾಯುತ್ತಿದ್ದೆ. ನಿರ್ದೇಶಕ ಪಿ.ಸಿ.ಶೇಖರ್ ಅವರು ಮಹಾನ್ ಚಿತ್ರದ ಕಥೆ ಹೇಳಿದಾಗ, ಕಥೆ ಮನಸ್ಸಿಗೆ ಹತ್ತಿರವಾಯಿತು. ಕಥೆ ಕೇಳಿದ ತಕ್ಷಣ ನಟಿಸಲು ಒಪ್ಪಿಕೊಂಡೆ. ರೈತರ ಬದುಕು ಬವಣೆಗಳ ಸುತ್ತ ಹೆಣೆದಿರುವ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಟಿಸಲು ಬಹಳ ಸಂತೋಷವಾಗಿದೆ. ಪ್ರಕಾಶ್ ಬುದ್ದೂರು ಅವರು ಯಾವುದೇ ಕೊರತೆ ಬಾರದ ಹಾಗೆ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರರಂಗಕ್ಕೆ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನೀಡಿರುವ ಪಿ.ಸಿ.ಶೇಖರ್ ನಿರ್ದೇಶಿಸುತ್ತಿದ್ದಾರೆ ಎಂದು ನಟಿ ನಮ್ರತಾ ಸಂತಸ ಹಂಚಿಕೊಂಡಿದ್ದಾರೆ. ವಿಜಯ ರಾಘವೇಂದ್ರ, ರಾಧಿಕಾ ಚೇತನ್, ಮಿತ್ರ ಮುಂತಾದ ಕಲಾವಿದರ ದೊಡ್ಡ ತಾರಾಬಳಗವೇ ಈ ಸಿನಿಮಾದಲ್ಲಿದೆ. ನೈಜತಗೆ ಹತ್ತಿರವಾಗಿರುವ ಕಥೆಯುಳ್ಳ ಈ ಸಿನಿಮಾ ಎಲ್ಲರಿಗೂ ಕನೆಕ್ಟ್ ಆಗಲಿದೆ.

ದಾಖಲೆ ಮಾರ್ಕ್ ಟೀಸರ್



ಮ್ಯಾಕ್ಸ್ ಬಳಿಕ ಕಿಚ್ಚ ಸುದೀಪ್ ಮಾರ್ಕ್ ಆಗಿ ತೆರೆಗೆ ಭರ್ಜರಿಯಾಗಿ ಎಂಟ್ರಿಕೊಡುತ್ತಿದ್ದಾರೆ. ಮಾರ್ಕ್ ಚಿತ್ರದಲ್ಲಿ ಕಿಚ್ಚ ಲುಕ್ ವಿಭಿನ್ನವಾಗಿದ್ದು ಅವರ ಹೇರ್ ಸ್ಟೈಲ್ ಗಮನಸೆಳೆಯುತ್ತಿದೆ. ಮಾರ್ಕ್ ಸಿನಿಮಾದ ಟ್ರೇಲರ್ ಕಿಚ್ಚನ ಹುಟ್ಟುಹಬ್ಬದ ಪ್ರಯುಕ್ತ ರಿಲೀಸ್ ಆಗಿತ್ತು. ಅಜಯ್ ಮಾರ್ಕಂಡೆ ಎಂಬ ಪಾತ್ರದಲ್ಲಿ ಸುದೀಪ್ ಅವರು ನಟಿಸುತ್ತಿದ್ದಾರೆ. ಈಗ ಈ ಟೈಟಲ್ ಟೀಸರ್ ದಾಖಲೆ ಬರೆದಿದೆ.

ಮಾರ್ಕ್ ಟೈಟಲ್ ಟೀಸರ್ ಯೂಟ್ಯೂಬ್‌ನಲ್ಲಿ ಐದು ಮಿಲಿಯನ್‌ಗೂ ಹೆಚ್ಚು ವೀವ್ಸ್ ಕಂಡಿದೆ. ಇನ್ ಸ್ಟಾಗ್ರಾಂನಲ್ಲಿ ನಾಲ್ಕು ಮಿಲಿಯನ್ ವೀಕ್ಷಣೆ ಕಂಡಿದೆ. ಯೂಟ್ಯೂಬ್ ಹಾಗೂ ಇನ್ ಸ್ಟಾ ಒಟ್ಟಾರೆ ಸೇರಿ ಮಾರ್ಕ್ ಟೈಟಲ್ ಟೀಸರ್ ಒಂಬತ್ತು ಮಿಲಿಯನ್‌ಗೂ ಹೆಚ್ಚು ವೀವ್ಸ್ ಕಂಡಿದೆ. ಹಾಗಾಗಿ ಇದು ಕನ್ನಡದ ಸಿನಿಮಾಗಳಲ್ಲಿಯೇ ಹೆಚ್ಚು ವೀಕ್ಷಣೆ ಕಂಡ ಟೀಸರ್ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಮಾರ್ಕ್ ಟೀಸರ್ ನೋಡಿದರೆ ಇದು ಆ್ಯಕ್ಷನ್ ಜತೆಗೆ ಥ್ರಿಲ್ಲಿಂಗ್ ಅಂಶಗಳು ಬೆರೆತಿವೆ ಎಂಬುದು ಸ್ಪಷ್ಟವಾಗುತ್ತದೆ. ಸತ್ಯಜ್ಯೋತಿ ಫಿಲಂಸ್ ಮತ್ತು ಕಿಚ್ಚ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಈ ಮೊದಲು ಮ್ಯಾಕ್ಸ್ ಸಿನಿಮಾದ ಮೂಲಕ ನಿರ್ದೇಶಕನಾಗಿ ಖ್ಯಾತಿ ಪಡೆದಿದ್ದ ವಿಜಯ್ ಕಾರ್ತಿಕೇಯ ಆ ಯಶಸ್ಸಿನ ಖುಷಿಯಲ್ಲಿ ಮಾರ್ಕ್ ಬ್ಲಾಕ್ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸುದೀಪ್ ಮತ್ತು ವಿಜಯ್ ಕಾರ್ತಿಕೇಯ ಕಾಂಬಿನೇಷನ್‌ನನಲ್ಲಿ ಮೂಡಿಬರುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಮಾರ್ಕ್ ಇದೇ ವರ್ಷ ಡಿಸೆಂಬರ್ 25ರ ಕ್ರಿಸ್‌ಮಸ್ ಹಬ್ಬದಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ಕುಂಭ ಸಂಭವದಲ್ಲಿ ಪ್ರಿಯಾ

ಭೀಮ ಚಿತ್ರದಲ್ಲಿ ಗಿರಿಜಾ ಪಾತ್ರದ ಮೂಲಕ ಕನ್ನಡಿಗರ ಮನಗೆದ್ದ ಪ್ರಿಯಾ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಟಿ.ಎನ್.ನಾಗೇಶ್ ನಿರ್ದೇಶನದ ಕುಂಭ ಸಂಭವ ಚಿತ್ರದಲ್ಲಿಯೂ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರದಲ್ಲೂ ಪೊಲೀಸ್ ಅಧಿಕಾರಿಯಾಗಿ ಪ್ರಿಯಾ ಕಾಣಿಸಿಕೊಂಡಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಪರಿಪೂರ್ಣ ಸನಾತನ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಸಂಸ್ಥಾಪಕ ಎ.ವಿ.ಶ್ರೀನಿವಾಸನ್ ಕುಂಭ ಸಂಭವದ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕುಂಭ ಸಂಭವ ಥ್ರಿಲ್ಲಿಂಗ್ ಸ್ಟೋರಿಯ ಜತೆಗೆ ಆ್ಯಕ್ಷನ್ ಕೂಡ ಮಿಳಿತವಾಗಿದೆ. ಮಿಲ್ಕಿ ಮೂನ್ ಮೂವೀಸ್ ಲಾಂಛನದಲ್ಲಿ ನಾಗ ನಾಯಕ್, ನರೇಶ್ ಕುಮಾರ್, ತಾರಾ, ಸುನಂದಾ ಹಾಗೂ ಪುರುಷೋತ್ತಮ ಒಟ್ಟಾಗಿ ಈ ಸಿನಿಮಾವನ್ನು ನಿರ್ಮಿಸುತ್ತಿದ್ದಾದ್ದಾರೆ. ಟಿ.ಎನ್, ನಾಗೇಶ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಮಂಡ್ಯ ಬಳಿ

ನಡೆದ ನೈಜಘಟನೆ ಆಧರಿಸಿ ಈ ಸಿನಿಮಾ ಸಿದ್ಧವಾಗಿದೆ. ಯಾರು ಕೂಡ ಹೆಣ್ಣು ಭ್ರೂಣ ಹತ್ಯೆ ಮಾಡಬೇಡಿ ಎಂಬ ಉತ್ತಮ ಸಂದೇಶವನ್ನು ಈ ಚಿತ್ರದ ಮೂಲಕ ಹೇಳಲಾಗುತ್ತಿದೆ. ಹಾಗಾಗಿ ಕುಂಭ ಸಂಭವ ನೈಜವಾಗಿಯೇ ಮೂಡಿಬಂದಿದೆ.

ನನಗೆ ನಿರ್ದೇಶಕ ನಾಗೇಶ್ ಅವರು ಹೇಳಿದ ಕಥೆ ಬಹಳ ಇಷ್ಟವಾಯಿತು. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥಾಹಂದರವಿರುವ ಈ ಚಿತ್ರದಲ್ಲಿ ಅಭಿನಯಿಸಿರುವುದು ಬಹಳ ಖುಷಿಯಾಗಿದೆ. ನಾನು ಈ ಸಿನಿಮಾದಲ್ಲಿಯೂ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಜಾನಕಿ ಪಾತ್ರದಲ್ಲಿ ಬಣ್ಣಹಚ್ಚಿದ್ದೇನೆ ಎಂದು ನಟಿ ಪ್ರಿಯಾ ಹೇಳಿದರು. ಶೋಭಿತಾ, ಮಧುಶ್ರೀ, ಆದಿದೇವ್, ಶಂಕರ್ ಅಶ್ವಥ್, ಅರ್ಜುನ್ ದೇವ್, ಕೋಟೆ ಪ್ರಭಾಕರ್, ವಿಜಯ್ ಚೆಂಡೂರ್, ಕಮಲ್, ಮುಬಾರಕ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕನ್ನಡದ ಸಾಕಷ್ಟು ಅನುಭವಿ ಹಾಗೂ ಹಿರಿಯ ಕಲಾವಿದರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಸಿದ್ದರಾಜು ಛಾಯಾಗ್ರಹಣ, ಆಕಾಶ್ ಮಹೇಂದ್ರಕರ್ ಸಂಕಲನ, ಈ ಚಿತ್ರಕ್ಕಿದೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಸಾಗುತ್ತಿವೆ. ಅಂದುಕೊಂಡಂತೆ ಆದರೆ ಅಕ್ಟೋಬರ್‌ನಲ್ಲಿ ಸಿನಿಮಾ ತೆರೆಗೆ ಬರಲಿದೆ.